ಶುಕ್ರವಾರ, ಮಾರ್ಚ್ 15, 2024 | ₹ 7.00

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಪ್ರಚಾರ

ದೆಹಲಿಯಲ್ಲಿ ಹಮ್ಮಿಕೊಂಡಿದ್ದ 'ಮಡಗಾಂವ್ ಎಕ್ಸ್‌ಪ್ರೆಸ್' ಚಿತ್ರದ ಪ್ರಚಾರ ಕಾರ್ಯಕ್ರಮದಲ್ಲಿ ನಟಿ ನೋರಾ ಫತೇಹಿ ಪಾಲ್ಗೊಂಡಿದ್ದರು



Galaxy Ultra Days

March 12-22, 2024

Retail price of S24 Ultra (256GB)	₹ 129999#
Exchange value of old device	₹ 63000~
Upgrade bonus	₹ 12000^
Special upgrade bonus for Galaxy S Series	₹ 5000^
Galaxy Ultra Days' offer price	**₹ 49999***

Also get ₹ 12000## off on Galaxy Watch6 with Galaxy S24 Series

Up to ₹ 17000 upgrade bonus^

Samsung Upgrade | HDFC BANK | BAJAJ FINSERV | Samsung Finance+™

samsung.com

Please dispose off e-waste and plastic waste responsibly. Customers can WhatsApp on 1800 5 7267864 for information on e-waste/plastic pick up.

Image simulated for representational purpose, actual may vary. S Pen embedded in Galaxy S24 Ultra. Circle to Search results may vary depending on visual matches. Google is a trademark of Google LLC. Compatible devices and internet connection required. Works on compatible apps and surfaces. Results may vary depending on visual matches. Users may need to update Android to the latest version. Product functionality may be dependent on your app and device settings. Some functions may not be compatible with certain apps. Availability of the service varies by country and language. Accuracy of results is not guaranteed. T&C apply. #Retail price of 1 Unit of Galaxy S24 Ultra 12GB | 256GB. Price inclusive of taxes. ~Approximate value on exchange of 1 Unit of Galaxy S23 Ultra 12GB | 256GB. Exchange value varies basis model & condition of old device. Exchange at the sole discretion of dealer. ^Upgrade bonus as per Samsung Upgrade program, provided by brand/dealer at their sole discretion upon exchange of select devices. Upgrade bonus varies model wise and EMI offer taken by the customer. Up to ₹ 12000 upgrade bonus is applicable only where customer does not avail the 24 months no cost EMI offer. The upgrade bonus shall be up to ₹ 6000 only when availed with 24 months no cost EMI offer. Special upgrade bonus provided by brand at its sole discretion upon exchange of select Galaxy S Series devices. Please reach out to dealer for eligible device information. *Offer price shown for 1 Unit of Galaxy S24 Ultra 12GB | 256GB inclusive of exchange value of old device, upgrade bonus and special upgrade bonus for Galaxy S Series as detailed above. Final pricing subject to dealer discretion. ##Offer valid on 1 Unit of Galaxy Watch6 when purchased with Galaxy S24 Series. Offer applicable across entire Watch6 Series. Reach out to dealer for more information. Offers may be revised or withdrawn without prior notice. All third party logos/brands are trademarks/registered trademarks of the respective brand/company. Samsung promotes responsible use of Artificial Intelligence (AI) features.

Scan and experience Galaxy AI

Or WhatsApp "Hi" to 9870 494949 to buy at Samsung Exclusive Store

Cheil-19533/24

Cheil-19533/24

ಶುಕ್ರವಾರ, ಮಾರ್ಚ್ 15, 2024 | ₹ 7.00
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಫ್ಯಾಶನ್ ಸಪ್ತಾಹ ಮುಂಬೈನಲ್ಲಿ ನಡೆದ ಫ್ಯಾಶನ್ ಸಪ್ತಾಹದಲ್ಲಿ ರೂಪದರ್ಶಿಯೊಬ್ಬರು ಪಾಲ್ಗೊಂಡಿದ್ದರು

ಸಮಾಜ ಕಲ್ಯಾಣ ಇಲಾಖೆ

ಕರ್ನಾಟಕ ಸರ್ಕಾರದ ದೂರದೃಷ್ಟಿ
ಎಲ್ಲರನ್ನೂ ಒಳಗೊಂಡ ಶಿಕ್ಷಣಕ್ಕೆ ಪುಷ್ಟಿ

ವಿಶೇಷ ಪ್ರವರ್ಗಗಳ 20,000 ಮಕ್ಕಳಿಗೆ ನೇರ ಪ್ರವೇಶ

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

- ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ (KREIS)ದ ಅಡಿಯಲ್ಲಿನ 807 ಇಂಗ್ಲೀಷ್ ಮಾಧ್ಯಮ ವಸತಿ ಶಾಲೆಗಳು.
- ಪ.ಜಾ, ಪ.ಪಂ ಮತ್ತು ಹಿಂದುಳಿದ ವರ್ಗಗಳಿಗೆ ಸೇರಿದ 40,000 ವಿದ್ಯಾರ್ಥಿಗಳಿಗೆ ಪ್ರವೇಶಾತಿ.
- ವಿಶೇಷ ಪ್ರವರ್ಗದ ಮಕ್ಕಳಿಗೆ 20,000 ಸೀಟುಗಳನ್ನು (50%) ಮೀಸಲಿರಿಸಲಾಗಿದೆ (ಕೋಷ್ಟಕದಲ್ಲಿ ಇರುವಂತೆ)
- ಸಮವಸ್ತ್ರ, ಲೇಖನ ಸಾಮಗ್ರಿಗಳು ಇತ್ಯಾದಿಗಳನ್ನು ಸರ್ಕಾರವೇ ಭರಿಸುತ್ತದೆ.
- ಸ್ಥಳೀಯ ತಾಲ್ಲೂಕಿನ ವಿದ್ಯಾರ್ಥಿಗಳಿಗೆ 75% ಸೀಟುಗಳು, ಸ್ಥಳೀಯ ಜಿಲ್ಲೆಯ ವಿದ್ಯಾರ್ಥಿಗಳಿಗೆ 25% ಸೀಟುಗಳು.
- 15ನೇ ಏಪ್ರಿಲ್ 2024ರಿಂದ ಪ್ರವೇಶಾತಿ ಆರಂಭ.
- ಹೆಚ್ಚಿನ ಮಾಹಿತಿಗೆ https://kreis.karnataka.gov.in ಗೆ ಭೇಟಿ ನೀಡಿ.

ವಿಶೇಷ ಪ್ರವರ್ಗಗಳಿಗೆ ಪ್ರವೇಶಾತಿಯಲ್ಲಿ 50% ಮೀಸಲು

1.	ಸಫಾಯಿ ಕರ್ಮಚಾರಿಗಳು, ಚಿಂದಿ ಆಯುವವರು, ಚಿತಾಗಾರದ ಕಾರ್ಮಿಕರು/ ಸ್ಮಶಾನ ಕಾರ್ಮಿಕರು, ಹಿಂದಿನ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಮಕ್ಕಳಿಗೆ	10%
2.	ಬಾಲ ಕಾರ್ಮಿಕರು, ಜೀತವಿಮುಕ್ತ ಮಕ್ಕಳು ಮತ್ತು ರಕ್ಷಿಸಲ್ಪಟ್ಟ ದೇವದಾಸಿಯರ ಮಕ್ಕಳಿಗೆ	10%
3.	25%ಕ್ಕಿಂತ ಹೆಚ್ಚಿನ ಅಂಗವೈಕಲ್ಯತೆ ಹೊಂದಿರುವ ಮಕ್ಕಳು, ಹೆಚ್‌ಐವಿಗೆ ತುತ್ತಾದ ಪೋಷಕರ ಮಕ್ಕಳು, ತಾಯಂದಿರನ್ನು ಮಾತ್ರ ಹೊಂದಿರುವ ಅಥವಾ ಅನಾಥ ಮಕ್ಕಳಿಗೆ	10%
4.	ಅಲೆಮಾರಿ ಸಮುದಾಯಗಳಿಗೆ ಸೇರಿದ ಪೋಷಕರ ಮಕ್ಕಳು, ಸರ್ಕಾರಿ ಯೋಜನೆಗಳಿಂದ ಸ್ಥಳಾಂತರಗೊಂಡ ಪೋಷಕರು ಮತ್ತು ಸೇವೆಯಲ್ಲಿರುವ/ ನಿವೃತ್ತ ಸೈನಿಕ ಸಿಬ್ಬಂದಿಗಳ ಮಕ್ಕಳಿಗೆ	10%
5.	ಬುಡಕಟ್ಟು ವಸತಿ ಶಾಲೆಗಳಲ್ಲಿ 5ನೇ ತರಗತಿಯವರೆಗೆ ವ್ಯಾಸಂಗ ಮಾಡಿರುವ ಪರಿಶಿಷ್ಟ ಪಂಗಡ ಸಮುದಾಯಕ್ಕೆ ಸೇರಿದ ಮಕ್ಕಳಿಗೆ	10%
	ಒಟ್ಟು	50%

ಡಾ. ಹೆಚ್.ಸಿ.ಮಹದೇವಪ್ಪ,
ಮಾನ್ಯ ಸಮಾಜ ಕಲ್ಯಾಣ ಸಚಿವರು, ಕೆಆರ್‌ಇಐಎಸ್ ಶಾಲಾ ಮಕ್ಕಳ ಜೊತೆ ಇರುವುದು.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
9482300400

ನುಡಿದಂತೆ ನಡೆದಿದ್ದೇವೆ...

ಶಕ್ತಿ — ಮಹಿಳೆಯರಿಗೆ ಬಸ್ ಪ್ರಯಾಣ ಉಚಿತ | ಗೃಹ ಜ್ಯೋತಿ — ಪ್ರತಿ ಮನೆಗೆ 200 ಯೂನಿಟ್‌ವರೆಗೆ ವಿದ್ಯುತ್ ಉಚಿತ | ಅನ್ನಭಾಗ್ಯ — ಬಡವರಿಗೆ ಪ್ರತಿ ತಿಂಗಳು 10 kg | ಗೃಹಲಕ್ಷ್ಮಿ — ₹2000 | ಯುವನಿಧಿ — ಪ್ರತಿ ತಿಂಗಳು ನಿರುದ್ಯೋಗ ಭತ್ಯೆ ₹3000 ₹1500

"ಸಾರ್ವಜನಿಕ ಆಸ್ತಿ ಪಾಸ್ತಿ ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು ಪ್ರತಿಯೊಬ್ಬ ಭಾರತೀಯನ ಮೂಲಭೂತ ಕರ್ತವ್ಯ"

@SWDGok @swd.gok

ಶುಕ್ರವಾರ, ಮಾರ್ಚ್ 15, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 75 | ಪುಟ 22

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ
'ನಮಗೆ ನಾವೇ ಗೆಲುವಿನ ದಾರಿ ಹುಡುಕಿಕೊಳ್ಳಬೇಕು' –ಕೆರೆಬೇಟೆ ಚಿತ್ರದ ನಾಯಕ ಗೌರಿಶಂಕರ್ ಸಂದರ್ಶನ

ಆಳ–ಅಗಲ
ಒಂದು ದೇಶ ಒಂದು ಚುನಾವಣೆ ಸಾಧಕ–ಬಾಧಕಗಳ ಸುತ್ತ

ಪೆಟ್ರೋಲ್, ಡೀಸೆಲ್ ದರ ₹2ರಷ್ಟು ಇಳಿಕೆ 12

ಪಿಎಸ್ಐ ಪರೀಕ್ಷಾ ಅಕ್ರಮ ಎಸ್ಐಟಿಗೆ 9

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
73,097 ▲	22,146 ▲	₹67,700 (ಬೆಂಗಳೂರು) ▲	₹75,800 (ಬೆಂಗಳೂರು) ▲	82.84 ▼

'ರಸ್ತೆ ಅಭಿವೃದ್ಧಿಗೆ ₹1,385 ಕೋಟಿ'

ಪ್ರಜಾವಾಣಿ ವಾರ್ತೆ

ನವದೆಹಲಿ: ಕೇಂದ್ರ ರಸ್ತೆ ಮತ್ತು ಮೂಲಸೌಕರ್ಯ ನಿಧಿಯಡಿ (ಕ್ರಿಪ್) ಕರ್ನಾಟಕದಲ್ಲಿ ವಿವಿಧ ಜಿಲ್ಲೆಗಳಲ್ಲಿ ರಸ್ತೆಗಳ ಬಲವರ್ಧನೆಗೆ ₹1,385 ಕೋಟಿ ಮಂಜೂರು ಮಾಡಲಾಗಿದೆ ಎಂದು ಕೇಂದ್ರ ಹೆದ್ದಾರಿ ಹಾಗೂ ಭೂಸಾರಿಗೆ ಸಚಿವ ನಿತಿನ್ ಗಡ್ಕರಿ ತಿಳಿಸಿದ್ದಾರೆ.

ಸಾಮಾಜಿಕ ಜಾಲತಾಣ 'ಎಕ್ಸ್'ನಲ್ಲಿ ಈ ಬಗ್ಗೆ ಬರೆದುಕೊಂಡಿರುವ ಅವರು, '2,055 ಕಿ.ಮೀ. ಉದ್ದದ 295 ರಸ್ತೆಗಳ ಅಭಿವೃದ್ಧಿ ಹಾಗೂ ಬಲವರ್ಧನೆಗೆ ಈ ಹಣ ಬಳಸಲಾಗುತ್ತದೆ' ಎಂದಿದ್ದಾರೆ.

ಚಿನಕುರಳಿ

ಪ್ರಕಾಶ್ ಶೆಟ್ಟಿ

ರಾಮನಾಥ ಕೋವಿಂದ್ ನೇತೃತ್ವದ ಉನ್ನತಾಧಿಕಾರ ಸಮಿತಿಯ ಶಿಫಾರಸು ಸಲ್ಲಿಕೆ • 18 ಸಾವಿರಕ್ಕೂ ಹೆಚ್ಚು ಪುಟಗಳ ವರದಿ

'ಏಕಕಾಲಕ್ಕೆ ಚುನಾವಣೆ'

ಪ್ರಜಾವಾಣಿ ವಾರ್ತೆ/ ಪಿಟಿಐ

ನವದೆಹಲಿ: ಲೋಕಸಭೆ ಮತ್ತು ರಾಜ್ಯ ವಿಧಾನ ಸಭೆಗಳಿಗೆ ಏಕಕಾಲದಲ್ಲಿ ಚುನಾವಣೆ ನಡೆಸಬೇಕು; ನಂತರದ 100 ದಿನಗಳ ಒಳಗಾಗಿ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸಬೇಕೆಂಬ ಶಿಫಾರಸು ಹೊಂದಿರುವ ವರದಿಯನ್ನು ಮಾಜಿ ರಾಷ್ಟ್ರಪತಿ ರಾಮನಾಥ ಕೋವಿಂದ್ ನೇತೃತ್ವದ ಸಮಿತಿಯು ರಾಷ್ಟ್ರಪತಿಯವರಿಗೆ ಸಲ್ಲಿಸಿದೆ.

'ಒಂದು ದೇಶ, ಒಂದು ಚುನಾವಣೆ' ಪರಿಕಲ್ಪನೆಯ ಸಾಧಕ–ಬಾಧಕಗಳನ್ನು ಪರಿಶೀಲಿಸಲು ಸರ್ಕಾರವು ಕೋವಿಂದ್ ನೇತೃತ್ವದ ಸಮಿತಿಯನ್ನು ರಚಿಸಿತ್ತು.

13 ನೇ ಪುಟ ನೋಡಿ

ಪ್ರಮುಖ ಶಿಫಾರಸುಗಳು...

- ಮೂರು ಸ್ತರದ ಚುನಾವಣೆ (1. ಲೋಕಸಭೆ, 2. ರಾಜ್ಯ ವಿಧಾನಸಭೆಗಳು ಮತ್ತು 3. ಪುರಸಭೆ ಹಾಗೂ ಪಂಚಾಯತ್ ಸೇರಿದಂತೆ ಸ್ಥಳೀಯ ಸಂಸ್ಥೆಗಳು) ಎರಡು ಹಂತಗಳಲ್ಲಿ ನಡೆಯಲಿವೆ
- ಮೊದಲ ಹಂತದಲ್ಲಿ ಲೋಕಸಭೆ ಮತ್ತು ರಾಜ್ಯ ವಿಧಾನ ಸಭೆಗಳಿಗೆ ಏಕಕಾಲದಲ್ಲಿ ಚುನಾವಣೆ ನಡೆಸುವುದು
- ಎರಡನೇ ಹಂತದಲ್ಲಿ, ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಿಗೆ ಚುನಾವಣೆ ನಡೆದ 100 ದಿನಗಳ ಒಳಗಾಗಿ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ
- ಅತಂತ್ರ ಲೋಕಸಭೆ ನಿರ್ಮಾಣವಾದರೆ ಅಥವಾ ಸರ್ಕಾರ ಬಹುಮತ ಕಳೆದುಕೊಂಡರೆ ಹೊಸದಾಗಿ ಚುನಾವಣೆ. ಹೊಸದಾಗಿ ಚುನಾವಣೆ ನಡೆದ ಬಳಿಕ ಅಧಿಕಾರಕ್ಕೇರುವ ಸರ್ಕಾರದ ಅವಧಿಯು ಲೋಕಸಭೆಯ ಇನ್ನುಳಿದ ಅವಧಿಗೆ ಮಾತ್ರ ಇರಲಿದೆ
- ರಾಜ್ಯ ವಿಧಾನಸಭೆಗಳಿಗೆ ಮಧ್ಯಂತರ ಚುನಾವಣೆ ನಡೆದರೆ, ಹೊಸ ಸರ್ಕಾರದ ಅವಧಿಯು ಲೋಕಸಭೆಯ ಅವಧಿ ಕೊನೆಗೊಳ್ಳುವವರೆಗೆ ಮಾತ್ರ
- ಸಂವಿಧಾನಕ್ಕೆ ಒಟ್ಟು 18 ತಿದ್ದುಪಡಿ ತರಬೇಕಿದೆ
- ಪ್ರಮುಖವಾಗಿ ಸಂವಿಧಾನದ 83 (ಸಂಸತ್ತಿನ ಸದನಗಳ ಅವಧಿ), 172 (ರಾಜ್ಯ ವಿಧಾನಸಭೆಗಳ ಅವಧಿ) ಮತ್ತು 325 (ಮತದಾರರ ಪಟ್ಟಿಗೆ ಸಂಬಂಧಿಸಿದ) ವಿಧಿಗಳಿಗೆ ತಿದ್ದುಪಡಿ ಆಗಬೇಕು
- ಈ ತಿದ್ದುಪಡಿಗಳು ಜಾರಿಗೆ ಬರಲು ರಾಜ್ಯಗಳ ಅನುಮೋದನೆಯ ಅಗತ್ಯ ಇಲ್ಲ
- ಭಾರತೀಯ ಚುನಾವಣಾ ಆಯೋಗವು ರಾಜ್ಯ ಚುನಾವಣಾ ಆಯೋಗದೊಂದಿಗೆ ಸಮಾಲೋಚಿಸಿ ಒಂದೇ ಮತದಾರರ ಪಟ್ಟಿ ಮತ್ತು ಗುರುತಿನ ಚೀಟಿಗಳನ್ನು ಸಿದ್ಧಪಡಿಸಬೇಕು

ಚುನಾವಣಾ ಬಾಂಡ್: ಮಾಹಿತಿ ಬಹಿರಂಗ

ನವದೆಹಲಿ (ಪಿಟಿಐ): ಚುನಾವಣಾ ಬಾಂಡ್‌ಗಳಿಗೆ ಸಂಬಂಧಿಸಿದಂತೆ ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ಸಲ್ಲಿಸಿರುವ ವಿವರಗಳನ್ನು ಚುನಾವಣಾ ಆಯೋಗವು ಗುರುವಾರ ತನ್ನ ವೆಬ್‌ಸೈಟ್‌ನಲ್ಲಿ ಬಹಿರಂಗಪಡಿಸಿದೆ.

ಸುಪ್ರೀಂ ಕೋರ್ಟ್ ನಿರ್ದೇಶನದ ಮೇರೆಗೆ ಎಸ್‌ಬಿಐ ಮಾರ್ಚ್ 12ರಂದು ಚುನಾವಣಾ ಆಯೋಗಕ್ಕೆ ಮಾಹಿತಿಯನ್ನು ಹಂಚಿಕೊಂಡಿತ್ತು. ಮಾರ್ಚ್ 15ರ ಸಂಜೆ 5 ಗಂಟೆಯೊಳಗೆ ತನ್ನ ವೆಬ್‌ಸೈಟ್‌ನಲ್ಲಿ ವಿವರವನ್ನು ಪ್ರಕಟಿಸಬೇಕು ಎಂದು ಸುಪ್ರೀಂ ಕೋರ್ಟ್ ಚುನಾವಣಾ ಆಯೋಗಕ್ಕೆ ಸೂಚಿಸಿತ್ತು.

ಚುನಾವಣಾ ಬಾಂಡ್‌ಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಎಸ್‌ಬಿಐ ಎರಡು ಭಾಗಗಳಲ್ಲಿ ಆಯೋಗಕ್ಕೆ ಸಲ್ಲಿಸಿದೆ.

ಫ್ಯೂಚರ್ ಗೇಮಿಂಗ್ ಅಂಡ್ ಹೋಟೆಲ್ ಸರ್ವೀಸಸ್ ಕಂಪನಿಯು ಚುನಾವಣಾ ಬಾಂಡ್‌ಗಳ ಖರೀದಿಯಲ್ಲಿ ಅಗ್ರ ಸ್ಥಾನದಲ್ಲಿದ್ದು, ₹1,368 ಕೋಟಿ ಮೊತ್ತದ ಬಾಂಡ್‌ಗಳನ್ನು ಖರೀದಿಸಿದೆ.

ನಂತರದ ಸ್ಥಾನಗಳಲ್ಲಿರುವ ಮೇಘಾ ಎಂಜಿನಿಯರಿಂಗ್ ಅಂಡ್ ಇನ್‌ಫ್ರಾಸ್ಟ್ರಕ್ಚರ್ ಲಿಮಿಟೆಡ್ ₹966 ಕೋಟಿ, ಕ್ವಿಕ್ ಸಪ್ಲೈ ಚೈನ್ ಪ್ರೈವೇಟ್ ಲಿಮಿಟೆಡ್ ₹410 ಕೋಟಿ ಮೊತ್ತದ ಬಾಂಡ್‌ಗಳನ್ನು ಖರೀದಿ ಮಾಡಿವೆ ಎಂದು ಮಾಹಿತಿ ನೀಡಲಾಗಿದೆ.

11 ನೇ ಪುಟ ನೋಡಿ

ಚುನಾವಣಾ ಆಯುಕ್ತರಾಗಿ ಸಂಧು, ಜ್ಞಾನೇಶ್ ನೇಮಕ

ಕಾನೂನು ಸಚಿವಾಲಯದ ಅಧಿಸೂಚನೆ ಪ್ರಕಟ

ನವದೆಹಲಿ (ಪಿಟಿಐ): ಮಾಜಿ ಐಎಎಸ್ ಅಧಿಕಾರಿಗಳಾದ ಜ್ಞಾನೇಶ್ ಕುಮಾರ್ ಮತ್ತು ಸುಖಬೀರ್ ಸಂಧು ಅವರು ಚುನಾವಣಾ ಆಯುಕ್ತರಾಗಿ ಗುರುವಾರ ನೇಮಕಗೊಂಡಿದ್ದಾರೆ. ಇವರ ನೇಮಕಾತಿ ಕುರಿತು ಕಾನೂನು ಸಚಿವಾಲಯ ಅಧಿಸೂಚನೆ ಹೊರಡಿಸಿದೆ.

ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಉನ್ನತಾಧಿಕಾರ ಆಯ್ಕೆ ಸಮಿತಿ ಗುರುವಾರ ಸಭೆ ನಡೆಸಿ ಈ ಇಬ್ಬರ ಹೆಸರನ್ನು ಶಿಫಾರಸು ಮಾಡಿತ್ತು.

'ಇಬ್ಬರು ಚುನಾವಣಾ ಆಯುಕ್ತರ ಆಯ್ಕೆಗೆ ಸಂಬಂಧಿಸಿದಂತೆ ಆರು ಹೆಸರುಗಳು ಸಮಿತಿಯ ಮುಂದೆ ಬಂದಿದ್ದವು. ಆ ಪೈಕಿ ಉನ್ನತಾಧಿಕಾರ ಸಮಿತಿಯ ಬಹುಪಾಲು ಸದಸ್ಯರು ಸಂಧು ಮತ್ತು ಜ್ಞಾನೇಶ್ ಅವರ ಹೆಸರನ್ನು ಅಂತಿಮಗೊಳಿಸಿದರು' ಎಂದು ಸಮಿತಿ ಸದಸ್ಯರೂ ಆಗಿರುವ ಕಾಂಗ್ರೆಸ್ ಮುಖಂಡ ಅಧೀರ್ ರಂಜನ್ ಚೌಧರಿ ತಿಳಿಸಿದರು.

11 ನೇ ಪುಟ ನೋಡಿ

ಸುಖಬೀರ್ ಸಂಧು, ಜ್ಞಾನೇಶ್ ಕುಮಾರ್

ಅಧೀರ್ ಆಕ್ಷೇಪ

'ಚುನಾವಣಾ ಆಯುಕ್ತರ ಆಯ್ಕೆ ಪ್ರಕ್ರಿಯೆಯ ಕಾರ್ಯವಿಧಾನದ ಬಗ್ಗೆ ಕೆಲ ಪ್ರಶ್ನೆಗಳನ್ನು ಎತ್ತಿದ್ದು, ಆಯ್ಕೆ ಕುರಿತು ಅಸಮ್ಮತಿ ಟಿಪ್ಪಣಿ ಸಲ್ಲಿಸಿದ್ದೇನೆ' ಎಂದು ಅಧೀರ್ ರಂಜನ್ ಚೌಧರಿ ಹೇಳಿದರು.

11 ನೇ ಪುಟ ನೋಡಿ

ಆಸ್ತಿ ತೆರಿಗೆ: ಜುಲೈ ಅಂತ್ಯದವರೆಗೂ ರಿಯಾಯಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 2024–25ನೇ ಸಾಲಿನ ಆಸ್ತಿ ತೆರಿಗೆಯನ್ನು ಪೂರ್ಣವಾಗಿ ಪಾವತಿಸಿದರೆ, ಶೇ 5ರಷ್ಟು ರಿಯಾಯಿತಿ ನೀಡುವ ಅವಧಿಯನ್ನು ಜುಲೈ ಅಂತ್ಯದವರೆಗೆ ಬಿಬಿಎಂಪಿ ವಿಸ್ತರಿಸಿದೆ.

ಆರ್ಥಿಕ ವರ್ಷದ ಪೂರ್ಣ ಆಸ್ತಿ ತೆರಿಗೆಯನ್ನು ಪಾವತಿಸಿದರೆ ಬಿಬಿಎಂಪಿ ಕಾಯ್ದೆ ಪ್ರಕಾರ ಏಪ್ರಿಲ್ 30ರವರೆಗೆ ಶೇ 5ರಷ್ಟು ರಿಯಾಯಿತಿ ನೀಡಲಾಗುತ್ತದೆ. ಇದೀಗ ಲೋಕಸಭಾ ಚುನಾವಣೆ ಘೋಷಣೆಯಾಗುವ ಹಿನ್ನೆಲೆಯಲ್ಲಿ ಪಾಲಿಕೆಯ ಕಂದಾಯ ವಿಭಾಗದ ಅಧಿಕಾರಿಗಳು ಚುನಾವಣೆ ಕಾರ್ಯದಲ್ಲಿ ತೊಡಗಿರುತ್ತಾರೆ. ಚಲನ್ ಸೃಜನೆ ಹಾಗೂ ಆನ್‌ಲೈನ್‌ನಲ್ಲಿ ಆಸ್ತಿ ತೆರಿಗೆಯನ್ನು ಸಕಾಲದಲ್ಲಿ ಪಾವತಿಸುವುದು ಕಷ್ಟಸಾಧ್ಯವಾಗಿರುತ್ತದೆ. ಹೀಗಾಗಿ, ರಿಯಾಯಿತಿಯನ್ನು ಜುಲೈ 31ರವರೆಗೆ ವಿಸ್ತರಿಸಲಾಗಿದೆ.

ಹೊಸ ಪದ್ಧತಿ ಇಲ್ಲ: 'ಈಗಿರುವ ಆಸ್ತಿ ತೆರಿಗೆ ಪದ್ಧತಿಯೇ 2024–25ನೇ ಸಾಲಿಗೂ ಮುಂದುವರಿಯುತ್ತದೆ. ಮಾರ್ಗಸೂಚಿ ದರದ ಅನ್ವಯ ಆಸ್ತಿ ತೆರಿಗೆ ನಿರ್ಧರಿಸುವ ಹೊಸ ಪದ್ಧತಿ ಸದ್ಯಕ್ಕೆ ಜಾರಿಯಾಗುವ ಲಕ್ಷಣಗಳಿಲ್ಲ. ಚುನಾವಣೆ ಹಿನ್ನೆಲೆಯಲ್ಲಿ ಹೊಸ ಪದ್ಧತಿ ಜಾರಿಗೆ ತಂದರೆ ತೊಂದರೆಯಾಗಬಹುದು ಎಂಬ ಲೆಕ್ಕಾಚಾರವಿದೆ' ಎಂದು ಅಧಿಕಾರಿಗಳು ತಿಳಿಸಿದರು.



ಡೆಲ್ಟಾ ಎಲೆಕ್ಟ್ರಾನಿಕ್ಸ್–ಬಿಎಂಆರ್‌ಸಿಎಲ್ ಒಪ್ಪಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೊಮ್ಮಸಂದ್ರ ಮೆಟ್ರೊ ನಿಲ್ದಾಣಕ್ಕೆ ಹಣಕಾಸಿನ ನೆರವು ನೀಡಲು ಬೆಂಗಳೂರು ಮೆಟ್ರೊ ರೈಲು ಕಾರ್ಪೊರೇಶನ್ ಲಿಮಿಟೆಡ್ (ಬಿಎಂಆರ್‌ಸಿಎಲ್) ಮತ್ತು ಡೆಲ್ಟಾ ಎಲೆಕ್ಟ್ರಾನಿಕ್ಸ್ ಇಂಡಿಯಾ ಪ್ರೈವೆಟ್ ಲಿಮಿಟೆಡ್ ನಡುವೆ ಗುರುವಾರ ಒಡಂಬಡಿಕೆ ನಡೆದಿದೆ.

ಈ ಒಡಂಬಂಡಿಕೆಯ ಪ್ರಕಾರ ಆರ್.ವಿ. ರಸ್ತೆ–ಬೊಮ್ಮಸಂದ್ರ ಮಾರ್ಗದಲ್ಲಿ (ಹಳದಿ) ಬೊಮ್ಮಸಂದ್ರ ಮೆಟ್ರೊ ನಿಲ್ದಾಣ ನಿರ್ಮಾಣಕ್ಕೆ ಡೆಲ್ಟಾ ಎಲೆಕ್ಟ್ರಾನಿಕ್ಸ್ ಇಂಡಿಯಾ ₹ 65 ಕೋಟಿ ನೀಡಲಿದ್ದು, ಗುರುವಾರ ₹10 ಕೋಟಿ ನೀಡಿದೆ. ಈ ನಿಲ್ದಾಣಕ್ಕೆ 'ಡೆಲ್ಟಾ ಎಲೆಕ್ಟ್ರಾನಿಕ್ಸ್- ಬೊಮ್ಮಸಂದ್ರ ಮೆಟ್ರೊ ನಿಲ್ದಾಣ' ಎಂದು ಹೆಸರಿಡಲಾಗುತ್ತಿದ್ದು, ಈ ನಾಮಕರಣದ ಹಕ್ಕನ್ನು 30 ವರ್ಷಗಳ ಅವಧಿಗೆ ಡೆಲ್ಟಾ ಎಲೆಕ್ಟ್ರಾನಿಕ್ಸ್ ಇಂಡಿಯಾಕ್ಕೆ ನೀಡಲಾಗಿದೆ.

ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಎಂ. ಮಹೇಶ್ವರ ರಾವ್, ಡೆಲ್ಟಾ ಎಲೆಕ್ಟ್ರಾನಿಕ್ಸ್ ಇಂಡಿಯಾದ ಅಧ್ಯಕ್ಷ ಬೆಂಜಮಿನ್ ಲಿನ್ ಒಪ್ಪಂದಕ್ಕೆ ಸಹಿ ಹಾಕಿದರು. ವ್ಯವಸ್ಥಾಪಕ ನಿರ್ದೇಶಕ ನಿರಂಜನ್ ನಾಯಕ್, ಬಿಎಂಆರ್‌ಸಿಎಲ್ ಅಧಿಕಾರಿಗಳು ಉಪಸ್ಥಿತರಿದ್ದರು.

ಹಳದಿ ಮಾರ್ಗಕ್ಕೆ ಸಂಬಂಧಿಸಿ ಸಹಿ ಮಾಡಲಾದ 3ನೇ ಒಡಂಬಡಿಕೆ ಇದಾಗಿದೆ. ಕೋನಪ್ಪನ ಅಗ್ರಹಾರ ಮತ್ತು ಹೆಬ್ಬಗೋಡಿ ಮೆಟ್ರೊ ನಿಲ್ದಾಣಗಳಿಗೆ ಕ್ರಮವಾಗಿ ಇನ್ಫೊಸಿಸ್ ಫೌಂಡೇಶನ್ ಮತ್ತು ಬಯೋಕಾನ್ ಫೌಂಡೇಶನ್ ಸಂಸ್ಥೆಗಳೊಂದಿಗೆ ಈಗಾಗಲೇ ಒಪ್ಪಂದ ಮಾಡಿಕೊಳ್ಳಲಾಗಿದೆ.

ಬೊಮ್ಮಸಂದ್ರ ಮೆಟ್ರೊ ನಿಲ್ದಾಣಕ್ಕೆ ಹಣಕಾಸಿನ ನೆರವು ನೀಡಲು ಬೆಂಗಳೂರು ಮೆಟ್ರೊ ರೈಲು ಕಾರ್ಪೊರೇಶನ್ ಲಿಮಿಟೆಡ್ (ಬಿಎಂಆರ್‌ಸಿಎಲ್) ವ್ಯವಸ್ಥಾಪಕ ನಿರ್ದೇಶಕ ಎಂ. ಮಹೇಶ್ವರ ರಾವ್, ಡೆಲ್ಟಾ ಎಲೆಕ್ಟ್ರಾನಿಕ್ಸ್ ಇಂಡಿಯಾದ ಅಧ್ಯಕ್ಷ ಬೆಂಜಮಿನ್ ಲಿನ್ ಒಡಂಬಡಿಕೆಗೆ ಸಹಿ ಹಾಕಿದರು. ಡೆಲ್ಟಾ ವ್ಯವಸ್ಥಾಪಕ ನಿರ್ದೇಶಕ ನಿರಂಜನ್ ನಾಯಕ್, ಬಿಎಂಆರ್‌ಸಿಎಲ್ ಅಧಿಕಾರಿಗಳು ಉಪಸ್ಥಿತರಿದ್ದರು.

ಮೆಟ್ರೊ ಸಿಬ್ಬಂದಿಗೆ ಕಿರುಕುಳ: ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಿಳಾ ಸಿಬ್ಬಂದಿಗೆ ಕಿರುಕುಳ ನೀಡಿದ್ದಲ್ಲದೇ ಅಶ್ಲೀಲ ಶಬ್ದಗಳಿಂದ ನಿಂದಿಸಿರುವ ಮೆಟ್ರೊ ಸ್ಯಾಂಡಲ್ ಸೋಪ್ ಫ್ಯಾಕ್ಟರಿ ನಿಲ್ದಾಣದ ಇನ್‌ಚಾರ್ಜ್ ಗಜೇಂದ್ರನ್ ವಿರುದ್ಧ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಬೇಕು, ಕೆಲಸದಿಂದ ವಜಾಗೊಳಿಸಬೇಕು ಎಂದು ಆಗ್ರಹಿಸಿ ಕರ್ನಾಟಕ ರಾಜ್ಯ ಕಾರ್ಮಿಕ ಪರಿಷತ್ತು ನೇತೃತ್ವದಲ್ಲಿ ಗುರುವಾರ ಆಮರಣಾಂತ ಉಪವಾಸ ಸತ್ಯಾಗ್ರಹ ಆರಂಭಗೊಂಡಿತು.

ಸಂತ್ರಸ್ತ ಮಹಿಳೆಯು ಈ ಬಗ್ಗೆ ಮೆಟ್ರೊ ನಿರ್ದೇಶಕರಿಗೆ ಮತ್ತು ಸಂಬಂಧಪಟ್ಟ 'ವಿಸ್‌ಡಂ' ಸೆಕ್ಯೂರಿಟಿ ಏಜೆನ್ಸಿಗೆ ದೂರು ನೀಡಿದರೂ ಕ್ರಮ ಕೈಗೊಂಡಿಲ್ಲ. ಸಂತ್ರಸ್ತೆಯನ್ನೇ ಕೆಲಸದಿಂದ ತೆಗೆದು ಹಾಕಲಾಗಿದೆ. 'ವಿಸ್‌ಡಂ' ಏಜೆನ್ಸಿಯ ಕಾರ್ಮಿಕ ಪರವಾನಗಿಯನ್ನು ರದ್ದು ಮಾಡಿ ಕಪ್ಪು ಪಟ್ಟಿಗೆ ಸೇರಿಸಬೇಕು ಎಂದು ಪ್ರತಿಭಟನಕಾರರು ಒತ್ತಾಯಿಸಿದರು.

ಕೊಳೆಬಟ್ಟೆ ಧರಿಸಿ ಬಂದ ವ್ಯಕ್ತಿಯನ್ನು ಮೆಟ್ರೊ ನಿಲ್ದಾಣದ ಒಳಗೆ ಬಿಡದ ಸಿಬ್ಬಂದಿಯನ್ನು ವಜಾ ಮಾಡಲಾಗಿದೆ. ಆದರೆ, ಒಳಬಿಡದಂತೆ ಆದೇಶ ಮಾಡಿದ ಮೇಲಧಿಕಾರಿಯ ಮೇಲೆ ಯಾವುದೇ ಕ್ರಮ ಕೈಗೊಂಡಿಲ್ಲ. ಸಿಬ್ಬಂದಿಯನ್ನು ಕೆಲಸಕ್ಕೆ ಮರುನೇಮಕ ಮಾಡಬೇಕು. ಮೇಲಧಿಕಾರಿಯನ್ನು ವಜಾಗೊಳಿಸಬೇಕು ಎಂದು ಆಗ್ರಹಿಸಿದರು.

ನ್ಯಾಯ ಸಿಗುವವರೆಗೆ ಉಪವಾಸ ಸತ್ಯಾಗ್ರಹ ಮುಂದುವರಿಸಲಾಗುವುದು ಎಂದು ಎಚ್ಚರಿಸಿದರು. ರಾಜ್ಯ ಕಾರ್ಮಿಕ ಪರಿಷತ್ತು ಅಧ್ಯಕ್ಷ ರವಿಶೆಟ್ಟಿ ಬೈಂದೂರು, ಸಂತ್ರಸ್ತ ಮಹಿಳೆ ಸೇರಿ ಅನೇಕರು ಭಾಗವಹಿಸಿದ್ದರು.



ಮಹಿಳಾ ಸಿಬ್ಬಂದಿಗೆ ಕಿರುಕುಳ ನೀಡುತ್ತಿರುವ ಬಿಎಂಆರ್‌ಸಿಎಲ್ ಅಧಿಕಾರಿ ಮೇಲೆ ಕ್ರಮ ಕೈಗೊಳ್ಳಲು ಆಗ್ರಹಿಸಿ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಗುರುವಾರ ಕರ್ನಾಟಕ ರಾಜ್ಯ ಕಾರ್ಮಿಕ ಪರಿಷತ್ ಸದಸ್ಯರು ಆಮರಣಾಂತ ಉಪವಾಸ ಸತ್ಯಾಗ್ರಹ ಆರಂಭಿಸಿದರು — ಪ್ರಜಾವಾಣಿ ಚಿತ್ರ

ನಾಮಫಲಕದಲ್ಲಿ ಕನ್ನಡ: ಎಲ್ಲೆಡೆ ಕ್ರಮಕ್ಕೆ ಮುಂದಾಗದ ಬಿಬಿಎಂಪಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಮಫಲಕಗಳಲ್ಲಿ ಶೇ 60ರಷ್ಟು ಕನ್ನಡ ಬಳಸುವ ಗಡುವು ಮುಗಿದಿದ್ದು, ಬಿಬಿಎಂಪಿ ಕ್ರಮ ಕೈಗೊಳ್ಳಲು ಇನ್ನೂ ನಿರ್ಧರಿಸಿಲ್ಲ. ಆದರೆ, ಯಲಹಂಕ ವಲಯದ ಮಾಲ್ ಆಫ್ ಏಷ್ಯಾ ಸೇರಿದಂತೆ ಕೆಲವು ಮಳಿಗೆಗಳಿಗೆ ಗುರುವಾರ ರಾತ್ರಿ ಬೀಗ ಹಾಕಲಾಗಿದೆ.

'ನೋಟಿಸ್ ನೀಡಲಾಗಿದ್ದ 50,357 ಮಳಿಗೆಗಳ ಪೈಕಿ, ಮಾರ್ಚ್ 13ರ ಮಾಹಿತಿಯಂತೆ 625 ಮಳಿಗೆಗಳು ನಾಮಫಲಕಗಳಲ್ಲಿ ಶೇ 60ರಷ್ಟು ಕನ್ನಡ ಪ್ರದರ್ಶಿಸಿಲ್ಲ. ಫೆಬ್ರುವರಿ 28ರ ಸುತ್ತೋಲೆಯಂತೆಯೇ ಮಾರ್ಚ್ 14ರಿಂದ ಕ್ರಮ ಕೈಗೊಳ್ಳಲಾಗುತ್ತದೆ' ಎಂದು ಆರೋಗ್ಯ ವಿಭಾಗದ ವಿಶೇಷ ಆಯುಕ್ತ ಸುರೋಳ್ಕರ್ ವಿಕಾಸ್ ಕಿಶೋರ್ ತಿಳಿಸಿದ್ದರು.

ಯಲಹಂಕ (175) ಹಾಗೂ ಪೂರ್ವ (147) ವಲಯದಲ್ಲಿ ಹೆಚ್ಚು ಮಳಿಗೆಗಳು ನೋಟಿಸ್ ನೀಡಿ ಅವಧಿ ಮುಗಿದಿದ್ದರೂ ನಾಮಫಲಕಗಳಲ್ಲಿ ಶೇ 60ರಷ್ಟು ಕನ್ನಡ ಬಳಸಿಕೊಂಡಿಲ್ಲ ಎಂದು ಬಿಬಿಎಂಪಿ ನೀಡಿರುವ ಅಂಕಿ–ಅಂಶದಲ್ಲಿ ತಿಳಿಸಲಾಗಿದೆ. ಆದರೆ, ಮಳಿಗೆಗಳಿಗೆ ಬೀಗ ಹಾಕುವ, ಪರವಾನಗಿ ರದ್ದು ಮಾಡುವ ಕೆಲಸ ಎಲ್ಲ ವಲಯದಲ್ಲೂ ಗುರುವಾರ ಆರಂಭವಾಗಿಲ್ಲ.

'ಗಡುವು ಮುಗಿದಿದ್ದರೂ ಎಂದಿನಿಂದ ಮಳಿಗೆಗಳ ಮೇಲೆ ಕ್ರಮ ಕೈಗೊಳ್ಳಬೇಕು ಎಂಬುದನ್ನು ನಿರ್ಧರಿಸಿಲ್ಲ. ಮುಖ್ಯ ಆಯುಕ್ತರಿಗೆ ಕಡತ ಮಂಡಿಸಲಾಗಿದ್ದು, ಅವರ ಸೂಚನೆಯಂತೆ ಕ್ರಮ ಕೈಗೊಳ್ಳಲಾಗುವುದು' ಎಂದು ಸುರೋಳ್ಕರ್ ವಿಕಾಸ್ ಕಿಶೋರ್ ತಿಳಿಸಿದರು.

ಜಾತಿಗಣತಿ ಅವೈಜ್ಞಾನಿಕ: ಒಕ್ಕಲಿಗ ಮುಖಂಡರ ಆರೋಪ

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: 'ಸರ್ಕಾರಕ್ಕೆ ಸಲ್ಲಿಸಿರುವ ಜಾತಿಗಣತಿ ವರದಿ ಅವೈಜ್ಞಾನಿಕವಾಗಿದ್ದು, ಇದರ ವಿರುದ್ಧ ಮುಂದಿನ ವಾರ ಒಕ್ಕಲಿಗರ ಪ್ರಾಬಲ್ಯದ 16 ಜಿಲ್ಲೆಗಳಲ್ಲಿ ಹೋರಾಟ ಮಾಡಲಾಗುತ್ತದೆ' ಎಂದು ಒಕ್ಕಲಿಗರ ಕ್ರಿಯಾ ಸಮಿತಿ ಸದಸ್ಯರು ತಿಳಿಸಿದರು.

'ಪ್ರತಿ ಹತ್ತು ವರ್ಷಗಳಿಗೊಮ್ಮೆ ಜನಗಣತಿ ಕೈಗೊಳ್ಳಲಾಗುತ್ತಿದ್ದು, ಅದರಲ್ಲಿ ಎಸ್‌ಸಿ, ಎಸ್‌ಟಿ ಜನಗಣತಿಯನ್ನು ಪ್ರತ್ಯೇಕವಾಗಿ ಕೈಗೊಳ್ಳಲಾಗುತ್ತಿದೆ. ಸಾಮಾಜಿಕ ಶೈಕ್ಷಣಿಕ ಮತ್ತು ಆರ್ಥಿಕ ಸಮೀಕ್ಷೆಯಿಂದ ಎಸ್‌ಸಿ, ಎಸ್‌ಟಿ ಜನಾಂಗಕ್ಕೆ ಯಾವುದೇ ಉಪಯೋಗವಿಲ್ಲದಿದ್ದರೂ, ಉದ್ದೇಶಪೂರ್ವಕವಾಗಿ ಆ ಜನಾಂಗದ ನಾಯಕರನ್ನು ಮುನ್ನೆಲೆಗೆ ತಂದು ರಾಜ್ಯ ಸರ್ಕಾರ ಗೊಂದಲ ಸೃಷ್ಟಿಸುತ್ತಿದೆ' ಎಂದು ಒಕ್ಕಲಿಗ ಕ್ರಿಯಾ ಸಮಿತಿ ಅಧ್ಯಕ್ಷ ಕೆ.ಜಿ.ಕುಮಾರ್ ಅವರು ಪತ್ರಿಕಾಗೋಷ್ಠಿಯಲ್ಲಿ ಆರೋಪಿಸಿದರು.

'ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಸಮೀಕ್ಷೆಗಳನ್ನು ಕೈಗೊಂಡು ಒಂಬತ್ತು ವರ್ಷಗಳೇ ಕಳೆದಿವೆ. ಈ ಸಮೀಕ್ಷೆ ಪ್ರಕಾರ ಹಿಂದುಳಿದ ಆಯೋಗದಲ್ಲಿ ಉದ್ದೇಶಪೂರ್ವಕವಾಗಿ ಕೆಲವು ಸಣ್ಣ ಪುಟ್ಟ ಜಾತಿಗಳಿಗೆ ಸೇರಿದವರನ್ನು ಮಾತ್ರ ಅಧ್ಯಕ್ಷ ಮತ್ತು ಸದಸ್ಯರನ್ನಾಗಿ ಮಾಡಲಾಗಿದ್ದು ಎಸ್.ಸಿ, ಎಸ್.ಟಿ, ಮುಸ್ಲಿಂ ಒಕ್ಕಲಿಗ ಮತ್ತು ಲಿಂಗಾಯತ ಜಾತಿಯವರನ್ನು ಹೊರಗಿಟ್ಟು ಸಂಚು ರೂಪಿಸಲಾಗಿದೆ' ಎಂದು ದೂರಿದರು.

ನಗರಸಭೆ ಮಾಜಿ ಅಧ್ಯಕ್ಷ ಅಂದಾನಪ್ಪ ಮಾತನಾಡಿ, '2015ರಲ್ಲಿ ರಾಜ್ಯದಲ್ಲಿ 6.45 ಕೋಟಿ ಜನಸಂಖ್ಯೆ ಇತ್ತು. 2024ರ ವೇಳೆಗೆ 7.2 ಕೋಟಿಯಾಗಿದೆ. ರಾಜ್ಯ ಸರ್ಕಾರ ಜಾತಿ ಗಣತಿ ಮಾಡಿಸಿರುವುದು 5.98 ಕೋಟಿ ಜನಸಂಖ್ಯೆಗೆ ಮಾತ್ರವಾಗಿದ್ದು, ಇದು ಅವೈಜ್ಞಾನಿಕವಾಗಿದೆ' ಎಂದು ಆರೋಪಿಸಿದರು.

ಇತಿಹಾಸ ಸಂಶೋಧಕ ತಲಕಾಡು ಚಿಕ್ಕರಂಗೇಗೌಡ ಮಾತನಾಡಿ, 'ಈ ಸಮೀಕ್ಷೆ ಮಾಡಿರುವುದರ ಹಿಂದೆ ಲಿಂಗಾಯತ, ಒಕ್ಕಲಿಗರಿಗೆ ತೊಂದರೆ ಕೊಡುವ ವ್ಯವಸ್ಥಿತ ಸಂಚನ್ನು ಸರ್ಕಾರ ರೂಪಿಸಿದೆ' ಎಂದರು.

ಒಕ್ಕಲಿಗ ಮುಖಂಡರಾದ ಬಿ.ಟಿ. ಶ್ರೀನಿವಾಸ್, ಎ.ಎಸ್. ಗೋವಿಂದೇಗೌಡ, ಕಾಳೇಗೌಡ, ಗೋವಿಂದರಾಜು ಪಟೇಲ್, ಕೃಷ್ಣಪ್ರಸಾದ್, ಸಂತೋಷ್, ಲಕ್ಷ್ಮೀ ಶ್ರೀನಿವಾಸ್, ಮಂಜು ರಾಜ್, ಕೃಷ್ಣಪ್ಪ, ಡಾ.ಮಧುಸೂಧನ್ ಉಪಸ್ಥಿತರಿದ್ದರು.

ಬೆಂಗಳೂರು ರೇಸ್

ಜೆರ್ಸಿ ಲೆಜೆಂಡ್ ಗೆಲ್ಲುವ ನಿರೀಕ್ಷೆ

ಆರ್.ರಾಮಕೃಷ್ಣನ್ ಮೆಮೋರಿಯಲ್ ಮಿಲಿಯನ್ ಶುಕ್ರವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಜೆರ್ಸಿ ಲೆಜೆಂಡ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1:30ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಮೈ ಸಾಲಿಟೇರ್ 1, ಏರ್ ಬ್ಲ್ಯಾಸ್ಟ್ 7, ಫೇರ್ ಕೌನ್ಸಿಲ್ 8
2ನೇ ರೇಸ್: ಅನಡೇಲ್ 7, ಮಾರ್ಜ್‌ಗೊವೆಲ್ 2, ಮಜಾಲ್ ಟೊವ್ 5
3ನೇ ರೇಸ್: ಅವಿಸೇನ 2, ನಾಟಿ ಇನ್ ಬ್ಲೂ 7, ದಿ ಲೇಡಿ ಎಂಪೋರಿಯೊ 9
4ನೇ ರೇಸ್: ಕ್ವಾರ್ 10, ಆಲ್ಡ್‌ಗೇಟ್ 2, ಲಾಸ್ಟ್‌ವಿಶ್ 1
5ನೇ ರೇಸ್: ರಾಪಿಡಸ್ 1, ಬಾರ್ನ್ ಡ್ಯಾನ್ಸರ್ 4, ಏರ್ ಡಿಸ್ಪ್ಲೆ 3
6ನೇ ರೇಸ್: ಜೆರ್ಸಿ ಕಿಂಗ್ 1, ಆಫ್ರಿಕನ್ ಗೋಲ್ಡ್ 2, ಕಾಸ್‌ಕಾಯ್ಸ್ 8
7ನೇ ರೇಸ್: ಸ್ಮೈಲ್ ಆಫ್ ಬ್ಯೂಟಿ 2, ಸಮಚಾರ್ 6. ಇನ್ಫಿನೈಟ್ ಸ್ಪಿರಿಟ್ 11
8ನೇ ರೇಸ್: ಅಸಗಿರಿ 9, ಸ್ಟಾರ್ ಕಾನ್ಸೆಪ್ಟ್ 1, ಎಬೊಟ್ಸೆ 5

ಉತ್ತಮ ಬೆಟ್: ಸ್ಮೈಲ್ ಆಫ್ ಬ್ಯೂಟಿ

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್
4,5,6,7,8	3,4,5	6,7,8

ನೈಜ ಅಥವಾ ನಕಲಿ? ವ್ಯತ್ಯಾಸವನ್ನು ಗುರುತಿಸಿ

Instagram ನ ಎಚ್ಚರಿಕೆ ಲೇಬಲ್‌ಗಳ ಮೂಲಕ

ನಿಮಗೆ ಡೀಪ್‌ಫೇಕ್‌ಗಳಂತಹ ದಾರಿತಪ್ಪಿಸುವ ಮಾಹಿತಿಯನ್ನು ಹೊಂದಿರುವ Instagram ಪೋಸ್ಟ್ ಕಂಡುಬಂದರೆ, ಕುಂದುಕೊರತೆ ಅಧಿಕಾರಿಯನ್ನು ಸಂಪರ್ಕಿಸಿ ಮತ್ತು ವರದಿ ಮಾಡಿ. ಈ ಪೋಸ್ಟ್‌ಗಳು ನಮ್ಮ ಸಮುದಾಯ ಮಾರ್ಗಸೂಚಿಗಳು ಮತ್ತು ಭಾರತದ ಕಾನೂನನ್ನು ಉಲ್ಲಂಘಿಸಬಹುದು.

Instagram.com/INfactcheck ನಲ್ಲಿ ಇನ್ನಷ್ಟು ತಿಳಿಯಿರಿ

ಅನೂಪ್, ಧನ್ಯಾ

ನಮಗೆ ನಾವೇ ಗೆಲುವಿನ ದಾರಿ ಹುಡುಕಿಕೊಳ್ಳಬೇಕು

ಗೌರಿಶಂಕರ್ ಅಭಿಯನದ 'ಕೆರೆಬೇಟೆ' ಚಿತ್ರ ಇಂದು (ಮಾ.15) ತೆರೆ ಕಾಣುತ್ತಿದೆ. ಮಲೆನಾಡಿನ ವಿಶಿಷ್ಟ ಆಚರಣೆಯೊಂದನ್ನು ಕಥೆಯಾಗಿ ಹೊಂದಿರುವ ಚಿತ್ರ ಮತ್ತು ತಮ್ಮ ಸಿನಿ ಪಯಣ ಕುರಿತು ಅವರು ಮಾತನಾಡಿದ್ದಾರೆ.

ಕೆರೆಬೇಟೆ
ಗೌರಿಶಂಕರ್

ವಿನಾಯಕ ಕೆ.ಎಸ್

- **ಚಿತ್ರದಲ್ಲಿ ನಿಮ್ಮ ಪಾತ್ರವೇನು?**

'ಹುಲಿಮನೆ ನಾಗ' ಪಾತ್ರದ ಹೆಸರು. ಹಳ್ಳಿ ಹುಡುಗ. ಕೆಳ ಮಧ್ಯಮ ವರ್ಗಕ್ಕೆ ಸೇರಿದವನು. ಹತ್ತಾರು ಉದ್ಯೋಗ ಮಾಡಿಕೊಂಡಿರುತ್ತಾನೆ. ಸ್ವಭಾವದಿಂದ ತುಂಬ ಜೋರಾಗಿರುತ್ತಾನೆ. ಮನುಷ್ಯನಲ್ಲಿರುವ ಒಳ್ಳೆತನ, ಕೆಟ್ಟತನ ಎಲ್ಲವೂ ಆತನಲ್ಲಿ ಇರುತ್ತದೆ.

- **ಬೇರೆ ಚಿತ್ರಗಳಿಗಿಂತ ಭಿನ್ನವಾಗಿದ್ದು ಈ ಚಿತ್ರದಲ್ಲಿ ಏನಿದೆ?**

ಈ ಚಿತ್ರದ ಕಥೆಯ ಚೌಕಟ್ಟು ಹೊಸತಾಗಿದೆ. ಮಲೆನಾಡು, ಅಲ್ಲಿನ ನೇಟಿವಿಟಿ, ಭಾಷೆ ಎಲ್ಲವೂ ಸಿನಿಮಾಕ್ಕೆ ತುಂಬ ಫ್ರೆಶ್‌ನೆಸ್ ನೀಡಿದೆ. ಅಲ್ಲಿನ ಕಥೆಗಳು ಬಂದಿಲ್ಲ ಎಂದಲ್ಲ, ಆದರೆ ಆ ಭಾಗದ ಆಚರಣೆಗಳನ್ನು ಸಿನಿಮಾಕ್ಕೆ ಅಳವಡಿಕೆ ಮಾಡಿಕೊಂಡಿರುವುದು ಭಿನ್ನವಾಗಿದೆ.

- **'ಕಾಂತಾರ' ಕರಾವಳಿಯದ್ದು, ಅದೇ ರೀತಿ ಇಲ್ಲಿ ಮಲೆನಾಡಿನ ಆಚರಣೆಯೇ?**

ಆ ಸಿನಿಮಾವನ್ನು ನಕಲು ಮಾಡಿಲ್ಲ. ಸಿನಿಮಾದಲ್ಲಿ ಹೊಸತೇನೋ ಯತ್ನಿಸಬೇಕು ಎಂದು ಹೊರಟೆವು. ಆಗ ಸಹಜವಾಗಿ ನಾವು ಹುಟ್ಟಿ ಬೆಳೆದ ಜಾಗದ ಸುತ್ತಲಿನ ಘಟನೆಗಳೇ ನಮ್ಮನ್ನು ಕಾಡುತ್ತವೆ. ನಾವೆಲ್ಲ ಹುಟ್ಟಿ ಬೆಳೆದಿದ್ದು, ಒಡನಾಡಿದ್ದು ಮಲೆನಾಡಿನಲ್ಲಿ. ಸಾಗರ, ಹೊಸನಗರ, ತೀರ್ಥಹಳ್ಳಿ ಬದುಕಿನೊಂದಿಗೆ ಅವಿನಾಭಾವ ನಂಟು ಹೊಂದಿರುವ ಊರುಗಳು. ಇಲ್ಲಿನ ಕಥೆ ಹೇಳದೆ ಬೇರೆ ಊರನ್ನು ಆಯ್ದುಕೊಳ್ಳಲು ಸಾಧ್ಯವಿರಲಿಲ್ಲ.

- **ನಿಮ್ಮ ಸಿನಿಪಯಣದ ಕುರಿತು ಹೇಳಿ...**

'ಆಕಾಶ್' ಸಿನಿಮಾಕ್ಕೆ ಸಹಾಯಕ ನಿರ್ದೇಶಕನಾಗಿ ಚಿತ್ರರಂಗಕ್ಕೆ ಬಂದೆ. ಕೆಲವಷ್ಟು ಸಿನಿಮಾಗಳಲ್ಲಿ ಕೆಲಸ ಮಾಡಿದೆ. ನಾಯಕನಾಗಿ 'ಜೋಕಾಲಿ' ಎಂಬ ಸಿನಿಮಾ ಮಾಡಿದೆ. ಉತ್ತಮ ಹೆಸರು ಬಂತು. ಆದರೆ ಆರ್ಥಿಕವಾಗಿ ಸೋಲು ಕಂಡೆ. 'ರಾಜಹಂಸ' ಚಿತ್ರದಲ್ಲಿ ನಟಿಸಿದೆ. ಅದರಲ್ಲಿಯೂ ಕಮರ್ಷಿಯಲ್ ಸಕ್ಸಸ್ ಸಿಗಲಿಲ್ಲ.

- **ಈವರೆಗಿನ ಸೋಲುಗಳು ನಿಮಗೆಷ್ಟು ಪಾಠ ಕಲಿಸಿದೆ?**

ಒಂದು ಸೋಲಿನಿಂದ ಸುಧಾರಿಸಿಕೊಳ್ಳಲು ಸಾಕಷ್ಟು ದಿನಗಳು ಬೇಕು. ಅದು ನಮ್ಮನ್ನು ಒಂದಷ್ಟು ಕಾಲ ಹಿಂದಕ್ಕೆ ತೆಗೆದುಕೊಂಡು ಹೋಗುತ್ತದೆ. ಮುಂದಿನ ಹೆಜ್ಜೆಗೆ ಅರಿವು ಮೂಡಿಸುತ್ತದೆ. ಹಾಗಂತ ಹಿಂದಿನ ಸಿನಿಮಾ ಕೆಟ್ಟದಾಗಿ ಮಾಡಿರುತ್ತೇವೆ ಎಂದಲ್ಲ. ಯಾವುದೋ ಒಂದು ವರ್ಕ್ ಆಗಿರುವುದಿಲ್ಲ. ಅದನ್ನು ಮುಂದಿನ ಹೆಜ್ಜೆಯಲ್ಲಿ ತಿದ್ದಿಕೊಳ್ಳುತ್ತೇವೆ. ಸೋಲು, ಮುಂದಿನ ಬದುಕು ನೆನಪಿಸಿಕೊಂಡರೆ ಕೆಲವೊಮ್ಮೆ ಭಯವಾಗುತ್ತದೆ. ಆದರೆ ಅವೆಲ್ಲವನ್ನೂ ಮೀರಿ ಮುಂದಕ್ಕೆ ಹೋಗಲೇಬೇಕು. ಬೇರೆ ಯಾರಾದರೂ ನಮ್ಮನ್ನು ಕೈ ಹಿಡಿಯುತ್ತಾರೆ ಎಂಬುದು ನಾವು ಗೆಲ್ಲುವ ತನಕವೂ ಸುಳ್ಳು. ನಮಗೆ ನಾವೇ ಗೆಲುವಿನ ದಾರಿ ಹುಡುಕಿಕೊಳ್ಳಬೇಕು.

- **ನಿಮ್ಮ ಮುಂದಿನ ಯೋಜನೆ...?**

ಹತ್ತಾರು ಕನಸುಗಳಿವೆ. ಎಲ್ಲದಕ್ಕೂ ಈ ಸಿನಿಮಾದ ಗೆಲುವೇ ಮುಖ್ಯ. ಗೆಲುವಾಗದೆ ಏನೂ ಆಲೋಚಿಸಲು ಸಾಧ್ಯವಿಲ್ಲ. ❖

ಸುದೀಪ್, ಅಶ್ವಿನಿ ಪುನೀತ್ ಸಾಥ್

ರಾಜ್‌ಗುರು ನಿರ್ದೇಶನದ ಈ ಚಿತ್ರದ ಟ್ರೇಲರ್ ಅನ್ನು ನಟ ಸುದೀಪ್ ಬಿಡುಗಡೆಗೊಳಿಸಬೇಕಿತ್ತು. ಅನಾರೋಗ್ಯದಿಂದ ಟ್ರೇಲರ್ ಬಿಡುಗಡೆ ಕಾರ್ಯಕ್ರಮಕ್ಕೆ ಬಾರದಿರುವುದಕ್ಕೆ ಸುದೀಪ್ ತಂಡದ ಕ್ಷಮೆ ಕೇಳಿ ವಿಡಿಯೊ ಹಂಚಿಕೊಂಡಿದ್ದರು. ಚಿತ್ರ ಕುರಿತು ಮೆಚ್ಚುಗೆ ಮಾತನಾಡಿ, ತಾವು ವೀಕ್ಷಿಸುವುದಾಗಿ ಹೇಳಿದ್ದರು. ನಿರ್ಮಾಪಕಿ ಅಶ್ವಿನಿ ಪುನೀತ್ ರಾಜಕುಮಾರ್ ಕೂಡ ಚಿತ್ರದ ಶೀರ್ಷಿಕೆ ಗೀತೆ ಬಿಡುಗಡೆ ಮಾಡಿ ತಂಡಕ್ಕೆ ಶುಭ ಹಾರೈಸಿದ್ದಾರೆ.

ಚಿತ್ರಕಥೆಯೇ ಬಂಡವಾಳ

ಅನೂಪ್ ರೇವಣ್ಣ, ಧನ್ಯಾ ರಾಮ್‌ಕುಮಾರ್ ನಟನೆಯ 'ಹೈಡ್ ಆ್ಯಂಡ್ ಸೀಕ್' ಸಿನಿಮಾ ಇಂದು ತೆರೆ ಕಾಣುತ್ತಿದೆ. ಚಿತ್ರದ ಕುರಿತು ನಾಯಕ ಅನೂಪ್ ಒಂದಷ್ಟು ವಿಷಯ ಹಂಚಿಕೊಂಡರು...

'**ಚಿತ್ರದ** ಶೀರ್ಷಿಕೆಯೇ ಹೇಳುವಂತೆ ಇದು ಅಪಹರಣದ ಕಥೆ ಹೊಂದಿದೆ. ಇದರಲ್ಲಿ ಅಪಹರಣಕಾರನ ಪಾತ್ರ ಮಾಡಿದ್ದೇನೆ. ನಾಯಕ ಚಿತ್ರದಲ್ಲಿ ಖಳನಾಯಕನೂ ಹೌದು. ಕ್ರಿಮಿನಲ್‌ಗಳ ತಂಡದಲ್ಲಿ ಕೆಲಸ ಮಾಡುವವನು. ಹೀಗಾಗಿ ನನ್ನ ಪಾತ್ರಕ್ಕೆ ಪಾಸಿಟಿವ್ ಮತ್ತು ನೆಗೆಟಿವ್ ಅಂಶಗಳೆರಡೂ ಇರುತ್ತವೆ' ಎಂದು ಪಾತ್ರದ ಕುರಿತು ವಿವರಿಸಿದರು ಅನೂಪ್.

'ಲಕ್ಷ್ಮಣ' ಚಿತ್ರದಿಂದ ಸ್ಯಾಂಡಲ್‌ವುಡ್‌ಗೆ ಕಾಲಿಟ್ಟ ಅನೂಪ್‌ಗಿದು ನಾಲ್ಕನೆ ಚಿತ್ರ. ಪುನೀತ್ ನಾಗರಾಜು ನಿರ್ದೇಶನದ ಈ ಚಿತ್ರದ ಮೂಲಕ ಯಶಸ್ಸಿನ ನಿರೀಕ್ಷೆಯಲ್ಲಿದ್ದಾರೆ. 'ಸಸ್ಪೆನ್ಸ್ ಥ್ರಿಲ್ಲರ್ ಜಾನರ್‌ನ ಈ ಸಿನಿಮಾದಲ್ಲಿ ಚಿತ್ರಕಥೆ, ಮನರಂಜನೆಯೇ ಬಂಡವಾಳ. ಯಾವುದೇ ಸಂದೇಶ ನೀಡುವ ಚಿತ್ರವಲ್ಲ. ರಿವರ್ಸ್ ಸ್ಕ್ರೀನ್‌ಪ್ಲೆ ಮೂಲಕ ವಿಭಿನ್ನವಾಗಿರುವುದನ್ನು ಪ್ರಯತ್ನಿಸಿದ್ದೇವೆ. ಹೀಗಾಗಿ ಜನಕ್ಕೆ ಇಷ್ಟವಾಗಬಹುದೆಂಬ ನಿರೀಕ್ಷೆಯಿದೆ' ಎಂದು ವಿಶ್ವಾಸದಿಂದಲೇ ಹೇಳಿದರು.

'ಕಿಲ್ಲಿಂಗ್ ವೀರಪ್ಪನ್' ಖ್ಯಾತಿಯ ಸಂಗೀತ ನಿರ್ದೇಶಕ ಸ್ಯಾಂಡಿ ಅವರ ಸಂಗೀತ ಈ ಚಿತ್ರಕ್ಕಿದೆ. ಹಿನ್ನೆಲೆ ಸಂಗೀತ ಚಿತ್ರವನ್ನು ಮತ್ತೊಂದು ಮಟ್ಟಕ್ಕೆ ತೆಗೆದುಕೊಂಡು ಹೋಗುತ್ತದೆ ಎಂಬ ಲೆಕ್ಕಾಚಾರ ತಂಡದ್ದು. 'ಪ್ರೇಕ್ಷಕರು ಸಿನಿಮಾವನ್ನು ಮೆಚ್ಚಿಕೊಳ್ಳಬೇಕು. ಒಳ್ಳೆ ಸಿನಿಮಾ ಮಾಡಿದ್ದೇವೆ ಎಂಬ ಸಾರ್ಥಕ ಭಾವ ಬೇಕು. 'ಲಾರ್ಡ್ಸ್ ಆಫ್ ಲಂಕಾ' ನನ್ನ ಮುಂದಿನ ಚಿತ್ರ. ಮೊದಲ ಹಂತದ ಚಿತ್ರೀಕರಣ ಮುಗಿದಿದೆ. ಇನ್ನೊಂದೆರಡು ಚಿತ್ರಗಳು ಮಾತುಕತೆ ಹಂತದಲ್ಲಿವೆ' ಎಂದು ಮುಂದಿನ ಯೋಜನೆಗಳ ಅವರು ಮಾಹಿತಿ ಹಂಚಿಕೊಂಡರು. ❖

ತಮಿಳು, ತೆಲುಗಿಗೆ ಧೀರ ಸಾಮ್ರಾಟ್

ಅದ್ವಿತಿ ಶೆಟ್ಟಿ

ಇತ್ತೀಚೆಗಷ್ಟೇ ತೆರೆಕಂಡ 'ಧೀರ ಸಾಮ್ರಾಟ್' ಚಿತ್ರ ತಮಿಳು, ತೆಲುಗಿನತ್ತ ಹೊರಟು ನಿಂತಿದೆ. ಪವನ್‌ಕುಮಾರ್ ನಿರ್ದೇಶಕ. ಎರಡು ಭಾಷೆಗಳ ಡಬ್ಬಿಂಗ್ ರೈಟ್ಸ್ ಮಾರಾಟವಾಗಿದ್ದು, ಮಿಕ್ಕವು ಮಾತುಕತೆ ಹಂತದಲ್ಲಿದೆ ಎಂದಿದೆ ಚಿತ್ರತಂಡ.

'ಚಿತ್ರ 25 ದಿನಗಳನ್ನು ಪೂರೈಸಿದೆ. ಉತ್ತರ ಕರ್ನಾಟಕ ಭಾಗದಲ್ಲಿ ಈಗಲೂ ಪ್ರದರ್ಶನ ಕಾಣುತ್ತಿದೆ. ಹೊಸಬರ ಚಿತ್ರಕ್ಕೆ ಸ್ಟಾರ್ ನಟರು ಪ್ರೋತ್ಸಾಹ ನೀಡಿದರೆ ಇನ್ನಷ್ಟು ಪ್ರಚಾರ ಸಿಗುತ್ತಿತ್ತು. ಧ್ರುವ ಸರ್ಜಾ, ಶ್ರೀಮುರಳಿ ನಮ್ಮ ಬೆಂಬಲಕ್ಕೆ ನಿಂತರು' ಎಂದರು ನಿರ್ದೇಶಕರು.

ರಾಕೇಶ್ ಬಿರಾದಾರ್, ಅದ್ವಿತಿ ಶೆಟ್ಟಿ ಅಭಿನಯದ ಚಿತ್ರವನ್ನು ತನ್ವಿ ಪ್ರೊಡಕ್ಷನ್ ಹೌಸ್ ನಿರ್ಮಾಣ ಮಾಡಿತ್ತು. ಶೋಭರಾಜ್, ನಾಗೇಂದ್ರ ಅರಸು, ಬಲ ರಾಜವಾಡಿ, ರಮೇಶ್ ಭಟ್ ಮುಂತಾದವರು ನಟಿಸಿದ್ದು, ರಾಘವ್ ಸುಭಾಷ್ ಸಂಗೀತ ಸಂಯೋಜಿಸಿದ್ದಾರೆ. ❖

ಕೊನೆಯ ಹಂತದಲ್ಲಿ ಫೈರ್ ಫ್ಲೈ

ನಿವೇದಿತಾ, ಶಿವರಾಜಕುಮಾರ್

ಶಿವರಾಜ್‌ಕುಮಾರ್ ಅವರ ಪುತ್ರಿ ನಿವೇದಿತಾ ನಿರ್ಮಾಣದ ಚೊಚ್ಚಲ ಸಿನಿಮಾ 'ಫೈರ್ ಫ್ಲೈ' ಚಿತ್ರೀಕರಣ ಕೊನೆಯ ಹಂತ ತಲುಪಿದೆ. 'ಶ್ರೀ ಮುತ್ತು ಸಿನಿ ಸರ್ವೀಸಸ್' ಬ್ಯಾನರ್ ಮೂಲಕ ನಿರ್ಮಿಸಿರುವ ಈ ಚಿತ್ರವನ್ನು ವಂಶಿ ನಿರ್ದೇಶಿಸಿ, ನಾಯಕನಾಗಿಯೂ ಕಾಣಿಸಿಕೊಂಡಿದ್ದಾರೆ.

'ದೀಪಾವಳಿಗೆ ಚಿತ್ರ ತೆರೆಗೆ ಬರಲಿದೆ. ವೆಬ್ ಸೀರಿಸ್ ಮಾಡಿದ ಮೇಲೆ ಸಿನಿಮಾ ಮಾಡಲು ತುಂಬಾ ಆಸಕ್ತಿ ಇತ್ತು. ವಂಶಿ ಅವರು ಕಥೆ ಹೇಳಿದಾಗ ನನಗೆ ತುಂಬಾ ಇಷ್ಟವಾಯಿತು. ಕಥೆ ತುಂಬಾ ಸರಳವಾಗಿದ್ದರೂ, ಅವರು ಕಥೆ ಹೇಳಿದ ರೀತಿ ತುಂಬಾ ಇಷ್ಟವಾಯ್ತು. ಹೊಸ ಪ್ರಯೋಗ ಮಾಡಿದ್ದೇವೆ. ಈ ಚಿತ್ರದೊಂದಿಗೆ ಒಂದೊಳ್ಳೆ ತಾಂತ್ರಿಕ ತಂಡ ಕಟ್ಟಿದ್ದೇವೆ' ಎಂದರು ನಿವೇದಿತಾ ಶಿವರಾಜ್‌ಕುಮಾರ್.

'ಎಲ್ಲರ ಜೀವನದಲ್ಲಿಯೂ ಒಂದು ಪಾಯಿಂಟ್ ಇರುತ್ತದೆ. ನಾವು ಡೆಡ್ ಎಂಡ್ ಅಂದುಕೊಂಡಿರುತ್ತೇವೆ. ಒಂದು ಭರವಸೆ ಹಾಗೂ ಸ್ಫೂರ್ತಿಗೆ ಕಾಯುತ್ತಾ ಇರುತ್ತೇವೆ. ಆ ಸಮಯದಲ್ಲಿ ಭರವಸೆ ಎಂಬ ಬೆಳಕು ಎಲ್ಲಿಂದಲೋ ಬರುವುದಲ್ಲ, ನಮ್ಮಿಂದಲೇ ಬರಬೇಕು ಎಂಬುದೇ ಫೈರ್ ಫ್ಲೈ' ಎಂದು ನಿರ್ದೇಶಕ ವಂಶಿ ತಿಳಿಸಿದರು.

ಪುನೀತ್ ರಾಜ್‌ಕುಮಾರ್ ನಿರ್ಮಾಣದ 'ಮಾಯಾಬಜಾರ್' ಚಿತ್ರದಲ್ಲಿ ಸಹಾಯಕ ನಿರ್ದೇಶಕನಾಗಿ ವಂಶಿ ಕೆಲಸ ಮಾಡಿದ್ದರು. ಅಂದಹಾಗೆ, ಮಗಳ ಚಿತ್ರದಲ್ಲಿ ನಟ ಶಿವರಾಜ್‌ಕುಮಾರ್ ಕೂಡ ಒಂದು ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಆದರೆ ಚಿತ್ರತಂಡ ಈ ಸಂಗತಿಯನ್ನು ಬಹಿರಂಗಪಡಿಸಿಲ್ಲ. 'ಅತಿಥಿ ಪಾತ್ರವೊಂದರಲ್ಲಿ ಶಿವಣ್ಣ ಕಾಣಿಸಿಕೊಂಡಿದ್ದು ಒಂದು ದಿನದ ಚಿತ್ರೀಕರಣದಲ್ಲಿಯೂ ಭಾಗಿಯಾಗಿದ್ದಾರೆ' ಎಂದು ಶಿವಣ್ಣ ಆಪ್ತರು ತಿಳಿಸಿದ್ದಾರೆ.

ಅಭಿಲಾಷ್ ಕಳತ್ತಿ ಛಾಯಾಚಿತ್ರಗ್ರಹಣ, ಚರಣ್ ರಾಜ್ ಸಂಗೀತ ನಿರ್ದೇಶನ, ರಘು ನಿಡುವಳ್ಳಿ ಸಂಭಾಷಣೆ ಚಿತ್ರಕ್ಕಿದೆ. ❖

'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ' ಮೊದಲ ಆವೃತ್ತಿಯಲ್ಲಿ ಪುನೀತ್ ರಾಜ್‌ಕುಮಾರ್ ಅವರಿಗೆ ನೃತ್ಯದ ಮೂಲಕ ನಮನ ಸಲ್ಲಿಸಿದ ಮಕ್ಕಳು.

ಸಿನಿ ಸಮ್ಮಾನ ಎರಡನೇ ಆವೃತ್ತಿ

ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ

ಕಳೆದ ವರ್ಷ ಪ್ರಾರಂಭಗೊಂಡು ವ್ಯಾಪಕ ಪ್ರಶಂಸೆ ಪಡೆದ 'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ' ಎರಡನೇ ಆವೃತ್ತಿಯೊಂದಿಗೆ ಮತ್ತೆ ಬಂದಿದೆ. 2023ನೇ ಸಾಲಿನಲ್ಲಿ ತೆರೆಕಂಡ ಚಿತ್ರಗಳ ನಾಮನಿರ್ದೇಶನ ಪ್ರಕ್ರಿಯೆ ಆರಂಭವಾಗಿದ್ದು, ನಿಮ್ಮ ಸಿನಿಮಾಗಳನ್ನು ನೋಂದಾಯಿಸಲು ಈ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ. 'ಸಿನಿ ಸಮ್ಮಾನ' ಕುರಿತಾದ ಇನ್ನಷ್ಟು ಮಾಹಿತಿಗಾಗಿ https://www.prajavani.net/cinesamman/season2 ನೋಡಿ.

7 ಚಿತ್ರಗಳು ತೆರೆಗೆ

ಪುನೀತ್ ರಾಜ್‌ಕುಮಾರ್–ಭಾವನಾ ಜೋಡಿಯಾಗಿ ನಟಿಸಿರುವ 'ಜಾಕಿ' ಚಿತ್ರ ಮರು ಬಿಡುಗಡೆಯಾಗುತ್ತಿದೆ. ಅದರ ಹೊರತಾಗಿ ಆರು ಸಿನಿಮಾಗಳು ಈ ವಾರ ತೆರೆ ಕಾಣಲಿವೆ.

ಫೋಟೋ

ಕೋವಿಡ್‌ನ ಆರಂಭ ಘಟ್ಟದಲ್ಲಿ ಯಾವುದೇ ಮುನ್ಸೂಚನೆ ಇಲ್ಲದೇ ಕೇಂದ್ರ ಸರ್ಕಾರ ಘೋಷಿಸಿದ ಲಾಕ್‌ಡೌನ್‌ನಿಂದ ವಲಸೆ ಕಾರ್ಮಿಕರು ಅನುಭವಿಸಿದ ಸಂಕಷ್ಟಗಳನ್ನು ಬಿಚ್ಚಿಡುವ 'ಫೋಟೋ' ಸಿನಿಮಾ ಇಂದು(ಮಾ. 15) ತೆರೆಗೆ ಬರುತ್ತಿದೆ. ಉತ್ಸವ್ ಗೋನವಾರ ನಿರ್ದೇಶನದ ಚಿತ್ರವನ್ನು 'ನಿರ್ದಿಗಂತ'ದ ಮೂಲಕ ನಟ ಪ್ರಕಾಶ್ ರಾಜ್ ಅರ್ಪಿಸುತ್ತಿದ್ದಾರೆ. 'ಮಸಾರಿ ಟಾಕೀಸ್' ಬ್ಯಾನರ್ ಅಡಿಯಲ್ಲಿ ಸಿನಿಮಾ ನಿರ್ಮಾಣಗೊಂಡಿದೆ. ಕಳೆದ ವರ್ಷ ಬೆಂಗಳೂರು ಅಂತರ ರಾಷ್ಟ್ರೀಯ ಚಿತ್ರೋತ್ಸವದಲ್ಲಿ ಪ್ರಶಸ್ತಿ ಪಡೆದಿದ್ದ ಈ ಚಿತ್ರ ಸಾಕಷ್ಟು ಚಿತ್ರೋತ್ಸವಗಳಲ್ಲಿ ಪ್ರಶಂಸೆಗೆ ಪಾತ್ರವಾಗಿತ್ತು. ಮಹಾದೇವ ಹಡಪದ್, ಜಹಾಂಗೀರ್, ಸಂಧ್ಯಾ ಅರಕೆರೆ ಮತ್ತು ವೀರೇಶ್ ಗೋನವಾರ ಈ ಚಿತ್ರದಲ್ಲಿ ನಟಿಸಿದ್ದಾರೆ. ದಿನೇಶ್ ದಿವಾಕರನ್ ಛಾಯಾಚಿತ್ರಗ್ರಹಣ ಶಿವರಾಜ್ ಮೆಹೂ ಸಂಕಲನವಿದೆ.

ಚೌ ಚೌ ಬಾತ್

ಕೇಂಜ ಚೇತನ್ ಕುಮಾರ್ ನಿರ್ದೇಶನದಲ್ಲಿ ಮೂಡಿ ಬಂದಿರುವ 'ಚೌ ಚೌ ಬಾತ್' ಚಿತ್ರ ಈ ವಾರ ರಾಜ್ಯದಾದ್ಯಂತ ಬಿಡುಗಡೆಗೊಳ್ಳುತ್ತಿದೆ. ಹೈಪರ್ ಲಿಂಕ್ ರೊಮ್ಯಾಂಟಿಕ್ ಕಾಮಿಡಿ ಜಾನರ್‌ನ ಈ ಚಿತ್ರವನ್ನು ಹಾರಿಜಾನ್ ಮೂವೀಸ್ ನಿರ್ಮಾಣ ಮಾಡಿದೆ. ಹೇಮಂತ್ ಜೋಯಿಸ್ ಸಂಗೀತ ನಿರ್ದೇಶನ, ರುದ್ರಮೂರ್ತಿ ಬೆಳಗೆರೆ ಛಾಯಾಚಿತ್ರಗ್ರಹಣವಿದೆ. ಸಾಗರ್ ಗೌಡ, ಸಂಕಲ್ಪ್ ಶರ್ಮಾ, ಸುಶ್ಮಿತಾ ಭಟ್, ಅರುಣ ಬಾಲರಾಜ್ ಮುಂತಾದವರು ನಟಿಸಿದ್ದಾರೆ.

ಮೆಹಬೂಬಾ

ಬಿಗ್‌ಬಾಸ್ ಖ್ಯಾತಿಯ ಶಶಿ ನಾಯಕನಾಗಿ ನಟಿಸಿರುವ 'ಮೆಹಬೂಬಾ' ಚಿತ್ರ ಕೂಡ ಈ ವಾರ ತೆರೆಗೆ ಬರುತ್ತಿದೆ. ಅನೂಪ್ ಆಂಟೋನಿ ಚಿತ್ರದ ನಿರ್ದೇಶಕರು. ಸರ್ವಧರ್ಮ ಸಾಮರಸ್ಯ ಸಾರುವ ಸಿನಿಮಾದಲ್ಲಿ ಶಶಿಗೆ ನಾಯಕಿಯಾಗಿ ಪಾವನ ಕಾಣಿಸಿಕೊಂಡಿದ್ದಾರೆ. ದಕ್ಷ್ ಎಂಟರ್‌ಟೈನ್‌ಮೆಂಟ್ ಸಹಯೋಗದಲ್ಲಿ ಬಾಲಾಜಿ ಮೋಷನ್ ಪಿಕ್ಚರ್ಸ್ ನಿರ್ಮಾಣ ಮಾಡಿದೆ. ಮ್ಯಾಥ್ಯೂಸ್ ಮನು ಸಂಗೀತ, ಕಿರಣ್ ಹಂಪಾಪುರ ಛಾಯಾಚಿತ್ರಗ್ರಹಣ, ಕೆ.ಎಂ. ಪ್ರಕಾಶ್ ಸಂಕಲನ ಚಿತ್ರಕ್ಕಿದೆ.

ಜಾಕಿ

ಪುನೀತ್ ರಾಜ್‌ಕುಮಾರ್ ಅಭಿನಯದ ಸೂಪರ್‌ಹಿಟ್ ಚಿತ್ರ 'ಜಾಕಿ' ಮರುಬಿಡುಗಡೆಯಾಗುತ್ತಿದೆ. ದುನಿಯಾ ಸೂರಿ ನಿರ್ದೇಶನದ ಚಿತ್ರದಲ್ಲಿ ಭಾವನಾ ನಾಯಕಿಯಾಗಿ ಕಾಣಿಸಿಕೊಂಡಿದ್ದರು.

ಸೋಮು ಸೌಂಡ್ ಇಂಜಿನಿಯರ್

'ಸಲಗ' ಸಿನಿಮಾದಲ್ಲಿ 'ಕೆಂಡ' ಪಾತ್ರ ಮಾಡಿದ್ದ ಶ್ರೇಷ್ಠ ನಾಯಕನಾಗಿ ನಟಿಸಿರುವ 'ಸೋಮು ಸೌಂಡ್ ಇಂಜಿನಿಯರ್' ಕೂಡ ಈ ವಾರ ತೆರೆಗೆ ಬರುತ್ತಿದೆ. ನಿರ್ದೇಶಕ ಸೂರಿ ಗರಡಿಯಲ್ಲಿ ಪಳಗಿರುವ ಅಭಿ ಈ ಚಿತ್ರದ ನಿರ್ದೇಶಕರು. ಕ್ರಿಸ್ಟೋಫರ್ ಕಿಣಿ ಚಿತ್ರದ ನಿರ್ಮಾಪಕರು. ನಿವಿಷ್ಕಾ ಪಾಟೀಲ್ ನಾಯಕಿಯಾಗಿ ಕಾಣಿಸಿಕೊಂಡಿದ್ದಾರೆ. ಜಹಾಂಗೀರ್, ಅಪೂರ್ವ, ಯಶ್ ಶೆಟ್ಟಿ ಪ್ರಮುಖ ಪಾತ್ರದಲ್ಲಿ ನಟಿಸಿದ್ದಾರೆ. ಚರಣ್ ರಾಜ್ ಸಂಗೀತ, ಶಿವು ಸೇನಾ ಛಾಯಾಚಿತ್ರಗ್ರಹಣ, ಮಾಸ್ತಿ ಅವರ ಸಂಭಾಷಣೆ ಈ ಚಿತ್ರಕ್ಕಿದೆ.

ನಿವಿಷ್ಕಾ

ಪ್ರಜಾವಾಣಿ ನೋಡಿಯೊ
ಸಿನಿಮಾತು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಕೈಗಳಿಲ್ಲದವ ಈಜಿ ಗೆದ್ದ ಕಥೆ

ಎರಡೂ ಕೈಗಳಿಲ್ಲದಿದ್ದರೂ ಬದುಕಿನಲ್ಲಿ ಸಾಕಷ್ಟು ಸಾಧನೆ ಮಾಡಿ, ರಾಷ್ಟ್ರ ಮಟ್ಟದಲ್ಲಿ ಹೆಸರು ಗಳಿಸಿರುವ ವಿಶ್ವಾಸ್ ಕೆ.ಎಸ್ ಅವರ ಬದುಕಿನ ನೈಜ ಕಥೆಯನ್ನು ಹೊಂದಿರುವ 'ಅರಬ್ಬೀ' ಚಿತ್ರದ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಡ್ಯಾನ್ಸ್, ರಿಯಾಲಿಟಿ ಶೋ, ಈಜಿನ ಮೂಲಕ ಗುರುತಿಸಿಕೊಂಡಿರುವ ವಿಶ್ವಾಸ ಅವರೇ ಈ ಚಿತ್ರದ ನಾಯಕನಾಗಿ ಕಾಣಿಸಿಕೊಂಡಿದ್ದು, ರಾಜ್‌ಕುಮಾರ್ ಚಿತ್ರವನ್ನು ನಿರ್ದೇಶಿಸಿದ್ದಾರೆ. ಶ್ರೀ ವಿಜಯ ರಾಘವೇಂದ್ರ ಪ್ರೊಡಕ್ಷನ್ಸ್ ಮೂಲಕ ಚೇತನ್ ಸಿ.ಎಸ್ ಬಂಡವಾಳ ಹೂಡಿದ್ದಾರೆ.

'ಚಿಕ್ಕ ವಯಸ್ಸಿನಲ್ಲಿ ತಂದೆ-ತಾಯಿ ಜೊತೆಗೆ ತನ್ನ ಎರಡೂ ಕೈಗಳನ್ನು ಕಳೆದುಕೊಂಡ ವಿಶ್ವಾಸ್, ತನ್ನ ಅಂಗವಿಕಲತೆಯ ಕಾರಣದಿಂದಲೇ ಸಮಾಜದಲ್ಲಿ ಸಾಕಷ್ಟು ಅವಮಾನ ಅನುಭವಿಸುತ್ತಾನೆ. ನಂತರ ತನ್ನನ್ನು ಅವಮಾನಿಸಿದವರೆದುರೇ ಸಾಧನೆ ಮಾಡಿ ತೋರಿಸಬೇಕೆಂದು ನಿರ್ಧರಿಸಿ, ಹಠ, ಆತ್ಮವಿಶ್ವಾಸದಿಂದಲೇ ಗೆಲುವು ಸಾಧಿಸುತ್ತಾನೆ. ಇದೇ ಈ ಚಿತ್ರದ ಕಥೆ' ಎಂದರು ನಿರ್ದೇಶಕರು.

ಸ್ವಿಮ್ಮಿಂಗ್ ಕೋಚ್ ಆಗಿ ನಾಯಕನಿಗೆ ಸ್ಫೂರ್ತಿ ತುಂಬುವ ಪಾತ್ರದಲ್ಲಿ ಅಣ್ಣಾಮಲೈ ಕಾಣಿಸಿಕೊಂಡಿದ್ದಾರೆ. 'ಸರಿಗಮಪ' ಖ್ಯಾತಿಯ ಕಂಬದ ರಂಗಯ್ಯ ಚಿತ್ರಕ್ಕೆ ಸಂಗೀತ ಸಂಯೋಜನೆ ಮಾಡಿದ್ದು, ಆನಂದ್ ದಿಂಡವಾರ ಛಾಯಾಚಿತ್ರಗ್ರಹಣವಿದೆ. ಚಿತ್ರ ಬಿಡುಗಡೆಗೆ ಸಿದ್ಧವಿದ್ದು, ಶೀಘ್ರದಲ್ಲಿ ತೆರೆಗೆ ತರಲು ತಂಡ ಆಲೋಚಿಸಿದೆ.

ರಾಮನಗರ ಜಿಲ್ಲಾ ಪಂಚಾಯತ್

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ,
ಪಂಚಾಯತ್ ಭವನ, ಬಿ.ಎಂ. ರಸ್ತೆ, ರಾಮನಗರ - 562 159.

ಸಂಖ್ಯೆ : ರಾ.ಜಿ.ಪಂ./ರಾ.ಗ್ರಾ.ಉ.ಖಾ.ಯೋ./ಸಿ.ಆರ್./68/2023-24
ದಿನಾಂಕ : 07-03-2024

ಇ-ಟೆಂಡರ್ ಪ್ರಕಟಣೆ

ಮಹಾತ್ಮಗಾಂಧಿ ನರೇಗಾ ಯೋಜನೆಯಡಿಯಲ್ಲಿ ರಾಮನಗರ ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯಿತಿ ಮತ್ತು ಅನುಷ್ಠಾನ ಇಲಾಖೆಗಳಲ್ಲಿ ಕರ್ತವ್ಯ ನಿರ್ವಹಿಸಲು ಹೊರಗುತ್ತಿಗೆ ಸಿಬ್ಬಂದಿಗಳನ್ನು ಪಡೆಯಲು ಅಧಿಕೃತ ಸಂಸ್ಥೆಗಳಿಂದ ಇ-ಸಂಗ್ರಹಣಾ ವೇದಿಕೆಯ ಮೂಲಕ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಆಸಕ್ತಿಯುಳ್ಳ ಅರ್ಹ ಬಿಡ್‌ದಾರರು ಇ-ಸಂಗ್ರಹಣಾ ವೇದಿಕೆ ವೆಬ್‌ಸೈಟ್ (Online) https://kppp.karnataka.gov.in ನಲ್ಲಿ ಟೆಂಡರ್ ವಿವರಗಳನ್ನು ಪಡೆಯಬಹುದಾಗಿದೆ. ಇ-ಸಂಗ್ರಹಣಾ ವೇದಿಕೆಯ ಮೂಲಕ ಪ್ರಸ್ತಾವನೆ ಸಲ್ಲಿಸಲು ಕೊನೆಯ ದಿನಾಂಕ : 08-04-2024 ರ ಅಪರಾಹ್ನ 4.00 ಗಂಟೆಗೆ, ದೂರವಾಣಿ : 97410 45379, 94820 30940.

ಸಹಿ/- ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ,
ಜಿಲ್ಲಾ ಪಂಚಾಯತ್, ರಾಮನಗರ.

ಡಿಐಪಿಆರ್/ರಾಮನಗರ/602/ಮಣಿಪಾಲ್/2022-23

ಸಾರಿಗೆ ಇಲಾಖೆ, ಸಾರಿಗೆ ಆಯುಕ್ತರ ಕಛೇರಿ

TRANSPORT DEPARTMENT

1ನೇ ಮಹಡಿ, ಟಿಟಿಎಂಸಿ ಕಟ್ಟಡ,
ಬಿಎಂಟಿಸಿ ಸಂಕೀರ್ಣ, ಶಾಂತಿನಗರ, ಬೆಂಗಳೂರು

ಸಂ.: ಸಾಆ/ಪೀಕ-3/ಪಿಆರ್-250/2022-23 ದಿನಾಂಕ : 13.03.2024

ಇ-ಟೆಂಡರ್ ಪ್ರಕಟಣೆ

ಜಮಖಂಡಿಯಲ್ಲಿರುವ ಗಣಕೀಕೃತ ಚಾಲನಾ ಪರೀಕ್ಷಾ ಪಥದ ನಿರ್ವಹಣೆ ಸಂಬಂಧ ಅರ್ಹ ಸಂಸ್ಥೆಗಳಿಂದ (CALL-2)ಟೆಂಡರನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಸಂಸ್ಥೆಗಳು ವಿವರಗಳನ್ನು ಅಂತರ್ಜಾಲದ ಮೂಲಕ ವೆಬ್‌ಸೈಟ್ ವಿಳಾಸ www.kppp.karnataka.gov.inನ್ನು ಸಂಪರ್ಕಿಸಿ ಪಡೆಯಬಹುದಾಗಿದೆ. ಸಂಸ್ಥೆಗಳು ಇ-ಪ್ರೊಕ್ಯೂರ್‌ಮೆಂಟ್ ಸಹಾಯವಾಣಿಯನ್ನು ದೂರವಾಣಿ ಸಂಖ್ಯೆ : +91-8046010000/+91-8068948777 ಮೂಲಕ ಸಂಪರ್ಕಿಸಿ ಸಹಾಯವನ್ನು ಪಡೆಯಬಹುದು. ಇ-ಪೋರ್ಟಲ್ ಮೂಲಕ ಟೆಂಡರನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ 05.04.2024ರ ಸಂಜೆ 4.30 ಗಂಟೆಯವರೆಗೆ.

ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ : 080-22235176ಕ್ಕೆ ಸಂಪರ್ಕಿಸಬಹುದು.

ಸಹಿ/- ಆಯುಕ್ತರು, ಸಾರಿಗೆ ಇಲಾಖೆ, ಬೆಂಗಳೂರು.

ವಾಸಾಸಂಇ/ಉನಿ-ಸಿ.ಪಿ/4264/ಕೆಎಸ್‌ಎಂಸಿಎ/2023-24

INNOVATE KARNATAKA · K-tech

ನ್ಯೂ ಏಜ್ ನಾವೀನ್ಯತೆ ನೆಟ್‌ವರ್ಕ್ 2.0 (ನೈನ್-2.0)

(NAIN-2.0 ಅನ್ನು ಸ್ಥಾಪಿಸಲು ಶಿಕ್ಷಣ ಸಂಸ್ಥೆಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗುತ್ತಿದೆ)

ಕರ್ನಾಟಕ ನಾವೀನ್ಯತೆ ಮತ್ತು ತಂತ್ರಜ್ಞಾನ ಸೊಸೈಟಿ, ಎಲೆಕ್ಟ್ರಾನಿಕ್, ಐಟಿ, ಬಿಟಿ ಇಲಾಖೆ, ಕರ್ನಾಟಕ ಸರ್ಕಾರ, ಇವರು ಬೆಂಗಳೂರು ಹೊರತುಪಡಿಸಿ ಕರ್ನಾಟಕ ರಾಜ್ಯಾದ್ಯಂತ ಶ್ರೇಣಿ-2 ಮತ್ತು ಶ್ರೇಣಿ-3 ನಗರಗಳಲ್ಲಿ ನೆಲೆಗೊಂಡಿರುವ ಇಂಜಿನಿಯರಿಂಗ್ ಮತ್ತು ಇಂಜಿನಿಯರಿಂಗ್ ಅಲ್ಲದ ಕಾಲೇಜು (ಪದವಿ ಕಾಲೇಜುಗಳು, ವೈದ್ಯಕೀಯ, ಡೆಂಟಲ್ ಮತ್ತು ಫಾರ್ಮಸಿ ಕಾಲೇಜುಗಳು ಸೇರಿದಂತೆ) ಎರಡರಿಂದಲೂ ನವೋದ್ಯಮ ನೀತಿ 2022-27 ರ ಅಡಿಯಲ್ಲಿ NAIN 2.0 ಅನ್ನು ಸ್ಥಾಪಿಸಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಆಸಕ್ತ ಶಿಕ್ಷಣ ಸಂಸ್ಥೆಗಳು/ಕಾಲೇಜುಗಳು ತಮ್ಮ ಸಹಿ ಮಾಡಿರುವ ಭರ್ತಿ ಮಾಡಿದ ಅರ್ಜಿಗಳನ್ನು ಪಿಡಿಎಫ್ (PDF) ರೂಪದಲ್ಲಿ ಇಮೇಲ್ ಐಡಿ aenain.kits@gmail.com ಗೆ ಸಲ್ಲಿಸಲು ವಿನಂತಿಸಲಾಗಿದೆ ಮತ್ತು ಎರಡು ಹಾರ್ಡ್ ಕಾಪಿ/ಭೌತಿಕ ಪ್ರತಿಗಳನ್ನು ಕಡ್ಡಾಯವಾಗಿ ಕೆಳಗೆ ನೀಡಲಾದ KITS ಕಚೇರಿ ವಿಳಾಸಕ್ಕೆ ಸಲ್ಲಿಸುವುದು.

ಅರ್ಹತಾ ಮಾನದಂಡಗಳು ಮತ್ತು ಅರ್ಜಿ ನಮೂನೆಗಳು ವೆಬ್‌ಸೈಟ್‌ನಲ್ಲಿ ಲಭ್ಯವಿದ್ದು, ಹೆಚ್ಚಿನ ಮಾಹಿತಿಗೆ ಕೆಳಗಿನ ಲಿಂಕ್‌ಗೆ ಭೇಟಿ ನೀಡಿ.

https://itbtst.karnataka.gov.in/page/Call+for+Proposals/NAIN+2dot0+DIH/en

ಅರ್ಜಿ ನಮೂನೆಯನ್ನು ಸಲ್ಲಿಸಲು ಕೊನೆಯ ದಿನಾಂಕ: 15.04.2024 ರಿಂದ ಸಂಜೆ 5 ಗಂಟೆಯವರೆಗೆ.

ಹೆಚ್ಚಿನ ಸ್ಪಷ್ಟೀಕರಣಗಳಿಗಾಗಿ, ದಯವಿಟ್ಟು ಸಂಪರ್ಕಿಸಿ:
ಕರ್ನಾಟಕ ಇನ್ನೋವೇಷನ್ ಅಂಡ್ ಟೆಕ್ನಾಲಜಿ ಸೊಸೈಟಿ (ಕೆಐಟಿಎಸ್)
ಬಿಎಂಟಿಸಿ ಕೇಂದ್ರ ಕಚೇರಿಗಳ ಕಟ್ಟಡ, ಟಿಟಿಎಂಸಿ "ಎ" ಬ್ಲಾಕ್, 2ನೇ ಮಹಡಿ,
ಶಾಂತಿನಗರ, ಕೆ.ಹೆಚ್.ರಸ್ತೆ, ಬೆಂಗಳೂರು 560027 ದೂರವಾಣಿ: 080-22231006
ಇಮೇಲ್: aenain.kits@gmail.com

ವಾಸಾಸಂಇ/ವಾಪ್ರ/4303/ಆಕಾರ್/2023-24

ಲೋಕೋಪಯೋಗಿ ಇಲಾಖೆ ವಿಭಾಗ ಮಧುಗಿರಿ

ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಮಧುಗಿರಿ

ಸಂಖ್ಯೆ:ಕಾಇಂ/ಲೋಇವಿ/ಮಧು:ಸ.ಇಂ-1/ಟೆಂಡರ್/2023-24 ದಿ: 13.03.2024

ಟೆಂಡರ್ ಪ್ರಕಟಣೆ ಸಂಖ್ಯೆ:27/2023-24
(ಕೆಪಿಪಿ ಪೋರ್ಟಲ್‌ಮೂಲಕ) ದ್ವಿ ಲಕೋಟೆ ಟೆಂಡರ್

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಐಟಂವಾರು ಟೆಂಡರ್‌ಗಳನ್ನು KW-3 (ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್) ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು KTPP Act 1999 and KTPP Rule 2000 ರಲ್ಲಿ ಅರ್ಹ (ಸಿವಿಲ್) ಗುತ್ತಿಗೆದಾರರುಗಳಿಂದ ಲೋಕೋಪಯೋಗಿ ಇಲಾಖೆ, ಶಿರಾ ಹಾಗೂ ಪಾವಗಡ ಉಪ ವಿಭಾಗ ವ್ಯಾಪ್ತಿಯಲ್ಲಿನ ಕಾಮಗಾರಿಗಳಿಗೆ ಟೆಂಡರ್‌ನ್ನು KPPP Portal ಮೂಲಕ ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗೆ https://kppp.karnataka.gov.in ಹಾಗೂ ಕೆಳ ಸಹಿದಾರರ ಕಛೇರಿ ಕೆಲಸ ವೇಳೆಯಲ್ಲಿ ಪಡೆಯಬಹುದಾಗಿದೆ. ದೂರವಾಣಿ ಸಂ: 08137- 283336.
ಟೆಂಡರ್‌ಗಿಟ್ಟ ಸರಿಸುಮಾರು ಮೊಬಲಗು ರೂ 100.00 ಲಕ್ಷ ಗಳವರೆಗೆ. ಕೆಪಿಪಿಪಿ ಪೋರ್ಟಲ್ ಮೂಲಕ ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ : 30-03-2024 ಸಂಜೆ 4.00 ಗಂಟೆಯವರೆಗೆ. ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ : 01-04-2024 ರ ಸಂಜೆ 4.15 ಗಂಟೆಯ ನಂತರ. ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ : 04-04-2024 ರ ಸಂಜೆ 4.15 ಗಂಟೆಯ ನಂತರ. ವಿಚಾರಣೆ : ಸ್ಪಷ್ಟೀಕರಣಕ್ಕೆ ಕೊನೆಯ ದಿನಾಂಕ : 27-03-2024 ಸಂಜೆ 4.00 ಗಂಟೆಗೆ ವರೆಗೆ.

ಸಹಿ/- ಕಾರ್ಯಪಾಲಕ ಇಂಜಿನಿಯರ್,
ಲೋಕೋಪಯೋಗಿ ಇಲಾಖೆ ವಿಭಾಗ, ಮಧುಗಿರಿ.

DIPR/TUM/646/KSMCA/2023-24

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ

ನಂ. 16 ಸಿ-1, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ,
ಬೆಂಗಳೂರು-560052. ಫೋನ್: 080-22268677/78/79 ಫ್ಯಾಕ್ಸ್: 080-22268667
ಇ-ಮೇಲ್: kerc-ka@nic.in ವೆಬ್‌ಸೈಟ್: https://kerc.karnataka.gov.in

ಸಂಖ್ಯೆ:ಕವಿನಿಆ/ಜೆ.ಡಿ.(ಟಿ)/ಆರ್.ಇ.ಟ್ಯಾರೀಫ್/2024/1477 ದಿನಾಂಕ: 14-03-2024

ಸೂಚನೆ

ವಿಷಯ: 01.04.2024 ರಿಂದ 31.03.2027 ರ ಅವಧಿಯಲ್ಲಿ ಸ್ಥಾಪಿತವಾಗುವ ನವೀಕರಿಸಬಹುದಾದ ಇಂಧನ ಮೂಲಗಳಿಂದ ಉತ್ಪಾದಿಸುವ ವಿದ್ಯುತ್‌ಗೆ ದರ ನಿಗದಿಪಡಿಸಲು ಪ್ರಸ್ತಾವಿತ ಮಾನಕಗಳ (ನಾರ್ಮ್ಸ್‌ಗಳ) ಬಗ್ಗೆ ಸಮಾಲೋಚನ ಪತ್ರ.

ವಿದ್ಯುಚ್ಛಕ್ತಿ ಕಾಯಿದೆ 2003 ರ ಸೆಕ್ಷನ್ 62 (1) (ಎ) ಜೊತೆಗೆ ಓದಿಕೊಳ್ಳಲಾದ ಸೆಕ್ಷನ್ 64 ಮತ್ತು 86 (1) (ಇ) ಹಾಗೂ ಇದರ ಪರವಾಗಿ ದತ್ತವಾದ ಇತರ ಎಲ್ಲಾ ಅಧಿಕಾರಗಳ ಪ್ರಕಾರ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ದಿನಾಂಕ: 01.04.2024 ರಿಂದ 31.03.2027 ರ ಅವಧಿಯಲ್ಲಿ ಸ್ಥಾಪಿತವಾಗುವ ನವೀಕರಿಸಬಹುದಾದ ಇಂಧನ ಮೂಲಗಳಿಂದ ವಿದ್ಯುತ್ ಉತ್ಪಾದನೆ ಮಾಡುವ ಮಿನಿ ಹೈಡಲ್, ಕಬ್ಬಿನ ಸಿಪ್ಪೆ ಆಧಾರಿತ ಕೋ-ಜನರೇಷನ್ ವಿದ್ಯುತ್ ಉತ್ಪಾದನಾ ಘಟಕಗಳು (ceiling tariff for bidding) ಮತ್ತು ವಾಟರ್ ಕೂಲ್ಡ್‌ಕಂಡೆನ್ಸರ್ ಹಾಗೂ ಏರ್ ಕೂಲ್ಡ್‌ಕಂಡೆನ್ಸರ್ ಹೊಂದಿರುವ ಬಯೋಮಾಸ್ ಆಧಾರಿತ ವಿದ್ಯುತ್ ಉತ್ಪಾದನಾ ಘಟಕಗಳಿಗೆ ಅನ್ವಯವಾಗುವಂತೆ ದರ ನಿಗದಿಪಡಿಸಲು ನಿಶ್ಚಯಿಸಿದೆ. ಈ ನಿಟ್ಟಿನಲ್ಲಿ ಆಯೋಗವು ವಿದ್ಯುತ್‌ದರ ನಿಗದಿಪಡಿಸಲು ಪ್ರಸ್ತಾವಿತ ಮಾನಕಗಳನ್ನು ಒಳಗೊಂಡ ಸಮಾಲೋಚನ ಪತ್ರವನ್ನು ಪ್ರಕಟಿಸಿದೆ. ಕ.ವಿ.ನಿ.ಆ. (ನವೀಕರಿಸಬಹುದಾದ ಇಂಧನ ಮೂಲಗಳಿಂದ ವಿದ್ಯುತ್ ಖರೀದಿ) ವಿನಿಯಮಗಳು 2011 ರ ವಿನಿಯಮ ಸಂಖ್ಯೆ: 9 ರ ಅಡಿಯಲ್ಲಿ ಸಾರ್ವಜನಿಕರು ಹಾಗೂ ಆಸಕ್ತ ವ್ಯಕ್ತಿಗಳಿಂದ ಮೇಲ್ಕಂಡ ಪತ್ರಕ್ಕೆ ತಮ್ಮ ಅಭಿಪ್ರಾಯ / ಸಲಹೆ / ಪ್ರತಿಕ್ರಿಯೆ ಹಾಗೂ ದರ ಪ್ರಸ್ತಾವನೆಯನ್ನು ದಿನಾಂಕ: **01-04-2024 ರಂದು ಅಥವಾ ಅದಕ್ಕೂ ಮುಂಚಿತವಾಗಿ ಆಯೋಗದ ಕಾರ್ಯದರ್ಶಿಗಳಿಗೆ** ಮೂರು ಪ್ರತಿಗಳಲ್ಲಿ ಸಲ್ಲಿಸಲು ಈ ಮೂಲಕ ಕೋರಲಾಗಿದೆ. ಮೇಲ್ಕಂಡ ಸಮಾಲೋಚನಾ ಪತ್ರವು ಆಯೋಗದ ಅಂತರ್ಜಾಲ https://kerc.karnataka.gov.in ದಲ್ಲಿ ಲಭ್ಯವಿದೆ.

ಸಹಿ/- ಕಾರ್ಯದರ್ಶಿ
ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಪರವಾಗಿ

ವಾಸಾಸಂಇ/ವಾ.ಪ್ರ/4278/2023-24

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ

ಕೇಂದ್ರ ಕಛೇರಿ, ಯಾಂತ್ರಿಕ ಇಲಾಖೆ, ಕೆ.ಎಚ್.ರಸ್ತೆ, ಶಾಂತಿನಗರ, ಬೆಂಗಳೂರು – 560027
ದೂರವಾಣಿ ಸಂಖ್ಯೆ : 080-22537519

ಟೆಂಡರ್ ಸಂಖ್ಯೆ: BMTC/2023-24/SE0217/Call-5 ದಿನಾಂಕ: 14.03.2024

ಅಲ್ಪಾವಧಿ ಟೆಂಡರ್ ಆಹ್ವಾನ ಸೂಚನಾ ಪತ್ರ (ಇ-ಪ್ರೊಕ್ಯೂರ್‌ಮೆಂಟ್ ವಿಧಾನದಲ್ಲಿ ಮಾತ್ರ)

(1) 120 ಸಂಖ್ಯೆಯ, 900 ಮಿ.ಮಿ. ಫ್ಲೋರ್ ಎತ್ತರದ, 9 ಮೀಟರ್ ಉದ್ದದ ಹವಾನಿಯಂತ್ರಣ ರಹಿತ ವಿದ್ಯುತ್ ಚಾಲಿತ ನಗರ ಸಾರಿಗೆ ಮಾದರಿ ಬಸ್ಸುಗಳ ಖರೀದಿ, ಕಾರ್ಯಾಚರಣೆ, ಹಾಗೂ ನಿರ್ವಹಣೆಯನ್ನು ಗ್ರಾಸ್ ಕಾಸ್ಟ್ ಕಾಂಟ್ರಾಕ್ಟ್ (ಜಿ.ಸಿ.ಸಿ) ಮಾದರಿಯಲ್ಲಿ ನಿರ್ವಹಿಸಲು ಸೇವಾದಾರರನ್ನು ಆಯ್ಕೆ ಮಾಡಲು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮೇಲ್ಕಂಡ ಟೆಂಡರ್‌ನ್ನು ಆಹ್ವಾನಿಸಲಾಗಿದೆ. **(2)** ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಬಿಡ್ ಸಲ್ಲಿಸಲು ಕೊನೆಯ ದಿನಾಂಕ: **10.04.2024 ಸಮಯ 17:30 ಗಂಟೆಯವರೆಗೆ.** ಯಾವುದೇ ಟೆಂಡರ್‌ನ ವೇಳಾಪಟ್ಟಿ, ಕಾರ್ಯವ್ಯಾಪ್ತಿ ಅಥವಾ ಇತರೆ ಷರತ್ತು ಮತ್ತು ನಿಬಂಧನೆಗಳಲ್ಲಿ ಬದಲಾವಣೆಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಅಪ್ಲೋಡ್ ಮಾಡಲಾಗುವುದು.

ಸೂಚನೆ: ಆಸಕ್ತಿಯುಳ್ಳ ಬಿಡ್ಡುದಾರರು **https://kppp.karnataka.gov.in** ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೊಂದಣಿಯಾಗಿರಬೇಕು. ಬಿಡ್ ಸಲ್ಲಿಸಲು ಹೆಚ್ಚಿನ ಸಹಾಯಕ್ಕಾಗಿ ಇ-ಪ್ರೊಕ್ಯೂರ್‌ಮೆಂಟ್ ಹೆಲ್ಪ್‌ಡೆಸ್ಕ್, ದೂರವಾಣಿ ಸಂಖ್ಯೆ: 080-46010000, ಅಥವಾ 080-68948777ಕ್ಕೆ ಕರೆ ಮಾಡಬಹುದು ಅಥವಾ **eprocurementhelpdesk@gmail.com** ಇ-ಮೇಲ್ ಮಾಡಬಹುದಾಗಿರುತ್ತದೆ.

ಸಹಿ/- ಮುಖ್ಯ ಯಾಂತ್ರಿಕ ಅಭಿಯಂತರರು (ಟೆಂಡರ್ ಆಹ್ವಾನಿಸುವ ಪ್ರಾಧಿಕಾರಿ)

ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ ನಿಯಮಿತ

CAUVERY

(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ನಂ. 39, 2ನೇ ಮಹಡಿ, ಯುನೈಟೆಡ್ ಮ್ಯಾನ್‌ಷನ್, ಎಂ.ಜಿ. ರಸ್ತೆ,
ಬೆಂಗಳೂರು-01. ಇ-ಮೇಲ್: jddekshdc@gmail.com
ವೆಬ್‌ಸೈಟ್: www.cauverycrafts.com

ಸಂಖ್ಯೆ: ಕ.ರಾ.ಕ.ಅ.ನಿ.ನಿ/ಅಭಿ/1771/2023-24 ದಿನಾಂಕ: 14.03.2024

ಕರ್ನಾಟಕ ರಾಜ್ಯ ಕರಕುಶಲಕರ್ಮಿಗಳ "ಕುಶಲಕಲಾ" ರಾಜ್ಯ ಪ್ರಶಸ್ತಿ ಹಾಗೂ ಪ್ರಶಂಸನಾ ಪತ್ರ ಪ್ರದಾನಕ್ಕೆ ಅರ್ಜಿ ಆಹ್ವಾನಿಸುವ ಕುರಿತು

ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮವು 2023-24ನೇ ಸಾಲಿಗೆ ಕರಕುಶಲ ಕಲೆಯಲ್ಲಿ ಪರಿಣಿತ ಕುಶಲಕರ್ಮಿಗಳಿಗೆ "**ಕುಶಲಕಲಾ**" ರಾಜ್ಯ ಪ್ರಶಸ್ತಿ ಹಾಗೂ "**ಪ್ರಶಂಸನಾ ಪತ್ರ**" ಪ್ರದಾನ ಮಾಡಲು ಅರ್ಜಿಯನ್ನು ಸ್ವೀಕರಿಸಲು ನಿಗಮವು **ದಿನಾಂಕ: 23.01.2024 ರಂದು** ಪ್ರಕಟಣೆಯನ್ನು ದಿನಪತ್ರಿಕೆಗಳಲ್ಲಿ ಹೊರಡಿಸಲಾಗಿದ್ದು, ಸದರಿ ಪ್ರಕಟಣೆಯಲ್ಲಿ ಅರ್ಜಿಗಳನ್ನು ಸ್ವೀಕರಿಸಲು **ದಿನಾಂಕ: 15.03.2024 ರಂದು** ಕೊನೆಯ ದಿನವಾಗಿದ್ದು, ಸದರಿ ದಿನಾಂಕವನ್ನು **ದಿನಾಂಕ: 14.04.2024 ರವರೆಗೆ** ಅರ್ಜಿಗಳನ್ನು ಸ್ವೀಕರಿಸಲು ಮುಂದೂಡಲಾಗಿದೆ. ಹೆಚ್ಚಿನ ಮಾಹಿತಿಯನ್ನು ನಿಗಮದ ವೆಬ್‌ಸೈಟ್: **www.cauverycrafts.com** ನಲ್ಲಿ ಪಡೆಯಬಹುದಾಗಿದೆ.

ಸಹಿ/- ವ್ಯವಸ್ಥಾಪಕ ನಿರ್ದೇಶಕರು

ಕರ್ನಾಟಕ ಸರ್ಕಾರ

ಯೋಜನಾ ಸಮನ್ವಯಾಧಿಕಾರಿ,
ಸಮಗ್ರ ಗಿರಿಜನ ಅಭಿವೃದ್ಧಿ ಇಲಾಖೆ, ಚಿಕ್ಕಮಗಳೂರು

ದೂರವಾಣಿ: 08262 220779 Email -itdpchikmagalur@gmail.com

ಸಂ:ಗಿಉಯೋಚಿ/ಶಿಶಾ/ಸಿಆರ್27/2023-24 ದಿನಾಂಕ :13-03-2024

: ಇ-ಟೆಂಡರ್ ಪ್ರಕಟಣೆ :

2024-25ನೇ ಸಾಲಿಗೆ ಚಿಕ್ಕಮಗಳೂರು ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ ಇಲಾಖೆಯ ಮೆಟ್ರಿಕ್ ಪೂರ್ವ/ಮೆಟ್ರಿಕ್ ನಂತರದ ಹಾಗೂ ಆಶ್ರಮ ಶಾಲೆಗಳ ವಿದ್ಯಾರ್ಥಿನಿಲಯಗಳಿಗೆ ಆಹಾರ ಪದಾರ್ಥ ಮತ್ತು ಇತರೆ ಸಾಮಗ್ರಿಗಳ ಪೂರೈಕೆಗಾಗಿ ಅರ್ಹ ವ್ಯಕ್ತಿ/ಸಂಸ್ಥೆಗಳಿಂದ ಇ-ಪ್ರೊಕ್ಯೂರ್ ಮೆಂಟ್ ಮೂಲಕ ಇ-ಟೆಂಡರ್ ಕರೆಯಲಾಗಿದ್ದು, ಇ-ಪ್ರೊಕ್ಯೂಮೆಂಟ್ ಪೋರ್ಟಲ್ https://kppp.karnataka.gov.in ಮೂಲಕ ಟೆಂಡರ್‌ನಲ್ಲಿ ಭಾಗವಹಿಸಬಹುದು. ಟೆಂಡರ್‌ನ್ನು ಆನ್ ಲೈನ್ ಮೂಲಕ ಸಲ್ಲಿಸುವ ಕೊನೆಯ ದಿನಾಂಕ:15.04.2024 ಸಂಜೆ 5.00 ಗಂಟೆಯವರೆಗೆ ಹಾಗೂ ತಾಂತ್ರಿಕ ಬಿಡ್ ತೆರೆಯುವ ದಿನಾಂಕ:18.04.2024 ರಂದು ಬೆಳಗ್ಗೆ 11.00 ಗಂಟೆಗೆ ಹೆಚ್ಚಿನ ಮಾಹಿತಿಯನ್ನು ಈ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಪಡೆಯಬಹುದು ಹಾಗೂ ವೆಬ್‌ಸೈಟ್ https://kppp.karnataka.gov.in ನಲ್ಲಿ ಲಾಗಿನ್ ಮಾಡಿ ಪಡೆಯಬಹುದಾಗಿದೆ.

ಸಹಿ/- ಯೋಜನಾ ಸಮನ್ವಯಾಧಿಕಾರಿ,
ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ, ಚಿಕ್ಕಮಗಳೂರು.

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ, ಬೆಳಗಾವಿ
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಳಗಾವಿ.

ನಂ:ಜಿಹಿಂವಕಇಬೆ/ಆಹಾರಟೆ/ಸಿಆರ್-04/2023-24 ದಿನಾಂಕ:11-03-2024

ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಮೂಲಕ)

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಬೆಳಗಾವಿ ಜಿಲ್ಲೆಯ ಅಧೀನದಲ್ಲಿ ಬರುವ ವಿದ್ಯಾರ್ಥಿನಿಲಯಗಳು/ ಆಶ್ರಮ ಶಾಲೆ/ವಸತಿ ಶಾಲೆಗಳಿಗೆ 2024-25 ಮತ್ತು 2025-26 ನೇ ಸಾಲಿನ ಆಹಾರ ಮತ್ತು ಇತರೆ ಸಾಮಗ್ರಿಗಳನ್ನು ಪೂರೈಸುವ ಏಜೆನ್ಸಿಗಳನ್ನು ಎರಡು ವರ್ಷದ ಮಟ್ಟಿಗೆ ಅಥವಾ ಮುಂದಿನ ಆದೇಶದವರೆಗೆ ಆಯ್ಕೆ ಮಾಡುವಗೋಸ್ಕರ ಇ-ಪ್ರೊಕ್ಯೂರಮೆಂಟ್ ಮೂಲಕ ಟೆಂಡರ್ ಕರೆಯಲಾಗಿದ್ದು, ಆಸಕ್ತ ಅರ್ಜಿದಾರರು ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 13/05/2024 ವಾಗಿರುತ್ತದೆ. ವಿವರವನ್ನು ಇಲಾಖೆಯ ವೆಬ್ ಸೈಟ್ https://kppp.karnataka.gov.in ನಲ್ಲಿ ಪಡೆಯಬಹುದಾಗಿದೆ.

ಹೆಚ್ಚಿನ ವಿವರಗಳಿಗಾಗಿ ಕಛೇರಿಯ ದೂರವಾಣಿ ಸಂಖ್ಯೆ : 0831-2407221 ನ್ನು ಸಂಪರ್ಕಿಸಬಹುದು.

ಸಹಿ/-ಜಿಲ್ಲಾ ಅಧಿಕಾರಿಗಳು
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ಬೆಳಗಾವಿ.

ಸಹಿ/-ಜಿಲ್ಲಾಧಿಕಾರಿಗಳು
ಬೆಳಗಾವಿ ಜಿಲ್ಲೆ, ಬೆಳಗಾವಿ

DIPR/BGM/RO-NO-1397/KSMCA/2023-24

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ (ಜಿಲ್ಲಾ ಆಡಳಿತ ಭವನ) ಬಾಗಲಕೋಟೆ 587 103

ದೂರವಾಣಿ ಸಂಖ್ಯೆ: 08354-235576, 235591 mail ID:ceo.zp.karbgk@nic.in
ಫ್ಯಾಕ್ಸ್:08354-235562

ನಂ:ಜಿಪಂಅ/ಉಖಾಯೋ/ವಿನಿದಿ-934/2023-24 ದಿನಾಂಕ:13.03.2024

(ಇ-ಟೆಂಡರ್ ಪ್ರಕಟಣೆ ಸಂಖ್ಯೆ: RDPR/2023-24/SE0826)

ವಿಷಯ:ಬಾಗಲಕೋಟೆ ಜಿಲ್ಲಾ ಪಂಚಾಯತನಲ್ಲಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಹೊರಗುತ್ತಿಗೆ ಸಿಬ್ಬಂದಿಗಳ ಸೇವೆ ಪಡೆಯಲು 2024-25 ರಿಂದ 05 ವರ್ಷಗಳ ಅವಧಿಗೆ ಮಾನವ ಸಂಪನ್ಮೂಲ ಸಂಸ್ಥೆಗಳ ಆಯ್ಕೆಗೆ ಇ-ಪ್ರೊಕ್ಯೂರಮೆಂಟ್ ಮೂಲಕ ಟೆಂಡರ್ ಆಹ್ವಾನಿಸುವ ಬಗ್ಗೆ.

ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಬಾಗಲಕೋಟೆ ಜಿಲ್ಲೆಯ ಹೊರಗುತ್ತಿಗೆ ಮೂಲಕ ಸಿಬ್ಬಂದಿಗಳ ಸೇವೆ ಪಡೆಯಲು ಮಾನವ ಸಂಪನ್ಮೂಲ ಸಂಸ್ಥೆಗಳ ಆಯ್ಕೆ ಮಾಡಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ (KTPP) 1999 ನಿಯಮಗಳು 2000ರ ಕಾರ್ಯವಿಧಾನ ಅನುಸರಿಸಿ ಇ-ಪ್ರೊಕ್ಯೂರಮೆಂಟ್‌ನಲ್ಲಿ ಟೆಂಡರ್ ಕರೆಯಲಾಗಿದೆ. ಇ-ಟೆಂಡರ್ ಪ್ರಕ್ರಿಯೆ ವಿವರ ಈ ಕೆಳಗಿನಂತಿದೆ.

ಟೆಂಡರ್ ಪ್ರಾರಂಭವಾದ ದಿನಾಂಕ	13.03.2024
ಪ್ರೀ ಬಿಡ್‌ನಲ್ಲಿ ಭಾಗವಹಿಸುವ ದಿನಾಂಕ	22.03.2024
ಟೆಂಡರ್‌ನಲ್ಲಿ ಭಾಗವಹಿಸಲು ಕೊನೆಯ ದಿನಾಂಕ	16.04.2024
ಟೆಂಡರ್ ತಾಂತ್ರಿಕ ಲಕೋಟೆ ತೆರೆಯುವ ದಿನಾಂಕ	18.04.2024

ಹೆಚ್ಚಿನ ಮಾಹಿತಿಗಾಗಿ ಕಚೇರಿ ವೇಳೆಯಲ್ಲಿ ಜಿಲ್ಲಾ ಪಂಚಾಯತ ಬಾಗಲಕೋಟೆ ಸಂಪರ್ಕಿಸಬುಹುದು ಹಾಗೂ www.kppp.karnataka.gov.in ನಲ್ಲಿ ಟೆಂಡರ್‌ಗೆ ಸಂಬಂಧಿಸಿದ ದಾಖಲೆಗಳನ್ನು ಪಡೆಯಬಹುದಾಗಿದೆ.

ಸಹಿ/-ಉಪ ಕಾರ್ಯದರ್ಶಿಗಳು
ಜಿಲ್ಲಾ ಪಂಚಾಯತ ಬಾಗಲಕೋಟೆ

DIPR/BGK/RO-NO-447/KSMCA/2023-24

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು

ಜೆ.ಎಲ್.ಬಿ ರಸ್ತೆ, ಮೈಸೂರು – 570005,
ದೂರವಾಣಿ/ಫ್ಯಾಕ್ಸ್: 0821-2420624

ಸಂಖ್ಯೆ: ಮೈನಪ್ರಾ/ಅಅ/ಪಿಬಿ/ಟಿಎನ್/16/2023-24 ದಿನಾಂಕ: 12.03.2024

ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ

(ಕರ್ನಾಟಕ ಸರ್ಕಾರದ ಕೆಪಿಪಿಪಿ ಪೋರ್ಟಲ್ ಮುಖಾಂತರ ಮಾತ್ರ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ 1999-2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಸ್ಟಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ನಿಯಮದನ್ವಯ ಕೆಪಿಪಿಪಿ ಪೋರ್ಟಲ್ ಮುಖಾಂತರ ರೂ.25.00 ರಿಂದ 900.00 ಲಕ್ಷಗಳ ಅಂದಾಜು ಮೊತ್ತದ ಒಟ್ಟು 07 ಸಂಖ್ಯೆ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಕ್ರಮ ಸಂಖ್ಯೆ 01 ರಿಂದ 07 ರವರೆಗಿನ ಕಾಮಗಾರಿಗಳಿಗೆ ಕೆಪಿಪಿಪಿ ಪೋರ್ಟಲ್‌ನಲ್ಲಿ ದಿನಾಂಕ: 12.03.2024 ರಿಂದ ಪಡೆಯಬಹುದಾಗಿದ್ದು, ಟೆಂಡರ್ ಸಲ್ಲಿಸಲು ದಿನಾಂಕ: 20.03.2024 ರ ಸಂಜೆ 4.00 ಗಂಟೆಯವರೆಗೆ ಸಮಯವನ್ನು ನಿಗಧಿಪಡಿಸಿದ್ದು, ತಾಂತ್ರಿಕ ಬಿಡ್‌ನ್ನು ಕ್ರಮವಾಗಿ ದಿನಾಂಕ: 21.03.2024 ರ ಸಂಜೆ 4.30 ರ ನಂತರ ತೆರೆಯಲಾಗುವುದು. ಅರ್ಹ ನೋಂದಾಯಿತ ಸಿವಿಲ್ ಗುತ್ತಿಗೆದಾರರು ಕಾಮಗಾರಿಗಳಿಗೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ http://KPPP.karnataka.gov.in ಮುಖಾಂತರ ನಿಯಮಾವಳಿಯಂತೆ ಟೆಂಡರ್ ಸಲ್ಲಿಸಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗೆ ಈ ಕಛೇರಿಯ ದೂರವಾಣಿ ಸಂಖ್ಯೆ 0821-2420624 ರಿಂದ ಹಾಗೂ ಪ್ರಾಧಿಕಾರದ ವೆಬ್‌ಸೈಟ್ www.mudamysore.gov.in ನಲ್ಲಿ ಪ್ರಕಟಣೆಯ ಮಾಹಿತಿಯನ್ನು ಪಡೆಯಬಹುದು.

ಟಿಪ್ಪಣಿ: ಟೆಂಡರ್ ಸಲ್ಲಿಸುವ ದಿನಾಂಕಗಳು ಬದಲಾವಣೆ ಇದ್ದಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಇರುವ ದಿನಾಂಕಗಳನ್ನೆ ಪರಿಗಣಿಸುವುದು. ಮತ್ತೆ ದಿನ ಪತ್ರಿಕೆಗಳಲ್ಲಿ ಪ್ರಕಟಿಸುವುದಿಲ್ಲ.

ಸಹಿ/- ಅಧೀಕ್ಷಕ ಅಭಿಯಂತರರು,
ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು.

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ

ಕೇಂದ್ರ ಕಛೇರಿ, ಯಾಂತ್ರಿಕ ಇಲಾಖೆ, ಕೆ.ಎಚ್.ರಸ್ತೆ, ಶಾಂತಿನಗರ, ಬೆಂಗಳೂರು – 560027
ದೂರವಾಣಿ ಸಂಖ್ಯೆ : 080-22537519

ಟೆಂಡರ್ ಸಂಖ್ಯೆ: BMTC/2023-24/SE0280/Call-2 ದಿನಾಂಕ: 14.03.2024

ಅಲ್ಪಾವಧಿ ಟೆಂಡರ್ ಆಹ್ವಾನ ಸೂಚನಾ ಪತ್ರ (ಇ-ಪ್ರೊಕ್ಯೂರ್‌ಮೆಂಟ್ ವಿಧಾನದಲ್ಲಿ ಮಾತ್ರ)

(1) 10 ಸಂಖ್ಯೆಯ ಡಬಲ್ ಡೆಕ್ಕರ್ ಹವಾನಿಯಂತ್ರಿತ ಎಲೆಕ್ಟ್ರಿಕ್ ಬಸ್ಸುಗಳನ್ನು ನಗರ ಸಾರಿಗೆ ಮಾದರಿ ಬಸ್ಸುಗಳ ಖರೀದಿ, ಕಾರ್ಯಾಚರಣೆ, ಹಾಗೂ ನಿರ್ವಹಣೆಯನ್ನು ಗ್ರಾಸ್ ಕಾಸ್ಟ್ ಕಾಂಟ್ರಾಕ್ಟ್ (ಜಿ.ಸಿ.ಸಿ) ಮಾದರಿಯಲ್ಲಿ ನಿರ್ವಹಿಸಲು ಸೇವಾದಾರರನ್ನು ಆಯ್ಕೆ ಮಾಡಲು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮೇಲ್ಕಂಡ ಟೆಂಡರ್‌ನ್ನು ಆಹ್ವಾನಿಸಲಾಗಿದೆ. **(2)** ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಬಿಡ್ ಸಲ್ಲಿಸಲು ಕೊನೆಯ ದಿನಾಂಕ: **10.04.2024 ಸಮಯ 17:30 ಗಂಟೆಯವರೆಗೆ.** ಯಾವುದೇ ಟೆಂಡರ್‌ನ ವೇಳಾಪಟ್ಟಿ, ಕಾರ್ಯವ್ಯಾಪ್ತಿ ಅಥವಾ ಇತರೆ ಷರತ್ತು ಮತ್ತು ನಿಬಂಧನೆಗಳಲ್ಲಿ ಬದಲಾವಣೆಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಅಪ್ಲೋಡ್ ಮಾಡಲಾಗುವುದು.

ಸೂಚನೆ: ಆಸಕ್ತಿಯುಳ್ಳ ಬಿಡ್ಡುದಾರರು **https://kppp.karnataka.gov.in** ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೊಂದಣಿಯಾಗಿರಬೇಕು. ಬಿಡ್ ಸಲ್ಲಿಸಲು ಹೆಚ್ಚಿನ ಸಹಾಯಕ್ಕಾಗಿ ಇ-ಪ್ರೊಕ್ಯೂರ್‌ಮೆಂಟ್ ಹೆಲ್ಪ್‌ಡೆಸ್ಕ್, ದೂರವಾಣಿ ಸಂಖ್ಯೆ: 080-46010000, ಅಥವಾ 080-68948777ಕ್ಕೆ ಕರೆ ಮಾಡಬಹುದು ಅಥವಾ **eprocurementhelpdesk@gmail.com** ಇ-ಮೇಲ್ ಮಾಡಬಹುದಾಗಿರುತ್ತದೆ.

ಸಹಿ/- ಮುಖ್ಯ ಯಾಂತ್ರಿಕ ಅಭಿಯಂತರರು (ಟೆಂಡರ್ ಆಹ್ವಾನಿಸುವ ಪ್ರಾಧಿಕಾರಿ)

ಜಲಾನಯನ ಅಭಿವೃದ್ಧಿ ಇಲಾಖೆ

7 & 8 ನೇ ಮಹಡಿ, ಕಾವೇರಿ ಭವನ, ಕ.ಗೃ.ಮ ಸಂಕೀರ್ಣ,
ಕೆ. ಜಿ. ರಸ್ತೆ, ಬೆಂಗಳೂರು– 560009.

ಸಂಖ್ಯೆ: ಜಅಇ/ಆಡಳಿತ-3/ವಿನಿ-1/ವಿವ-52/ಮಾ.ಸಂ.ಟೆ.CEPMIZ/2023-24. ದಿನಾಂಕ: 14.03.2024

ಟೆಂಡರ್ ಪ್ರಕಟಣೆ (ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮುಖಾಂತರ)

ಜಲಾನಯನ ಅಭಿವೃದ್ಧಿ ಇಲಾಖೆಯು ಹೊರಗುತ್ತಿಗೆ ಆಧಾರದ ಮೇಲೆ ಮಾನವ ಸಂಪನ್ಮೂಲ ಸಿಬ್ಬಂದಿಗಳ ಸೇವೆಯನ್ನು ಪಡೆಯಲು ದ್ವಿ ಲಕೋಟೆ ಪದ್ಧತಿಯಲ್ಲಿ ನೊಂದಾಯಿತ ಸಂಸ್ಥೆಗಳಿಂದ ಟೆಂಡರ್ ಅಹ್ವಾನಿಸಲಾಗಿದೆ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ **kppp.karnataka.gov.in** ನಲ್ಲಿ ಟೆಂಡರ್ ದಾಖಲಾತಿಗಳು ಲಭ್ಯವಿರುತ್ತದೆ. ಕೆಪಿಪಿ ಪೋರ್ಟಲ್ ಮುಖಾಂತರ ನೊಂದಾಯಿತ ಸಂಸ್ಥೆಯವರು **ದಿನಾಂಕ: 15.03.2024 ರಿಂದ 30.03.2024 ಸಾಯಂಕಾಲ 05.00** ಘಂಟೆಯವರೆಗೆ **ರೂ. 13,48,200/-ಗಳ** ಇ.ಎಂ.ಡಿ. (EMD) ಮೊತ್ತವನ್ನು ಠೇವಣಿಯಿಟ್ಟು ಆನ್‌ಲೈನ್ ಮುಖಾಂತರ ಟೆಂಡರ್ ಸಲ್ಲಿಸಬಹುದಾಗಿದೆ (Upload ಮಾಡಬಹುದು). ಮುದ್ರಿತ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ. ಪ್ರೀ ಬಿಡ್ ಮೀಟಿಂಗ್ **ದಿನಾಂಕ: 21.03.2024 ರಂದು ಬೆಳಿಗ್ಗೆ 11.00 ಗಂಟೆಗೆ** ನಡೆಯಲಿದೆ.

ಸಹಿ/- ನಿರ್ದೇಶಕರು,
ಜಲಾನಯನ ಅಭಿವೃದ್ಧಿ ಇಲಾಖೆ, ಬೆಂಗಳೂರು.

DIPR/CP/RO4304/AAPL/2023-24

ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ

ನಮ್ಮ ಮೆಟ್ರೋ namma metro

(ಭಾರತ ಸರ್ಕಾರ ಹಾಗೂ ಕರ್ನಾಟಕ ಸರ್ಕಾರದ ಜಂಟಿ ಸಹಭಾಗಿತ್ವದಲ್ಲಿ)
ಬೈಯಪ್ಪನಹಳ್ಳಿ ಮೆಟ್ರೋ ರೈಲು ಡಿಪೋ, ಹಳೇ ಮದ್ರಾಸ್ ರಸ್ತೆ, ಎನ್‌ಜಿಇಎಫ್ ಬಸ್ ಸ್ಟಾಪ್ ಹತ್ತಿರ,
ಬೆಂಗಳೂರು - 560 038. ದೂರವಾಣಿ: 080-25191039.
ಇ-ಮೇಲ್ : contactus@bmrc.co.in ವೆಬ್‌ಸೈಟ್ : www.bmrc.co.in

ಸಂ.: ಬಿಎಂಆರ್‌ಸಿಎಲ್/2023-24/ಬಿಡಿ/ವರ್ಕ್_ಇಂಡೆಂಟ್24 ದಿನಾಂಕ: 13.03.2024

ಟೆಂಡರ್ ಪ್ರಕಟಣೆ

ಬಿಎಂಆರ್‌ಸಿಎಲ್, ಇವರು **"ವೈಟ್‌ಫೀಲ್ಡ್ ಡಿಪೋ ಮತ್ತು ರೀಚ್-1 ವಿಸ್ತರಣಾ ಮೆಟ್ರೋ ನಿಲ್ದಾಣಗಳಿಗೆ ಟ್ಯಾಂಕರ್‌ಗಳ ಮೂಲಕ ನೀರು ಸರಬರಾಜು"** ಮಾಡಲು ಅರ್ಹ ಟೆಂಡರ್‌ದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. ಅಂದಾಜು ಮೊತ್ತ: **ರೂ.13.46 ಲಕ್ಷಗಳು.** ಟೆಂಡರ್ ಭದ್ರತಾ ಮೊತ್ತ: **ರೂ.33,666/-.** ಕಾಮಗಾರಿ ವಿವರಗಳನ್ನು ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಟೆಂಡರ್ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿಕೊಂಡು ದಿನಾಂಕ: **26.03.2024, 15.30 ಗಂಟೆಯೊಳಗೆ** ಸಲ್ಲಿಸಬಹುದು. ಹೆಚ್ಚಿನ ವಿವರಗಳನ್ನು ವೆಬ್‌ಸೈಟ್: **http://kppp.karnataka.gov.in** ನಿಂದ ಅಥವಾ ಮೇಲ್ಕಂಡ ಕಚೇರಿಯನ್ನು ಕಚೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದು.

ಸಹಿ/- ಕಾರ್ಯನಿರ್ವಾಹಕ ನಿರ್ದೇಶಕರು (ಓ ಮತ್ತು ಎಂ)

ಮಹಾ ನಿರ್ದೇಶಕರ ಕಛೇರಿ,
ಕಾರಾಗೃಹ ಮತ್ತು ಸುಧಾರಣಾ ಸೇವೆ

ನಂ.4, ಶೇಷಾದ್ರಿ ರಸ್ತೆ, ಬೆಂಗಳೂರು-560 009.
ದೂರವಾಣಿ: 080-22262263 ಇ-ಮೇಲ್: phq.prisons-kar@gov.in

ಅಲ್ಪಾವಧಿ ಟೆಂಡರ್ ಪ್ರಕಟಣೆ

(ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಕಾರಾಗೃಹ ಮತ್ತು ಸುಧಾರಣಾ ಸೇವಾ ಇಲಾಖೆಯ ವಿವಿಧ ಕೇಂದ್ರ ಮತ್ತು ಜಿಲ್ಲಾ ಕಾರಾಗೃಹಗಳಿಗೆ Towers of the Harmonious Call Blocking System (T-HCBS) ಗಳ ಸರಬರಾಜು, ಅಳವಡಿಕೆ ಮತ್ತು ನಿರ್ವಹಣೆಗಾಗಿ ಕರೆ-2 ರ ಮೂಲಕ ಅಲ್ಪಾವಧಿ ಆನ್‌ಲೈನ್ ಟೆಂಡರ್‌ಗಳನ್ನು ಈ ಕೆಳಕಂಡಂತೆ ಆಹ್ವಾನಿಸಲಾಗಿದೆ.

ಕ್ರ. ಸಂ.	ಟೆಂಡರ್ ಸಂಖ್ಯೆ/ದಿನಾಂಕ	ಅಂದಾಜು ಮೌಲ್ಯ
1	PCSD/2023-24/SE0008/CALL-2 DT.02/03/2024	Rs.624 Lakhs

ಟೆಂಡರ್ ಪೂರ್ವಭಾವಿ ಸಭೆಯ ದಿನಾಂಕ, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಇತರೆ ಮಾಹಿತಿಯನ್ನು https://kppp.karnataka.gov.in ರಲ್ಲಿ ಪಡೆಯಬಹುದು ಹಾಗೂ ಹೆಚ್ಚಿನ ವಿವರಗಳಿಗಾಗಿ ಮೇಲ್ಕಂಡ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ.

ಸಹಿ/-
ಮಹಾ ನಿರ್ದೇಶಕರು
ಕಾರಾಗೃಹ ಮತ್ತು ಸುಧಾರಣಾ ಸೇವೆ
ಕರ್ನಾಟಕ ರಾಜ್ಯ.

ವಾಸಾಸಂಇ/ವಾ.ಪ್ರ/4234/ಎಂಎಎ/2023-24

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

ಬೆವಿಕಂ BESCOM

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೊಳಪಟ್ಟಿದೆ)
(CIN: U04010KA2002SGC030438)

ಇ-ಟೆಂಡರ್‌ಪ್ರಕಟಣೆ (KPP ಪೋರ್ಟಲ್ ಮೂಲಕ)

ಟೆಂಡರ್ ಸಂಖ್ಯೆ: BESCOM/2023-24/SE0120

ಬೆವಿಕಂಯು "ಸೌರ ವಿದ್ಯುತ್ ಉತ್ಪಾದಕರ (SPGs) ಆಯ್ಕೆಗಾಗಿ ಬಿಲ್ಡ್-ಓನ್-ಆಪರೇಟ್ (BOO) ಆಧಾರದ ಮೇಲೆ ಬೆವಿಕಂ ವ್ಯಾಪ್ತಿಯ ಸಬ್ ಸ್ಟೇಷನ್ (SS) ಮಟ್ಟದಲ್ಲಿ 91,056 ಕೃಷಿ ಪಂಪ್‌ಸೆಟ್‌ಗಳನ್ನೊಳಗೊಂಡ ಆಯ್ದ ಕೃಷಿ ಫೀಡರ್‌ಗಳ ಸೌರೀಕರಣಕ್ಕಾಗಿ, ವಿಕೇಂದ್ರೀಕೃತ ಸೌರ ಘಟಕಗಳ ವಿನ್ಯಾಸ, ಸಮೀಕ್ಷೆ, ಸರಬರಾಜು, ಸ್ಥಾಪನೆ, ಪರೀಕ್ಷೆ, ಅನುಷ್ಠಾನ, ಕಾರ್ಯಾಚರಣೆ & ನಿರ್ವಹಣೆ, 11ಕೆ.ವಿ. ಮಾರ್ಗದ ಮೂಲಕ ಸೌರ ಘಟಕವನ್ನು ಸಂಬಂಧಿತ ಸಬ್ ಸ್ಟೇಷನ್‌ಗೆ ಸಂಪರ್ಕ ಹಾಗೂ ಸೌರ ವಿದ್ಯುತ್ ಸ್ಥಾವರಗಳ ರಿಮೋಟ್ ಮಾನಿಟರಿಂಗ್ ಸಿಸ್ಟಮ್ (RMS) ನೊಂದಿಗೆ ಸ್ಥಾವರವನ್ನು ರೆಸ್ಕೋ ಮಾದರಿ ಮೂಲಕ 25 ವರ್ಷ ಪಿಪಿಎ ಅವಧಿಯವರೆಗೆ ಸಂಪರ್ಕಿಸಲು ಪಿಎಂ-ಕುಸುಮ್ ಕಾಂಪೊನೆಂಟ್-ಸಿ ಯೋಜನೆಯ ಕೃಷಿ ಫೀಡರ್‌ಗಳ ಸೌರೀಕರಣ" ಯೋಜನೆಯ ಪ್ರಸ್ತಾವನೆಯ ವಿನಂತಿ (RFP) ಯನ್ನು ಆಹ್ವಾನಿಸಿದೆ. ಬಿಡ್ ದಾಖಲೆಗಳು **15.03.2024 ರ ನಂತರ https://kppp.karnataka.gov.in** ಇಲ್ಲಿ ಲಭ್ಯವಿರುತ್ತದೆ. ಆಸಕ್ತ ಬಿಡ್ಡುದಾರರು ಪೋರ್ಟಲ್‌ನಲ್ಲಿ ನೋಂದಾಯಿಸಿಕೊಳ್ಳತಕ್ಕದ್ದು. ಪೋರ್ಟಲ್ ಕುರಿತು ಯಾವುದೇ ಮಾಹಿತಿಗಾಗಿ ಸಹಾಯವಾಣಿ ಸಂಖ್ಯೆ: 080-46010000, 080-68948777 ಅಥವಾ ಇಮೇಲ್: support@eprochelpdesk.com ಗೆ ಸಂಪರ್ಕಿಸಿ.

ಸಹಿ/-ಪ್ರಧಾನ ವ್ಯವಸ್ಥಾಪಕರು(ವಿ)ಡಿ.ಎಸ್.ಎಂ, ಬೆವಿಕಂ, ಬೆಂಗಳೂರು

ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆ ಮಾಡಿ: 1912
ಬೆಸ್ಕಾಂ ಮಿತ್ರ ಮೊಬೈಲ್ APP Download ಮಾಡಿಕೊಳ್ಳಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಚೇರಿ, ಗೋವಿಂದರಾಜನಗರ ವಿಭಾಗ, 2ನೇ ಮಹಡಿ, ಶಕ್ತಿ ಸೌಧ, 13ನೇ ಅಡ್ಡರಸ್ತೆ, 4ನೇ ಬಿ ಮುಖ್ಯರಸ್ತೆ, ಎಂ.ಸಿ. ಬಡಾವಣೆ, ವಿಜಯನಗರ, ಬೆಂಗಳೂರು-40.

ಸಂಖ್ಯೆ: ಕಾಪಾಅ(ಗೋರಾನ)/ಟೆಂಡರ್/ಜಿಎಲ್-12/2023-24 ದಿನಾಂಕ: 13.03.2024

ದೀರ್ಘಾವಧಿ ಟೆಂಡರ್ ಪ್ರಕಟಣೆ

(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)

ಈ ಕೆಳಗಿನ ಸಹಿದಾರರು ಬೃ.ಬೆಂ.ಮ.ಪಾಲಿಕೆ ಅಥವಾ ತತ್ಸಮಾನವಾಗಿ ಸಿ.ಪಿ.ಡಬ್ಲ್ಯೂ.ಡಿ/ ಕೆ.ಪಿ.ಡಬ್ಲ್ಯೂ.ಡಿ/ರೈಲ್ವೇಸ್ /ಎಂ.ಇ.ಎಸ್ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗಾಗಿ ಐಟಂ ದರದ ಆಧಾರದಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ ಸಂ.	ಕಾಮಗಾರಿಗಳ ಹೆಸರು/ದ್ವಿಲಕೋಟೆ ಕಾಮಗಾರಿಗಳು
1	ಗೋವಿಂದರಾಜನಗರ ಕ್ಷೇತ್ರದಲ್ಲಿ ಬಸ್ ನಿಲ್ದಾಣ, ಉದ್ಯಾನವನಗಳು ಹಾಗೂ ಆಟದ ಮೈದಾನಗಳಲ್ಲಿ ಕುಡಿಯುವ ನೀರಿನ ಪಾಯಿಂಟ್‌ಗಳ ನಿರ್ಮಾಣ ಮಾಡುವುದು ಹಾಗೂ ರಸ್ತೆಗಳು, ಪಾದಚಾರಿ ಮಾರ್ಗ ಮತ್ತು ಚರಂಡಿಗಳನ್ನು ಸುಧಾರಣೆ ಮಾಡುವುದು. ಅಂದಾಜು ಮೊತ್ತ: ₹.800.00 ಲಕ್ಷಗಳು ಇಎಂಡಿ ಮೊತ್ತ: ₹.8.00 ಲಕ್ಷಗಳು
2	ಗೋವಿಂದರಾಜನಗರ ಕ್ಷೇತ್ರದಲ್ಲಿ ಮಳೆ ನೀರು ಕೊಯ್ಲು ಮತ್ತು ರೀಚಾರ್ಜ್ ಪಿಟ್‌ಗಳ ನಿರ್ಮಾಣ ಹಾಗೂ ರಸ್ತೆಗಳು, ಪಾದಚಾರಿ ಮಾರ್ಗಗಳು ಹಾಗೂ ಚರಂಡಿಗಳನ್ನು ಸುಧಾರಣೆ ಮಾಡುವುದು. ಅಂದಾಜು ಮೊತ್ತ: ₹.800.00 ಲಕ್ಷಗಳು ಇಎಂಡಿ ಮೊತ್ತ: ₹.8.00 ಲಕ್ಷಗಳು
3	ಚಂದ್ರಾ ಬಡಾವಣೆ ಉಪವಿಭಾಗದಲ್ಲಿ ಈಜು ಕೊಳ ನಿರ್ಮಾಣ ಮತ್ತು ಇತರೆ ಮೂಲಭೂತ ಸೌಕರ್ಯ ಕಾಮಗಾರಿಗಳನ್ನು ಮಾಡುವುದು. ಅಂದಾಜು ಮೊತ್ತ: ₹.800.00 ಲಕ್ಷಗಳು ಇಎಂಡಿ ಮೊತ್ತ: ₹.8.00 ಲಕ್ಷಗಳು

ಟೆಂಡರ್ ವೇಳಾಪಟ್ಟಿ: (1) ಬಿಡ್ ಪೂರ್ವಭಾವಿ ಸಭೆಯ ದಿನಾಂಕ **27.03.2024**ರ ಸಂಜೆ **4:00** ಗಂಟೆಗೆ. (2) ಭರ್ತಿ ಮಾಡಿದ ಪ್ರಸ್ತಾವನೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ **03.04.2024**ರ ಸಂಜೆ **4:00** ಗಂಟೆಯವರೆಗೆ. (3) ತಾಂತ್ರಿಕ ಪ್ರಸ್ತಾವನೆಗಳನ್ನು ದಿನಾಂಕ **04.04.2024**ರ ಸಂಜೆ **4:30** ಗಂಟೆಯ ನಂತರ ತೆರೆಯಲಾಗುವುದು. (4) ಆರ್ಥಿಕ ಪ್ರಸ್ತಾವನೆಗಳನ್ನು ತಾಂತ್ರಿಕ ಪ್ರಸ್ತಾವನೆಗಳಿಗೆ ಅನುಮೋದನೆ ದೊರೆತ ನಂತರ ಕೆಪಿಪಿ ಪೋರ್ಟಲ್ ಮೂಲಕ ತಿಳಿಸಲಾಗುವುದು.

ಸಹಿ/- ಕಾರ್ಯಪಾಲಕ ಅಭಿಯಂತರರು, ಗೋವಿಂದರಾಜನಗರ ವಿಭಾಗ

ಕರ್ನಾಟಕ ಸರ್ಕಾರ

ಕರ್ನಾಟಕ ಮುನಿಸಿಪಲ್ ಡಾಟಾ ಸೊಸೈಟಿ (ರಿ.)

KMDS enabling municipal e-Governance

(ಪೌರಾಡಳಿತ ನಿರ್ದೇಶನಾಲಯ)

1-4, 6ನೇ ಮಹಡಿ, ಐಟಿ ಪಾರ್ಕ್, ರಾಜಾಜಿನಗರ ಕೈಗಾರಿಕಾ ಪ್ರದೇಶ, ಬೆಂಗಳೂರು-560010.
ದೂರವಾಣಿ: 080-23003100 E-mail: jdr@mrc.gov.in Web: www.mrc.gov.in

ಸಂ: E 110123 KMDS/TECH/OTHE/5/2023-TKMDS-Part(2) ದಿನಾಂಕ: 14.03.2024

ಟೆಂಡರ್ ಪ್ರಕಟಣೆ

(ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕೆ.ಎಂ.ಡಿ.ಎಸ್.ಗೆ ಅವಶ್ಯವಿರುವ ಈ ಕೆಳಕಂಡ ಸರಕು ಮತ್ತು ಸೇವೆಗಳನ್ನು ಪಡೆಯಲು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ದ್ವಿ ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಅರ್ಹ ಬಿಡ್‌ದಾರರು ಬಿಡ್‌ಗಳನ್ನು **https://kppp.karnataka.gov.in**ನಲ್ಲಿ ಸಲ್ಲಿಸಬಹುದಾಗಿದೆ.

ಕ್ರ.ಸಂ.	ಟೆಂಡರ್ ವಿವರ
1.	**ಟೆಂಡರ್ ಸಂಖ್ಯೆ**. DMA/2023-24/SE0766 Call-2 **ಟೆಂಡರ್ ಹೆಸರು**: Facility Management and Comprehensive Annual Maintenance Contract for Desktop, Workstations, Laptops, Printers, Scanners and Switches for a period of 3 Years extendable upto 5 Years.
2.	**ಟೆಂಡರ್ ಸಂಖ್ಯೆ**. DMA/2023-24/SE0768 Call-2 **ಟೆಂಡರ್ ಹೆಸರು**: Operation & Maintenance Services and Comprehensive Annual Maintenance Contract for a period of 3 Years extendable upto 5 Years.
3.	**ಟೆಂಡರ್ ಸಂಖ್ಯೆ**. DMA/2023-24/IND1806 **ಟೆಂಡರ್ ಹೆಸರು**: The Supply, installation, Commissioning and Maintenance of Modular 60 KVA Uninterruptible Power Supply (UPS) for a period of five years in KMDS.

ಟೆಂಡರ್ ಪೂರ್ವಭಾವಿ ಸಭೆ ದಿನಾಂಕ & ಸಮಯ: **18-03-2024 at 11.00 AM**
ತಾಂತ್ರಿಕ ಬಿಡ್ ತೆರೆಯುವ ದಿನಾಂಕ & ಸಮಯ: **25-03-2024 at 11.00 AM**
ಆರ್ಥಿಕ ಬಿಡ್ ತೆರೆಯುವ ದಿನಾಂಕ & ಸಮಯ: **28-03-2024 at 3.00 PM**. ಮೇಲಿನ ಟೆಂಡರ್‌ಗಳ ಪ್ರಕಟಣೆ ದಿನಾಂಕ : **15-03-2024**. ಮೇಲಿನ ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: **22-03-2024 at 5.30 PM.**

ಸಹಿ/- ಜಂಟಿ ನಿರ್ದೇಶಕರು (ಸುಧಾರಣೆ)
ಕರ್ನಾಟಕ ಮುನಿಸಿಪಲ್ ಡಾಟಾ ಸೊಸೈಟಿ, ಬೆಂಗಳೂರು

DIPR/CP/YC/4268/2023-24

ಕೆ.ಎಂ.ಎಫ್ ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ

ಕಹಾಮ ಸಂಕೀರ್ಣ, ಡಾ: ಎಂ.ಹೆಚ್. ಮರೀಗೌಡ ರಸ್ತೆ ಬೆಂಗಳೂರು-560 029
ಫೋನ್: 26096832/910, ಇ-ಮೇಲ್: purchase@kmf.coop

ಅಧಿಸೂಚನೆ ಸಂಖ್ಯೆ: ಕಹಾಮ/ಖರೀದಿ/ಟೆಂಡರ್-625/2023-24 ದಿನಾಂಕ: 14.03.2024

ಅಲ್ಪಾವಧಿ ಟೆಂಡರ್ ಪ್ರಕಟಣೆ

(ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)

ಕರ್ನಾಟಕ ಸಹಕಾರ ಹಾಲು ಮಹಾಮಂಡಳ, ಬೆಂಗಳೂರು ಈ ಕೆಳಕಂಡ ವಿವರಗಳನ್ವಯ ಸೇವಾದಾರರನ್ನು ಗುರುತಿಸಲು ಆಸಕ್ತಿಯುಳ್ಳ ಸಂಸ್ಥೆದಾರರಿಂದ ಟೆಂಡರ್‌ನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಸಂಸ್ಥೆದಾರರು ವಿವರಗಳನ್ನು ಅಂತರ್‌ಜಾಲದ ಮೂಲಕ ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ ವಿಳಾಸ https://kppp.karnataka.gov.in ಗೆ ಭೇಟಿ ನೀಡಿ ಪಡೆಯಬಹುದಾಗಿದೆ.

Sl. No.	Name of the Item	Quantity	EMD (Rs.)
1	Providing promotion & branding service for KMF Nandini brand for ICC T20 World cup -2024 Cricket Teams.	Single job work as detailed in tender document.	6,00,000/-

ಟೆಂಡರ್ ಪ್ರಾರಂಭವಾಗುವ ದಿನಾಂಕ: 14.03.2024 ರಿಂದ. ಟೆಂಡರ್ ಪೂರ್ವಭಾವಿ ಸಭೆ ದಿನಾಂಕ: 21.03.2024 ರಂದು ಬೆಳಿಗ್ಗೆ 11.00 ಗಂಟೆಗೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 28.03.2024 ರ ಸಂಜೆ 5.00 ಗಂಟೆ ಒಳಗಾಗಿ. ತಾಂತ್ರಿಕ ಟೆಂಡರ್ ತೆರಯುವ ದಿನಾಂಕ: 30.03.2024 ರಂದು ಬೆಳಿಗ್ಗೆ 11.00 ಗಂಟೆಗೆ. ವಾಣಿಜ್ಯ ಟೆಂಡರ್ ತೆರಯುವ ದಿನಾಂಕ: ತಾಂತ್ರಿಕ ದಾಖಲಾತಿಗಳ ಪರಿಶೀಲನೆಯ ನಂತರ. ಇನ್ನಿತರ ವಿವರಗಳನ್ನು ಟೆಂಡರ್ ದಾಖಲಾತಿಯಲ್ಲಿ ನೋಡಬಹುದು.

ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಪರವಾಗಿ
ಸಹಿ/- ನಿರ್ದೇಶಕರು (ಖರೀದಿ)

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಉಪ ನಿರ್ದೇಶಕರು (ತೋಟಗಾರಿಕೆ) ರವರ ಕಛೇರಿ,
ಕೇಂದ್ರ ಕಛೇರಿ ಆವರಣ, ಅನೆಕ್ಸ್-03 ಕಟ್ಟಡ, ಬೆಂಗಳೂರು.

ಸಂಖ್ಯೆ: ಉ.ನಿ. (ತೋ)/ಪಿ.ಆರ್./73/2023-24 ದಿನಾಂಕ: 14.03.2024

ಟೆಂಡರ್ ತಿದ್ದುಪಡಿ ಪ್ರಕಟಣೆ-1

ಉಲ್ಲೇಖ : (1) ಈ ಕಛೇರಿಯ ಟೆಂಡರ್ ಪ್ರಕಟಣೆ ಸಂಖ್ಯೆ: ನಂ. DDH/TENDER/01/2023-24 Dated: 29.02.2024. (2) ಈ ಕಛೇರಿಯ ಟೆಂಡರ್ ಪ್ರಕಟಣೆ ಸಂಖ್ಯೆ: ನಂ. DDH/TENDER/01/2023-24 Dated: 06.03.2024.

ಮೇಲ್ಕಂಡ ಉಲ್ಲೇಖಗಳಿಗೆ ಸಂಬಂಧಿಸಿದಂತೆ, ಈ ಕಛೇರಿಯಿಂದ ಹೊರಡಿಸಲಾದ ಉಲ್ಲೇಖಿತ ಟೆಂಡರ್ ಪ್ರಕಟಣೆಯಂತೆ ಆಹ್ವಾನಿಸಲಾಗಿದ್ದ ಟೆಂಡರ್ ಅನ್ನು ತಾಂತ್ರಿಕ ಕಾರಣಗಳಿಂದ ತಿದ್ದುಪಡಿಮಾಡಲಾಗಿರುತ್ತದೆ. ಕಾರಣಾಂತರಗಳಿಂದ ಟೆಂಡರ್‌ಗಳಿಗೆ ಸಂಬಂಧಿಸಿದ ದಿನಾಂಕಗಳನ್ನು ಮತ್ತು ಕಾಮಗಾರಿಯ ಹೆಸರನ್ನು ಈ ಕೆಳಕಂಡಂತೆ ತಿದ್ದುಪಡಿ ಮಾಡಲಾಗಿರುತ್ತದೆ. ಉಳಿದಂತೆ ಯಾವುದೇ ಬದಲಾವಣೆಗಳಿರುವುದಿಲ್ಲ.

ತಿದ್ದುಪಡಿ ಮಾಡಲಾದ ಟೆಂಡರ್ ವಿವರ

ಕ್ರ.ಸಂ.	ಕಾಮಗಾರಿಯ ಹೆಸರು
1.	ಬಿಟಿಎಂ ಬಡಾವಣೆ ಉದ್ಯಾನವನ ಮತ್ತು ಹಸಿರಿನ ಅಭಿವೃದ್ಧಿ, ಸ್ವಾತಂತ್ರ್ಯ ಉದ್ಯಾನವನದ ಸುಧಾರಣೆ ಮತ್ತು ಗಾಂಧಿನಗರದಲ್ಲಿ ಗಿಡಗಳನ್ನು ನೆಡುವುದು ಮತ್ತು ಸರ್ವಜ್ಞನಗರದ ರಾಜ್‌ಕುಮಾರ್ ಉದ್ಯಾನವನದ ಸುಧಾರಣಾ ಕಾಮಗಾರಿಗಳು. ಟೆಂಡರ್ ದಾಖಲೆಗಳನ್ನು ಅಪ್‌ಲೋಡ್ ಮಾಡುವ ದಿನಾಂಕ: 14.03.2024
2.	ಹಾಟ್‌ಸ್ಪಾಟ್‌ಗಳನ್ನು ಗುರುತಿಸುವ ಮೂಲಕ ಉದ್ಯಾನವನದ ಉದ್ದಕ್ಕೂ ಹಸಿರಿಗೆ ಒತ್ತು ನೀಡುವ ಮೂಲಕ ತೋಟಗಾರಿಕಾ ಇಲಾಖೆಯಿಂದ ಹೊಸ ಉದ್ಯಾನವನಗಳ ಅಭಿವೃದ್ಧಿಯ ಕಾಮಗಾರಿಗಳು. ಪ್ಯಾಕೇಜ್-2. ಟೆಂಡರ್ ದಾಖಲೆಗಳನ್ನು ಅಪ್‌ಲೋಡ್ ಮಾಡುವ ದಿನಾಂಕ: 14.03.2024

ಸಹಿ/- ಉಪ ನಿರ್ದೇಶಕರು (ತೋಟಗಾರಿಕೆ), ಬಿಬಿಎಂಪಿ.

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರಕಾರದ ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರು, ಎಚ್.ಬಿ.ಸಿ ವಿಭಾಗ ಅಥಣಿ-591304,
ಕಾರ್ಯಾಲಯ,ತಾ:ಅಥಣಿ ಜಿ:ಬೆಳಗಾವಿ(ಕರ್ನಾಟಕ)

ಸಂ.ಕನೀನಿನಿ/ಎಚ್.ಬಿ.ಸಿ/ಪಿಬಿ/ಟೆಂಡರ್/2023-24/3865 ದಿನಾಂಕ: 13.03.2024

ಅಲ್ಪಾವಧಿ ಟೆಂಡರ ಅಧಿಸೂಚನೆ
(ಇ-ಸಂಗ್ರಹಣಾ ಕೋಶದ ಮೂಲಕ ಮಾತ್ರ)

ವ್ಯವಸ್ಥಾಪಕ ನಿರ್ದೇಶಕರು ಕರ್ನಾಟಕ ನೀರಾವರಿ ನಿಗಮ ನಿಯಮಿತ ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು ಕನೀನಿನಿ ಎಚ್.ಬಿ.ಸಿ ವಿಭಾಗ ತಾ:ಅಥಣಿ ಜಿ:ಬೆಳಗಾವಿ ಇವರು ಕಾಮಗಾರಿಯನ್ನು ಸ್ಟ್ಯಾಂಡರ್ಡ ಬಿಡ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ-3 & 4 ನಿಯಮದನ್ವಯ ಮೊದಲನೇ ಹಾಗೂ ಎರಡನೇ ಲಕೋಟೆಯನ್ನು ಈ ಸಂಗ್ರಹಣಾ ಕೋಶದ ಮುಖಾಂತರ ಶೇಕಡಾವಾರು ಟೆಂಡರನ್ನು, ಪಿ.ಡಬ್ಲೂಡಿ ಕ್ಲಾಸ್-2 & 3 ಹಾಗೂ ಮೇಲ್ಪಟ್ಟ ಗುತ್ತಿಗೆದಾರರಿಂದ ಟೆಂಡರನ್ನು ಅಹ್ವಾನಿಸಿರುತ್ತಾರೆ.

ಸದರಿ ಕಾಮಗಾರಿಗಳಿಗೆ ಮೊದಲನೇ ಹಾಗೂ ಎರಡನೇ ಕವರಿನ ವಿಧಾನದಲ್ಲಿ (as per KTPP act 2000) ಅನುಸರಿಸಬೇಕು. ಖಾಲಿ ಟೆಂಡರ್ ದಾಖಲೆಗಳನ್ನು ವೆಬ್‌ಸೈಟ್ www.kppp.karnataka.gov.in ಮೂಲಕ ಪಡೆದುಕೊಳ್ಳಬಹುದು ಮತ್ತು ಎಲೆಕ್ಟ್ರಾನಿಕ್ ಟೆಂಡರ್ ಮೂಲಕ ಮಾತ್ರ ಸಲ್ಲಿಸಬಹುದು.

ಟೆಂಡರಗಿಟ್ಟ ಅಂದಾಜು ಮೊತ್ತ ರೂ. 495.99 ಲಕ್ಷ ದಿಂದ 34.68 ಲಕ್ಷಗಳವರೆಗೆ.

1:ಇ ಸಂಗ್ರಹಣಾ ಕೋಶದಲ್ಲಿ ಟೆಂಡರ್ ದಾಖಲೆಗಳನ್ನು ಪಡೆಯಬಹುದಾದ ದಿನಾಂಕ:15.03.2024ರ 10.30 ಬೆಳಿಗ್ಗೆ ರಿಂದ 22.03.2024 ರ ಸಾಯಂಕಾಲ 4.00 ಗಂಟೆ ವರಗೆ, 2:ಟೆಂಡರ್ ಪ್ರಶ್ನೆಗಳಿಗೆ ಕೊನೆಯ ದಿನಾಂಕ ಮತ್ತು ಸಮಯ:21.03.2024 ರ ಸಾಯಂಕಾಲ 4.00 ವರೆಗೆ, 3:ಫ್ರಿ ಬಿಡ್ ಮಿಟಿಂಗ್ ದಿನಾಂಕ:(ಕಾ.ನಿ.ಇಂ. ಕನೀನಿನಿ ಎಚ್.ಬಿ.ಸಿ. ವಿಭಾಗ ಅಥಣಿ):ದಿನಾಂಕ 20.03.2024 ರ 11.00 ಬೆಳಿಗ್ಗೆ, 4:ಪೂರ್ಣವಾಗಿ ತುಂಬಿದ ಇ ಟೆಂಡರ್ ದಾಖಲೆಗಳನ್ನು ಸಲ್ಲಿಸುವ ಕೊನೆಯ ದಿನಾಂಕ:ದಿನಾಂಕ 15.03.2024 ರ 10.30 ಬೆಳಿಗ್ಗೆ ರಿಂದ 22.03.2024 ರ ಸಾಯಂಕಾಲ 4.00 ಗಂಟೆ ವರಗೆ, 5:ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (ಎಚ್.ಬಿ.ಸಿ ವಿಭಾಗ ಕಛೇರಿ ಅಥಣಿಯಲ್ಲಿ): 26.03.2024 ರ ಬೆಳಿಗ್ಗೆ 11.00 ಗಂಟೆಗೆ, 6ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ:28.03.2024 ರ ಬೆಳ್ಳಿಗ್ಗೆ 11.00 ಗಂಟೆಗೆ (ತಾಂತ್ರಿಕ ಬಿಡ್ ಅನುಮೊದನೆ ನಂತರ), 7:ಗುತ್ತಿಗೆದಾರರು ಮೂಲ ದಾಖಲೆಗಳನ್ನು ಇ.ಇ. ಕನೀನಿನಿ ಎಚ್.ಬಿ.ಸಿ. ವಿಭಾಗ ಅಥಣಿ ಕಚೇರಿಯಲ್ಲಿ ಹಾಜರಪಡಿಸುವ ದಿನಾಂಕ:27.03.2024 ಬೆಳ್ಳಿಗ್ಗೆ 11.00 ಗಂಟೆಗೆ.

ಇನ್ನೂಳಿದಂತೆ ಯಾವುದಾದರೂ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಇ ಸಂಗ್ರಹಣಾ ಕೋಶ ವೆಬ್ ಸೈಟ್ http//:www.kppp.karnataka.gov.in/kpp-protal/index.seam link ಮುಖಾಂತರ ಹಾಗೂ ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಪಡೆಯಬಹುದು.

ಸಹಿ/-ಎಸ್.ಜಿ. ಶ್ರೀನಾಥ್, ಕಾರ್ಯನಿರ್ವಾಹಕ ಇಂಜಿನೀಯರರು,
ಎಚ್.ಬಿ.ಸಿ ವಿಭಾಗ, ಅಥಣಿ

DIPR/BGM/RO-NO-1396/KSMCA/2023-24

‘ಅರಮನೆ ಮೈದಾನ ವಶಕ್ಕೆ ತ್ವರಿತ ಕ್ರಮ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಲ್ಲಿನ ಅರಮನೆ ಮೈದಾನವನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳುವ ಸಂಬಂಧ ಸುಪ್ರೀಂ ಕೋರ್ಟ್‌ನಲ್ಲಿರುವ ಅರ್ಜಿಯನ್ನು ಆದಷ್ಟು ಬೇಗ ಇತ್ಯರ್ಥಗೊಳಿಸಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸೂಚಿಸಿದರು.

ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ವಿಷಯ ಚರ್ಚೆಗೆ ಬಂದಿತ್ತು. ಆಗ, ಮಾತನಾಡಿದ ಸಿದ್ದರಾಮಯ್ಯ, ಸೂಕ್ತ ಕ್ರಮ ಜರುಗಿಸುವಂತೆ ಮುಖ್ಯ ಕಾರ್ಯದರ್ಶಿಗೆ ನಿರ್ದೇಶನ ನೀಡಿದರು.

ಸಭೆ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಂದಾಯ ಸಚಿವ ಕೃಷ್ಣಬೈರೇಗೌಡ, ‘ಈ ಜಾಗ ಸಾರ್ವಜನಿಕ ರದ್ದು ಎಂದು ಕಾನೂನು ಮಾಡಲಾಗಿದೆ. ಅದನ್ನು ಹೈಕೋರ್ಟ್ ಕೂಡಾ ಒಪ್ಪಿದೆ. ಅದರ ವಿರುದ್ಧ ರಾಜವಂಶಸ್ಥರು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಹಾಕಿದ್ದಾರೆ. ಯಥಾಸ್ಥಿತಿ ಕಾಪಾಡುವಂತೆಯೂ ಸುಪ್ರೀಂ ಕೋರ್ಟ್ ಸೂಚಿಸಿದೆ. ಆದರೆ, ಇಷ್ಟು ದಿನ ಯಥಾಸ್ಥಿತಿ ಏಕೆ? ಸೂಕ್ತ ವಕೀಲರನ್ನು ನೇಮಕ ಮಾಡಿ ಸರ್ಕಾರದ ನಿಲುವಿಗೆ ಪೂರಕವಾಗಿ ಮೂಲದಾವೆ ಪ್ರಕಾರ ಮುಂದುವರೆಯಬೇಕು ಎಂದು ಮುಖ್ಯಮಂತ್ರಿ ಸೂಚಿಸಿದರು’ ಎಂದು ಹೇಳಿದರು.

ರಸ್ತೆ ಅಗಲೀಕರಣಕ್ಕೆ ತೀರ್ಮಾನ: ಬೆಂಗಳೂರು ಅರಮನೆ ಜಾಗದ ಹೊರ ಭಾಗದಲ್ಲಿ ರಸ್ತೆ ಅಗಲೀಕರಣ ಮಾಡುವುದಾದರೆ ಟಿಡಿಆರ್ (ಅಭಿವೃದ್ಧಿ ಹಕ್ಕುಗಳ ವರ್ಗಾವಣೆ) ಕೊಟ್ಟು ರಸ್ತೆ ಮಾಡಲು ನ್ಯಾಯಾಲಯ ಆದೇಶಿಸಿತ್ತು. ಆ ಬಳಿಕ ಸರ್ಕಾರ ಹಿಂದಕ್ಕೆ ಸರಿಯಿತು. ಮತ್ತೆ ಸರ್ಕಾರ ಭೂಮಿ ವಶಕ್ಕೆ ಪಡೆದು ಕಾಂಪೌಂಡ್ ಹಾಕಿತು ಎಂದು ಕೃಷ್ಣಬೈರೇಗೌಡ ತಿಳಿಸಿದರು.

ಇದರ ವಿರುದ್ಧ ಸುಪ್ರೀಂ ಕೋರ್ಟ್‌ನಲ್ಲಿ ನ್ಯಾಯಾಂಗ ನಿಂದನೆ ಅರ್ಜಿ ಸಲ್ಲಿಕೆಯಾಯಿತು. ಮುಂದಿನ ವಾರವೇ ಮುಖ್ಯ ಕಾರ್ಯದರ್ಶಿ, ನಗರಾಭಿವೃದ್ಧಿ ಹೆಚ್ಚುವರಿ ಕಾರ್ಯದರ್ಶಿ, ಬಿಬಿಎಂಪಿ ಆಯುಕ್ತರ ಖುದ್ದು ಹಾಜರಿಗೆ ಸೂಚನೆ ನೀಡಿದೆ. ಹೀಗಾಗಿ ಸಂಪುಟದಲ್ಲಿ ಚರ್ಚೆ ಮಾಡಿ ರಸ್ತೆ ಅಗಲೀಕರಣ ಮಾಡಬೇಕೆಂಬ ನಿರ್ಧಾರಕ್ಕೆ ಬರಲಾಗಿದೆ. 15.5 ಎಕರೆ ಟಿಡಿಆರ್ ಕೊಡಲು ತಾತ್ವಿಕ ತೀರ್ಮಾನ ತೆಗೆದುಕೊಳ್ಳಲಾಗಿದ್ದು, ಟಿಡಿಆರ್ ಯಾರಿಗೆ ಕೊಡುವುದು ಎಂಬ ಪ್ರಶ್ನೆ ಎದುರಾಗಿದೆ ಎಂದು ಅವರು ಹೇಳಿದರು.

₹15,617 ಕೋಟಿ ವೆಚ್ಚದಲ್ಲಿ ನಿರ್ಮಾಣ • 2028ರ ವೇಳೆಗೆ ಪೂರ್ಣವಾಗುವ ಸಾಧ್ಯತೆ

ಮೆಟ್ರೊ 3ನೇ ಹಂತಕ್ಕೆ ಸಂಪುಟ ಒಪ್ಪಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಮ್ಮ ಮೆಟ್ರೊ 3ನೇ ಹಂತದ ಯೋಜನೆಗೆ ಗುರುವಾರ ನಡೆದ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ ಎಂದು ಕಂದಾಯ ಸಚಿವ ಕೃಷ್ಣಬೈರೇಗೌಡ ತಿಳಿಸಿದರು.

₹15,617 ಕೋಟಿ ಅಂದಾಜು ವೆಚ್ಚದಲ್ಲಿ ಈ ಕಾಮಗಾರಿ ನಡೆಯಲಿದ್ದು, 2028ರ ವೇಳೆಗೆ ಪೂರ್ಣಗೊಳ್ಳುವ ನಿರೀಕ್ಷೆ ಇದೆ ಎಂದು ಅವರು ಸುದ್ದಿಗೋಷ್ಠಿಯಲ್ಲಿ ವಿವರಿಸಿದರು.

ಬೆಂಗಳೂರಿನ ಸಂಚಾರ ದಟ್ಟಣೆಯನ್ನು ಕಡಿಮೆ ಮಾಡುವ ಉದ್ದೇಶದಿಂದ ಮೆಟ್ರೊ 3ನೇ ಹಂತ ಅಗತ್ಯವಾಗಿದೆ. ಇದಕ್ಕೆ ಕೇಂದ್ರ ಸರ್ಕಾರ ಒಪ್ಪಿಗೆ ನೀಡಿದೆ. ರಾಜ್ಯ ಶೇ 80 ರಿಂದ ಶೇ 85ರಷ್ಟು ಮೊತ್ತ ಭರಿಸಲಿದ್ದು, ಉಳಿದ ಮೊತ್ತವನ್ನು ಕೇಂದ್ರ ಸರ್ಕಾರ ನೀಡಲಿದೆ ಎಂದರು.

ಮೆಟ್ರೊ 3ನೇ ಹಂತ ಹೆಬ್ಬಾಳ ಮೇಲ್ಸೇತುವೆಯಿಂದ ಗೊರಗುಂಟೆ ಪಾಳ್ಯ, ತುಮಕೂರು ರಸ್ತೆ, ಮಾಗಡಿ ರಸ್ತೆ, ಮೈಸೂರು ರಸ್ತೆ, ಕನಕಪುರ ರಸ್ತೆ ಮಾರ್ಗವಾಗಿ ಜೆ.ಪಿ. ನಗರವನ್ನು ತಲುಪಲಿದೆ. ಒಟ್ಟು 32.15 ಕಿ.ಮೀ ಉದ್ದದ ಈ ಯೋಜನೆಗೆ ಚಾಲನೆ ನೀಡಲಾಗುವುದು. ಇದಕ್ಕೆ ಭೂಸ್ವಾಧೀನ ಅಗತ್ಯವಿದೆ. ಬಿಎಂಆರ್‌ಸಿಎಲ್ ಈಗಾಗಲೇ ಯೋಜನಾ ವರದಿಯನ್ನು ಸಿದ್ಧಪಡಿಸಿದೆ ಎಂದು ಹೇಳಿದರು.

ಮರಗಳ ಉದ್ಯಾನ: ಎನ್‌ಜಿಇಎಫ್‌ನಲ್ಲಿ 110 ಎಕರೆ ಜಮೀನು ಲಭ್ಯವಿದ್ದು, ಇಲ್ಲಿ 65 ಎಕರೆ ಜಾಗದಲ್ಲಿ ಮರಗಳ ಉದ್ಯಾನ (ಟ್ರೀ ಪಾರ್ಕ್) ನಿರ್ಮಿಸಲು ನಿರ್ಧರಿಸಲಾಯಿತು. ಇದಕ್ಕೆ ₹11 ಕೋಟಿ ಒದಗಿಸಲಾಗುವುದು ಎಂದು ಹೇಳಿದರು.

ಇಲ್ಲಿ ಒಂದು ಎಕರೆ ಜಮೀನಿಗೆ ₹25 ಕೋಟಿಯಿಂದ ₹30 ಕೋಟಿ ಬೆಲೆ ಇದೆ. ಅಂದರೆ, ಸುಮಾರು ₹1500 ಕೋಟಿ ಮೌಲ್ಯದ ಜಾಗವನ್ನು ಉದ್ಯಾನ ನಿರ್ಮಿಸಲು ಬಳಸಿಕೊಳ್ಳಲು ನಿರ್ಧರಿಸಲಾಯಿತು. ನಗರದ ಮಧ್ಯಭಾಗದಲ್ಲಿ ಲಾಲ್‌ಬಾಗ್, ಕಬ್ಬನ್‌ಪಾರ್ಕ್ ಇವೆ. ಆದರೆ, ಹೊರವಲಯದ ಜನರಿಗೆ ಅಂತಹ ಸೌಲಭ್ಯಗಳು ಇಲ್ಲ. ಆದ್ದರಿಂದ ಮಕ್ಕಳು ಮತ್ತು ವಯಸ್ಕರಿಗೆ ಅನುಕೂಲವಾಗುವಂತೆ ಕ್ರೀಡಾಂಗಣ ಸಹಿತ ವಿವಿಧ ಸೌಲಭ್ಯಗಳನ್ನು ಒಳಗೊಂಡ ಪಾರ್ಕ್ ನಿರ್ಮಿಸಲು ನಿರ್ಧರಿಸಲಾಯಿತು ಎಂದು ಕೃಷ್ಣಬೈರೇಗೌಡ ತಿಳಿಸಿದರು.

‘ನಮ್ಮ ಮೆಟ್ರೊ’ದ ಸಾಂದರ್ಭಿಕ ಚಿತ್ರ

ಶ್ರೀಲಂಕಾ ತಮಿಳಿಗರಿಗೆ ಅನ್ಯಾಯ

ಶ್ರೀಲಂಕಾದಿಂದ ನಿರಾಶ್ರಿತರಾಗಿ ಬಂದ ತಮಿಳರಿಗೆ ಸಿಎಎ ಕಾಯ್ದೆಯಲ್ಲಿ ಅವಕಾಶ ನೀಡಿಲ್ಲ. ಇದು ಸರಿಯಲ್ಲ ಎಂದು ಕೃಷ್ಣಬೈರೇಗೌಡ ಹೇಳಿದರು.

‘ಇವತ್ತಿನ ಸಂಪುಟದಲ್ಲಿ ಸಿಎಎ ಬಗ್ಗೆ ಚರ್ಚೆ ಆಗಿಲ್ಲ. ನನ್ನ ವೈಯಕ್ತಿಕ ಅಭಿಪ್ರಾಯದ ಪ್ರಕಾರ, ಶ್ರೀಲಂಕಾ ಸರ್ಕಾರ ಮತ್ತು ಎಲ್‌ಟಿಟಿಇ ಸಂಘರ್ಷದಲ್ಲಿ ನಿರಾಶ್ರಿತರಾಗಿ ದಕ್ಷಿಣದ ರಾಜ್ಯಗಳಿಗೆ ವಲಸೆ ಬಂದವರಿಗೆ ಸಿಎಎ ಅಡಿ ಪೌರತ್ವದ ಯಾವುದೇ ಪ್ರಸ್ತಾಪವಿಲ್ಲ’ ಎಂದರು. ‘ಪಾಕಿಸ್ತಾನ, ಬಾಂಗ್ಲಾದೇಶ ಮುಂತಾದ ದೇಶಗಳಿಂದ ನಿರಾಶ್ರಿತರಾಗಿ ಬಂದವರಿಗೆ ಪೌರತ್ವ ನೀಡಲು ಮುಂದಾದ ಸರ್ಕಾರ, ಶ್ರೀಲಂಕಾದಿಂದ ದಕ್ಷಿಣದ ರಾಜ್ಯಗಳಿಗೆ ನಿರಾಶ್ರಿತರಾಗಿ ಬಂದವರ ಬಗ್ಗೆ ಏಕೆ ಒಲವು ತೋರುತ್ತಿಲ್ಲ’ ಎಂದು ಪ್ರಶ್ನಿಸಿದರು.

500 ಎಕರೆಯಲ್ಲಿ ನೂತನ ಬಡಾವಣೆ

ಕರ್ನಾಟಕ ಗೃಹಮಂಡಳಿ ವತಿಯಿಂದ ರಾಜಧಾನಿ ಬೆಂಗಳೂರು ಹೊರವಲಯದಲ್ಲಿ 500 ಎಕರೆ ಪ್ರದೇಶದಲ್ಲಿ ನೂತನ ಬಡಾವಣೆ (ಮಿನಿ ಟೌನ್ ಶಿಪ್) ನಿರ್ಮಾಣಕ್ಕೆ ಸಚಿವ ಸಂಪುಟ ಒಪ್ಪಿಗೆ ನೀಡಿದೆ.

ಬೆಂಗಳೂರು ದಕ್ಷಿಣ ತಾಲ್ಲೂಕಿನ ಕೆಂಗೇರಿ ಹೋಬಳಿ ಹಾಗೂ ರಾಮನಗರ ಜಿಲ್ಲೆ ಬಿಡದಿ ಹೋಬಳಿಯ ಏಳು ಗ್ರಾಮಗಳ 500 ಎಕರೆ ಪ್ರದೇಶದಲ್ಲಿ 50:50 ಅನುಪಾತದಲ್ಲಿ ಬಡಾವಣೆ ನಿರ್ಮಾಣವಾಗಲಿದೆ ಎಂದು ವಸತಿ ಸಚಿವ ಜಮೀರ್ ಅಹಮದ್ ಖಾನ್ ತಿಳಿಸಿದರು.

₹1,066.50 ಕೋಟಿ ಮೊತ್ತದ ಯೋಜನೆಗೆ ರೈತರು ಜಮೀನು ನೀಡಲು ಒಪ್ಪಿಗೆ ಪತ್ರ ನೀಡಿದ್ದಾರೆ. ಈ ಯೋಜನೆ ಬೆಂಗಳೂರು–ಮೈಸೂರು ರಾಷ್ಟ್ರೀಯ ಹೆದ್ದಾರಿಯಿಂದ 5.5 ಕಿ.ಮೀ ವ್ಯಾಪ್ತಿಯಲ್ಲಿ ಬರಲಿದೆ. ರೈತರ ಜತೆ ಪಾಲುದಾರಿಕೆಯಡಿ ಅಂತರರಾಷ್ಟ್ರೀಯ ಮಟ್ಟದಲ್ಲಿ ವಸತಿ ಯೋಜನೆ ಅಭಿವೃದ್ಧಿಪಡಿಸಲಾಗುವುದು ಎಂದು ಹೇಳಿದರು.

ನಿವೇಶನ ಕಂತು ಪಾವತಿಸಲು ಸಮಯ

2016–17 ನೇ ಸಾಲಿನಲ್ಲಿ ಕೆಂಪೇಗೌಡ ಲೇಔಟ್ ಸೇರಿ ವಿವಿಧ ಹೊಸ ಬಡಾವಣೆಗಳ ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ. ಆದರೆ, ಲೀಸ್ ಕಂ ಸೇಲ್ ನಿವೇಶನಗಳ ಹಂಚಿಕೆಯಾದವರು ತಮ್ಮ ಪಾಲಿನ ಕಂತು ಕಟ್ಟಲು ಸಾಧ್ಯವಾಗದೇ ನಿವೇಶನ ವಾಪಸ್ ಆಗಿವೆ. ಆರ್ಥಿಕ ಮುಗ್ಗಟ್ಟು ಎದುರಿಸುತ್ತಿದ್ದ ಬಡ ಜನರು ಸೂಕ್ತ ಕಾಲದಲ್ಲಿ ಹಣ ಪಾವತಿ ಮಾಡಲು ಸಾಧ್ಯವಾಗಿಲ್ಲ. ಇಂತಹವರಿಗೆ ಅನ್ಯಾಯ ಆಗಬಾರದು ಎಂದು ಈಗ ಮತ್ತೆ ಮೂರು ತಿಂಗಳ ಕಾಲಾವಕಾಶ ನೀಡಿ ಫಲಾನುಭವಿಗಳಿಗೆ ಕಂತು ಕಟ್ಟಲು ಸಮಯ ನೀಡಲಾಗಿದೆ ಎಂದು ಕೃಷ್ಣ ಬೈರೇಗೌಡ ಹೇಳಿದರು.

ಸುದ್ದಿ 2 ನಿಮಿಷ

‘ಸೇವಾ ವಿಷಯ ಇತ್ಯರ್ಥ– ಆಯೋಗದ ವ್ಯಾಪ್ತಿಗಿಲ್ಲ’

ಬೆಂಗಳೂರು: ‘ಸೇವಾ ವಿಷಯಗಳಿಗೆ ಸಂಬಂಧಿಸಿದ ದೂರುಗಳನ್ನು ಇತ್ಯರ್ಥಪಡಿಸುವ ಅಧಿಕಾರ ಪರಿಶಿಷ್ಟ ಜಾತಿಗಳ ರಾಷ್ಟ್ರೀಯ ಆಯೋಗಕ್ಕೆ ಇಲ್ಲ’ ಎಂದು ಹೈಕೋರ್ಟ್ ಆದೇಶಿಸಿದೆ.

‘ನನ್ನ ಜ್ಯೇಷ್ಠತೆ ಆಧಾರದ ಮೇಲೆ ಹಾಗೂ ವಿದ್ಯಾರ್ಹತೆಗೆ ಅನುಗುಣವಾಗಿ ನನಗೆ ಉನ್ನತ ಹುದ್ದೆ ನೀಡಿಲ್ಲ’ ಎಂದು ಆಕ್ಷೇಪಿಸಿ ಪರಿಶಿಷ್ಟ ಜಾತಿಯ ಸಿಬ್ಬಂದಿ ವಿ.ಶ್ರೀನಿವಾಸ್ ಪರಿಶಿಷ್ಟ ಜಾತಿ ರಾಷ್ಟ್ರೀಯ ಆಯೋಗಕ್ಕೆ ದೂರು ನೀಡಿದ್ದರು. ಈ ದೂರನ್ನು ಆಧರಿಸಿ ಸಿಬ್ಬಂದಿಗೆ ಉನ್ನತ ಹುದ್ದೆ ನೀಡುವಂತೆ ಆಯೋಗ ಆದೇಶಿಸಿತ್ತು. ಇದನ್ನು ಪ್ರಶ್ನಿಸಿ ಸರ್ಕಾರ ಸಲ್ಲಿಸಿದ್ದ ಮೇಲ್ಮನವಿಯನ್ನು ನ್ಯಾಯಮೂರ್ತಿ ಸಚಿನ್ ಶಂಕರ್ ಮಗದುಮ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿದೆ. ಅಂತೆಯೇ, ರಾಷ್ಟ್ರೀಯ ಆಯೋಗದ ಆದೇಶವನ್ನು ರದ್ದುಪಡಿಸಿದೆ.

‘ಇಂತಹ ಪ್ರಕರಣಗಳು ಕಾನೂನಿನ ವ್ಯಾಪ್ತಿಯೊಳಗೆ ಬರುತ್ತವೆ ಮತ್ತು ಸೇವೆಗೆ ಸಂಬಂಧಿಸಿದ ವಿವಾದಗಳಲ್ಲಿ ಸಾಮರ್ಥ್ಯವಿರುವ ಆಡಳಿತಾತ್ಮಕ ನ್ಯಾಯ ಮಂಡಳಿಗಳಂತಹ ವಿಶೇಷ ತೀರ್ಪುಗಾರ ಸಂಸ್ಥೆಗಳಿಂದ ನಿರ್ಣಯಕ್ಕೆ ಒಳಪಟ್ಟಿರುತ್ತವೆ ಎಂದಿದೆ. ಜತೆಗೆ ರಾಷ್ಟ್ರೀಯ ಆಯೋಗದ ನಿರ್ಧಾರವು ಸುಪ್ರೀಂ ಕೋರ್ಟ್ ನೀಡಿರುವ ತೀರ್ಪುಗಳಿಗೆ ವಿರುದ್ಧವಾಗಿದೆ’ ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

‘ಸೇವಾ ವಿಷಯಗಳಿಗೆ ಸಂಬಂಧಿಸಿದ ಜ್ಯೇಷ್ಠತೆ ಆಧಾರದ ಹಾಗೂ ಬಡ್ತಿಯ ಕುರಿತಾಗಿ ದಾಖಲಾದ ದೂರಗಳನ್ನು ಇತ್ಯರ್ಥಪಡಿಸುವ ಹಾಗೂ ನಿರ್ಣಯಿಸುವ ಅಧಿಕಾರ ಪರಿಶಿಷ್ಟ ಜಾತಿಗಳ ರಾಷ್ಟ್ರೀಯ ಆಯೋಗಕ್ಕೆ ಇಲ್ಲ’ ಎಂದು ನ್ಯಾಯಪೀಠ ಪುನರುಚ್ಚರಿಸಿದೆ.

ಐಎಎಸ್ ಅಧಿಕಾರಿಗಳ ವರ್ಗ

ಬೆಂಗಳೂರು: ಐಎಎಸ್ ಅಧಿಕಾರಿ ಅಜಯ್ ನಾಗಭೂಷಣ್ ಅವರನ್ನು ಪಶು ಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆಯ ಕಾರ್ಯದರ್ಶಿಯಾಗಿ ವರ್ಗಾವಣೆ ಮಾಡಲಾಗಿದೆ. ನಾಗಭೂಷಣ್ ಅವರಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿ ಹುದ್ದೆಯನ್ನು ಹೆಚ್ಚುವರಿಯಾಗಿ ನೀಡಲಾಗಿದೆ.

ತುಳಸಿ ಮದ್ದಿನೇನಿ ಅವರನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ (ಆಡಳಿತ ಸುಧಾರಣೆ) ಕಾರ್ಯದರ್ಶಿಯಾಗಿ ಹಾಗೂ ಎಂ.ಎಸ್. ಅರ್ಚನಾ ಅವರನ್ನು ಕರ್ನಾಟಕ ಗೆಜೆಟಿಯರ್ ಇಲಾಖೆಯ ಮುಖ್ಯ ಸಂಪಾದಕರ ಹುದ್ದೆಗೆ ವರ್ಗಾವಣೆ ಮಾಡಲಾಗಿದೆ.

ಸ್ಥಳ ನಿರೀಕ್ಷಣೆಯಲ್ಲಿದ್ದ ಎಂ. ಪ್ರಿಯಾಂಗ್ ಅವರನ್ನು ನೈರುತ್ಯ ಸಾರಿಗೆ ನಿಗಮದ ವ್ಯವಸ್ಥಾಪಕ ನಿರ್ದೇಶಕರಾಗಿ ಹಾಗೂ ಎಸ್. ಭರತ್ ಅವರಿಗೆ ಗದಗ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹುದ್ದೆ ನೀಡಲಾಗಿದೆ.

ಚುನಾವಣೆ ಕಾರಣಕ್ಕೆ ನೀರಿನ ಸಮಸ್ಯೆಗೆ ಹೆಚ್ಚಿನ ಪ್ರಚಾರ: ಡಿಕೆಶಿ ಟೀಕೆ

‘ಖಾಸಗಿ ಟ್ಯಾಂಕರ್ ದಂಧೆಗೆ ಲಗಾಮು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಚುನಾವಣೆ ನಡೆಯುವ ಕಾರಣಕ್ಕಾಗಿ ನೀರಿನ ಸಮಸ್ಯೆ ಬಗ್ಗೆ ಹೆಚ್ಚಿನ ಪ್ರಚಾರ ಹಾಗೂ ರಾಜಕೀಯ ಮಾಡಲಾಗುತ್ತಿದೆ. ಸರ್ಕಾರ ಟ್ಯಾಂಕರ್ ನೀರಿಗೆ ದರ ನಿಗದಿ ಮಾಡಿ, ಟ್ಯಾಂಕರ್ ದಂಧೆಗೆ ಕಡಿವಾಣ ಹಾಕಿದೆ’ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ ‘ನೀರು ಉಳಿಸಿ ಬೆಂಗಳೂರು ಬೆಳಸಿ’ ಅಭಿಯಾನಕ್ಕೆ ಚಾಲನೆ ಹಾಗೂ ಅಂತರ್ಜಲ, ಜಲಸಂರಕ್ಷಕ, ಜಲಮಿತ್ರ, ಜಲಸ್ನೇಹಿ ವೆಬ್ ಆ್ಯಪ್‌ಗಳನ್ನು ಗುರುವಾರ ಬಿಡುಗಡೆ ಮಾಡಿ ಅವರು ಮಾತನಾಡಿದರು.

‘ನಾವು ಬೆಂಗಳೂರಿನ ಕುಡಿಯುವ ನೀರಿಗಾಗಿ ‘ನಮ್ಮ ನೀರು ನಮ್ಮ ಹಕ್ಕು’ ಹೋರಾಟ ಮಾಡಿಕೊಂಡು ಬಂದಿದ್ದೇವೆ. ನೀರನ್ನು ಉಳಿಸಿ, ಮುಂದಿನ ಪೀಳಿಗೆಯ ಕಣ್ಣೀರು ತಪ್ಪಿಸಲು ನಾವು ಶ್ರಮಿಸುತ್ತಿದ್ದೇವೆ. ಜಲ ರಕ್ಷಣೆಗಾಗಿ ಜನರಲ್ಲಿ ಅರಿವು ಮೂಡಿಸಬೇಕು’ ಎಂದರು.

‘ಚುನಾವಣೆ ಸಂದರ್ಭದಲ್ಲಿ ರಾಜಕೀಯ ಮಾಡಲಾಗುತ್ತಿದೆ. ಅದಕ್ಕೆ ತಲೆಕೆಡಿಸಿಕೊಳ್ಳದೇ ಸಮಸ್ಯೆ ನಿವಾರಣೆಗೆ ಪ್ರಾಮಾಣಿಕ ಪ್ರಯತ್ನ ಮಾಡಬೇಕು. ಚುನಾವಣೆ ನೀತಿ ಸಂಹಿತೆ ಏನೇ ಬರಲಿ, ಕುಡಿಯುವ ನೀರಿಗೆ ತೊಂದರೆ ಆಗದಂತೆ ನೋಡಿಕೊಳ್ಳಿ. ಎಲ್ಲೆಲ್ಲಿ ನೀರಿನ ಅಭಾವವಿದೆ ಅಲ್ಲಿ ನೀರನ್ನು ಪೂರೈಸಲು ಅಗತ್ಯ ಕ್ರಮ ಕೈಗೊಳ್ಳಿ’ ಎಂದು ಜಲಮಂಡಳಿ ಅಧಿಕಾರಿಗಳಿಗೆ ಸೂಚಿಸಿದರು.

‘ಬರ ಪರಿಸ್ಥಿತಿಯಲ್ಲಿ ನಾವೆಲ್ಲರೂ ನೀರನ್ನು ಬಹಳ ಜವಾಬ್ದಾರಿಯಿಂದ ಸಮರ್ಪಕವಾಗಿ ಬಳಸಬೇಕು. ಈ ವಿಚಾರವಾಗಿ ಸಾರ್ವಜನಿಕರಲ್ಲಿ ಅರಿವು ಮೂಡಿಸುವುದು ಅಗತ್ಯವಿದೆ’ ಎಂದು ಹೇಳಿದರು.

ಜಲಮಂಡಳಿ ಅಧ್ಯಕ್ಷ ಡಾ.ವಿ. ರಾಮ್ ಪ್ರಸಾತ್ ಮನೋಹರ್ ಅವರು ಆ್ಯಪ್‌ಗಳ ಬಗ್ಗೆ ಮಾಹಿತಿ ನೀಡಿ, ಮಾರ್ಚ್ 15ರಿಂದ ಆ್ಯಪ್‌ಗಳು ಕಾರ್ಯ ಆರಂಭಿಸಲಿವೆ ಎಂದರು.

ಶಾಸಕರಾದ ಅಶೋಕ್ ಮನಗೂಳಿ, ಬಸವರಾಜ್ ಶಿವಗಂಗಾ, ನಗರಾಭಿವೃದ್ಧಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಕೇಶ್ ಸಿಂಗ್, ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಮಹೇಶ್ವರರಾವ್ ಉಪಸ್ಥಿತರಿದ್ದರು.

ಅರಿವಿಗೆ ಇ-ರಿಕ್ಷಾ: ಸಮೃದ್ಧ ಬೆಂಗಳೂರಿಗೆ ನೀರು ಉಳಿಸುವ ಅಗತ್ಯ ಮತ್ತು ಪ್ರಾಮುಖ್ಯ ಸಾರುವ ಸಂದೇಶ, ನೀರು ಉಳಿಸುವ ಎಂಟು ದಾರಿಗಳು ಸೇರಿದಂತೆ ನೀರಿನ ಸಂದೇಶ ಹೊತ್ತ ಇ-ರಿಕ್ಷಾ ವಾಹನಗಳಿಗೆ ಇದೇ ಸಂದರ್ಭದಲ್ಲಿ ಹಸಿರು ನಿಶಾನೆ ತೋರಿಸಲಾಯಿತು. ಈ ಇ-ರಿಕ್ಷಾ ವಾಹನಗಳು ಅಭಿಯಾನದ ಸಂದೇಶ ಹೊತ್ತು ನಗರದಾದ್ಯಂತ ಸಂಚರಿಸಿ, ಅರಿವು ಮೂಡಿಸುವ ಕೆಲಸ ಮಾಡಲಿವೆ.

‘ಸಮೃದ್ಧ ಬೆಂಗಳೂರಿಗೆ ನೀರು ಉಳಿಸಿ’ ಅರಿವು ಅಭಿಯಾನಕ್ಕೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಗುರುವಾರ ಚಾಲನೆ ನೀಡಿದರು

ನಾಲ್ಕು ಆ್ಯಪ್‌ಗಳ ಪ್ರಮುಖಾಂಶ

ಅಂತರ್ಜಲ: ನಗರದ ನಾಗರಿಕರು ಮನೆಯಲ್ಲಿಯೇ ಕುಳಿತು ಈ ಆ್ಯಪ್ ಮೂಲಕ ಕೊಳವೆಬಾವಿ ಕೊರೆಯಲು ಅನುಮತಿ ಪಡೆಯಲು ಅರ್ಜಿ ಸಲ್ಲಿಸಬಹುದು, ನಿರಾಕ್ಷೇಪಣಾ ಪತ್ರವನ್ನೂ ಪಡೆಯಬಹುದು.

ಜಲಸ್ನೇಹಿ: ಸಾರ್ವಜನಿಕರು ಕುಡಿಯುವುದಕ್ಕೆ ಹೊರತಾಗಿ ಇನ್ನಿತರ ಕಾರ್ಯಗಳಿಗೆ ಬಳಕೆ ಮಾಡಲು ಸಂಸ್ಕರಿಸಿದ ನೀರನ್ನು ಈ ಆ್ಯಪ್ ಮೂಲಕ ಕಾಯ್ದಿರಿಸಿ, ಸರಬರಾಜು ಪಡೆಯಬಹುದು.

ಜಲಮಿತ್ರ: ನಗರ ವ್ಯಾಪ್ತಿಯಲ್ಲಿ ನೀರಿನ ಸೋರಿಕೆ, ಒಳಚರಂಡಿ ನೀರು ಉಕ್ಕಿ ಹರಿಯುವುದು, ಜಲಮಂಡಳಿಯ ಅಗತ್ಯ ದಾಖಲಾತಿಗಳ ಸರ್ವೆ ಮತ್ತು ಇನ್ನಿತರೆ ಕಾರ್ಯಗಳಿಗೆ ಜಲಮಂಡಳಿಗೆ ಸ್ವಯಂ ಸೇವೆ ನೀಡಲು ಇಚ್ಛಿಸುವ ನಾಗರಿಕರು, ಎನ್‌ಜಿಒಗಳು, ನಿವೃತ್ತ ತಾಂತ್ರಿಕ ಸಿಬ್ಬಂದಿ ಈ ಆ್ಯಪ್ ಮೂಲಕ ನೋಂದಾಯಿಸಿಕೊಳ್ಳಬಹುದು.

ಜಲ ಸಂರಕ್ಷಕ: ಕುಡಿಯುವ ನೀರಿನ ಬಳಕೆಯನ್ನು ಉಲ್ಲಂಘಿಸಿದವರಿಗೆ ಜಲಮಂಡಳಿ ಸಿಬ್ಬಂದಿ ಈ ಆ್ಯಪ್ ಮೂಲಕ ಸ್ಥಳದಲ್ಲಿಯೇ ದಂಡ ವಿಧಿಸಲಿದ್ದಾರೆ.

ಸುನಿಲ್ ನೇಮಕ

ಪ್ರಜಾವಾಣಿ ವಾರ್ತೆ



ವಿ. ಸುನಿಲ್ ಕುಮಾರ್

ಬೆಂಗಳೂರು: ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ವಿ. ಸುನಿಲ್ ಕುಮಾರ್ ಅವರನ್ನು ಪಕ್ಷದ ಲೋಕಸಭಾ ಚುನಾವಣಾ ನಿರ್ವಹಣಾ ಸಮಿತಿ ರಾಜ್ಯ ಸಂಚಾಲಕರನ್ನಾಗಿ ನೇಮಿಸಲಾಗಿದೆ ಎಂದು ಪಕ್ಷದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಮೇಶ್ ಬಾಬು ಟ್ರಕ್ ಟರ್ಮಿನಲ್ ಅಧ್ಯಕ್ಷ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಪಿಸಿಸಿ ವಕ್ತಾರ ರಮೇಶ್ ಬಾಬು ಅವರನ್ನು ದೇವರಾಜ ಅರಸು ಟ್ರಕ್ ಟರ್ಮಿನಲ್ ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ.

ರಮೇಶ್ ಬಾಬು

ರಮೇಶ್ ಬಾಬು ಅವರಿಗೆ ಸಂಪುಟ ದರ್ಜೆಯ ಸ್ಥಾನಮಾನ ನೀಡಲಾಗಿದೆ. ಅವರ ಅಧಿಕಾರ ಅವಧಿ ಎರಡು ವರ್ಷ ಇರಲಿದೆ. ಅವರ ನೇಮಕ ಸಂಬಂಧ ತಕ್ಷಣ ಆದೇಶ ಹೊರಡಿಸುವಂತೆ ಮುಖ್ಯ ಕಾರ್ಯದರ್ಶಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚಿಸಿದ್ದಾರೆ.

ಬಿ.ಆರ್. ನಾಯ್ಡು ನೇಮಕ: ಕಾಂಗ್ರೆಸ್ ಮುಖಂಡ ಬಿ.ಆರ್. ನಾಯ್ಡು ಅವರನ್ನು ಬಾಲ ಭವನ ಸೊಸೈಟಿಯ ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ. ನಾಯ್ಡು ಅವರು ಈ ಹಿಂದೆ ಕೆಪಿಸಿಸಿ ಸಾಮಾಜಿಕ ಜಾಲ ತಾಣದಲ್ಲಿ ಕೆಲಸ ಮಾಡಿದ್ದರು.

ಮಾನನಷ್ಟ ಮೊಕದ್ದಮೆ

ಚೆನ್ನೈ: ಎಐಎಡಿಎಂಕೆ ಮುಖಂಡ ಎಡಪ್ಪಾಡಿ ಕೆ. ಪಳನಿಸ್ವಾಮಿ ಮತ್ತು ಬಿಜೆಪಿಯ ತಮಿಳುನಾಡು ಘಟಕದ ಅಧ್ಯಕ್ಷ ಕೆ. ಅಣ್ಣಾಮಲೈ ಅವರು ತಮ್ಮ ಹೆಸರನ್ನು ಅಂತರರಾಷ್ಟ್ರೀಯ ಮಾದಕವಸ್ತು ಜಾಲದೊಂದಿಗೆ ತಳುಕುಹಾಕಲು ಯತ್ನಿಸಿದ್ದಾರೆ ಎಂದು ದೂರಿ ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರು ಗುರುವಾರ ಮಾನನಷ್ಟ ಮೊಕದ್ದಮೆ ದಾಖಲಿಸಿದ್ದಾರೆ.

ಮೆರವಣಿಗೆ

ಅಯೋಧ್ಯಾ ಬಾಲರಾಮ ಮಂಡಲೋತ್ಸವ ನೇತಾರ ಪೇಜಾವರ ಮಠದ ವಿಶ್ವಪ್ರಸನ್ನತೀರ್ಥರ ಅಭಿನಂದನಾ ಸಮಿತಿ ನಗರದಲ್ಲಿ ಗುರುವಾರ ಹಮ್ಮಿಕೊಂಡ ಭವ್ಯ ಸ್ವಾಗತ ಮತ್ತು ಅಭಿನಂದನಾ ಸಮಾರಂಭದಲ್ಲಿ ವಿಶ್ವಪ್ರಸನ್ನತೀರ್ಥ ಸ್ವಾಮೀಜಿ ಅವರನ್ನು ಮೆರವಣಿಗೆ ಮೂಲಕ ಪೂರ್ಣಪ್ರಜ್ಞ ವಿದ್ಯಾಪೀಠಕ್ಕೆ ಕರೆತರಲಾಯಿತು –ಪ್ರಜಾವಾಣಿ ಚಿತ್ರ

ವಿದ್ಯುತ್ ವ್ಯತ್ಯಯ ಇಂದಿನಿಂದ

ಬೆಂಗಳೂರು: ಯಾರಂಡಹಳ್ಳಿಯ ವಿದ್ಯುತ್ ನಿರ್ವಹಣಾ ಕೇಂದ್ರದಲ್ಲಿನ ಶಕ್ತಿ ಪರಿವರ್ತಕ ಬದಲಾಯಿಸುವ ಕಾಮಗಾರಿ ಕೈಗೊಳ್ಳುವುದರಿಂದ ಮಾರ್ಚ್ 15ರ ರಾತ್ರಿ 8 ಗಂಟೆಯಿಂದ ಮಾರ್ಚ್ 17ರ ಸಂಜೆ 6 ಗಂಟೆಯವರೆಗೂ ವಿವಿಧ ಸ್ಥಳಗಳಲ್ಲಿ ವಿದ್ಯುತ್ ವ್ಯತ್ಯಯ ಆಗಲಿದೆ ಎಂದು ಬೆಸ್ಕಾಂ ತಿಳಿಸಿದೆ.

ಬೊಮ್ಮಸಂದ್ರ ಕೈಗಾರಿಕಾ ಪ್ರದೇಶದ ಫೇಸ್–1 ಮತ್ತು ಫೇಸ್–2, ಕೆಎಸ್‌ಎಸ್ ಐಡಿಸಿ ಶೆಡ್, ಬೊಮ್ಮಸಂದ್ರ ಗ್ರಾಮ, ಕಾಚನಾಯಕನಹಳ್ಳಿ ಗ್ರಾಮ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯ ಆಗಲಿದೆ ಎಂದು ಬೆಸ್ಕಾಂ ಪ್ರಕಟಣೆಯಲ್ಲಿ ಮಾಹಿತಿ ನೀಡಲಾಗಿದೆ.

ವಿಧಾನಸಭೆಯೂ ಹಣವಂತರ ಪಾಲಾಗುವ ಸಾಧ್ಯತೆ: ಪಾಟೀಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬದಲಾದ ರಾಜಕೀಯ ವ್ಯವಸ್ಥೆಯಲ್ಲಿ ಶ್ರೀಮಂತರು ಮಾತ್ರ ಚುನಾವಣೆಯಲ್ಲಿ ಸ್ಪರ್ಧಿಸುವಂತಾಗಿದೆ. ಈಗಾಗಲೇ ರಾಜ್ಯಸಭೆಯು ಹಣವಂತರಿಂದ ಭರ್ತಿಯಾಗಿದ್ದು, ವಿಧಾನಸಭೆಯೂ ಇದೇ ರೀತಿ ಆಗುವ ಸಾಧ್ಯತೆಯಿದೆ’ ಎಂದು ಮುಖ್ಯಮಂತ್ರಿಗಳ ಸಲಹೆಗಾರ ಬಿ.ಆರ್. ಪಾಟೀಲ ಬೇಸರ ವ್ಯಕ್ತಪಡಿಸಿದರು.

ಕನ್ನಡ ಜನಶಕ್ತಿ ಕೇಂದ್ರ ನಗರದಲ್ಲಿ ಗುರುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ‘ಶಾಂತವೇರಿ ಗೋಪಾಲಗೌಡ ಸಂಸ್ಕೃತಿ ಪ್ರಶಸ್ತಿ’ ಸ್ವೀಕರಿಸಿ ಮಾತನಾಡಿದರು. ಈ ಪ್ರಶಸ್ತಿಯು ₹ 25 ಸಾವಿರ ನಗದು ಒಳಗೊಂಡಿದೆ. ಈ ನಗದನ್ನು ಕನ್ನಡ ಜನಶಕ್ತಿ ಕೇಂದ್ರಕ್ಕೆ ಮರಳಿಸಿದ ಅವರು, ‘ಕನ್ನಡ ಪರ ಕೆಲಸ ಮಾಡುವವರಿಗೆ ನೀಡಿ, ಪ್ರೋತ್ಸಾಹಿಸಿ’ ಎಂದು ಹಾರೈಸಿದರು.

‘ಇತ್ತೀಚಿನ ದಿನಗಳಲ್ಲಿ ಮೌಲ್ಯಾಧಾರಿತ ರಾಜಕಾರಣದ ಬಗ್ಗೆ ಮಾತನಾಡುವುದೇ ಮುಜುಗರದ ಸಂಗತಿಯಾಗಿದೆ. ಇನ್ನು ಮುಂದೆ ಚುನಾವಣೆಗಳಲ್ಲಿ ಹಣವುಳ್ಳವರು ಮಾತ್ರ ರಾಜಕೀಯ ಪಕ್ಷಗಳ ಪ್ರತಿನಿಧಿಗಳಾಗುತ್ತಾರೆ. ಇದರಿಂದ ಬಡವರು, ರೈತರು, ಕೂಲಿಕಾರರ ಬಗ್ಗೆ ಮಾತನಾಡುವವರು ಕಡಿಮೆ ಆಗುತ್ತಾರೆ. ಅದನ್ನು ಈಗ ವಿಧಾನಸಭೆಯಲ್ಲಿ ನೋಡಬಹುದಾಗಿದೆ. ವಿಧಾನಸಭೆ ಅಧಿವೇಶನದ ಅವಧಿಯೂ ಕುಸಿತ ಆಗುತ್ತಿದೆ. ರಾಜಕಾರಣಿಗಳ ಬದಲಾಗಿ ಅಧಿಕಾರಿಗಳು ಆಳ್ವಿಕೆ ಮಾಡುತ್ತಿದ್ದಾರೆ. ಪ್ರಜಾಪ್ರಭುತ್ವಕ್ಕೆ ಬಿಕ್ಕಟ್ಟು ಎದುರಾಗಿದೆ’ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಬಿ.ಆರ್. ಪಾಟೀಲ ಅವರಿಗೆ ‘ಶಾಂತವೇರಿ ಗೋಪಾಲಗೌಡ ಸಂಸ್ಕೃತಿ ಪ್ರಶಸ್ತಿ’ಯನ್ನು ನ್ಯಾ.ಎನ್. ಸಂತೋಷ್ ಹೆಗ್ಡೆ ಪ್ರದಾನ ಮಾಡಿದರು. ಕನ್ನಡ ಜನಶಕ್ತಿ ಕೇಂದ್ರದ ಅಧ್ಯಕ್ಷ ಸಿ.ಕೆ. ರಾಮೇಗೌಡ, ಕೆ. ದಿವಾಕರ್, ಹಂಪಿ ಕನ್ನಡ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಹಿ.ಚಿ. ಬೋರಲಿಂಗಯ್ಯ, ಕನ್ನಡ ಜನಶಕ್ತಿ ಕೇಂದ್ರದ ಗೌರವ ಸಲಹೆಗಾರ ಪಿ. ಮಲ್ಲಿಕಾರ್ಜುನಪ್ಪ, ನಟರಾಜ್ ಹುಳಿಯಾರ್, ಶಾಂತವೇರಿ ಗೋಪಾಲಗೌಡ ಪ್ರತಿಷ್ಠಾನದ ಕಾರ್ಯದರ್ಶಿ ರಾಮಮನೋಹರ್ ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದ ಲೋಕಾಯುಕ್ತ ನಿವೃತ್ತ ನ್ಯಾಯಮೂರ್ತಿ ಎನ್. ಸಂತೋಷ್ ಹೆಗ್ಡೆ, ‘ಅಧಿಕಾರದಲ್ಲಿರುವವರ ಸ್ವಾರ್ಥ ಮತ್ತು ದುರಾಸೆಯು ಭ್ರಷ್ಟಾಚಾರವನ್ನು ಪೋಷಿಸುತ್ತಿದೆ. ಜೀಪ್ ಹಗರಣದಲ್ಲಿ ₹52 ಲಕ್ಷ, ಬೊಫೋರ್ಸ್ ಹಗರಣದಲ್ಲಿ ₹64 ಕೋಟಿ, ಕಾಮನ್‌ವೆಲ್ತ್ ಹಗರಣದಲ್ಲಿ ₹70 ಸಾವಿರ ಕೋಟಿ, 2ಜಿ ಹಗರಣದಲ್ಲಿ ₹1.76 ಸಾವಿರ ಕೋಟಿ, ಕಲ್ಲಿದ್ದಲು ಹಗರಣದಲ್ಲಿ ₹1.86 ಸಾವಿರ ಕೋಟಿ ಲೂಟಿ ಹೊಡೆಯಲಾಗಿದೆ. ಆಡಳಿತದಲ್ಲಿರುವವರ ಸ್ವಾರ್ಥ-ದುರಾಸೆ ಇವುಗಳಿಗೆಲ್ಲಾ ಕಾರಣ. ಜೀವನದಲ್ಲಿ ತೃಪ್ತಿಯನ್ನು ಹೊಂದುವ ಜತೆಗೆ ಮಾನವೀಯ ಮೌಲ್ಯವನ್ನು ಅಳವಡಿಸಿಕೊಳ್ಳಬೇಕು’ ಎಂದು ತಿಳಿಸಿದರು.

ವಿಮರ್ಶಕ ನಟರಾಜ್ ಹುಳಿಯಾರ್, ‘ಶಾಂತವೇರಿ ಗೋಪಾಲಗೌಡರಿಗೆ ವೈಚಾರಿಕ ಸ್ಪಷ್ಟತೆಯಿತ್ತು. ಅನ್ಯಾಯ ಕಂಡರೆ ಅವರಿಗೆ ರಕ್ತದ ಒತ್ತಡ ಹೆಚ್ಚಾಗುತ್ತಿತ್ತು. ಒಬ್ಬ ವ್ಯಕ್ತಿಯಾಗಿ ಏನನ್ನು ಬೇಕಾದರೂ ಸಾಧಿಸಬಹುದು ಎನ್ನುವುದನ್ನು ಅವರು ತೋರಿಸಿಕೊಟ್ಟಿದ್ದಾರೆ’ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ವಕೀಲ ಕೆ. ದಿವಾಕರ್ ಅವರು ಮಾತನಾಡಿ, ‘ವಿಚಾರ ಮತ್ತು ಅಧಿಕಾರದ ನಡುವೆ ಸಂಘರ್ಷವಾದಾಗ ಶಾಂತವೇರಿ ಗೋಪಾಲಗೌಡ ಅವರು ವಿಚಾರಕ್ಕೆ ಆದ್ಯತೆ ನೀಡುವ ಕೆಲಸ ಮಾಡುತ್ತಿದ್ದರು. ಈಗ ಅಂತಹವರು ಕಾಣಸಿಗುವುದಿಲ್ಲ. ಬಿ.ಆರ್. ಪಾಟೀಲ ಅವರಿಗೆ ರಾಜಕೀಯದಲ್ಲಿ ಅವರ ಸಾಮರ್ಥ್ಯಕ್ಕೆ ತಕ್ಕ ಅವಕಾಶ ಸಿಕ್ಕಿಲ್ಲ’ ಎಂದು ಹೇಳಿದರು.

ಕರ್ತವ್ಯಲೋಪ ಆರೋಪ ಡಾ. ಸವಿತಾ ವರ್ಗಾವಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಗನ ಒಡೆತನದ ನಕಲಿ ಸಂಸ್ಥೆಗೆ ಕಾರ್ಯಾದೇಶ ನೀಡಿ ಅಕ್ರಮ ಎಸಗಿರುವ ಪೂರ್ವ ವಲಯದ ಆರೋಗ್ಯಾಧಿಕಾರಿ ಡಾ. ಸವಿತಾ ಅವರನ್ನು ಕರ್ತವ್ಯಲೋಪದ ಮೇರೆಗೆ ಕೇಂದ್ರ ಕಚೇರಿಗೆ ವರ್ಗಾವಣೆ ಮಾಡಲಾಗಿದೆ.

ಡಾ. ಸವಿತಾ ಅವರು ಬೊಮ್ಮನಹಳ್ಳಿ ಹಾಗೂ ರಾಜರಾಜೇಶ್ವರಿ ನಗರ ವಲಯದಲ್ಲಿ ಆರೋಗ್ಯಾಧಿಕಾರಿ ಆಗಿದ್ದಾಗ ಕಾನೂನುಬಾಹಿರವಾಗಿ ತಮ್ಮ ಮಗ ಸಿ. ಸಿದ್ದರಾಜು ಚಿರಾಗ್ ಒಡೆತನದ ಎವಿಎಸ್ ಎಂಟರ್‌ಪ್ರೈಸಸ್ ಎಂಬ ನಕಲಿ ಸಂಸ್ಥೆಗೆ ಕಾರ್ಯಾದೇಶ ನೀಡಿ ಅಕ್ರಮ ಎಸಗಿದ್ದರು. ಕಾರ್ಯಾದೇಶ ನೀಡಿರುವ ಕಡತಗಳಲ್ಲಿ ಹಲವು ನ್ಯೂನತೆಗಳಿರುವ ಬಗ್ಗೆ ಟಿವಿಸಿಸಿ ವಿಭಾಗ ವರದಿ ನೀಡಿದ್ದು, ಇದರನ್ವಯ ಸರ್ಕಾರಿ ನೌಕರರ (ನಡತೆ) ನಿಯಮಾವಳಿ ನಿಮಯ–3 ಉಲ್ಲಂಘಿಸಿ ಗಂಭೀರ ಕರ್ತವ್ಯಲೋಪ ಎಸಗಿದ್ದಾರೆ. ಈ ಹಿನ್ನೆಲೆಯಲ್ಲಿ ಅವರ ವಿರುದ್ಧ ನಾಗರಿಕ ಸೇವಾ ನಿಯಮಗಳಂತೆ ಇಲಾಖೆ ತನಿಖೆ ನಡೆಸಿ ಕರಡು ಆರೋಪ ಪಟ್ಟಿಯನ್ನು ನಗರಾಭಿವೃದ್ಧಿ ಇಲಾಖೆಗೆ ಸಲ್ಲಿಸಲಾಗಿದೆ. ಆದ್ದರಿಂದ ಡಾ. ಸವಿತಾ ಅವರನ್ನು ಪೂರ್ವವಲಯದಿಂದ ಬಿಡುಗಡೆ ಮಾಡಿ, ಕೇಂದ್ರ ಕಚೇರಿಯಲ್ಲಿರುವ ಆರೋಗ್ಯ ವಿಭಾಗದ ವಿಶೇಷ ಆಯುಕ್ತರ ಕಚೇರಿಗೆ ನೇಮಿಸಲಾಗಿದೆ ಎಂದು ಬಿಬಿಎಂಪಿ ಆಡಳಿತದ ಉಪ ಆಯುಕ್ತರು ಆದೇಶ ಹೊರಡಿಸಿದ್ದಾರೆ.

ಡಾ. ಭಾಗ್ಯಲಕ್ಷ್ಮಿ ನೇಮಕ: ಬೊಮ್ಮನಹಳ್ಳಿ ವಲಯದಲ್ಲಿ ಉಪ ಆರೋಗ್ಯಾಧಿಕಾರಿ ಡಾ. ಎನ್. ಭಾಗ್ಯಲಕ್ಷ್ಮಿ ಅವರಿಗೆ ಪೂರ್ವ ವಲಯದ ಆರೋಗ್ಯಾಧಿಕಾರಿ ಹುದ್ದೆಯನ್ನು ಹೆಚ್ಚುವರಿಯಾಗಿ ವಹಿಸಿ ಬಿಬಿಎಂಪಿ ಆಡಳಿತದ ಉಪ ಆಯುಕ್ತರು ಮುಖ್ಯ ಆಯುಕ್ತರ ಸೂಚನೆಯಂತೆ ಮಾರ್ಚ್ 14ರಂದು ನೇಮಕ ಆದೇಶ ಹೊರಡಿಸಿದ್ದಾರೆ.

ನಗರದಲ್ಲಿ ಇಂದು

ಬರಗೂರು ರಾಮಚಂದ್ರಪ್ಪ

ಕರ್ನಾಟಕ ಇತಿಹಾಸ ಪರಿಷತ್ತಿನ 34ನೇ ವಾರ್ಷಿಕ ಮಹಾ ಅಧಿವೇಶನ: ಉದ್ಘಾಟನೆ: ಬರಗೂರು ರಾಮಚಂದ್ರಪ್ಪ, ಅತಿಥಿಗಳು: ಡಾ.ಎಂ.ಸಿ. ಸುಧಾಕರ್, ರಿಜ್ವಾನ್ ಅರ್ಷದ್, ಪುಟ್ಟಣ್ಣ, ಎನ್. ಶ್ರೀನಿವಾಸ್, ಜಿ. ಜಗದೀಶ್, ಟಿ.ಆರ್. ಶೋಭಾ, ಲಿಂಗರಾಜ ಗಾಂಧಿ, ಎಸ್.ಎ. ಬಾರಿ, ಆರ್. ರಾಜಣ್ಣ, ಗವಿಸಿದ್ಧಯ್ಯ, ಟಿ.ಎಂ. ಮಂಜುನಾಥ್, ಐ.ಕೆ. ಪತ್ತಾರ, ಸಮ್ಮೇಳನದ ಸರ್ವಾಧ್ಯಕ್ಷ: ಅಶ್ವತ್ಥನಾರಾಯಣ, ಅಧ್ಯಕ್ಷತೆ: ಪಿಟಿ. ಶ್ರೀನಿವಾಸ ನಾಯಕ, ಆಯೋಜನೆ: ಭಾರತೀಯ ಇತಿಹಾಸ ಅನುಸಂಧಾನ ಪರಿಷತ್ತು, ಕರ್ನಾಟಕ ರಾಜ್ಯ ಪತ್ರಾಗಾರ ಪರಿಷತ್ತು, ಸ್ಥಳ: ಸರ್ಕಾರಿ ಕಲಾ ಕಾಲೇಜು, ಡಾ.ಬಿ.ಆರ್. ಅಂಬೇಡ್ಕರ್ ವೀದಿ, ಬೆಳಿಗ್ಗೆ 10

‘ಭವಿಷ್ಯವನ್ನು ಸಶಕ್ತಗೊಳಿಸುವುದು: ಯುವಕರು ರಾಜಕೀಯದಲ್ಲಿ ಪ್ರಮುಖ ಪಾತ್ರ ವಹಿಸುವಂತೆ ಪ್ರೋತ್ಸಾಹಿಸುವ’ ಕುರಿತು ಸಂವಾದ: ಪರಕಾಲ ಪ್ರಭಾಕರ್, ಕಣ್ಣನ್ ಗೋಪಿನಾಥನ್, ಆಕಾರ್ ಪಟೇಲ್, ಇಳಾ ಅನನ್ಯ, ಆಯೋಜನೆ ಮತ್ತು ಸ್ಥಳ: ಮೌಂಟ್ ಕಾರ್ಮೆಲ್ ಕಾಲೇಜಿನ ಡೈಮಂಡ್ ಜುಬಿಲಿ ಸಭಾಂಗಣ, ಬೆಳಿಗ್ಗೆ 10

13ನೇ ರಾಷ್ಟ್ರೀಯ ಎಂಎಸ್‌ಎಂಇ ಸಮಾವೇಶ: ಅತಿಥಿಗಳು: ಶಶಿಧರ ಶೆಟ್ಟಿ, ಜೆ.ಎಸ್. ಜುನೇಜ, ನಿಖಿಲ್ ಸಾಹ್ನಿ, ರೇಖಾ ಸೇಥಿ, ವಿಜಯ ಮಹಾಂತೇಶ್ ದಾನಮ್ಮನವರ್, ನಾಗರಾಜು ಎಸ್., ಆಯೋಜನೆ: ಎಐಎಂಎ, ಕಾಸಿಯಾ, ಸ್ಥಳ: ಕಾಸಿಯಾ ಸಭಾಂಗಣ, ಮಾಗಡಿ ರಸ್ತೆ, ವಿಜಯನಗರ, ಬೆಳಿಗ್ಗೆ 10.30

ಸ್ವಾವಲಂಬನ್ ಮೇಳ–2024, ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ: ಅತಿಥಿಗಳು: ಲಕ್ಷ್ಮಿ ಹೆಬ್ಬಾಳ್ಕರ್, ಎಸ್. ರಾಮನ್, ಏಕ್‌ರೂಪ್ ಕೌರ್, ಸತ್ಯಕಿ ರಸ್ತೋಗಿ, ವಿಜಯ ಮಹಾಂತೇಶ್ ದಾನಮ್ಮನವರ್, ಆಯೋಜನೆ: ಭಾರತೀಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ಬ್ಯಾಂಕ್, ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆ, ಕರ್ನಾಟಕ ರಾಜ್ಯ ಮಹಿಳಾ ಉದ್ಯಮಿಗಳ ಸಂಸ್ಥೆ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಬೆಳಿಗ್ಗೆ 11ರಿಂದ

ಶಿವಕುಮಾರ ಸ್ವಾಮೀಜಿ ಅವರ ಕಂಚಿನ ಪುತ್ಥಳಿ ಲೋಕಾರ್ಪಣೆ: ಸಾನ್ನಿಧ್ಯ: ಸಿದ್ಧಲಿಂಗ ಸ್ವಾಮೀಜಿ, ತೋಂಟದ ಸಿದ್ಧರಾಮ ಸ್ವಾಮೀಜಿ, ಪುತ್ಥಳಿ ಲೋಕಾರ್ಪಣೆ: ಬಿ.ಎಸ್. ಯಡಿಯೂರಪ್ಪ, ಎಚ್.ಡಿ. ಕುಮಾರಸ್ವಾಮಿ, ಅಧ್ಯಕ್ಷತೆ: ವಿ. ಸೋಮಣ್ಣ, ಉಪಸ್ಥಿತಿ: ಎ. ನಾರಾಯಣಸ್ವಾಮಿ, ಅತಿಥಿಗಳು: ದಿನೇಶ್ ಗುಂಡೂರಾವ್, ಎಸ್. ಸುರೇಶ್ ಕುಮಾರ್, ಕೆ. ಗೋಪಾಲಯ್ಯ, ಎಚ್.ಎಂ. ರೇವಣ್ಣ, ಟಿ. ವೆಂಕಟೇಶ್, ಕೆ. ವೆಂಕಟೇಶ್, ಪಾಲನೇತ್ರ, ಎಸ್. ಕ್ರಾಂತಿರಾಜು, ಆಯೋಜನೆ: ಶಿವಕುಮಾರಸ್ವಾಮಿ ಚಾರಿಟಬಲ್ ಟ್ರಸ್ಟ್, ಸ್ಥಳ: ರಾಜಾಜಿನಗರ ಪ್ರವೇಶದ್ವಾರ, ಡಾ.ರಾಜ್‌ಕುಮಾರ್ ರಸ್ತೆ, ರಾಜಾಜಿನಗರ, ಸಂಜೆ 4.30

‘ನಾರಿಶಕ್ತಿ ಸನ್ಮಾನ’ ಸಮಾರಂಭ: ಉದ್ಘಾಟನೆ: ಎನ್.ವಿ. ಅಂಜಾರಿಯಾ, ಸನ್ಮಾನಿಸುವವರು: ಕೆ.ಎಸ್. ಮುದಗಲ್, ಸನ್ಮಾನಿತರು: ಪ್ರಮೀಳಾ ನೇಸರ್ಗಿ, ‘ವಕೀಲರ ವಾಹಿನಿ ಮಹಿಳಾ ವಿಶೇಷ ಸಂಚಿಕೆ ಬಿಡುಗಡೆ: ಶಶಿಕಿರಣ್ ಶೆಟ್ಟಿ, ಅತಿಥಿಗಳು: ವಿಶಾಲ ರಘು, ವಿವೇಕ್ ಸುಬ್ಬಾರೆಡ್ಡಿ, ಡಿ.ಎಲ್. ಜಗದೀಶ್, ಎಸ್. ಕಲ್ಯಾಣ್ ಬಸವರಾಜ್, ಅಧ್ಯಕ್ಷತೆ: ಪ್ರಭಾಮೂರ್ತಿ, ಆಯೋಜನೆ: ಭಾರತೀಯ ಮಹಿಳಾ ವಕೀಲರ ಒಕ್ಕೂಟ, ವಕೀಲರ ವಾಹಿನಿ, ಸ್ಥಳ: ಪ್ಯಾಟರ್ನ್ ಇನ್ ಚೆಫ್ ಹಾಲ್ ಕರ್ನಾಟಕ ಹೈಕೋರ್ಟ್, ಸಂಜೆ 4.45

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ: ಉದ್ಘಾಟನೆ: ಪ್ರೇಮಾ ಸೋಮಸುಂದರ್, ಸನ್ಮಾನ: ವೈ.ಸಿ. ಕಮಲ, ಅಧ್ಯಕ್ಷತೆ: ಪ್ರಮೀಳಾ ಗರಡಿ, ಅತಿಥಿಗಳು: ಕೆ.ವಿ. ನಾಗರಾಜಮೂರ್ತಿ, ಅಂಬಿಕಾ ಚಂದ್ರಶೇಖರ್, ಉಪಸ್ಥಿತಿ: ಪುಷ್ಪಾ ಬಣಕಾರ್, ಆಯೋಜನೆ: ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ಕದಳಿ ಮಹಿಳಾ ವೇದಿಕೆ, ಸ್ಥಳ: ಜೆ.ಎಸ್. ಎಸ್. ಸಭಾಂಗಣ, ಜಯನಗರ, ಸಂಜೆ 5.30

ಕರ್ನಾಟಕ ಸಂಭ್ರಮ, ಸುಗಮ ಸಂಗೀತ, ಜನಪದ ಗೀತೆ, ನಾಟಕ ಹಾಗೂ ರಂಗಗೌರವ ಕಾರ್ಯಕ್ರಮ: ಉದ್ಘಾಟನೆ: ವೂಡೇ ಪಿ. ಕೃಷ್ಣ, ರಂಗಗೌರವ: ಶರತ್ ಲೋಹಿತಾಶ್ವ, ರಂಗಗೌರವ ನುಡಿ: ಕಿಕ್ಕೇರಿ ಕೃಷ್ಣಮೂರ್ತಿ, ಪ್ರಶಸ್ತಿ ಪ್ರದಾನ: ಸಂತೋಷ್ ಹಾನಗಲ್, ಅಧ್ಯಕ್ಷತೆ: ವ.ಚ. ಚನ್ನೇಗೌಡ, ಅತಿಥಿಗಳು: ಅಭಿನಯ, ಬಿ.ಎಚ್. ಸುರೇಶ್, ಕುವೆಂಪು ಪ್ರಕಾಶ್, ‘ಮುದುಕನ ಮದುವೆ’ ನಾಟಕ ಪ್ರದರ್ಶನ: ನಿರ್ದೇಶನ: ಮಂಡ್ಯ ಜಯರಾಮ್, ಆಯೋಜನೆ: ಕುವೆಂಪು ಕಲಾನಿಕೇತನ, ಸ್ನೇಹ ಶ್ರೀರಕ್ಷಾ ಸಂಗೀತ ನೃತ್ಯ ಸಾಂಸ್ಕೃತಿಕ ಅಕಾಡೆಮಿ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 5.30

‘ಸಾಂಸ್ಕೃತಿಕ ಉತ್ಸವ, ಸಮಾಜ ಸೇವಾರತ್ನ ಪ್ರಶಸ್ತಿ’ ಪ್ರದಾನ: ಸಾನ್ನಿಧ್ಯ: ಸಂಜಯಕುಮಾರ್ ಸ್ವಾಮೀಜಿ, ಉದ್ಘಾಟನೆ: ಸತೀಶ್ ಜಾರಕಿಹೊಳಿ, ಅಧ್ಯಕ್ಷತೆ: ಎಂ. ಕೃಷ್ಣಪ್ಪ, ಪ್ರಶಸ್ತಿ ಪ್ರದಾನ: ಬಿ. ನಾಗೇಂದ್ರ, ಟ್ರಸ್ಟ್‌ನ ವಾರ್ಷಿಕ ಸಂಚಿಕೆ ಬಿಡುಗಡೆ: ಜಾಣಗೆರೆ ವೆಂಕಟರಾಮಯ್ಯ, ಆಯೋಜನೆ: ದಿವ್ಯ ಚೇತನ ಚಾರಿಟಬಲ್ ಟ್ರಸ್ಟ್, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 5.30

ರಂಗೋತ್ಸವ–2024: ಉದ್ಘಾಟನೆ: ರಾಜಪ್ಪ ದಳವಾಯಿ, ಅಧ್ಯಕ್ಷತೆ: ಅಶೋಕ ಛಲವಾದಿ, ಅತಿಥಿಗಳು: ರಮೇಶ್ ಜಿ. ಸಂಗ, ಸುಷ್ಮಾ ವೀರ್, ‘ಗುಣಮುಖ’ ನಾಟಕ ಪ್ರದರ್ಶನ: ನಿರ್ದೇಶನ: ಛಾಯಾ ಭಾರ್ಗವಿ ಎಸ್.ಎಚ್., ಆಯೋಜನೆ: ಅದಮ್ಯ ರಂಗ ಸಂಸ್ಕೃತಿ ಟ್ರಸ್ಟ್, ಸ್ಥಳ: ಸಂಸ ಬಯಲು ರಂಗಮಂದಿರ, ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 6

‘ಮೀಡಿಯಾ’ ನಾಟಕ ಪ್ರದರ್ಶನ: ರಚನೆ: ಯೂರಿಪಿಡೀಸ್, ಅನುವಾದ: ಕೆ. ಮರುಳಸಿದ್ದಪ್ಪ, ನಿರ್ದೇಶನ: ಶಿವ ಕಾಗವಾಡೆ, ಸಹನಿರ್ದೇಶನ: ನಿಶಾ ಯಶ್‌ರಾಮ್, ಸಂಗೀತ ನಿರ್ದೇಶನ: ಇಂಚರ ಪ್ರವೀಣ್ ಕುಮಾರ್, ಆಯೋಜನೆ: ಟೆಂಟ್ ಸಿನಿಮಾ, ಸ್ಥಳ: ಕಲಾಗ್ರಾಮ ಮಲ್ಲತ್ತಹಳ್ಳಿ, ಸಂಜೆ 6.30

‘ರೋಟರಿ ಇಂಟರ್‌ನ್ಯಾಷನಲ್ ಗುಡ್‌ವಿಲ್ ಆ್ಯಂಡ್ ಅಂಡರ್‌ಸ್ಟ್ಯಾಂಡಿಂಗ್ ಅವಾರ್ಡ್–2024’ ಪ್ರಶಸ್ತಿ ಪ್ರದಾನ: ಪ್ರಶಸ್ತಿ ಪುರಸ್ಕೃತ ಸಂಸ್ಥೆ: ದಿ ಮ್ಯಾಕ್ಸ್ ಮುಲ್ಲರ್ ಭವನ ಬೆಂಗಳೂರು, ಆಯೋಜನೆ: ರೋಟರಿ ಕ್ಲಬ್ ಆಫ್ ಬೆಂಗಳೂರು ಕಂಟೋನ್‌ಮೆಂಟ್, ಸ್ಥಳ: ರೋಟರಿ ಹೌಸ್ ಆಫ್ ಲರ್ನಿಂಗ್, 11, ಪ್ರೊಮೆನಡೆ ರಸ್ತೆ, ಸಂಜೆ 7

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ಚಿನ್ನಾಭರಣ ದರೋಡೆಗೆ ನುಗ್ಗಿದ್ದ ಆರೋಪಿಗಳು • ಪ್ರತಿರೋಧವೊಡ್ಡಿದ ಮಾಲೀಕ ಸೇರಿ ಇಬ್ಬರಿಗೆ ಗಾಯ

ಆಭರಣ ಮಳಿಗೆಯಲ್ಲಿ ಗುಂಡಿನ ದಾಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊಡಿಗೇಹಳ್ಳಿ ಬಳಿಯ ದೇವಿನಗರದಲ್ಲಿರುವ ಲಕ್ಷ್ಮಿ ಬ್ಯಾಂಕರ್ಸ್ ಆ್ಯಂಡ್ ಜ್ಯುವೆಲರ್ಸ್ ಮಳಿಗೆಗೆ ನುಗ್ಗಿದ್ದ ನಾಲ್ವರು ದುಷ್ಕರ್ಮಿಗಳು, ಮೂರು ಸುತ್ತು ಗುಂಡು ಹಾರಿಸಿ ಪರಾರಿಯಾಗಿದ್ದಾರೆ. ಘಟನೆಯಲ್ಲಿ ಮಳಿಗೆಯ ಮಾಲೀಕ ಸೇರಿ ಇಬ್ಬರು ಗಾಯಗೊಂಡಿದ್ದಾರೆ.

'ಗುರುವಾರ ಬೆಳಿಗ್ಗೆ 11 ಗಂಟೆ ಸುಮಾರಿಗೆ ನಡೆದಿರುವ ಘಟನೆಯಲ್ಲಿ ಮಾಲೀಕ ಹಾಪುರಾಮ್ (38) ಹಾಗೂ ಅನಂತರಾಮ್ (21) ಗಾಯಗೊಂಡಿದ್ದಾರೆ. ಇವರಿಬ್ಬರನ್ನು ಆಸ್ಪತ್ರೆಗೆ ದಾಖಲಿಸಲಾಗಿದ್ದು, ಆರೋಗ್ಯದಲ್ಲಿ ಚೇತರಿಕೆ ಕಂಡುಬಂದಿದೆ. ಗುಂಡಿನ ದಾಳಿ ಬಗ್ಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಹೆಲ್ಮೆಟ್ ಧರಿಸಿದ್ದ ನಾಲ್ವರು ದುಷ್ಕರ್ಮಿಗಳು ಎರಡು ಪ್ರತ್ಯೇಕ



ಕೊಡಿಗೇಹಳ್ಳಿ ದೇವಿನಗರದಲ್ಲಿರುವ ಲಕ್ಷ್ಮಿ ಬ್ಯಾಂಕರ್ಸ್ ಆ್ಯಂಡ್ ಜ್ಯುವೆಲರ್ಸ್ ಮಳಿಗೆ

ಬೈಕ್‌ಗಳಲ್ಲಿ ಮಳಿಗೆ ಬಳಿ ಬಂದಿದ್ದರು. ಒಬ್ಬಾತ, ಮಳಿಗೆ ಹೊರಗೆ ನಿಂತಿದ್ದ. ಮೂವರು ದುಷ್ಕರ್ಮಿಗಳು, ಮಳಿಗೆಯೊಳಗೆ ನುಗ್ಗಿದ್ದರು. 'ಎಲ್ಲ ಚಿನ್ನಾಭರಣ ತೆಗೆದುಕೊಡು' ಎಂದು ಕೂಗಾಡಿದ್ದರು. ಅದಕ್ಕೆ ಒಪ್ಪದ ಮಾಲೀಕ, 'ಚಿನ್ನಾಭರಣ ಕೊಡುವುದಿಲ್ಲ. ವಾಪಸು ಹೋಗಿ. ಇಲ್ಲದಿದ್ದರೆ, ಪೊಲೀಸರಿಗೆ ಹೇಳುತ್ತೇನೆ' ಎಂದಿದ್ದರು.'

'ಮಾಲೀಕ ಹಾಗೂ ದುಷ್ಕರ್ಮಿಗಳ ನಡುವೆ ಕೆಲ ನಿಮಿಷ ಮಾತಿನ ಚಕಮಕಿ ನಡೆದಿತ್ತು. ಮಾಲೀಕ ಹಾಗೂ ಸಿಬ್ಬಂದಿ, ದುಷ್ಕರ್ಮಿಗಳನ್ನು ಹಿಡಿಯಲು ಮುಂದಾಗಿದ್ದರು. ಅವಾಗಲೇ ಮಳಿಗೆಯಲ್ಲಿದ್ದ ದುಷ್ಕರ್ಮಿಯೊಬ್ಬ, ಪಿಸ್ತೂಲ್‌ನಿಂದ ಮಾಲೀಕ ಹಾಪುರಾಮ್ ಹೊಟ್ಟೆಗೆ ಒಂದು ಸುತ್ತು ಗುಂಡು ಹೊಡೆದಿದ್ದ. ಇನ್ನೊಬ್ಬ ದುಷ್ಕರ್ಮಿ, ಸಿಬ್ಬಂದಿ ಅನಂತರಾಮ್ ಕಾಲಿಗೆ ಗುಂಡು ಹಾರಿಸಿದ್ದ. ಇದೇ ಸಂದರ್ಭದಲ್ಲಿ ಹೊರಗಿದ್ದ ದುಷ್ಕರ್ಮಿ ಸಹ ತನ್ನ ಬಳಿಯ ಪಿಸ್ತೂಲ್‌ನಿಂದ ಗಾಳಿಯಲ್ಲಿ ಒಂದು ಸುತ್ತು ಗುಂಡು ಹೊಡೆದಿದ್ದ' ಎಂದು ಪೊಲೀಸರು ತಿಳಿಸಿದರು.

'ಗುಂಡಿನ ಶಬ್ದ ಕೇಳಿ ಸ್ಥಳೀಯರು ಆತಂಕಗೊಂಡಿದ್ದರು. ಗುಂಡಿನ ದಾಳಿ ಬಳಿಕ ದುಷ್ಕರ್ಮಿಗಳು ಸ್ಥಳದಿಂದ ಬೈಕ್ ಸಮೇತ ಪರಾರಿಯಾಗಿದ್ದಾರೆ' ಎಂದರು.

ವೈಯಕ್ತಿಕ ದ್ವೇಷ ಶಂಕೆ: 'ದುಷ್ಕರ್ಮಿಗಳು ಆಭರಣ ದರೋಡೆಗೆ ಬಂದಿದ್ದರೆಂಬುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ. ಆದರೆ, ಇದೊಂದು ವೈಯಕ್ತಿಕ ದ್ವೇಷಕ್ಕಾಗಿ ನಡೆದ ಕೃತ್ಯವೆಂಬ ಸಂಶಯವೂ ಇದೆ. ಎರಡೂ ಆಯಾಮಗಳಲ್ಲಿ ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸರು ಹೇಳಿದರು.

ಖಾಲಿ ಕೈಯಲ್ಲಿ ಪರಾರಿ: 'ದುಷ್ಕರ್ಮಿಗಳು ಮಳಿಗೆಯಲ್ಲಿ ಯಾವುದೇ ಆಭರಣ ದೋಚಿಕೊಂಡು ಹೋಗಿಲ್ಲ. ಆಭರಣ ಮಳಿಗೆ ಮಾಲೀಕನನ್ನು ಕೊಲೆ ಮಾಡುವ ಉದ್ದೇಶದಿಂದ ದುಷ್ಕರ್ಮಿಗಳು ಮಳಿಗೆಗೆ ನುಗ್ಗಿರಬಹುದೆಂದು ಕೆಲವರು ಮಾಹಿತಿ ನೀಡಿದ್ದಾರೆ' ಎಂದು ಪೊಲೀಸರು ತಿಳಿಸಿದರು.

'ಮಾಲೀಕ ಕೆಲ ವ್ಯಕ್ತಿಗಳ ಜೊತೆ ವೈಷಮ್ಯ ಕಟ್ಟಿಕೊಂಡಿದ್ದರೆಂಬ ಮಾಹಿತಿ ಇದೆ. ಅವರೇ ಸುಪಾರಿ ನೀಡಿರುವ ಅನುಮಾನವಿದೆ. ಈ ಬಗ್ಗೆ ಮಾಲೀಕನನ್ನು ವಿಚಾರಣೆಗೆ ಒಳಪಡಿಸಲಾಗಿದೆ' ಎಂದರು.

'ಮಳಿಗೆ ಬಳಿ ಬಿದ್ದಿದ್ದ ಪಿಸ್ತೂಲ್'

'ದುಷ್ಕರ್ಮಿಗಳು, ಕೃತ್ಯಕ್ಕೆ ನಾಡ ಪಿಸ್ತೂಲ್ ಬಳಸಿದ್ದಾರೆ. ಸ್ಥಳದಿಂದ ಪರಾರಿಯಾಗುವ ಸಂದರ್ಭದಲ್ಲಿ ಒಂದು ಪಿಸ್ತೂಲ್ ಅನ್ನು ಮಳಿಗೆ ಬಳಿಯೇ ಬಿಟ್ಟು ಪರಾರಿಯಾಗಿದ್ದಾರೆ. ಆರೋಪಿಗಳು ಹೊರ ರಾಜ್ಯದವರೆಂಬ ಸುಳಿವು ಇದೆ' ಎಂದು ಪೊಲೀಸರು ಹೇಳಿದರು.


ಮಳಿಗೆ ಬಳಿ ಬಿದ್ದಿದ್ದ ನಾಡ ಪಿಸ್ತೂಲ್

ಲಂಚ: ಇನ್‌ಸ್ಪೆಕ್ಟರ್, ಪಿಎಸ್‌ಐ ಲೋಕಾಯುಕ್ತ ಬಲೆಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಂಚನೆ ಪ್ರಕರಣದಲ್ಲಿ ವಶಕ್ಕೆ ಪಡೆದಿದ್ದ ಆರೋಪಿಯನ್ನು ಬಿಡುಗಡೆ ಮಾಡಲು ₹3 ಲಕ್ಷ ಬೇಡಿಕೆ ಇರಿಸಿದ್ದ ಆರೋಪದಡಿ ಕೆ.ಆರ್.ಪುರ ಠಾಣೆಯ ಇನ್‌ಸ್ಪೆಕ್ಟರ್ ಕೆ. ವಜ್ರಮುನಿ ಹಾಗೂ ಪಿಎಸ್‌ಐ ಎನ್. ರಮ್ಯಾ ಲೋಕಾಯುಕ್ತ ಪೊಲೀಸರ ಬಲೆಗೆ ಬಿದ್ದಿದ್ದಾರೆ.

ವಂಚನೆಗೆ ಸಂಬಂಧಪಟ್ಟಂತೆ ಕೆ.ಆರ್.ಪುರ ಠಾಣೆಯಲ್ಲಿ ಇತ್ತೀಚೆಗೆ ಎಫ್‌ಐಆರ್ ದಾಖಲಾಗಿತ್ತು. ಪ್ರಕರಣದ ಆರೋಪಿ, ನಿರೀಕ್ಷಣಾ ಜಾಮೀನು ಕೋರಿ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು. ನ್ಯಾಯಾಲಯದಲ್ಲಿ ವಿಚಾರಣೆ ಬಾಕಿ ಇರುವಾಗಲೇ ಆರೋಪಿಯನ್ನು ಅಕ್ರಮವಾಗಿ ವಶಕ್ಕೆ ಪಡೆದಿದ್ದ ಪೊಲೀಸರು, ಠಾಣೆಯಲ್ಲಿ ಇರಿಸಿಕೊಂಡಿದ್ದರೆಂದು ಮೂಲಗಳು ಹೇಳಿವೆ.

ಠಾಣೆಯಿಂದ ಬಿಟ್ಟು ಕಳುಹಿಸಲು ₹3 ಲಕ್ಷ ನೀಡುವಂತೆ ಪಿಎಸ್‌ಐ ಮೂಲಕ ಇನ್‌ಸ್ಪೆಕ್ಟರ್ ಬೇಡಿಕೆ ಇರಿಸಿದ್ದರು. ಇದು ಗೊತ್ತಾಗುತ್ತಿದ್ದಂತೆ ಆರೋಪಿ ಪರ ವಕೀಲ, ಲೋಕಾಯುಕ್ತ ಪೊಲೀಸರಿಗೆ ದೂರು ನೀಡಿದ್ದರು.

'ಮಹಿಳಾ ಪಿಎಸ್‌ಐ ರಮ್ಯಾ ಹಾಗೂ ಇನ್‌ಸ್ಪೆಕ್ಟರ್ ವಜ್ರಮುನಿ ಅವರು ತಲಾ ₹50 ಸಾವಿರ ಪಡೆದುಕೊಂಡಿದ್ದರು. ಇದೇ ಸಂದರ್ಭದಲ್ಲಿ ದಾಳಿ ಮಾಡಿ, ಹಣದ ಸಮೇತ ಇಬ್ಬರನ್ನೂ ವಶಕ್ಕೆ ಪಡೆಯಲಾಗಿದೆ' ಎಂದು ಲೋಕಾಯುಕ್ತ ಪೊಲೀಸರು ತಿಳಿಸಿದ್ದಾರೆ.

PUBLIC NOTICE

It is hereby notified that, our clients have agreed to purchase the Schedule Property from its Owner **SRI.VIKAS GIRIRAJ** S/o Sri.G.Giriraj, residing at No.384, 9th Cross, Jayanagar 1st Block, Bengaluru-560011. If any persons have any manner of claim, right, title, interest or demand of any nature in or over the Schedule Property, they are hereby requested to file their objections along with the photocopies of the documents on which they are relying, with the undersigned within **14 (Fourteen) days** from the date of publication of this notice. Objection/s received thereafter will not be binding on our clients.

SCHEDULE

All that piece and parcel of the vacant residential property bearing **Municipal No.3981, PID No.56-125-3981 (BDA Site No.3981),** measuring East to West 12.19 Mtrs and North to South (18.43+18.58)/2 Mtrs, situated at **17th 'E' Cross Road, BSK 2nd Stage,** Bengaluru-560070, within the administrative jurisdiction of BBMP Ward No.166 and bounded as follows:

East by : Property bearing No.3980
West by : Property bearing No.3982
North by : Road
South by : Property bearing No.3988 & 3989

Sd/- BAYYA REDDY. M
For ISHA LAW CHAMBERS LLP
Advocates & Solicitors
No.101, 2nd Floor, Sri Manjunatha Complex, 22nd Main Road, BSK 2nd Stage, Opp : Banashankari BDA Complex, Bengaluru-560 070.

PUBLIC NOTICE

The General Public is hereby informed that Mr. Suhas Ramachandra Gowda has filed an Original Suit for Partition bearing No.969/2018 in the Court of Principal Civil Judge Bengaluru Rural, Bengaluru against 1. Sri. Doddabasavarajappa, 2. Smt. Narayamamma, 3. Sri. H.D. Manjunatha Gowda, 4. Smt. Asha, 5. Sri. G.H. Nagaraja, 6. Smt. Heavathi, 7. Sri. N. Vinay @ Sham and 8. M/s Classmate Properties Partnership Firm (Defendants) in respect of various land as mentioned below in the Schedule.

The Hon'ble Court vide its Order dated 22.11.2018 granted the interim relief and restrained the Defendants therein from alienating or creating any encumbrance over the Suit Schedule Properties till disposal of the Suit.

Thus, in light of the Interim Order dated 22.11.2018 passed by the Hon'ble Court, the general public is hereby informed that no person shall enter into sale, gift, mortgage, JDA, GPA, lease, agreement for sale or any other transaction whatsoever with respect to the Schedule Properties listed herein below:

1. All that peace and parcel of agricultural land bearing Sy.No. 53/2, measuring 2 Acres 3 Guntas situated at Maranayakanahalli Village, Jala Hobli, Bengaluru North Taluk, and bounded on the: East by: Govt Chanal, West by : Property belongs to Lakshmaiah, North by : Property belongs to Doddamuniyappa and Suryanarayan, South by: Govt Road.

Sri. Suhas Ramachandra Gowda
S/o Doddabasavaraju
R/at No. 490/4, F-Block, 19th Main, behind M.C. Donald, Sahakarnagar, Bengaluru North, Bengaluru - 560 092.
Ph: 98454 43435, 98455 63435

ವರದಿ ಸಲ್ಲಿಕೆ

ಮೊಗೇರ ಸಮುದಾಯದ ಪರಿಶಿಷ್ಟ ಜಾತಿ ಸೌಲಭ್ಯಗಳನ್ನು ಮರುಸ್ಥಾಪಿಸಲು ಮತ್ತು ಪ್ರಮಾಣಪತ್ರ ವಿತರಿಸಲು ಇದ್ದ ತೊಡಕುಗಳನ್ನು ಅಧ್ಯಯನ ಮಾಡಿದ ವರದಿಯನ್ನು ಸಮಿತಿಯ ಅಧ್ಯಕ್ಷ ಜೆ.ಸಿ. ಪ್ರಕಾಶ್ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ವಿಧಾನಸೌಧದಲ್ಲಿ ಗುರುವಾರ ಸಲ್ಲಿಸಿದರು. ಅಧ್ಯಯನ ಮಾಡಲು ಹಿರಿಯ ಐಎಎಸ್ ಅಧಿಕಾರಿ ಜೆ.ಸಿ. ಪ್ರಕಾಶ್ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲಾಗಿತ್ತು.

ಪಂಚತಾರಾ ಹೋಟೆಲ್ ಕೊಠಡಿಯಲ್ಲಿ ಮೃತದೇಹ ಪತ್ತೆ

ವಿದೇಶಿ ಮಹಿಳೆ ಅನುಮಾನಾಸ್ಪದ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರವಾಸಿ ವೀಸಾದಡಿ ನಗರಕ್ಕೆ ಬಂದಿದ್ದ ವಿದೇಶಿ ಮಹಿಳೆ ಜರೀನಾ ಎಂಬುವವರು ಅನುಮಾನಾಸ್ಪದ ರೀತಿಯಲ್ಲಿ ಮೃತಪಟ್ಟಿದ್ದು, ಕೊಲೆ ಶಂಕೆ ವ್ಯಕ್ತವಾಗಿದೆ.

'ಉಜ್ಬೇಕಿಸ್ತಾನದ ಜರೀನಾ, ಪ್ರವಾಸಕ್ಕೆಂದು ನಗರಕ್ಕೆ ಬಂದಿದ್ದರು. ಆನ್‌ಲೈನ್ ಮೂಲಕ ಕೊಠಡಿ ಕಾಯ್ದಿರಿಸಿ ಪಂಚತಾರಾ ಹೋಟೆಲ್‌ನಲ್ಲಿ ಉಳಿದುಕೊಂಡಿದ್ದರು. ಇವರ ಸಾವಿನ ಬಗ್ಗೆ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಶೇಷಾದ್ರಿಪುರ ಪೊಲೀಸ್ ಠಾಣೆ

ಅಪರಾಧ ಸುದ್ದಿ

ಮೂಲಗಳು ಹೇಳಿವೆ.

ಕೊಠಡಿಯಿಂದ ಹೊರಗೆ ಬಾರದ ಮಹಿಳೆ: 'ಕೆಲ ದಿನಗಳ ಹಿಂದೆಯಷ್ಟೇ ನಗರಕ್ಕೆ ಬಂದಿದ್ದ ಮಹಿಳೆ, ಒಂಟಿಯಾಗಿ ಕೊಠಡಿಯಲ್ಲಿ ಉಳಿದುಕೊಂಡಿದ್ದರು. ಬೆಳಿಗ್ಗೆ ನಗರದ ಹಲವು ಪ್ರದೇಶಗಳಿಗೆ ಭೇಟಿ ನೀಡಿ, ಸಂಜೆ ವಾಪಸು ಕೊಠಡಿಗೆ ಬರುತ್ತಿದ್ದರು. ಆದರೆ, ಮಹಿಳೆ ಬುಧವಾರ ಬೆಳಿಗ್ಗೆ ಕೊಠಡಿಯಿಂದ ಹೊರಗೆ ಬಂದಿರಲಿಲ್ಲ' ಎಂದು ಪೊಲೀಸರು ಹೇಳಿದರು.

'ಮಧ್ಯಾಹ್ನ ಹಾಗೂ ರಾತ್ರಿ ಊಟಕ್ಕೂ ಮಹಿಳೆ ಕೊಠಡಿಯಿಂದ ಹೊರಗೆ ಬಂದಿರಲಿಲ್ಲ. ಹೋಟೆಲ್ ಸಿಬ್ಬಂದಿ, ಬೆಲ್ ಮಾಡಿದ್ದಾಗಲೂ ಬಾಗಿಲು ತೆರೆದಿರಲಿಲ್ಲ. ಅನುಮಾನಗೊಂಡ ಸಿಬ್ಬಂದಿ, ಬುಧವಾರ ತಡರಾತ್ರಿ ಮಾಸ್ಟರ್ ಕೀ ಬಳಸಿ ಬಾಗಿಲು ತೆರೆದು ನೋಡಿದಾಗ ಮೃತದೇಹ ಕಂಡಿತ್ತು' ಎಂದು ತಿಳಿಸಿದರು.

ಉಸಿರುಗಟ್ಟಿಸಿ ಕೊಲೆ ಶಂಕೆ: 'ಯಾರೋ ದುಷ್ಕರ್ಮಿಗಳು, ಕೊಠಡಿಗೆ ನುಗ್ಗಿರುವ ಸಾಧ್ಯತೆ ಇದೆ. ಜರೀನಾ ಅವರನ್ನು ಉಸಿರುಗಟ್ಟಿಸಿ ಕೊಂದು ಪರಾರಿಯಾಗಿರುವ ಅನುಮಾನವಿದೆ. ಹೊರಗಿನಿಂದ ಬಾಗಿಲು ಲಾಕ್ ಮಾಡಿಕೊಂಡು ಆರೋಪಿಗಳು ಪರಾರಿಯಾಗಿರುವ ಸಾಧ್ಯತೆಯೂ ಇದೆ' ಎಂದು ಪೊಲೀಸರು ಹೇಳಿದರು.

'ಹೋಟೆಲ್ ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಗಳನ್ನು ಪರಿಶೀಲಿಸಲಾಗುತ್ತಿದೆ. ಸಂದರ್ಶಕರ ವಿವರಗಳನ್ನು ಪಡೆಯಲಾಗುತ್ತಿದೆ. ವಿಧಿ ವಿಜ್ಞಾನ ಪ್ರಯೋಗಾಲಯ ತಜ್ಞರು ಹಾಗೂ ಶ್ವಾನ ದಳದ ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ್ದಾರೆ. ಮೃತದೇಹವನ್ನು ಆಸ್ಪತ್ರೆಗೆ ಸಾಗಿಸಲಾಗಿದೆ. ಸಂಬಂಧಿಕರಿಗೆ ಮಾಹಿತಿ ನೀಡಿದ್ದು, ಅವರು ನಗರಕ್ಕೆ ಬಂದ ನಂತರ ಮರಣೋತ್ತರ ಪರೀಕ್ಷೆ ಪ್ರಕ್ರಿಯೆ ಆರಂಭಿಸಲಾಗುವುದು' ಎಂದು ಪೊಲೀಸರು ತಿಳಿಸಿದರು.

ಬೋರ್ಡ್ ಪರೀಕ್ಷೆ: ಮೇಲ್ಮನವಿ ವರ್ಗಾವಣೆ ಕೋರಿಕೆ ತಿರಸ್ಕೃತ

ಬೆಂಗಳೂರು: 'ರಾಜ್ಯ ಪಠ್ಯಕ್ರಮ ಅನುಸರಿಸುತ್ತಿರುವ ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ ಶಿಕ್ಷಣ ಸಂಸ್ಥೆಗಳಲ್ಲಿ 5, 8 ಮತ್ತು 9ನೇ ತರಗತಿಗಳಿಗೆ ಬೋರ್ಡ್ ಮಟ್ಟದ ಮೌಲ್ಯಾಂಕನ ಪರೀಕ್ಷೆ ನಡೆಸುವ ವಿಷಯಕ್ಕೆ ಸಂಬಂಧಿಸಿದಂತೆ ಸಲ್ಲಿಸಲಾಗಿರುವ ಮೇಲ್ಮನವಿಯನ್ನು ವಿಸ್ತೃತ ಪೀಠಕ್ಕೆ ವರ್ಗಾಯಿಸಬೇಕು' ಎಂಬ ವಿದ್ಯಾರ್ಥಿಗಳು ಮತ್ತು ಪೋಷಕರ ಮನವಿಯನ್ನು ಹೈಕೋರ್ಟ್ ತಿರಸ್ಕರಿಸಿದೆ.

ಈ ಸಂಬಂಧ ಸಲ್ಲಿಸಲಾದ ಮೆಮೊ ಅನ್ನು ನ್ಯಾಯಮೂರ್ತಿ ಕೆ. ಸೋಮಶೇಖರ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಗುರುವಾರ ಕೈಗೆತ್ತಿಕೊಂಡಿದ್ದು, 'ಈ ಮೇಲ್ಮನವಿಯನ್ನು ವಿಚಾರಣೆ ನಡೆಸಿ ಶೀಘ್ರವೇ ಸೂಕ್ತ ನಿರ್ಧಾರ ಪ್ರಕಟಿಸುವಂತೆ ಸುಪ್ರೀಂ ಕೋರ್ಟ್ ನಿರ್ದೇಶಿಸಿದೆ. ಆದ್ದರಿಂದ, ಮೇಲ್ಮನವಿಯನ್ನು ವಿಸ್ತೃತ ಪೀಠಕ್ಕೆ ವರ್ಗಾವಣೆ ಮಾಡಲು ಸಾಧ್ಯವಿಲ್ಲ' ಎಂದು ತಿಳಿಸಿತು. ವಿಚಾರಣೆಯನ್ನು ಶುಕ್ರವಾರಕ್ಕೆ ಮುಂದೂಡಲಾಗಿದೆ.

'ಸರ್ಕಾರ ಹೊರಡಿಸಿರುವ ಅಧಿಸೂಚನೆಯಲ್ಲಿ ದೊಡ್ಡ ಮಟ್ಟದ ಸಾರ್ವಜನಿಕ ಹಿತಾಸಕ್ತಿ ಅಡಗಿದೆ. ಆದ್ದರಿಂದ, ಮೇಲ್ಮನವಿಯನ್ನು ವಿಸ್ತೃತ ಪೀಠಕ್ಕೆ ವರ್ಗಾವಣೆ ಮಾಡಬೇಕು' ಎಂದು ವಿದ್ಯಾರ್ಥಿಗಳು ಮತ್ತು ಪೋಷಕರ ಕೋರಿದ್ದರು. 'ಬೋರ್ಡ್ ಮಟ್ಟದ ಪರೀಕ್ಷೆಗಳನ್ನು ನಡೆಸುವುದಕ್ಕೆ ಅವಕಾಶ ಕಲ್ಪಿಸಬೇಕು ಮತ್ತು ಅವಕಾಶ ಕಲ್ಪಿಸಬಾರದು' ಎಂದು ಕೋರಲಾದ ಎರಡು ಪ್ರತ್ಯೇಕ ಮಧ್ಯಂತರ ಅರ್ಜಿಗಳ ವಿಚಾರಣೆ ಇನ್ನಷ್ಟೇ ನಡೆಯಬೇಕಿದೆ.

ಸಹಕಾರ ಸಂಘ, ಬ್ಯಾಂಕುಗಳ ಚುನಾವಣೆ ಮುಂದೂಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕಸಭೆ ಚುನಾವಣೆ ಹಿನ್ನೆಲೆಯಲ್ಲಿ ಸಹಕಾರ ಸಂಘ ಹಾಗೂ ಸಹಕಾರ ಬ್ಯಾಂಕುಗಳ ಆಡಳಿತ ಮಂಡಳಿ ಚುನಾವಣೆಯನ್ನು ಮುಂದಿನ ಆದೇಶದವರೆಗೆ ಮುಂದೂಡಲಾಗಿದೆ. ಅಲ್ಲದೆ, ಹಾಲಿ ಆಡಳಿತ ಮಂಡಳಿ ಮತ್ತು ಪದಾಧಿಕಾರಿಗಳ ಅವಧಿಯನ್ನು ವಿಸ್ತರಿಸಿ ಸಹಕಾರ ಇಲಾಖೆ ಆದೇಶ ಹೊರಡಿಸಿದೆ.

ಮಾರ್ಚ್ ಮತ್ತು ಜೂನ್ ತಿಂಗಳ ಮಧ್ಯದ ಅವಧಿಯಲ್ಲಿ ಹಲವು ಸಹಕಾರ ಸಂಘಗಳು ಮತ್ತು ಸಹಕಾರ ಬ್ಯಾಂಕುಗಳ ಆಡಳಿತ ಮಂಡಳಿಗಳ ಅವಧಿ ಮುಕ್ತಾಯಗೊಳ್ಳುತ್ತಿದೆ. ಇಂತಹ ಕೆಲವು ಸಂಘಗಳು ಮತ್ತು ಬ್ಯಾಂಕುಗಳ ಆಡಳಿತ ಮಂಡಳಿಗೆ ಈಗಾಗಲೇ ಚುನಾವಣೆಗೆ ಘೋಷಿಸಲಾಗಿದೆ. ಆದರೆ, ಶೀಘ್ರದಲ್ಲಿ ಲೋಕಸಭೆ ಚುನಾವಣೆ ಘೋಷಣೆಯಾಗಿ ನೀತಿ ಸಂಹಿತೆ ಜಾರಿಗೆ ಬರಲಿದೆ. ಈ ವೇಳೆ ಹೆಚ್ಚಿನ ಅಧಿಕಾರಿ ಸಿಬ್ಬಂದಿ ಚುನಾವಣಾ ಕರ್ತವ್ಯಕ್ಕೆ ಅಗತ್ಯ ಇರುವುದರಿಂದ ಆಡಳಿತ ಮಂಡಳಿ ಚುನಾವಣೆ ಮುಂದೂಡಲು ನಿರ್ಧರಿಸಲಾಗಿದೆ ಎಂದು ಆದೇಶದಲ್ಲಿ ವಿವರಿಸಲಾಗಿದೆ.

ಸಹಕಾರ ಸಂಘಗಳ ಕಾಯ್ದೆಯ ಅನ್ವಯ ಅಧಿಕಾರ ಅವಧಿ ಮುಕ್ತಾಯಗೊಂಡ ಸಹಕಾರ ಸಂಘ ಮತ್ತು ಬ್ಯಾಂಕುಗಳಿಗೆ ಆಡಳಿತ ಅಧಿಕಾರಿಯನ್ನು ನೇಮಿಸಬೇಕಾಗಿದೆ. ಆದರೆ, ಸಹಕಾರ ಇಲಾಖೆಯೂ ಸೇರಿದಂತೆ ಇತರ ಇಲಾಖೆಗಳ ಅಧಿಕಾರಿಗಳಿಗೂ ಲೋಕಸಭೆ ಚುನಾವಣೆಯಲ್ಲಿ ಕರ್ತವ್ಯ ನಿಭಾಯಿಸಬೇಕಾಗಿದೆ. ಹೀಗಾಗಿ ಆಡಳಿತ ಅಧಿಕಾರಿಗಳ ನೇಮಕ ಕಷ್ಟಸಾಧ್ಯ. ಈ ಕಾರಣಕ್ಕೆ ಹಾಲಿ ಆಡಳಿತ ಮಂಡಳಿಗಳ ಅವಧಿಯನ್ನು ವಿಸ್ತರಿಸಲಾಗುವುದು ಎಂದೂ ಆದೇಶದಲ್ಲಿದೆ.

ಸಿಯುಕೆ ಪದವಿ ಕೋರ್ಸ್‌ಗಳಿಗೆ ಅರ್ಜಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಲಬುರಗಿಯಲ್ಲಿರುವ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯವು (ಸಿಯುಕೆ) ಪಿಯುಸಿ ಪೂರೈಸಿದ ವಿದ್ಯಾರ್ಥಿಗಳಿಂದ ವಿವಿಧ ಪದವಿ ಕೋರ್ಸ್‌ಗಳಿಗೆ ಅರ್ಜಿ ಆಹ್ವಾನಿಸಿದೆ' ಎಂದು ವಿಶ್ವವಿದ್ಯಾಲಯದ ಶೈಕ್ಷಣಿಕ ನಿರ್ದೇಶಕ ಬಸವರಾಜ ಪಿ. ಡೋಣೂರ ತಿಳಿಸಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಪದವಿ ಸೇರಬಯಸುವ ವಿದ್ಯಾರ್ಥಿಗಳು ರಾಷ್ಟ್ರೀಯ ಟೆಸ್ಟಿಂಗ್ ಏಜೆನ್ಸಿ (ಎನ್‌ಟಿಎ) ನಡೆಸುವ ಪ್ರವೇಶ ಪರೀಕ್ಷೆಯಲ್ಲಿ ತೇರ್ಗಡೆಯಾಗಬೇಕು. ರಾಜ್ಯದ 20 ಕೇಂದ್ರಗಳಲ್ಲಿ ಈ ಪರೀಕ್ಷೆ ನಡೆಯಲಿದೆ' ಎಂದು ವಿವರಿಸಿದರು.

'ಬಿ.ಟೆಕ್ ಎಲೆಕ್ಟ್ರಿಕಲ್ ಎಂಜಿನಿಯರಿಂಗ್, ಬಿ.ಟೆಕ್ ಎಲೆಕ್ಟ್ರಾನಿಕ್ಸ್ ಆ್ಯಂಡ್ ಕಮ್ಯುನಿಕೇಶನ್, ಬಿ.ಟೆಕ್ ಮ್ಯಾಥಮೆಟಿಕಲ್ ಕಂಪ್ಯೂಟಿಂಗ್, ಬಿ.ಟೆಕ್ ಕಂಪ್ಯೂಟರ್ ಸೈನ್ಸ್ ಮತ್ತು ಎಂಜಿನಿಯರಿಂಗ್, ಬಿ.ಎಸ್ಸಿ (ಭೌತಶಾಸ್ತ್ರ, ರಸಾಯನ ಶಾಸ್ತ್ರ), ಬಿ.ಎಸ್ಸಿ ಮನೋವಿಜ್ಞಾನ ಮತ್ತು ಭೂಗೋಳ, ಬಿಬಿಎ (ಸ್ವತಂತ್ರ), ಬಿ.ಎ ಅರ್ಥಶಾಸ್ತ್ರ, ಬಿ.ಎ. ಇತಿಹಾಸ, ಬಿ.ಎ ಇಂಗ್ಲಿಷ್, ಬಿ.ಎಸ್ಸಿ ಭೂವಿಜ್ಞಾನ ಪದವಿ ಕೋರ್ಸ್‌ಗಳಿಗೆ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತ ವಿದ್ಯಾರ್ಥಿಗಳು ಇದೇ 26ರೊಳಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬೇಕು' ಎಂದು ತಿಳಿಸಿದರು.

'ರಾಜ್ಯದ ವಿದ್ಯಾರ್ಥಿಗಳಿಗೆ ಅದರಲ್ಲೂ, ಕಲ್ಯಾಣ ಕರ್ನಾಟಕ ವಿಭಾಗದ ಮಕ್ಕಳಿಗೆ ಅನುಕೂಲವಾಗಲಿ ಎಂಬ ದೃಷ್ಟಿಯಿಂದ ಕೇಂದ್ರ ಸರ್ಕಾರ ಕಲಬುರಗಿಯಲ್ಲಿ ಕೇಂದ್ರೀಯ ವಿಶ್ವವಿದ್ಯಾಲಯ ಆರಂಭಿಸಿದೆ. ಆದರೆ, ಇತ್ತೀಚೆಗೆ ನಮ್ಮ ರಾಜ್ಯದವರಿಗಿಂತ ಹೊರರಾಜ್ಯಗಳ ವಿದ್ಯಾರ್ಥಿಗಳೇ ವಿಶ್ವವಿದ್ಯಾಲಯಕ್ಕೆ ಹೆಚ್ಚು ಪ್ರವೇಶ ಪಡೆಯುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ರಾಜ್ಯದ ವಿದ್ಯಾರ್ಥಿಗಳು ಹೆಚ್ಚು ಪ್ರವೇಶ ಪಡೆಯುವಂತೆ ಜಾಗೃತಿ ಮೂಡಿಸಲಾಗುತ್ತಿದೆ' ಎಂದರು.

'ಪ್ರಸ್ತುತ ರಾಜ್ಯದ ಶೇ 10ಕ್ಕಿಂತ ಕಡಿಮೆ ವಿದ್ಯಾರ್ಥಿಗಳು ಈ ಕೇಂದ್ರೀಯ ವಿಶ್ವವಿದ್ಯಾಲಯದಲ್ಲಿ ಅಧ್ಯಯನ ಮಾಡುತ್ತಿದ್ದಾರೆ. ಇವರ ಸಂಖ್ಯೆ ಹೆಚ್ಚಳವಾಗಬೇಕು ಎಂಬುದು ನಮ್ಮ ಆಶಯ. ಇದು ರಾಷ್ಟ್ರೀಯ ವಿಶ್ವವಿದ್ಯಾಲಯವಾಗಿರುವುದರಿಂದ ಎಲ್ಲರಿಗೂ ಮುಕ್ತ ಅವಕಾಶ ವಿರುತ್ತದೆ. ಈ ಲಾಭವನ್ನು ಬೇರೆ ರಾಜ್ಯಗಳ ವಿದ್ಯಾರ್ಥಿಗಳು ಪಡೆಯುತ್ತಿದ್ದಾರೆ' ಎಂದರು.

ವಿದ್ಯಾರ್ಥಿಗಳು http:/exams.nta.ac.in ಗೆ ಭೇಟಿ ನೀಡಿ ಆನ್‌ಲೈನ್ ಅರ್ಜಿ ಸಲ್ಲಿಸಬಹುದು. ಮಾಹಿತಿಗೆ 011-40759000/011-69227700ಗೆ ಸಂಪರ್ಕಿಸಬಹುದು ಎಂದು ತಿಳಿಸಿದರು.

ನೈಋತ್ಯ ರೈಲ್ವೆ

ಆಸಕ್ತಿಯ ಅಭಿವ್ಯಕ್ತತೆ
ಎಸ್‌ಡಬ್ಲ್ಯೂಆರ್ ನ ಜೊತೆಗೆ 02 ವರ್ಷಗಳ (2024–2026) ಅವಧಿಗೆ ಜಾಹೀರಾತು ಏಜೆನ್ಸಿಗಳ ಸದಸ್ಯತ್ವ

ಭಾರತದ ರಾಷ್ಟ್ರಪತಿಯವರ ಪರವಾಗಿ ಮುದ್ರಣ ಮಾಧ್ಯಮದಲ್ಲಿ ಪ್ರದರ್ಶನ ಪ್ರಚಾರಗಳು, ನೈಋತ್ಯ ರೈಲ್ವೆಯ ಸಾರ್ವಜನಿಕ ಸಂಪರ್ಕದ ಕೆಲಸಗಳು ಸೇರಿದಂತೆ ರೈಲ್ವೆ ಜಾಹೀರಾತುಗಳ ನಿರ್ವಹಣೆಗಾಗಿ ಜಾಹೀರಾತು ಏಜೆನ್ಸಿಗಳ ಸಮಿತಿಯನ್ನು ರಚಿಸುವುದಕ್ಕಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಐಎನ್‌ಎಸ್ ನಿಂದ ಮಾನ್ಯತೆ ಪಡೆದಿರುವ ಜಾಹೀರಾತು ಏಜೆನ್ಸಿಗಳು ಮತ್ತು ಹುಬ್ಬಳ್ಳಿಯಲ್ಲಿ ಎಲ್ಲಾ ಸೌಲಭ್ಯಗಳೊಂದಿಗೆ ಪೂರ್ಣ ಪ್ರಮಾಣದ ಕಾರ್ಯನಿರ್ವಹಣಾ ಕಚೇರಿಯನ್ನು ಒಳಗೊಂಡಿರುವವರು ಸದಸ್ಯತ್ವಕ್ಕಾಗಿ ಅರ್ಜಿ ಸಲ್ಲಿಸಬಹುದು.

"2024–2026 ರ 02 ವರ್ಷಗಳ ಅವಧಿಗೆ ಎಸ್ ಡಬ್ಲ್ಯೂ ಆರ್ ಮೂಲಕ ಜಾಹೀರಾತು ಏಜೆನ್ಸಿಗಳ ಸದಸ್ಯತ್ವಕ್ಕಾಗಿ ಅರ್ಜಿ" ಎಂದು ಮೇಲ್ಭಾಗದಲ್ಲಿ ಗುರುತಿಸಿದ ಹಾಗೂ ಮೊಹರು ಮಾಡಿದ ಲಕೋಟೆಯಲ್ಲಿ ಎಲ್ಲಾ ಸಂಬಂಧಿತ ದಾಖಲೆಗಳೊಂದಿಗೆ ಸರಿಯಾಗಿ ಭರ್ತಿ ಮಾಡಿದ ಅರ್ಜಿಯನ್ನು ಸಿದ್ಧಪಡಿಸಿ ಮುಖ್ಯ ಸಾರ್ವಜನಿಕ ಸಂಪರ್ಕ ಅಧಿಕಾರಿಗಳ ಕಚೇರಿ, ನೈಋತ್ಯ ರೈಲ್ವೆ, ಐದನೇ ಮಹಡಿ, ರೈಲು ಸೌಧ, ಗದಗ ರಸ್ತೆ, ಹುಬ್ಬಳ್ಳಿ – 580 020 ಇಲ್ಲಿಗೆ ತಲುಪುವಂತೆ ಕಳುಹಿಸಬಹುದು.

ಸಲ್ಲಿಸಬೇಕಾದ ಕೊನೆಯ ದಿನಾಂಕ: 05.04.2024, 15:00 ಗಂಟೆ ವರೆಗೆ
ತೆರೆಯುವ ದಿನಾಂಕ: 05.04.2024, 15:30 ಗಂಟೆಗೆ

ಹೆಚ್ಚಿನ ಮಾಹಿತಿಗಾಗಿ www.swr.indianrailways.gov.in ಗೆ ಲಾಗ್ ಆನ್ ಆಗಿ

PUB/756/AAD/PRB/SWR/2023-24 ಮುಖ್ಯ ಸಾರ್ವಜನಿಕ ಸಂಪರ್ಕ ಅಧಿಕಾರಿ/ಎಸ್‌ಡಬ್ಲ್ಯೂಆರ್/ಹುಬ್ಬಳ್ಳಿ

South Western Railway - SWR | SWRRLY | SWRRLY

ನೇರ ನೇಮಕಾತಿ: ನಾನ್ ಟೆಕ್ನಿಕಲ್ ಹುದ್ದೆಗಳು

ಜಾಹೀರಾತು ಸಂ.: ಸಿ–ಡಾಕ್/ಎಂಬಿ/02/2024/2403

ಸೀ ಡೈಕ CDAC

ಸೆಂಟರ್ ಫಾರ್ ಡೆವಲಪ್‌ಮೆಂಟ್ ಆಫ್ ಅಡ್ವಾನ್ಸ್ಡ್ ಕಂಪ್ಯೂಟಿಂಗ್ (ಸಿ–ಡಾಕ್) ಎಂಬ ಸಂಸ್ಥೆಯು, ಮಾಹಿತಿ ತಂತ್ರಜ್ಞಾನ, ಇಲೆಕ್ಟ್ರಾನಿಕ್ಸ್ ಮತ್ತು ಸಂಬಂಧಿತ ಕ್ಷೇತ್ರಗಳಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿ ಕೈಗೊಳ್ಳುವ ಇಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯದ (ಮೇಯಿಟಿ) ಒಂದು ಪ್ರಮುಖ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯಾಗಿದೆ.

ಕೆಳಕಂಡ ನಾನ್ ಟೆಕ್ನಿಕಲ್ ಹುದ್ದೆಗಳಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ:

ಗ್ರೂಪ್ ಸಿ – ಲೆವೆಲ್ 5	1 ಹುದ್ದೆ (ಮೀಸಲು ರಹಿತ)	ಸಹಾಯಕ
ಗ್ರೂಪ್ ಸಿ – ಲೆವೆಲ್ 4	1 ಹುದ್ದೆ (ಒಬಿಸಿ)	ಕಿರಿಯ ಸಹಾಯಕ

ಆಸಕ್ತಿಯುಳ್ಳ ಅಭ್ಯರ್ಥಿಗಳು ವಿವರವಾದ ಅಧಿಸೂಚನೆಯನ್ನು ಪರಿಶೀಲಿಸಿ ಮಾರ್ಚ್ 31, 2024ರೊಳಗೆ ಆನ್‌ಲೈನ್ ಅರ್ಜಿಸಲ್ಲಿಸಲು **www.cdac.in** ವೆಬ್‌ಸೈಟ್‌ನಲ್ಲಿ "ಕರಿಯರ್ಸ್" ಪುಟಕ್ಕೆ ಭೇಟಿ ನೀಡಬಹುದು.
ಸೂಚನೆ: ಇದಕ್ಕೆ ಸಂಬಂಧಿಸಿದಂತೆ ಯಾವುದೇ ತಿದ್ದುಪಡಿ/ಮಾಹಿತಿ ನೀಡುವುದಾದಲ್ಲಿ, ಅದನ್ನು ಸಿ–ಡಾಕ್ ವೆಬ್‌ಸೈಟ್‌ನಲ್ಲಿ ಮಾತ್ರ ಪ್ರಕಟಿಸಲಾಗುತ್ತದೆ.

ವಿಳಾಸ: ಸಿ–ಡಾಕ್, ಗುಲ್‌ಮೊಹರ್ ಕ್ರಾಸ್ ರೋಡ್ ನಂ.9, ಜೂಹು, ಮುಂಬೈ 400049

ಒಂದೇ ನೋಟ ಒಂದೇ ಗುರಿ... ಮಾನವ ಪ್ರಗತಿಗಾಗಿ ಅತ್ಯಾಧುನಿಕ ಗಣಕೀಕರಣ

CBC 06138/12/0006/2324

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.

ನಂ:ಬೆಂಅಪ್ರಾ/ನಯೋಸ/CLU–161/2879/2023–24 ದಿನಾಂಕ:14.03.2024

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14–A ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ಕೈಗಾರಿಕೆ ವಲಯದಿಂದ ವಸತಿ ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಸಂಬಂಧ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗುಂ	ಪರಿಷ್ಕೃತ ಮಹಾ ಯೋಜನೆ 2015ರ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	Sri. Keerthan Reddy & Sankeerthan Reddy	ಬೆಂಗಳೂರು ದಕ್ಷಿಣ	ಬೇಗೂರು	ವೆಂಕೋಜಿ ರಾವ್ ಖಾನ್	50/8	0–16.04	ಕೈಗಾರಿಕೆ ವಲಯ	ವಸತಿ
	ಒಟ್ಟು					0–16.04		

ಷರಾ: ಅರ್ಜಿದಾರರು ಪ್ರಶ್ನಿತ ಜಮೀನುಗಳನ್ನು ಕೈಗಾರಿಕಾ ವಲಯದಿಂದ ವಸತಿ ಉಪಯೋಗಕ್ಕಾಗಿ ಭೂಉಪಯೋಗ ಬದಲಾವಣೆ ಮಾಡಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಸಾರ್ವಜನಿಕರಿಗೆ ಯೋಗ್ಯ ಬೆಲೆಯಲ್ಲಿ ಮನೆಗಳು ಲಭ್ಯವಾಗುತ್ತದೆ. ವಸತಿ ಕಟ್ಟಡದ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ಹಾಗೂ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಪ್ರಶ್ನಿತ ಜಮೀನುಗಳನ್ನು 'ಕೈಗಾರಿಕಾ ವಲಯ' ದಿಂದ 'ವಸತಿ ಉಪಯೋಗಕ್ಕೆ' ಭೂ ಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/– ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು

'ಕನ್ನಡ ಕಾದಂಬರಿಗಳಲ್ಲಿ ವಾಸ್ತವದ ನೆಲೆಗಟ್ಟು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಆಂಗ್ಲ ಸಾಹಿತ್ಯದ ಪ್ರಭಾವದಿಂದಾಗಿ ಕನ್ನಡದ ಕಾದಂಬರಿಗಳಲ್ಲಿ ಪುರಾಣದ ಪರಿಕಲ್ಪನೆಗಳಿಗಿಂತ ವಾಸ್ತವ ಸತ್ಯದ ನೆಲೆ ಅಡಕವಾಗಿರುತ್ತದೆ' ಎಂದು ವಿಮರ್ಶಕ ಎಸ್.ಆರ್. ವಿಜಯಶಂಕರ್ ತಿಳಿಸಿದರು.

ದ್ವಾರನಕುಂಟೆ ಪಾತಣ್ಣ ಪ್ರತಿಷ್ಠಾನ ನಗರದಲ್ಲಿ ಗುರುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಆರ್.ಸುನಂದಮ್ಮ ಅವರಿಗೆ '2023ನೇ ಸಾಲಿನ ಅತ್ಯುತ್ತಮ ಕಾದಂಬರಿ ಪ್ರಶಸ್ತಿ ಪ್ರದಾನ' ಮಾಡಿ ಅವರು ಮಾತನಾಡಿದರು. ಪ್ರಶಸ್ತಿ ₹25ಸಾವಿರ ನಗದು ಒಳಗೊಂಡಿದೆ.

'ಭಾರತ ಸ್ವಾತಂತ್ರ್ಯ ಪಡೆಯುವ ಸಮಯದಲ್ಲಿ ಕನ್ನಡಕ್ಕೆ ಕಾದಂಬರಿ ಪ್ರಕಾರ ಪ್ರವೇಶಿಸಿತ್ತು. ಕನ್ನಡದ ಮೇಲೆ ಆಂಗ್ಲ ಸಾಹಿತ್ಯದ ಪ್ರಭಾವ ಬೀರಿತ್ತು. ಹಾಗಾಗಿ ಪುರಾಣ ಪರಂಪರೆಗೆ ಭಿನ್ನವಾಗಿ ವಾಸ್ತವ ಮತ್ತು ಆದರ್ಶಗಳು ಕಾದಂಬರಿಯ ವಸ್ತುಗಳಾದವು' ಎಂದು ವಿಶ್ಲೇಷಿಸಿದರು.

ಶೇಷಾದ್ರಿಪುರಂ ಶಿಕ್ಷಣ ದತ್ತಿ ಪ್ರಧಾನ ಕಾರ್ಯದರ್ಶಿ ವೂಡೇ ಪಿ. ಕೃಷ್ಣ ಮಾತನಾಡಿ, 'ಬರವಣಿಗೆಯಲ್ಲಿ ಎಲ್ಲ ಪಾತ್ರಗಳಿಗೂ ನ್ಯಾಯ ಕೊಡುವುದು ಕಷ್ಟ. ಆದರೂ ಭರತನನ್ನು ಪ್ರಮುಖವಾಗಿಸಿದ ಆರ್. ಸುನಂದಮ್ಮ ಅವರ 'ಭರತಕಲ್ಪ' ಕಾದಂಬರಿ ವಿಶಿಷ್ಟವಾಗಿದೆ.

ನಗರದಲ್ಲಿ ದ್ವಾರನಕುಂಟೆ ಪಾತಣ್ಣ ಪ್ರತಿಷ್ಠಾನದಿಂದ ಆರ್. ಸುನಂದಮ್ಮ ಅವರಿಗೆ '2024ನೇ ಅತ್ಯುತ್ತಮ ಕಾದಂಬರಿ ಪ್ರಶಸ್ತಿ' ನೀಡಿ ಗೌರವಿಸಲಾಯಿತು. ಲೇಖಕರಾದ ದ್ವಾರನಕುಂಟೆ ಪಾತಣ್ಣ, ಮೂಡ್ನಾಕೂಡು ಚಿನ್ನಸ್ವಾಮಿ, ಲತಾಗುತ್ತಿ, ಕಾ.ತ. ಚಿಕ್ಕಣ್ಣ, ಎಸ್‌ಆರ್ ವಿಜಯಶಂಕರ್, ಮಾಜಿ ಸಚಿವ ಎಚ್‌.ಎಂ.ರೇವಣ್ಣ, ಪ್ರತಿಷ್ಠಾನದ ಅಧ್ಯಕ್ಷ ಬಿ.ಎಂ.ಹನೀಫ್, ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಪ್ರಧಾನ ಕಾರ್ಯದರ್ಶಿ, ವೂಡೇ ಪಿ. ಕೃಷ್ಣ ಪಾಲ್ಗೊಂಡಿದ್ದರು — ಪ್ರಜಾವಾಣಿ ಚಿತ್ರ

ಇದರಲ್ಲಿ ಶ್ರಮ ಸಂಸ್ಕೃತಿಯ ಬಗ್ಗೆ ತಿಳಿಸಲಾಗಿದೆ' ಎಂದು ಹೇಳಿದರು.

ಸಾಹಿತಿ ಕಾ.ತ.ಚಿಕ್ಕಣ್ಣ ಮಾತನಾಡಿ, ಸೃಜನಶೀಲ ಕೃತಿಯು ಕೇವಲ ವ್ಯಕ್ತಿ ಕೇಂದ್ರಿತ ಅಲ್ಲ. ಅದರಲ್ಲಿ ಸಮಾಜ, ಕುಟುಂಬ, ರಾಜಕೀಯ ವರ್ತಮಾನ ಎಲ್ಲವೂ ಸೇರಿರುತ್ತದೆ. ಆರ್.ಸುನಂದಮ್ಮ ಅವರ 'ಭರತಕಲ್ಪ' ಕಾದಂಬರಿ ವರ್ತಮಾನದ ಓದಿಗೆ ಮುಖಾಮುಖಿಯಾಗಿದೆ' ಎಂದು ತಿಳಿಸಿದರು.

ಕವಿ ಮೂಡ್ನಾಕೂಡು ಚಿನ್ನಸ್ವಾಮಿ ಪ್ರಾಸ್ತಾವಿಕವಾಗಿ ಮಾತನಾಡಿ, '48 ಕಾದಂಬರಿ ಬಂದಿದ್ದವು. ಅದರಲ್ಲಿ ಸಮಿತಿಯು ಪರಿಶೀಲಿಸಿ 12 ಕೃತಿಗಳನ್ನು ನೀಡಿತ್ತು. ಆ 12ರಲ್ಲಿ ಆರ್. ಸುನಂದಮ್ಮ ಅವರ 'ಭರತಕಲ್ಪ' ಕಾದಂಬರಿಗೆ ಪ್ರಶಸ್ತಿಗೆ ಆಯ್ಕೆಯಾಯಿತು' ಎಂದು ವಿವರಿಸಿದರು.

ಕಾದಂಬರಿಕಾರ ದ್ವಾರನಕುಂಟೆ ಪಾತಣ್ಣ, ಪ್ರತಿಷ್ಠಾನದ ಅಧ್ಯಕ್ಷ ಬಿ.ಎಂ. ಹನೀಫ್, ಕಾದಂಬರಿಕಾರ್ತಿ ಲತಾಗುತ್ತಿ, ಮಾಜಿ ಸಚಿವ ಎಚ್.ಎಂ.ರೇವಣ್ಣ ಭಾಗವಹಿಸಿದ್ದರು.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು – 560020.

ಸಂಖ್ಯೆ: ಬೆಂಅಪ್ರಾ/ನಯೋಸ/CLU-221/2863/2023–24 **ದಿನಾಂಕ: 12–03–2024**

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14–ಎ ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು **ಕೈಗಾರಿಕೆ (ಹೈಟೆಕ್) ವಲಯದಿಂದ ವಸತಿ** ಉಪಯೋಗಕ್ಕಾಗಿ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ **ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು** ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ/ಗುಂ	ಪರಿಷ್ಕೃತ ಮಹಾಯೋಜನೆ 2015 ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂಉಪಯೋಗ
Sri Brijay Naraindas Kalro & Others	ಆನೇಕಲ್	ಅತ್ತಿಬೆಲೆ	ಹೆಬ್ಬಗೋಡಿ	60/1	02-0	ಕೈಗಾರಿಕೆ (ಹೈಟೆಕ್) ವಲಯ	ವಸತಿ
				60/17	02-33		
				ಒಟ್ಟು	04-33		

ಷರಾ: ಅರ್ಜಿದಾರರು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿನ ಬೆಂಗಳೂರು ನಗರ ಜಿಲ್ಲೆ, ಆನೇಕಲ್ ತಾಲ್ಲೂಕು, ಅತ್ತಿಬೆಲೆ 2 ಹೋಬಳಿ, ಹೆಬ್ಬಗೋಡಿ ಗ್ರಾಮದ ಸರ್ವೆ ನಂ. 60/1 ರಲ್ಲಿರುವ ವಿಸ್ತೀರ್ಣ 2 ಎಕರೆ ಜಮೀನು ಮತ್ತು ಇದೇ ಗ್ರಾಮದ ಸರ್ವೆ ನಂ.60/17 ರಲ್ಲಿರುವ ವಿಸ್ತೀರ್ಣ 2 ಎಕರೆ 33 ಗುಂಟೆ ಜಮೀನುಗಳು ಕೈಗಾರಿಕಾ ಉದ್ದೇಶಕ್ಕಾಗಿ ಬಳಸಲು ಸಾಧ್ಯವಿರುವುದಿಲ್ಲ, ನಮ್ಮ ಜಮೀನಿನ ಸುತ್ತಮುತ್ತ ವಾಸದ ಉದ್ದೇಶಕ್ಕಾಗಿ ಬೇಡಿಕೆ ಇದ್ದು, ಪ್ರಶ್ನಿತ ಜಮೀನಿನಲ್ಲಿ ಯೋಜಿತ ಬೆಳವಣಿಗೆಯ ಅಭಿವೃದ್ಧಿಪಡಿಸುವುದರಿಂದ ಸುತ್ತಮುತ್ತಲಿನ ನಿವಾಸಿಗಳಿಗೆ ಉದ್ಯೋಗಾವಕಾಶ ಕಲ್ಪಿಸಿದಂತಾಗುತ್ತದೆ, ಭೂ ಉಪಯೋಗ ಬದಲಾವಣೆಗೊಂಡ ನಂತರ ವಸತಿ ಉದ್ದೇಶಕ್ಕೆ ಸಕ್ರಮ ಪ್ರಾಧಿಕಾರದಿಂದ ಅನುಮೋದನೆ ಪಡೆದು ಯೋಜನಾಬದ್ಧ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವುದರಿಂದ ಸ್ಥಳೀಯರಿಗೆ ಉದ್ಯೋಗಾವಕಾಶ ಸೃಷ್ಟಿಯಾಗಿರುತ್ತದೆ, ಸದರಿ ಪ್ರದೇಶದಲ್ಲಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವುದರಿಂದ ಸಾರ್ವಜನಿಕರಿಗೆ ಅನುಕೂಲವಾಗುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತ, ಪ್ರಶ್ನಿತ ಜಮೀನುಗಳನ್ನು **'ಕೈಗಾರಿಕೆ (ಹೈಟೆಕ್) ವಲಯ'** ದಿಂದ **'ವಸತಿ ಉಪಯೋಗಕ್ಕೆ'** ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/– ನಗರ ಯೋಜಕ ಸದಸ್ಯರು,
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು

ನಗರಸಭಾ ಕಾರ್ಯಾಲಯ ರಾಮನಗರ
ರಾಮನಗರ ಜಿಲ್ಲೆ – 562 159.
ದೂ.: 080–27271286. ಇಮೇಲ್: ka.ramanagara.cmc@gmail.com
ವೆಬ್‌ಸೈಟ್: www.ramanagaracity.mrc.gov.in

ಸಂಖ್ಯೆ : ನ.ಸ.ರಾ./ಆ.ಶಾ./ಇ.ಪ್ರ.ಟೆಂ./ಸಿ.ಆರ್/06/2023–24 ದಿನಾಂಕ : 13–03–2024

ಟೆಂಡರ್ ಪ್ರಕಟಣೆ
(ಕೆ.ಪಿ.ಪಿ.ಪಿ. ಪೋರ್ಟಲ್ ಮುಖಾಂತರ ಮಾತ್ರ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆದ್ಯಾದೇಶ 1999 – 2000 ರ ಪ್ರಕಾರ ಆಕ್ಟ್ 2000 ರ ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್‌ನ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ 2023–24 ನೇ ಸಾಲಿನ ನಗರಸಭಾ ನಿಧಿಯಡಿಯಲ್ಲಿ ರಾಮನಗರ ನಗರಸಭೆಗೆ 01 ಸಂಖ್ಯೆಯ ಸೀನಿಯರ್ ಪ್ರೋಗ್ರಾಮರ್ ಹಾಗೂ 01 ಸಂಖ್ಯೆಯ ಅಕೌಂಟ್ ಕನ್ಸಲ್‌ಟೆಂಟ್‌ಗಳನ್ನು ಸರಬರಾಜು ಮಾಡುವ ಸಂಬಂಧ ಟೆಂಡರ್‌ನ್ನು ಈ ಕೆಳಗೆ ಸಹಿ ಮಾಡಿರುವವರು ಆಹ್ವಾನಿಸಿರುತ್ತಾರೆ. ಅರ್ಹ ಮಾನವ ಸಂಪನ್ಮೂಲ ಸರಬರಾಜುದಾರರು ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://kppp.karnataka.gov.in** ಮುಖಾಂತರ ಡೌನ್‌ಲೋಡ್ ಮಾಡಿಕೊಂಡು ದಿನಾಂಕ : 29–03–2024 ರ ಸಂಜೆ 5.30 ರೊಳಗಾಗಿ ಅಪ್‌ಲೋಡ್ ಮಾಡಬಹುದಾಗಿರುತ್ತದೆ. ಟೆಂಡರ್ ದಸ್ತಾವೇಜಿನಲ್ಲಿ ತಿಳಿಸಿರುವಂತೆ **(Technical Qualification Criteria)** ಎಲ್ಲಾ ಅಗತ್ಯ ದಾಖಲೆಗಳನ್ನು ಸಲ್ಲಿಸುವುದು. ಹೆಚ್ಚಿನ ವಿವರಗಳಿಗೆ ಈ ಕಛೇರಿಯ ತಾಂತ್ರಿಕ ಶಾಖೆಯಿಂದ ಪಡೆಯಬಹುದು ಹಾಗೂ ಕಛೇರಿಯ ಅಧಿಕೃತ ವೆಬ್‌ಸೈಟ್ : **www.ramanagaracity.mrc.gov.in** ನಲ್ಲಿ ಸಹ ಪಡೆಯಬಹುದು.

ಸಹಿ/– ಅಧ್ಯಕ್ಷರು, ನಗರಸಭೆ, ರಾಮನಗರ.
ಸಹಿ/– ಪೌರಾಯುಕ್ತರು, ನಗರಸಭೆ, ರಾಮನಗರ.
ಡಿಐಪಿಆರ್/ರಾಮನಗರ/601/ಮಣಿಪಾಲ್/2023–24

ಕೃಷಿ ಮಾರಾಟ ಇಲಾಖೆ
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ
ಮಹಾತ್ಮ ಗಾಂಧಿ ಸಂಕೀರ್ಣ, ಮಾರುಕಟ್ಟೆ ಪ್ರಾಂಗಣ, ಯಶವಂತಪುರ,
ಬೆಂಗಳೂರು – 560022. ದೂರವಾಣಿ ಸಂಖ್ಯೆ: 080–23472850/23371695
ಇ–ಮೇಲ್: apmcbangalore22@gmail.com

ಸಂಖ್ಯೆ:ಕೃಮಾಇ/ಕೃಉಮಾಸ/ಬೆಂ/ಅಭಿವೃದ್ಧಿ/6701/2023–24 ದಿನಾಂಕ: 14–03–2024

ಸಂಕ್ಷಿಪ್ತ ಟೆಂಡರ್ ಕಂ ಬಹಿರಂಗ ಹರಾಜು ಪ್ರಕಟಣೆ

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಯಶವಂತಪುರ ಸಮಿತಿ, ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಖಾಲಿ ಇರುವ **05 ಸಂಖ್ಯೆ ಶೌಚಾಲಯಗಳನ್ನು ಲೀವ್ & ಲೈಸೆನ್ಸ್ ಆಧಾರದ ಮೇಲೆ ಹಂಚಿಕೆ ಮಾಡುವ ಕುರಿತು** ಅರ್ಹ ವ್ಯಕ್ತಿ ಸಂಸ್ಥೆ / ಏಜೆನ್ಸಿಗಳಿಂದ ಟೆಂಡರ್ ಕಂ ಬಹಿರಂಗ ಹರಾಜನ್ನು ಆಹ್ವಾನಿಸಲಾಗಿದೆ. ಟೆಂಡರ್ ಕಂ ಬಹಿರಂಗ ಹರಾಜು ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು ಇಚ್ಛಿಸುವವರು ಶೇ.18 ಜಿ.ಎಸ್.ಟಿ ಯೊಂದಿಗೆ ಅರ್ಜಿ ಶುಲ್ಕ **ರೂ. 500/–** ಸೇರಿ ಒಟ್ಟು **ರೂ. 590/–** ಗಳನ್ನು **ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಯಶವಂತಪುರ, ಬೆಂಗಳೂರು** ಇವರ ಹೆಸರಿನಲ್ಲಿ ಈ ಕಛೇರಿಗೆ ಪಾವತಿಸಿ, ಅರ್ಜಿ ನಮೂನೆ ಹಾಗೂ ಷರತ್ತುಗಳ ವಿವರಗಳನ್ನು ಪಡೆಯುವ ಕೊನೆಯ ದಿನಾಂಕ: **21–03–2024 ರಂದು ಸಂಜೆ 5.00 ಗಂಟೆಯ ಒಳಗೆ ಪಡೆಯತಕ್ಕದ್ದು. (ಮರು ಪಾವತಿಸಲಾಗುವುದಿಲ್ಲ).** ಭರ್ತಿ ಮಾಡಿದ ನಿಗಧಿತ ಟೆಂಡರ್ ಅರ್ಜಿಯನ್ನು ಸ್ವೀಕರಿಸಲು ಕೊನೆಯ ದಿನಾಂಕ: **28–03–2024 ರಂದು ಮಧ್ಯಾಹ್ನ 12.30 ಗಂಟೆಯವರೆಗೆ ಮಾತ್ರ.** ಬಹಿರಂಗ ಹರಾಜು ನಡೆಯುವ ದಿನಾಂಕ: **28–03–2024 ರಂದು ಸಂಜೆ 4.00 ಗಂಟೆಗೆ, ಸ್ಥಳ: ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಯಶವಂತಪುರ, ಬೆಂಗಳೂರು ಆಡಳಿತ ಕಛೇರಿಯ ಸಭಾಂಗಣ.** ಹೆಚ್ಚಿನ ಮಾಹಿತಿ, ಷರತ್ತು ಮತ್ತು ನಿಬಂಧನೆಗಳನ್ನು ಕಛೇರಿ ವೇಳೆಯಲ್ಲಿ ಈ ಕಛೇರಿಯಿಂದ ಪಡೆಯಬಹುದಾಗಿದೆ.

ಸಹಿ/– ಕಾರ್ಯದರ್ಶಿ
ಕೃಉಮಾಸ, ಬೆಂಗಳೂರು

ವಾಸಾಸಂಇ/ವಾ.ಪ್ರ/4281/ಅಡ್ವಟೋರ್/2023–24

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ



ಸುಭಾಷಿತ

ಅಸಾಧಾರಣ ವ್ಯಕ್ತಿಗಳು ಅತ್ಯಂತ ಭಯಾನಕ ಪರಿಸ್ಥಿತಿಯನ್ನೂ ಎದುರಿಸಿ ಅದರಿಂದ ಹೊರಬರುತ್ತಾರೆ ಮತ್ತು ಆ ಕಾರಣದಿಂದ ಅವರು ಇನ್ನಷ್ಟು ಅಸಾಧಾರಣ ವ್ಯಕ್ತಿಗಳಾಗುತ್ತಾರೆ.

–ರಾಬರ್ಟ್‌ಸನ್ ಡೇವಿಸ್

ಸಾಯಿಬಾಬಾ ಕೊನೆಗೂ ದೋಷಮುಕ್ತ ನ್ಯಾಯಕ್ಕಾಗಿ ತೆತ್ತಿದ್ದು ಭಾರಿ ಬೆಲೆ

ದೆಹಲಿ ವಿಶ್ವವಿದ್ಯಾಲಯದಲ್ಲಿ ಪ್ರೊಫೆಸರ್ ಆಗಿದ್ದ ಜಿ.ಎನ್. ಸಾಯಿಬಾಬಾ ಅವರ ಜೀವನದ ಕಥೆಯು ಸರ್ಕಾರಗಳು ಅಮಾಯಕ ವ್ಯಕ್ತಿಯೊಬ್ಬನನ್ನು ಗುರಿಯಾಗಿಸಿಕೊಂಡು ನಡೆಸಿದ ಅನ್ಯಾಯಕ್ಕೆ ಬಹಳ ದೊಡ್ಡ ನಿದರ್ಶನ. ಸಾಯಿಬಾಬಾ ಅವರಿಗೆ ನ್ಯಾಯವು ಬಹಳ ತಡವಾಗಿ ದೊರೆತಿದೆ. ಅವರ ಜೀವನದ ಬಹುದೊಡ್ಡ ಭಾಗವು ವ್ಯರ್ಥವಾಗಿದೆ, ಅದನ್ನು ಇನ್ನು ಸರಿಪಡಿಸಲು ಸಾಧ್ಯವೇ ಇಲ್ಲ. ಮಾವೊವಾದಿಗಳ ಜೊತೆ ನಂಟು ಹೊಂದಿದ್ದ ಆರೋಪಕ್ಕೆ ಗುರಿಯಾಗಿದ್ದ, ದೇಶದ ಅತ್ಯಂತ ಕಠಿಣವಾದ ಒಂದು ಕಾನೂನಿನ ಅಡಿಯಲ್ಲಿ ಪ್ರಕರಣ ಎದುರಿಸಿದ್ದ ಸಾಯಿಬಾಬಾ ಮತ್ತು ಇತರ ಐವರನ್ನು ಬಾಂಬೆ ಹೈಕೋರ್ಟ್ ಈಚೆಗೆ ದೋಷಮುಕ್ತಗೊಳಿಸಿದೆ. ಸಾಯಿಬಾಬಾ ಮತ್ತು ಇತರರು ಜೈಲಿನಲ್ಲಿ 10 ವರ್ಷ ಕಾಲ ಸವೆಸಿದ ನಂತರದಲ್ಲಿ ಈ ಆದೇಶ ಹೊರಬಿದ್ದಿದೆ. ಸಾಯಿಬಾಬಾ ಅವರು ಗಾಲಿಕುರ್ಚಿಯ ಮೇಲೆ ಕುಳಿತು ಜೀವನ ಸಾಗಿಸುತ್ತಿದ್ದಾರೆ. ಸಾಯಿಬಾಬಾ ಅವರನ್ನು 2014ರಲ್ಲಿ ಬಂಧಿಸಲಾಗಿತ್ತು, ಇತರರ ಮೇಲೆ 2013ರಲ್ಲಿ ಆರೋಪ ಹೊರಿಸಲಾಗಿತ್ತು. ಅವರೆಲ್ಲರೂ ಅಂದಿನಿಂದ ಜೈಲಿನಲ್ಲಿ ಇದ್ದರು. ಆರೋಪಕ್ಕೆ ಗುರಿಯಾಗಿದ್ದವರಲ್ಲಿ ಒಬ್ಬರು ಮೃತಪಟ್ಟಿದ್ದಾರೆ. ವಿಚಾರಣಾ ನ್ಯಾಯಾಲಯವು ಎಲ್ಲ ಆರೋಪಿಗಳು ತಪ್ಪಿತಸ್ಥರು ಎಂದು ಆದೇಶಿಸಿತ್ತು. ಆರೋಪಿಗಳ ಪೈಕಿ ಐವರನ್ನು ಜೀವಾವಧಿ ಶಿಕ್ಷೆಗೆ, ಇನ್ನೊಬ್ಬರನ್ನು 10 ವರ್ಷಗಳ ಸೆರೆವಾಸಕ್ಕೆ ಗುರಿಪಡಿಸಿತ್ತು. ಹೈಕೋರ್ಟ್ ಇವರನ್ನು 2022ರಲ್ಲಿ ಕಾನೂನಿನ ಪ್ರಕ್ರಿಯೆಗಳ ಆಧಾರದಲ್ಲಿ ದೋಷಮುಕ್ತಗೊಳಿಸಿತ್ತು. ಆದರೆ ಈ ಆದೇಶಕ್ಕೆ ತಡೆ ನೀಡಿದ್ದ ಸುಪ್ರೀಂ ಕೋರ್ಟ್, ಪ್ರಕರಣದ ಸತ್ಯಾಸತ್ಯತೆಯ ಆಧಾರದಲ್ಲಿ ಹೊಸದಾಗಿ ವಿಚಾರಣೆ ನಡೆಸಬೇಕು ಎಂದು ಸೂಚಿಸಿತ್ತು.

ವೈಯಕ್ತಿಕ ಸ್ವಾತಂತ್ರ್ಯವು ಎಲ್ಲ ಪ್ರಜೆಗಳಿಗೆ ಸಂವಿಧಾನ ನೀಡಿರುವ ಹಕ್ಕು. ಇದನ್ನು ಇಷ್ಟು ಸಲೀಸಾಗಿ ಹತ್ತಿಕ್ಕಲು ಅವಕಾಶ ಇರಬಾರದು

ಪ್ರಾಸಿಕ್ಯೂಷನ್ ವಾದವನ್ನು ಬಾಂಬೆ ಹೈಕೋರ್ಟ್ ಸಂಪೂರ್ಣವಾಗಿ ತಿರಸ್ಕರಿಸಿದೆ. ಆರೋಪಿಗಳ ಮೇಲಿನ ಆರೋಪವನ್ನು ಸಾಬೀತುಪಡಿಸಲು ಮಹಾರಾಷ್ಟ್ರ ಸರ್ಕಾರ ನೆಚ್ಚಿಕೊಂಡ ಸಾಕ್ಷ್ಯಾಧಾರಗಳು ಸಾಕಾಗುವುದಿಲ್ಲ ಎಂದು ಹೇಳಿದೆ. ಅಲ್ಲದೆ, ಆರೋಪಿಗಳಿಗೂ ಭಯೋತ್ಪಾದಕ ಕೃತ್ಯಕ್ಕೂ ಪಿತೂರಿಗೂ ಅಥವಾ ಯಾವುದೇ ಮಾವೊವಾದಿ ಸಂಘಟನೆಗೂ ನಂಟು ತೋರಿಸುವಂಥದ್ದು ಏನೂ ಇಲ್ಲ ಎಂದು ಹೈಕೋರ್ಟ್ ಹೇಳಿದೆ. ಸರ್ಕಾರದ ವಿರೋಧಿ ಪಿತೂರಿಯಲ್ಲಿ ಸಾಯಿಬಾಬಾ ಅವರು ಭಾಗಿಯಾಗಿದ್ದರು ಎಂದು ಹೇಳಲು ಯಾವ ಸಾಕ್ಷ್ಯವೂ ಇಲ್ಲ ಎಂದು ಕೂಡ ಹೇಳಿದೆ. ಕಾನೂನುಬಾಹಿರ ಚಟುವಟಿಕೆಗಳ ತಡೆ ಕಾಯ್ದೆಯ (ಯುಎಪಿಎ) ಅಡಿಯಲ್ಲಿ ಕ್ರಮ ಜರುಗಿಸಲು ನೀಡಿದ ಅನುಮತಿಯನ್ನು ಮಾನ್ಯ ಮಾಡಲು ಆಗದು ಎಂದು ಹೇಳಿದೆ. ಪ್ರಾಧಿಕಾರದ ಅನುಮತಿ ಸಿಗುವ ಮೊದಲೇ ವಿಚಾರಣಾ ನ್ಯಾಯಾಲಯವು ಆರೋಪಗಳನ್ನು ಪರಿಗಣನೆಗೆ ತೆಗೆದುಕೊಳ್ಳುವ ಕೆಲಸ ಮಾಡಿತ್ತು. ಇವೆಲ್ಲವುಗಳನ್ನು ಗಮನಿಸಿದಾಗ ಅನ್ನಿಸುವುದು ಏನೆಂದರೆ, ಬಡವರು ಹಾಗೂ ದುರ್ಬಲ ವರ್ಗಗಳ ಹಕ್ಕುಗಳಿಗಾಗಿ ದನಿ ಎತ್ತಿದ, ಪಾರ್ಶ್ವವಾಯುವಿಗೆ ತುತ್ತಾಗಿರುವ ವ್ಯಕ್ತಿಯ ವಿರುದ್ಧ ಅತ್ಯಂತ ಕಠಿಣವಾದ ಭಯೋತ್ಪಾದನಾ ವಿರೋಧಿ ಕಾನೂನನ್ನು ಬಳಕೆ ಮಾಡಿಕೊಳ್ಳಲಾಯಿತು. ಅವರ ನಿಲುವು ಹಾಗೂ ಅವರ ಚಟುವಟಿಕೆಗಳು ಸರ್ಕಾರಕ್ಕೆ ಇಷ್ಟವಾಗುತ್ತಿರಲಿಲ್ಲ ಎಂಬ ಒಂದೇ ಕಾರಣಕ್ಕೆ ಹೀಗೆ ಮಾಡಲಾಯಿತು.

ಇಡೀ ಪ್ರಕರಣದಲ್ಲಿ ಅನುಸರಿಸಿದ ಕಾನೂನಿನ ಪ್ರಕ್ರಿಯೆ ಹಾಗೂ ಸಾಯಿಬಾಬಾ ವಿರುದ್ಧ ಹಾಜರುಪಡಿಸಿದ್ದ ಸಾಕ್ಷ್ಯಗಳು ಆರೋಪಗಳಿಗೆ ಪೂರಕವಾಗಿ ಇರಲಿಲ್ಲ. ಮಹಾರಾಷ್ಟ್ರ ರಾಜ್ಯ ಸರ್ಕಾರವು ಪೂರ್ವಗ್ರಹಪೀಡಿತವಾಗಿ, ಹಗೆ ತೀರಿಸಿಕೊಳ್ಳುವ ಉದ್ದೇಶದಿಂದ ಕೆಲಸ ಮಾಡಿತು. ಕೆಲವು ವ್ಯಕ್ತಿಗಳನ್ನು ಒಂದಿಷ್ಟು ವರ್ಷಗಳವರೆಗೆ ಕಿರುಕುಳಕ್ಕೆ ಗುರಿಪಡಿಸುವ ಉದ್ದೇಶದಿಂದ ಹೀಗೆ ಮಾಡಿತು. ನ್ಯಾಯಕ್ಕೆ ಕಣ್ಣಿಲ್ಲ ಎಂಬುದು ನಿಜ. ಆದರೆ ಈ ಪ್ರಕರಣವು ನ್ಯಾಯದಾನದ ಪ್ರಕ್ರಿಯೆಗಳ ಮೇಲೆ ನಿಯಂತ್ರಣ ಇರುವ ವ್ಯಕ್ತಿಗಳು ಅಸಹಾಯಕ ವ್ಯಕ್ತಿಗಳ ವಿರುದ್ಧ ಕುರುಡಾಗಿ ವರ್ತಿಸಿದರು ಎಂಬುದನ್ನು ತೋರಿಸಿದೆ. ಕಾನೂನುಗಳು ಮಾನವೀಯವಾಗಿರಬೇಕು. ಆದರೆ ಇಲ್ಲಿ ಕಾನೂನನ್ನು ಅತ್ಯಂತ ಅಮಾನವೀಯವಾಗಿ ಬಳಕೆ ಮಾಡಲಾಯಿತು. ಸಾಯಿಬಾಬಾ ಮತ್ತು ಇತರರು ಜೈಲಿನಲ್ಲಿ 10 ವರ್ಷ ಕಳೆದಿದ್ದಾರೆ. ಅವರಿಗೆ ಆ ದಿನಗಳನ್ನು ಮತ್ತೆ ಉಪಯುಕ್ತ ರೀತಿಯಲ್ಲಿ ಬಳಕೆ ಮಾಡಿಕೊಳ್ಳಲು ಇನ್ನು ಅವಕಾಶ ಸಿಗುವುದೇ ಇಲ್ಲ. ವೈಯಕ್ತಿಕ ಸ್ವಾತಂತ್ರ್ಯವು ಎಲ್ಲ ಪ್ರಜೆಗಳಿಗೆ ಸಂವಿಧಾನ ನೀಡಿರುವ ಹಕ್ಕು. ಇದನ್ನು ಇಷ್ಟು ಸಲೀಸಾಗಿ ಹತ್ತಿಕ್ಕಲು ಅವಕಾಶ ಇರಬಾರದು. ಈ ಪ್ರಕರಣದಲ್ಲಿ ಕೊನೆಗೂ ನ್ಯಾಯ ಸಿಕ್ಕಿದೆ. ಆದರೆ ಆ ನ್ಯಾಯಕ್ಕಾಗಿ ತೆರಬೇಕಾಗಿಬಂದ ಬೆಲೆ ಭಾರಿ ದೊಡ್ಡದು. ಇದಕ್ಕೆ ಪ್ರಭುತ್ವವೇ ಹೊಣೆ.

ದಿನದ ಟ್ವೀಟ್

ಎಲ್ಲರೂ ಒಂದೇ...

ಬೆಂಗಳೂರು ಬೆಳೆಯುತ್ತಿದ್ದಂತೆಯೇ ಅದನ್ನು ಭಾರತದ ಅತ್ಯಂತ ಭ್ರಷ್ಟ ಮೆಟ್ರೊ ನಗರವನ್ನಾಗಿ ಮಾಡುವಲ್ಲಿ ರಾಜಕಾರಣಿಗಳು ಮತ್ತು ಬಿಲ್ಡರ್‌ಗಳು ಕೈಜೋಡಿಸಿದರು. ಫಲಿತಾಂಶ– ನೀರಿನ ಮೂಲಗಳು ಮತ್ತು ಕೆರೆಗಳು ಬಿಲ್ಡರ್‌ಗಳ ವಶವಾಗಿವೆ. ಅದೇ ಮುಖ್ಯ ಸಮಸ್ಯೆ. ಇದು ಯಾವುದೇ ಒಂದು ಪಕ್ಷಕ್ಕೆ ಸಂಬಂಧಿಸಿದ್ದಲ್ಲ – ಎಲ್ಲರೂ ಒಂದೇ.

ಮೃದುಲ್ ಶ್ರೀವಾಸ್ತವ, ಗ್ಲೋಬಲ್ ಟೆಕ್ನಾಲಜಿ ಮಾರ್ಕೆಟಿಂಗ್ ಲೀಡರ್

ಕಿಡಿನುಡಿ

ಮತ್ತೊಂದು ವಿಪತ್ತು ನಮಗಾಗಿ ಕಾದಿದೆ. ಒಕ್ಕೂಟ ವ್ಯವಸ್ಥೆಯ ಆತ್ಮಕ್ಕೆ ಶಾಂತಿ ಸಿಗಲಿ!

(‘ಒಂದು ರಾಷ್ಟ್ರ ಒಂದು ಚುನಾವಣೆ’ಗೆ ರಾಮನಾಥ ಕೋವಿಂದ್ ನೇತೃತ್ವದ ಸಮಿತಿ ಹಸಿರು ನಿಶಾನೆ ತೋರಿಸಿರುವುದಕ್ಕೆ ಪ್ರತಿಕ್ರಿಯೆ)

ಮೈತ್ರೇಯಿ ಹೆಗಡೆ, ವಕೀಲೆ

25 ವರ್ಷಗಳ ಹಿಂದೆ

ಸೋಮವಾರ, 15-3-1999

● ಗೂಂಡಾ ವಿರೋಧಿ ಕಾಯ್ದೆಗೆ ಶೀಘ್ರ ತಿದ್ದುಪಡಿ: ಸಿಂಧ್ಯ

ಮಂಗಳೂರು, ಮಾರ್ಚ್ 14– ರಾಜ್ಯ ಸರ್ಕಾರ ಗೂಂಡಾ ವಿರೋಧಿ ಕಾಯ್ದೆ ಬಲಪಡಿಸಲು ನಿರ್ಧರಿಸಿದ್ದು, ಪ್ರಸಕ್ತ ಅಧಿವೇಶನದಲ್ಲೇ ತಿದ್ದುಪಡಿ ತರಲಾಗುವುದು ಎಂದು ಗೃಹ ಸಚಿವ ಪಿ.ಜಿ.ಆರ್. ಸಿಂಧ್ಯ ಹೇಳಿದರು.

ಮಂಗಳೂರು, ಉಡುಪಿ, ಚಿಕ್ಕಮಗಳೂರು, ಉತ್ತರ ಕನ್ನಡ ಜಿಲ್ಲೆಗಳ ಪೊಲೀಸ್ ವರಿಷ್ಠಾಧಿಕಾರಿಗಳ ಸಭೆಯ ನಂತರ ಇಂದು ಪತ್ರಕರ್ತರೊಂದಿಗೆ ಮಾತನಾಡಿದ ಅವರು ‘ಈಗಿರುವ ಕಾಯ್ದೆಯನ್ನು ಬಲಪಡಿಸುವ ಅಗತ್ಯವಿದೆ. ಈ ಕಾಯ್ದೆ ಅದಷ್ಟು ಬೇಗ ತಿದ್ದುಪಡಿ ಮಾಡಿದರೆ ಗೂಂಡಾಗಳನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಬಹುದು’ ಎಂದು ಹೇಳಿದರು. ಈ ಬಗ್ಗೆ ಹೆಚ್ಚಿನ ವಿವರ ಕೇಳಿದಾಗ, ವಿಧಾನಸಭೆ ಅಧಿವೇಶನ ನಡೆಯುತ್ತಿರುವುದರಿಂದ ವಿವರಗಳನ್ನು ನೀಡಲು ನಿರಾಕರಿಸಿದರು.

● ನೈರುತ್ಯ ರೈಲ್ವೆ ವಲಯ: ಗೌಡರ ಪ್ರತಿಕೃತಿ ದಹನ

ಹುಬ್ಬಳ್ಳಿ, ಮಾರ್ಚ್ 14– ನೈರುತ್ಯ ರೈಲ್ವೆ ವಲಯವನ್ನು ಬೆಂಗಳೂರಿನಿಂದ ಹುಬ್ಬಳ್ಳಿಗೆ ಸ್ಥಳಾಂತರಿಸಲು ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ಅವರು ವಿರೋಧ ವ್ಯಕ್ತಪಡಿಸಿರುವುದನ್ನು ಪ್ರತಿಭಟಿಸಿ ಇಲ್ಲಿ ಭಾರತೀಯ ಜನತಾ ಪಕ್ಷದ ನೂರಾರು ಕಾರ್ಯಕರ್ತರು ಗೌಡರ ಪ್ರತಿಕೃತಿ ದಹನ ಮಾಡಿದರು.

ಇಂದು ಬೆಳಿಗ್ಗೆ ನಗರದ ದುರ್ಗದಬೈಲ್ ಮಾರುಕಟ್ಟೆ ಪ್ರದೇಶದಲ್ಲಿ ಸೇರಿದ್ದ ಕಾರ್ಯಕರ್ತರು ದೇವೇಗೌಡ ವಿರುದ್ಧ ಘೋಷಣೆಗಳನ್ನು ಕೂಗಿದರು. ಉತ್ತರ ಕರ್ನಾಟಕದ ಅಭಿವೃದ್ಧಿಯನ್ನು ಸಹಿಸಲಾರದ ಗೌಡರು ಈ ರೀತಿ ಹೇಳಿಕೆಗಳನ್ನು ನೀಡಿ ಈ ಭಾಗದ ಅಭಿವೃದ್ಧಿಗೆ ಅಡ್ಡಗಾಲು ಹಾಕುತ್ತಿದ್ದಾರೆ ಎಂದು ಹುಬ್ಬಳ್ಳಿ– ಧಾರವಾಡ ಬಿಜೆಪಿ ಘಟಕದ ಅಧ್ಯಕ್ಷ ಪ್ರಲ್ಹಾದ ಜೋಶಿ ಆರೋಪಿಸಿದರು.

50 ವರ್ಷಗಳ ಹಿಂದೆ

ಶುಕ್ರವಾರ, 15-3-1974

● ಲೋಕೋಪಯೋಗಿ ಇಲಾಖೆ ಕಾಮಗಾರಿಗಳಲ್ಲಿ ಭಾರಿ ಅಕ್ರಮ

ಬೆಂಗಳೂರು, ಮಾರ್ಚ್ 14– ಲೋಕೋಪಯೋಗಿ ಇಲಾಖೆಯಿಂದ ಬರುವ, ಬೆಂಗಳೂರಿನ ಒಂದು ಮತ್ತು ನಾಲ್ಕು ಹಾಗೂ ಬಿಜಾಪುರದ ಕಾಮಗಾರಿ ಡಿವಿಜನ್‌ಗಳಲ್ಲಿ ಲಕ್ಷಾಂತರ ರೂಪಾಯಿಗಳ ಅಕ್ರಮ ನಡೆದಿರುವುದರ ಬಗ್ಗೆ ‘ಸಮರ್ಪಕ ಕ್ರಮ ಕೈಗೊಳ್ಳಲಾಗುತ್ತಿದೆ’ ಎಂದು ಸಚಿವ ಶ್ರೀ ಎಚ್.ಎಂ. ಚನ್ನಬಸಪ್ಪ ಅವರು ಸಂಸ್ಥಾ ಕಾಂಗ್ರೆಸ್‌ನ ಶ್ರೀ ಎಚ್.ಟಿ. ಕೃಷ್ಣಪ್ಪ ವಿಧಾನಸಭೆಯಲ್ಲಿ ತಂದಿದ್ದ ಗಮನ ಸೆಳೆಯುವ ಸೂಚನೆಗೆ ಉತ್ತರ ನೀಡಿದರು.

ಬೆಂಗಳೂರಿನ ಒಂದು ಡಿವಿಜನ್‌ನಲ್ಲಿ ‘ಚೆಕ್ ಆರ್ಡರ್’ ಇಲ್ಲದೇ, ಮಂಜೂರಾತಿ ಇಲ್ಲದೇ ನೂರಾರು ಮಿಕ್ಕಿ ಬಿಲ್ಲುಗಳ ಪಾವತಿ ಆಗಿವೆ. ಹಣ ಪಾವತಿ ನಿರ್ಬಂಧ ಇರುವ ಡಿಸೆಂಬರ್ 15ಕ್ಕೆ ಹಿಂದಿನ ತಾರೀಕುಗಳಿಗೆ ಬಿಲ್ಲುಗಳನ್ನು ತಿದ್ದಿ ಹಣ ಕೊಡಲಾಗಿದೆ. ‘ಇದರ ಬಗ್ಗೆ ಜಾಗ್ರತ ಆಯೋಗದ ಲಕ್ಷ ತನಿಖೆ ವಿಭಾಗದವರು ಪರಿಶೀಲಿಸಿದ್ದಾರೆ’ ಎಂದು ಸ್ಪಷ್ಟಪಡಿಸಿದರು.

● ಕೆಲಸಕ್ಕೆ ಬಾರದಿದ್ದರೆ ಬದಲಿ ಕ್ರಮ ರೈಲ್ವೆ ಗಾರ್ಡ್‌ಗಳಿಗೆ ಎಚ್ಚರಿಕೆ

ನವದೆಹಲಿ, ಮಾರ್ಚ್ 14– ವೇತನದ ಪುನರ್‌ವಿಮರ್ಶೆಗಾಗಿ ರೈಲ್ವೆ ಗಾರ್ಡ್‌ಗಳ ವರ್ಗವೊಂದು ಮಾರ್ಚ್ 10ರಿಂದ ಮುಷ್ಕರ ಆರಂಭಿಸಿರುವುದರಿಂದ, ರಾಷ್ಟ್ರದಲ್ಲಿ ವಸ್ತುಗಳ ಸಾಗಾಣಿಕೆ ಕಡಿಮೆಯಾಗಿರುವುದಾಗಿ ರೈಲ್ವೆ ಇಲಾಖೆ ಉಪ ಸಚಿವ ಮಹಮದ್ ಷಫಿ ಖುರೇಷಿ ಇಂದು ರಾಜ್ಯಸಭೆಗೆ ತಿಳಿಸಿದರು.

ಕೂಡಲೇ ಕೆಲಸ ವಾಪಸಾಗದಿದ್ದಲ್ಲಿ ಗೂಡ್ಸ್ ರೈಲುಗಳಲ್ಲಿ ಕೆಲಸ ಮಾಡುವ ಗಾರ್ಡ್‌ಗಳ ಸ್ಥಾನದಲ್ಲಿ ‘ಬ್ರೇಕ್‌ಮನ್’ಗೆ ಬಡ್ತಿ ನೀಡಿ ಅವರನ್ನು ನೇಮಕ ಮಾಡಲಾಗುವುದೆಂದೂ ಎಚ್ಚರಿಕೆ ನೀಡಿದರು.

ಜಲಮೂಲಗಳ ನಾಶ, ನೀರಿನ ಅವೈಜ್ಞಾನಿಕ ಬಳಕೆ ನಗರಗಳಲ್ಲಿ ನೀರಿನ ಕೊರತೆಗೆ ಕಾರಣ

ನೀರಿಗೆ ಬಡಿದಿರುವ ಸಿರಿಯ ಗರ!

ವಿಶ್ಲೇಷಣೆ

ಕೇಶವ ಎಚ್. ಕೊರ್ಸೆ

ಬೇಸಿಗೆಯ ಧಗೆಗೆ ಬರದ ಕಾವೂ ಜೊತೆಯಾಗಿ ಬೆಂಗಳೂರು ಈಗ ಬೇಯುತ್ತಿದೆ. ಜೀವಜಲದ ಕೊರತೆ ನಿಭಾಯಿಸಲು ಜಲಮಂಡಳಿ ಸೆಣಸಾಡುತ್ತಿದೆ. ನೀರಿನ ವಿತರಣೆಯಲ್ಲಿ ಕ್ಷಮತೆ, ಟ್ಯಾಂಕರ್ ಉದ್ಯಮದ ನಿಯಂತ್ರಣ, ಮಿತಬಳಕೆಯಂತಹ ಕ್ರಮಗಳಿಗೆ ಅದು ಮುಂದಾಗಿದೆ. ಖಾಲಿ ಕೆರೆಯಂಗಳದಲ್ಲಿ ಕೊಳವೆಬಾವಿ ತೋಡಿ ನೀರನ್ನು ಮೇಲೆತ್ತಿ ಫಿಲ್ಟರ್ ಮಾಡುವುದು, ಕೊಳಚೆ ನೀರಿನ ಸಂಸ್ಕರಣೆ, ವಾತಾವರಣದ ತೇವಾಂಶವನ್ನು ಬಾಷ್ಪೀಕರಿಸಿ ನೀರು ಸಂಗ್ರಹಿಸುವಂತಹ ಹೊಸ ಪ್ರಯೋಗಗಳ ಬಗೆಗೂ ಸರ್ಕಾರ ಈಗ ಚಿಂತಿಸುತ್ತಿರುವುದು ಮಾಧ್ಯಮಗಳಲ್ಲಿ ವರದಿಯಾಗಿದೆ.

ಹನಿ ನೀರಿಗಾಗಿ ಹಾಹಾಕಾರ ಎದ್ದಿರುವಾಗ, ಸಾಧ್ಯವಿರುವ ಜಲಮೂಲಗಳನ್ನೆಲ್ಲ ಹುಡುಕ ಹೊರಟಿರುವ ಸರ್ಕಾರದ ಪರಿಶ್ರಮವನ್ನು ಗೌರವಿಸೋಣ. ಅಂತಿಮಕ್ಷಣದ ಈ ಶಸ್ತ್ರಾಭ್ಯಾಸದಿಂದಾದರೂ ನೀರಿನ ಅಭಾವದ ಈ ಯುದ್ಧವನ್ನು ಎದುರಿಸಲು ಜನ ಶಕ್ತರಾದರೆ ಸಾಕು! ಆದರೆ, ಈ ತಾತ್ಕಾಲಿಕ ಸಮಾಧಾನಕ್ಕೂ ಮೀರಿದ ದೀರ್ಘಕಾಲೀನ ಪರಿಹಾರಗಳತ್ತಲೂ ಚಿಂತಿಸಬೇಕಲ್ಲವೇ?

ಕೆರೆಗಳಿಂದ ಆವೃತವಾಗಿದ್ದ ಸಮೃದ್ಧ ಬೆಂಗಳೂರು ಇಂಥ ದಯನೀಯ ಸ್ಥಿತಿಗೆ ತಲುಪಿದ ಬಗೆಯನ್ನು ಅವಲೋಕಿಸಬೇಕಿದೆ. ಹಿಂದಿನ ನಾಲ್ಕು ದಶಕಗಳಲ್ಲಿ ಈ ನಗರವು ಸುಮಾರು ಹತ್ತು ಪಟ್ಟು ವಿಸ್ತಾರವಾಗಿ ಇದೀಗ ಎಂಟುನೂರು ಚದರ ಕಿ.ಮೀಗೂ ಮಿಕ್ಕಿ ಬೆಳೆಯುತ್ತಿದೆ. ಈ ಕಿರು ಅವಧಿಯಲ್ಲಿ ಜನಸಂಖ್ಯೆಯು ಸುಮಾರು ಆರು ಪಟ್ಟು ಹೆಚ್ಚಾಗಿ ಒಂದೂವರೆ ಕೋಟಿಗೆ ತಲುಪುತ್ತಿದೆ. ಆರ್ಥಿಕ ಉದಾರೀಕರಣದ ನಂತರವಂತೂ ಶಿಕ್ಷಣ, ಉದ್ಯಮ, ಮಾಹಿತಿ ತಂತ್ರಜ್ಞಾನದಲ್ಲಾದ ಕ್ರಾಂತಿಯಿಂದಾಗಿ ಆರ್ಥಿಕತೆ ತೀವ್ರವಾಗಿ ಹಿಗ್ಗಿ, ಜನರ ತಲಾದಾಯ ಆರೆಂಟು ಪಟ್ಟು ಹೆಚ್ಚಾಗಿ, ಅತಿವೇಗವಾಗಿ ಬೆಳೆಯುತ್ತಿರುವ ಒಂದು ಜಾಗತಿಕ ನಗರವಾಗಿ ರೂಪಾಂತರವಾಗಿದೆ. ನವ ಆರ್ಥಿಕತೆಯು ತಂದಿರುವ ಶ್ರೀಮಂತಿಕೆಯ ಮೆಗಾ ರೂಪಕವೆಂಬಂತೆ ಬೆಂಗಳೂರನ್ನು ಈಗ ವರ್ಣಿಸಲಾಗುತ್ತಿದೆಯಲ್ಲವೇ?

ಸರಿ, ಹಿಂದಿನ ನಾಲ್ಕು ದಶಕಗಳಲ್ಲಿ ಬೆಂಗಳೂರಿನ ಅಂಗಳದಲ್ಲಾದ ಈ ಆರ್ಥಿಕ ಅಭಿವೃದ್ಧಿ ಸ್ಫೋಟದಲ್ಲಿ, ಈವರೆಗೂ ನಗರವನ್ನು ಪೊರೆಯುತ್ತಿದ್ದ ಹಿತ್ತಲಿನ ನಿಸರ್ಗವೇನಾಯಿತು? ಜಲಮೂಲವಾಗಿದ್ದ ಬಹುತೇಕ ಕೆರೆ, ತೊರೆಗಳು ಕಣ್ಮರೆಯಾದವು. ಅರ್ಕಾವತಿ, ವೃಷಭಾವತಿ, ಕುಮುದ್ವತಿ ನದಿಪಾತ್ರಗಳು ಒಣಗಿ ಕೊಳಚೆ ಮೋರಿಗಳಾದವು. ಆರೆಂಟು ದಶಕಗಳಿಂದ ನೀರು ನೀಡಿ ಸಲಹಿದ್ದ ತಿಪ್ಪಗೊಂಡನಹಳ್ಳಿ ಜಲಾಶಯವಂತೂ ಹೂಳು ತುಂಬಿ, ಜಲಾನಯನ ಪ್ರದೇಶ ಮಾಯವಾಗಿ ಅವಸಾನದಂಚಿಗೆ ತಲುಪಿದೆ. ಮುಕ್ಕಾಲುಭಾಗ ಹಸಿರು ಕವಚದಿಂದ ಕೂಡಿ ತಂಪಾಗಿದ್ದ ನಗರದಲ್ಲಿ ಈಗ ಶೇ 15ರಷ್ಟು ಪ್ರದೇಶದಲ್ಲೂ ಹಸಿರು ಉಳಿದಿಲ್ಲ. ಬೇಸಿಗೆಯಲ್ಲಿ ಅಬ್ಬಬ್ಬಾ ಎಂದರೆ 33-34 ಡಿಗ್ರಿ ಸೆಲ್ಸಿಯಸ್ ಇರುತ್ತಿದ್ದ ತಾಪಮಾನ, ನಲವತ್ತು ಡಿಗ್ರಿ ದಾಟುವುದು ಈಗ ಸಾಮಾನ್ಯವಾಗುತ್ತಿದೆ! ಏಕಮುಖ ಆರ್ಥಿಕ ಅಭಿವೃದ್ಧಿಯ ಗರಬಡಿದು ನಿಸರ್ಗದ ಹಸಿರು ರಕ್ಷಾಕವಚ ಕರಗಿ, ಕುಡಿಯುವ ನೀರಿಗೂ ಬರ ಬಂದ ಬೆಂದಕಾಳೂರಿನ ಕಥೆಯಿದು.

ನಾಡಿನ ಬಹುತೇಕ ನಗರ, ಪಟ್ಟಣಗಳ ಕಥೆಯೂ ಇದೇ! ಅವುಗಳ ಸವಾಲುಗಳ ತೀವ್ರತೆಯಲ್ಲಿ ವ್ಯತ್ಯಾಸ ಇದ್ದರೂ, ಸಮಸ್ಯೆಗಳು ಬೆಳೆಯುತ್ತಿರುವ ಪರಿ ಮಾತ್ರ ಒಂದೇ. ನಗರಗಳು ಬೆಳೆದಂತೆಲ್ಲ ಸುತ್ತಲಿನ ಊರು-ಕೇರಿ, ಕೆರೆ-ಹೊಳೆ, ಗದ್ದೆ-ತೋಟಗಳನ್ನು ಕಬಳಿಸುತ್ತಿವೆ. ಕೆರೆ, ಹಳ್ಳ, ಗೋಮಾಳಗಳನ್ನು ಸಾಮೂಹಿಕವಾಗಿ ನಿರ್ವಹಿಸುತ್ತಿದ್ದ ಹಳ್ಳಿಗರು ಪಟ್ಟಣಿಗರಾಗುತ್ತಿದ್ದಂತೆ, ನೆಲ, ಜಲ ರಕ್ಷಣೆಯಲ್ಲಿ ತಮ್ಮ ಜವಾಬ್ದಾರಿ ಮರೆಯುತ್ತಿದ್ದಾರೆ. ಹೀಗಾಗಿ, ಕರಾವಳಿ, ಮಲೆನಾಡು, ಒಳನಾಡು ಎಲ್ಲೆಡೆಯೂ, ಪುಟ್ಟ ಪಟ್ಟಣಗಳಲ್ಲೂ ಜಲಮೂಲಗಳೆಲ್ಲ ಕೊಳಚೆಯಾಗುತ್ತಿವೆ. ಕುಡಿಯುವ ನೀರಿನ ಬರ ಕಾಡುತ್ತಿದೆ. ಅಂತರ್ಜಲ ಮರುಪೂರಣ, ಹೊಳೆ, ಕೆರೆ, ಬಾವಿಗಳಲ್ಲಿ ಶುದ್ಧ ನೀರಿನ ಲಭ್ಯತೆ, ಕಲುಷಿತ ನೀರಿನ ಶುದ್ಧೀಕರಣದಂತಹವೆಲ್ಲವನ್ನೂ ನಿರಂತರವಾಗಿ ಉಚಿತವಾಗಿ ನಿರ್ವಹಿಸಿ ಜನಜೀವನವನ್ನು ಪೊರೆಯುತ್ತಿದ್ದ ನಿಸರ್ಗದತ್ತ ವ್ಯವಸ್ಥೆಯೇ ಧ್ವಂಸವಾಗುತ್ತಿದೆ. ಆ ಒಂದೊಂದು ಅಗತ್ಯವನ್ನೂ ಕೃತಕವಾಗಿ ಕೈಗೊಳ್ಳಲು ನೂರಾರು ಕೋಟಿ ಹಣ ವ್ಯಯಿಸಬೇಕಾದ ದೈನೇಸಿ ಹಂತಕ್ಕೆ ಈಗ ತಲುಪಿದ್ದೇವೆ. ಜನರ ಕೊಳ್ಳುವ ಶಕ್ತಿ ಹೆಚ್ಚಾಗುವುದಕ್ಕೂ ನೀರನ್ನು ಬಳಸಿ ತ್ಯಾಜ್ಯ ಹೊರಚೆಲ್ಲುವ ಪ್ರಮಾಣದ ಹೆಚ್ಚಳಕ್ಕೂ ನೇರ ಸಂಬಂಧವಿದೆ!

ಈ ವಿಷಮ ಪರಿಸ್ಥಿತಿಯಿಂದ ಪಾರಾಗಬೇಕೆಂದರೆ, ತೋರಿಕೆಯ ಸ್ಲೋಗನ್ ಹಾಗೂ ಹಣ ಹೂಡುವುದೇ ಮಾನದಂಡವಾಗಿರುವ ದಿಕ್ಕುದೆಸೆಯಿಲ್ಲದ ಈಗಿನ ಯೋಜನೆಗಳು ನಿಲ್ಲಬೇಕು. ನೆಲ, ಜಲ ರಕ್ಷಣೆಯ ಕಾನೂನುಗಳ ಕಟ್ಟುನಿಟ್ಟಿನ ಪಾಲನೆ, ಸೂಕ್ತ ತಂತ್ರಜ್ಞಾನ ಹಾಗೂ ಯಶೋಗಾಥೆಗಳ ಅಳವಡಿಕೆ, ಜನ ಸಹಭಾಗಿತ್ವವಿರುವ ಕಾಲಬದ್ಧ ಯೋಜನೆಗಳು- ಇವು ಮೂರನ್ನೂ ಒಟ್ಟಾಗಿ ಸಾಧಿಸಲೇಬೇಕು. ನಗರ, ಪಟ್ಟಣಗಳ ನೀರು ಹಾಗೂ ತ್ಯಾಜ್ಯ ನಿರ್ವಹಣೆಯನ್ನು ಪಾರದರ್ಶಕತೆ ಮತ್ತು ಕ್ಷಮತೆಯಿಂದ ನಿರ್ವಹಿಸಬಲ್ಲ ಒಂದು ಸ್ವಾಯತ್ತ ವ್ಯವಸ್ಥೆ ರೂಪುಗೊಂಡರೆ ಮಾತ್ರ ಇದು ಸಾಧ್ಯ. ಈ ದಿಸೆಯಲ್ಲಿ ಈಗಾಗಲೇ ತಕ್ಕಮಟ್ಟಿಗೆ ಯಶಸ್ಸು ಸಾಧಿಸಿರುವ ಮಧ್ಯಪ್ರದೇಶದ ಇಂದೋರ್ ನಗರವು ನಮ್ಮ ನಗರ, ಪಟ್ಟಣಗಳಿಗೆ ಪ್ರೇರಣೆಯಾಗುವಂತಿದೆ.



ಈ ದಿಸೆಯ ಸವಾಲುಗಳಲ್ಲಿ, ಸ್ಥೂಲವಾಗಿ ಮೂರು ಆಯಾಮಗಳನ್ನು ಗುರುತಿಸಬಹುದು. ಮೊದಲಿನದು, ಜಲಮೂಲಗಳ ರಕ್ಷಣೆ. ನಗರಗಳಿಗೆ ನೀರು ಪೂರೈಸುವ ನದಿ, ಕೆರೆಗಳು ಹಾಗೂ ಮಳೆನೀರನ್ನು ಸಾಗಿಸುವ ರಾಜಕಾಲುವೆಗಳ ಜಲಾನಯನ ಪ್ರದೇಶದ ಗಡಿ ಗುರುತಿಸಿ, ಅವುಗಳ ಅಂಚಿನಲ್ಲಿ ಇರಬೇಕಾದ ಕನಿಷ್ಠ ‘ಬಫರ್ ವಲಯ’ವನ್ನು ಕಾದುಕೊಳ್ಳಬೇಕು. ಅಲ್ಲಿ ಸೂಕ್ತ ಗಿಡಮರಗಳ ಹಸಿರುಕವಚ ಬೆಳೆಸಿದರೆ ನೆರೆ ನಿಯಂತ್ರಣ, ಮಳೆನೀರು ಸಂಗ್ರಹ, ಸಿಹಿನೀರಿನ ಸಂಗ್ರಹ ಎಲ್ಲವೂ ಸಾಧ್ಯವಾಗಬಲ್ಲದು. ರಿಯಲ್ ಎಸ್ಟೇಟ್ ಉದ್ಯಮ, ಭೂ ಒತ್ತುವರಿ, ಸೂಕ್ತ ನೆಲಬಳಕೆ ನೀತಿಯೇ ಇರದೆ ಸಾಗಿರುವ ನಗರೀಕರಣದಂತಹವನ್ನೆಲ್ಲ ನಿಯಂತ್ರಿಸಿದರೆ ಮಾತ್ರ ಈ ಜಲಪಾತ್ರಗಳು ಉಳಿದಾವು. ಕೊಳವೆಬಾವಿ ಬಳಕೆಗಂತೂ ನಿಯಂತ್ರಣ ಬೇಕೇಬೇಕು. ನೆರೆ, ಬರ ಎಲ್ಲಕ್ಕೂ ‘ಹವಾಮಾನ ಬದಲಾವಣೆ’ಯತ್ತ ಬೊಟ್ಟು ಮಾಡುವ ಉಡಾಫೆ ಕೈಬಿಟ್ಟು, ಈ ಬಗೆಯ ಶಿಸ್ತುಬದ್ಧ ಜಲನಿರ್ವಹಣೆಗೆ ಮುಂದಾಗಬೇಕಿದೆ.

ಎರಡನೆಯದು, ಬಳಕೆದಾರರ ಹೊಣೆಗಾರಿಕೆ. ಮನೆ, ಉದ್ಯಮ, ವಸತಿ ಸಮುಚ್ಚಯ, ಸಾರ್ವಜನಿಕ ಹಾಗೂ ಕೈಗಾರಿಕಾ ಪ್ರದೇಶದಂತಹ ಎಲ್ಲೆಡೆ ಮಳೆನೀರು ಸಂಗ್ರಹ ಯೋಜನೆಯ ಅನುಷ್ಠಾನವಾಗಬೇಕು. ಇದಕ್ಕೆ ಬೇಕಾದ ಸೂಕ್ತ ತಂತ್ರಜ್ಞಾನ ಹಾಗೂ ಯಶೋಗಾಥೆಗಳು ನಮ್ಮ ನಾಡಿನಲ್ಲೇ ಲಭ್ಯವಿವೆ. ಈಗ ಬೇಕಾದದ್ದು ಅಳವಡಿಕೆಯ ಬದ್ಧತೆ ಮಾತ್ರ. ನಗರಾಡಳಿತಗಳು ಒದಗಿಸುವ ಕುಡಿಯುವ ನೀರನ್ನು ಮನೆ ಹಾಗೂ ಉದ್ಯಮಗಳಲ್ಲಿ ಮಿತವಾಗಿ ಬಳಸಬೇಕು. ಉಳಿದಂತೆ ಗೃಹಬಳಕೆ, ತೋಟಗಾರಿಕೆ, ಉದ್ಯಮ, ಕೈಗಾರಿಕೆ ತೆರನ ವಾಣಿಜ್ಯ ಬಳಕೆಗೆ ಸಂಸ್ಕರಿಸಿದ ನೀರನ್ನು ಮರುಬಳಸುವ ನೀತಿ ಜಾರಿಯಾಗಬೇಕಿದೆ. ಸಮಾಜವು ನೀರಿನ ಬಳಕೆಯ ತನ್ನ ನಡವಳಿಕೆಯಲ್ಲಿ ಈ ಬದಲಾವಣೆ ಮಾಡಿಕೊಳ್ಳಬೇಕಾದದ್ದು ಅತ್ಯಗತ್ಯ.

ಅಂತಿಮವಾಗಿ, ಕೊಳಚೆನೀರಿನ ಸಂಸ್ಕರಣೆ ಕುರಿತು ಹೇಳುವುದಾದರೆ, ಮನೆ ಹಾಗೂ ಕೈಗಾರಿಕೆಗಳ ತ್ಯಾಜ್ಯ ನೀರನ್ನು ಪ್ರತ್ಯೇಕವಾಗಿ ಸಾಗಿಸಿ ಸಂಸ್ಕರಿಸಬೇಕು. ಕೊಳಚೆಯ ಸ್ವರೂಪವನ್ನು ಆಧರಿಸಿ, ವಿವಿಧ ಬಗೆಯ ಸುಲಭ ಶುದ್ಧೀಕರಣ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳಲು ಸಾಧ್ಯವಿದೆ. ಸರ್ಕಾರ ಹಾಗೂ ಖಾಸಗಿ ಕ್ಷೇತ್ರಗಳು ಜವಾಬ್ದಾರಿಯುತವಾಗಿ ವರ್ತಿಸಿದರೆ ಇದು ಸಾಧ್ಯ. ಸಂಸ್ಕರಿಸಿದ ನೀರಿನ ಸುರಕ್ಷತೆಯನ್ನು ಜನರು ತಕ್ಷಣ ಒಪ್ಪಲಿಕ್ಕಿಲ್ಲ. ನದಿ, ಕೆರೆಗಳ ಮೂಲದ ಸ್ವಚ್ಛ ನೀರನ್ನು ಗ್ರಾಹಕರಿಗೆ ಒದಗಿಸುವಾಗಲೂ ಈಗಿನ ನಗರಾಡಳಿತಗಳು ಹಲವೊಮ್ಮೆ ಸೋಲುತ್ತಿರುವಾಗ, ನಾಗರಿಕರು ತೋರಬಹುದಾದ ಅಂಥ ಸಂಶಯ ಸಹಜವೇ. ನ್ಯೂನತೆಗಳನ್ನೆಲ್ಲ ಮೀರಿದ ಕಾರ್ಯಕ್ಷಮತೆ ಹಾಗೂ ಪಾರದರ್ಶಕತೆಯಿರುವ ವಿಶ್ವಾಸಾರ್ಹ ‘ಜಲಮೂಲ ರಕ್ಷಣೆ ಹಾಗೂ ವಿತರಣೆ ವ್ಯವಸ್ಥೆ’ಯೊಂದಕ್ಕಾಗಿ ನಗರ ಪ್ರದೇಶಗಳೀಗ ಕಾಯುತ್ತಿವೆ.

ನೈಸರ್ಗಿಕ ಜಲಚಕ್ರದ ಪುನರುತ್ಥಾನವು ಆರ್ಥಿಕ ಅಭಿವೃದ್ಧಿಯ ಭಾಗವಾಗಲಿ, ಮಳೆ ಬಂದು ಕೆರೆ ತುಂಬಿದಾಗಲೂ ಈ ವಿವೇಕವಿರಲಿ. ಬೆಂಗಳೂರು ಸೇರಿದಂತೆ ನಾಡಿನ ನಗರಗಳ ಭವಿಷ್ಯಕ್ಕೆ ಸಿರಿಯ ಗರ ಬಡಿಯದಿರಲಿ!

ಚುರುಮುರಿ



ರಾಜಕೀಯ ಅಂದ್ರೆ...

● ಬಿ.ಎನ್.ಮಲ್ಲೇಶ್

‘**ಮಹಾಲಕ್ಷ್ಮೀ...** ಮಂಜಮ್ಮನ ಮನಿಗೆ ಬಾರಮ್ಮಾ...’ ಎಂದ ಗುಡ್ಡೆ ನಾಟಕೀಯವಾಗಿ.

‘ಯಾಕೋ ಗುಡ್ಡೆ, ನಮ್ಮನಿಗೆ ನೀನು ಮಹಾಲಕ್ಷ್ಮಿ ಕರೀತಿದೀಯ?’ ಮಂಜಮ್ಮ ನಗುತ್ತ ಕೇಳಿದಳು.

‘ಅದು ನಮ್ ಪಕ್ಷದ ಹೊಸ ಗ್ಯಾರಂಟಿ ಮಂಜಮ್ಮ, ವರ್ಷಕ್ಕೆ ಲಕ್ಷ ರೂಪಾಯಿ. ಓನ್ಲಿ ಫಾರ್ ಲೇಡೀಸ್’.

‘ಓ... ಅದಾ? ಅದು ನಿಮ್ ಪಕ್ಷ ಸೆಂಟ್ರಲ್‌ನಲ್ಲಿ ಅಧಿಕಾರಕ್ಕೆ ಬಂದಾಗ, ನಾವು ತಗಂಡಾಗ’.

‘ಅಂದ್ರೆ? ಈಗ ನಮ್ ಸ್ಟೇಟ್ ಗ್ಯಾರಂಟಿನೆಲ್ಲ ನೀನು ತಗಾತಿಲ್ವಾ? ಅಕ್ಕಿ, ಕರೆಂಟು, ದುಡ್ಡು ಎಲ್ಲ ತಗಂಡು ಮತ್ತೆ ನಮ್ ಪಕ್ಷದ ವಿರುದ್ಧಾನೇ ಮಾತಾಡ್ತೀಯ?’ ಗುಡ್ಡೆ ಆಕ್ಷೇಪಿಸಿದ.

‘ಲೇಯ್, ಸಾಕು ನಿಮ್ ಜಗಳ. ಇದು ಹರಟೆಕಟ್ಟೆ, ಇಲ್ಲಿ ರಾಜಕೀಯ ಬ್ಯಾಡ’ ದುಬ್ಬೀರ ರೇಗಿದ.

‘ಅಲೆ ಇವ್ನ, ರಾಜಕೀಯ ಮಾತಾಡಕೇ ನಾವು ಇಲ್ಲಿಗೆ ಬರೋದು, ನಮ್ಮಿಂದ್ಲೇ ಈ ಮಂಜಮ್ಮಗೆ ವ್ಯಾಪಾರ ಆಗೋದು’ ಗುಡ್ಡೆ ವಾದಿಸಿದ.

‘ಹೌದೌದು, ಭಾರೀ ವ್ಯಾಪಾರ ನಿಮ್ದು, ಬಾಕಿಪಟ್ಟಿ ಕೊಡ್ಲಾ?’ ಮಂಜಮ್ಮನಿಗೆ ಸಿಟ್ಟು ಬಂತು.

‘ಬಿಡು ಮಂಜಮ್ಮ, ಈಗ ಈ ಬ್ಯಾಡಗಿ ಮೆಣ್ಸಿನ್‌ಕಾಯಿ ಕತಿ ಏನಾತು?’ ತೆಪರೇಸಿ ವಿಷಯಾಂತರ ಮಾಡಿದ.

‘ಟಿಕೆಟ್ ಸಿಗದೇ ಇರೋರಿಗೆಲ್ಲ ಈಗ ಬ್ಯಾಡಗಿ ಮೆಣ್ಸಿನ್‌ಕಾಯಿ ಉರಿ ಕಿತ್ಕಂಬಿಟ್ಟದೆಯಂತೆ, ಮಂಜಮ್ಮನ ಪಕ್ಷದಲ್ಲಿ ಅಲ್ಲೋಲ ಕಲ್ಲೋಲ’ ಗುಡ್ಡೆ ಕಿಸಕ್ಕೆಂದ.

‘ಟಿಕೆಟ್ ಸಿಗದಿದ್ರೆ ಪಕ್ಷದ ಕಚೇರಿಯ ಕಸ ಗುಡಿಸ್ತಾರೆ, ನೆಲ ಒರೆಸ್ತಾರೆ ಬಿಡು’ ಮಂಜಮ್ಮ ವಾದಿಸಿದಳು.

‘ಲೇಯ್ ಎಲ್ಲ ಪಕ್ಷದಲ್ಲೂ ಟಿಕೆಟ್ ಗದ್ಲ ಇದ್ದದ್ದೇ. ರಾಜಕೀಯ ಅಂದ್ರೆ ಹಂಗೇ. ಇವತ್ತು ಈ ಪಕ್ಷ, ನಾಳೆ ಇನ್ನೊಂದು ಪಕ್ಷ’ ಎಂದ ದುಬ್ಬೀರ.

‘ಹಾ... ಈಗ ನೀನ್ಯಾಕಪ ರಾಜಕೀಯ ಮಾತಾಡಿದೆ? ದಂಡ ಕಟ್ಟು, ಎಲ್ರಿಗೂ ಚಾ ಹೇಳು’ ಎಂದ ಗುಡ್ಡೆ. ಎಲ್ಲರೂ ಗೊಳ್ಳಂತ ನಕ್ಕರು.

ಸಂಗತ

ಮಕ್ಕಳು ಪಾಸ್, ಪರೀಕ್ಷೆ ಫೇಲ್!

ಶಾಲಾ ಪುಸ್ತಕದೊಳಗೆ ಎಷ್ಟೊಂದು ಮೌಲ್ಯಗಳಿದ್ದರೂ ಸಮಾಜ ಇಷ್ಟೊಂದು ನೈತಿಕ ಅಧಃಪತನಕ್ಕೆ ತಳ್ಳಲ್ಪಡುತ್ತಿರುವುದಕ್ಕೆ ನಮ್ಮ ಶಿಕ್ಷಣ ಕ್ರಮದಲ್ಲಿಯೇ ಉತ್ತರ ಇದೆ

● ಸದಾಶಿವ್ ಸೊರಟೂರು

ಒಂದು ಮಗು ‘ಕಾಯಿಪಲ್ಲೆ ತಿನ್ನುವುದು ಆರೋಗ್ಯಕ್ಕೆ ಒಳ್ಳೆಯದು. ಅದರಿಂದ ದೇಹಕ್ಕೆ ಬಹಳಷ್ಟು ಪೋಷಕಾಂಶಗಳು ಲಭ್ಯವಾಗುತ್ತವೆ’ ಎಂದು ಪರೀಕ್ಷೆಯಲ್ಲಿ ಉತ್ತರ ಬರೆಯಿತು ಎಂದುಕೊಳ್ಳಿ. ಅದಕ್ಕೆ ಪೂರ್ಣ ಅಂಕಗಳು ಸಿಗುತ್ತವೆ. ಆಗ ಮಗು ತಾನು ಕಲಿಯಬೇಕಾದುದನ್ನು ಕಲಿಯಿತು ಎಂದು ತೀರ್ಮಾನಿಸಲಾಗುತ್ತದೆ. ಆದರೆ ಆ ಮಗು ತಾನು ಊಟ ಮಾಡುವಾಗ ತಟ್ಟೆಯಲ್ಲಿರುವ ಕಾಯಿಪಲ್ಲೆಗಳನ್ನು ತೆಗೆದು ಪಕ್ಕಕ್ಕಿಟ್ಟು ಊಟ ಮಾಡಿದರೆ ಆ ಕಲಿಕೆಯನ್ನು ಹೇಗೆ ವ್ಯಾಖ್ಯಾನಿಸಬಹುದು?

ಇಲ್ಲಿ ಪರೀಕ್ಷೆಯು ಆ ಮಗುವಿಗೆ ಕಲಿಕೆಯಾಗಿದೆ ಎಂದು ಹೇಳುತ್ತದೆ. ಆದರೆ ಮಗುವಿಗೆ ನಿಜಕ್ಕೂ ಕಲಿಕೆಯಾಗಿಲ್ಲ. ಕಲಿಕೆಯಾಗಿದ್ದರೆ ಮಗು ಕಾಯಿಪಲ್ಲೆಯನ್ನು ತಿನ್ನದೆ ಆಚೆ ಇಡುತ್ತಿರಲಿಲ್ಲ. ಇಲ್ಲಿ ಪರೀಕ್ಷೆಯು ಅಳೆದದ್ದು ಮಗುವಿನಲ್ಲಿರುವ ಮಾಹಿತಿಯನ್ನು ಮಾತ್ರ. ಉತ್ತೀರ್ಣವಾದದ್ದು ಮಗು, ಆದರೆ ಅನುತ್ತೀರ್ಣ ಆದದ್ದು ನಮ್ಮ ಪರೀಕ್ಷಾ ಕ್ರಮ!

ರಾಜ್ಯ ಪಠ್ಯಕ್ರಮ ಅನುಸರಿಸುತ್ತಿರುವ ಶಾಲೆಗಳ 5, 8 ಹಾಗೂ 9ನೇ ತರಗತಿಗಳಿಗೆ ಮೌಲ್ಯಾಂಕನ ಪರೀಕ್ಷೆ (ಬೋರ್ಡ್ ಪರೀಕ್ಷೆ) ನಡೆಸುವ ತೀರ್ಮಾನಕ್ಕೆ ಸುಪ್ರೀಂ ಕೋರ್ಟ್ ತಡೆ ನೀಡಿದೆ. ಶಿಕ್ಷಣ ಇಲಾಖೆಗೆ ಈ ಪರೀಕ್ಷೆ ಬೇಕು, ಖಾಸಗಿ ಶಾಲಾ ಆಡಳಿತ ಮಂಡಳಿಗಳನ್ನು ಪ್ರತಿನಿಧಿಸುವ ಕೆಲವು ಸಂಘಗಳಿಗೆ ಈ ಪರೀಕ್ಷೆ ಬೇಡ. ಈ ಹಗ್ಗಜಗ್ಗಾಟ ನಡೆಯುತ್ತಲೇ ಇದೆ. ಈ ಎರಡರ ನಡುವೆ ನಲುಗಿ ಹೋಗುತ್ತಿರುವವರು ಮಾತ್ರ ಮಕ್ಕಳು.

ಮೌಲ್ಯಾಂಕನ ಪರೀಕ್ಷೆ ಎಂದರೆ ಮತ್ತೇನೂ ಅಲ್ಲ. ಪರೀಕ್ಷೆ ನಡೆಸುವ ಸಲುವಾಗಿಯೇ ಇರುವ ಬೋರ್ಡ್ ಈ ಪರೀಕ್ಷೆಯನ್ನು ನಡೆಸುತ್ತದೆ. ಪ್ರಶ್ನೆಪತ್ರಿಕೆಯನ್ನು ಅದೇ ಕೊಡುತ್ತದೆ. ಪರೀಕ್ಷೆ ನಡೆಸಲು ಬದಲಿ ಶಿಕ್ಷಕರನ್ನು ನಿಯೋಜಿಸುತ್ತದೆ. ಮೌಲ್ಯಮಾಪನ ಕೂಡ ಬದಲಿ ಶಿಕ್ಷಕರಿಂದ ಆಗುತ್ತದೆ. ಶಿಕ್ಷಕರೇ ನಡೆಸುವ ಶಾಲಾ ಪರೀಕ್ಷೆಗಳಲ್ಲಿ ಇದೆಲ್ಲಾ ಇರುವುದಿಲ್ಲ. ಸಂಬಂಧಿಸಿದ ಶಿಕ್ಷಕರೇ ಪ್ರಶ್ನೆಪತ್ರಿಕೆ ಸಿದ್ಧಪಡಿಸಿ, ಅವರೇ ಪರೀಕ್ಷೆ ನಡೆಸಿ, ಅವರೇ ಮೌಲ್ಯಮಾಪನ ಮಾಡುತ್ತಾರೆ.

ಪರೀಕ್ಷೆ ಯಾವುದೇ ಆದರೂ ಮೂರು ಗಂಟೆ ಕೂತು ಬರೆಯಬೇಕಾದುದು ಮಗು. ಇಲಾಖೆಯು ಮೌಲ್ಯಾಂಕನದ ಕುರಿತಾಗಿ ಹಟ ಹಿಡಿದಿರುವುದು ಮತ್ತು ಸಂಘಗಳು ಮೌಲ್ಯಾಂಕನ ಬೇಡವೇ ಬೇಡ ಎನ್ನುತ್ತಿರುವುದಕ್ಕೆ ಅವರಿಗೆ ಅವರದೇ ಆದ ಕಾರಣಗಳಿರಬಹುದು. ಆದರೆ ಈ ಎರಡೂ ಕಡೆಯವರಲ್ಲಿ ಯಾರೂ ತಾವು ಮಾಡುವ ಪರೀಕ್ಷೆಗಳು ತೀರಾ ವಿಶ್ವಾಸಾರ್ಹತೆಯಿಂದ ಕೂಡಿವೆಯೇ ಎಂದು ಯೋಚಿಸಲು ಹೋಗುತ್ತಿಲ್ಲ.

ಯಾರು ಕಲಿಸುತ್ತಾರೊ ಅವರೇ ಮಗುವಿನ ಕಲಿಕೆಯ ಮೌಲ್ಯಮಾಪನ ಮಾಡಬೇಕು ಅನ್ನುತ್ತಾರೆ ಶಿಕ್ಷಣ ತಜ್ಞರು. ಅದು ಸರಿ ಕೂಡ. ಮಗುವಿನ ಪರಿಸರ ಯಾವುದು, ಅದರ ಹಿನ್ನೆಲೆ ಏನು ಎಂಬುದು ಅದರ ಶಿಕ್ಷಕರಿಗೆ ಮಾತ್ರ ಗೊತ್ತಿರುತ್ತದೆ. ಮೌಲ್ಯಮಾಪನವು ವರ್ಷದ ಕೊನೆಯಲ್ಲಿ ಮಾಡುವಂತಹದ್ದಲ್ಲ, ಅದು ನಿರಂತರ. ಅದು ಬರೀ ಪರೀಕ್ಷಾ ಕೊಠಡಿಯಲ್ಲಿ ಸಾಧ್ಯವಾಗುವಂಥದ್ದಲ್ಲ, ಅದು ವ್ಯಾಪಕ. ಬೋಧನೆ ಮತ್ತು ಮೌಲ್ಯಮಾಪನ ಒಟ್ಟೊಟ್ಟಿಗೇ ಸಾಗುವಂತಹವು. ಮಗುವಿಗೆ ಹೇಳಿಕೊಟ್ಟ ‘ನೀರನ್ನು ಪೋಲು ಮಾಡಬಾರದು’ ಎಂಬ ಜ್ಞಾನವನ್ನು ನಾವು ವರ್ಷದ ಕೊನೆಯವರೆಗೂ ಕಾದು ಅಳೆಯಬೇಕಿಲ್ಲ. ಪೆನ್ನು, ಪೇಪರ್ ಮೂಲಕವೇ ಸಾಧಿಸಬೇಕಿಲ್ಲ. ಶಾಲೆಯಲ್ಲಿ ಆ ಮಗು ನೀರು ಬಳಸುವಾಗಲೇ ಅದು ಗೊತ್ತಾಗಿಬಿಡುತ್ತದೆ. ಅದನ್ನು ನೋಡಿ ಅಲ್ಲೇ ತಿದ್ದಿಬಿಡಬಹುದು.

ಯುದ್ಧ ಎಂಬ ಪಾಠವೊಂದು ಯುದ್ಧದಿಂದ ಸಂಕಷ್ಟಕ್ಕೆ ಒಳಗಾದವರ ಬವಣೆಯನ್ನು ಹೇಳುತ್ತದೆ ಎಂದಿಟ್ಟುಕೊಳ್ಳಿ. ಯುದ್ಧ ಒಳ್ಳೆಯದಲ್ಲ ಎಂಬ ಆಶಯ ಮಗುವಿನ ಮನಸ್ಸಿನಲ್ಲಿ ಮೂಡಬೇಕು. ಅದೇ ಪಾಠದ ಉದ್ದೇಶ. ಪರೀಕ್ಷೆಯಲ್ಲಿ ನಾವು ಯುದ್ಧ ಕುರಿತ ಪಾಠದಲ್ಲಿನ ಕಥಾನಾಯಕನ ಹೆಸರೇನು ಎಂದು ಪ್ರಶ್ನೆ ಕೇಳುತ್ತೇವೆ. ಮಗು ಅವನ ಹೆಸರು ಬರೆದು ಎದ್ದು ಬರುತ್ತದೆ. ಪಾಠದ ಆಶಯ ಏನಾಯಿತು? ಪರೀಕ್ಷೆಯ ಉದ್ದೇಶ ಏನಾಯಿತು?

ಬೋಧನೆ ಹಾಗೂ ಕಲಿಕೆಯಲ್ಲಿ ‘ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ’ (ಸಿಸಿಇ) ಎಂಬ, ಮಗುವಿನ ಕಲಿಕೆಯನ್ನು ಅಳೆಯುವ ವಿಧಾನವೊಂದಿದೆ. ಅದನ್ನು ಈಗಾಗಲೇ ಕರ್ನಾಟಕದ ಎಲ್ಲಾ ಸರ್ಕಾರಿ ಶಾಲೆಗಳಲ್ಲಿ ಜಾರಿಗೊಳಿಸಲಾಗಿದೆ. ಆದರೆ ನಾವು ಕೊನೆಗೂ ನೆಚ್ಚಿಕೊಳ್ಳುವುದು ವರ್ಷದ ಕೊನೆಯಲ್ಲಿ ನಡೆಯುವ, ಮೂರು ಗಂಟೆಯಲ್ಲಿ ಪೆನ್ನು, ಪೇಪರ್ ಬಳಸಿ ಬರೆಯುವ ಪರೀಕ್ಷೆಯನ್ನು. ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನದಿಂದ ಅಳೆದ ಮಾನಕಗಳು ಅಷ್ಟೊಂದು ಮುಖ್ಯವಾಗುವುದೇ ಇಲ್ಲ.



ಪಾಠ ಕೇಳು, ಪರೀಕ್ಷೆ ಬರಿ, ಅಂಕ ತಗೊ ಅಂದರೆ ಅದನ್ನು ಶಿಕ್ಷಣ ಎಂದು ಕರೆಯಲಾದೀತೆ? ಶಾಲಾ ಪುಸ್ತಕದೊಳಗೆ ಎಷ್ಟೊಂದು ಮೌಲ್ಯಗಳಿದ್ದರೂ ಸಮಾಜ ಇಷ್ಟೊಂದು ನೈತಿಕ ಅಧಃಪತನಕ್ಕೆ ತಳ್ಳಲ್ಪಡುತ್ತಿರುವುದು ಏಕೆ ಎಂಬುದಕ್ಕೆ ತೀರಾ ತಲೆಕೆಡಿಸಿಕೊಂಡು ಕೂತು ಉತ್ತರ ಹುಡುಕಬೇಕಿಲ್ಲ. ನಮ್ಮ ಶಿಕ್ಷಣ ಕ್ರಮದಲ್ಲಿ ಎಲ್ಲವೂ ಹೊರಗೆ ಕಾಣುವಷ್ಟು ನಿಚ್ಚಳವಾಗಿವೆ.

ಪ್ರತಿವರ್ಷ ಮಕ್ಕಳು ಪರೀಕ್ಷೆಯ ಒತ್ತಡಕ್ಕೆ ಒಳಗಾಗಿ ಮುದುಡಿ ಹೋಗುತ್ತಿರುವುದನ್ನು ನೋಡಿದರೆ ಸಂಕಟ ಆಗುತ್ತದೆ. ಮಗುವಿಗೆ ಗೊತ್ತಿಲ್ಲದೇ ಅದರೊಳಗಿನ ಕಲಿಕೆಯ ಮೌಲ್ಯಮಾಪನ ಮಾಡುವ ದಿನಗಳು ಎಂದು ಬರುತ್ತವೋ ಎಂದು ಯೋಚನೆಯಾಗುತ್ತದೆ. ವರ್ಷದ ಕೊನೆಯಲ್ಲಿ ಕೆಲವೇ ಗಂಟೆಗಳ ಅವಧಿಯಲ್ಲಿ ತನ್ನ ಕಲಿಕೆಯನ್ನು ತೋರಿಸುವ ಒತ್ತಡದಿಂದ ಮಕ್ಕಳಿಗೆ ಎಂದು ಮುಕ್ತಿ ಸಿಗುತ್ತದೋ, ಪರೀಕ್ಷಾ ವಿಧಾನ ಎಂದು ಬದಲಾಗುವುದೋ, ಮಗುವಿನ ಸಮಗ್ರ ಮೌಲ್ಯಮಾಪನ ಎಂದು ಸಾಧ್ಯವಾಗುವುದೋ? ನಾವೆಲ್ಲರೂ ಈ ದಿಸೆಯಲ್ಲಿ ಯೋಚಿಸಬೇಕಿದೆ.

ವಾಚಕರ ವಾಣಿ

ಮಾದರಿ ಪ್ರಜೆಗಳಾಗೇ ಇರಲಿ

ಕರ್ನಾಟಕದಂಥ ಯಾವುದೇ ರಾಜ್ಯಕ್ಕೆ ತನ್ನ ಒಡಲಿನಲ್ಲಿ ಚುನಾವಣಾ ರಾಜಕಾರಣಕ್ಕೆ ಹೊರತಾದ ಸಾಂಸ್ಕೃತಿಕ ರಾಯಭಾರವನ್ನು ನಿಭಾಯಿಸುವ ಮತ್ತು ಸಾಮಾಜಿಕ ಕಳಕಳಿಯಿರುವ ಮಾದರಿ ಪ್ರಜೆಗಳನ್ನು ಹೊಂದುವ ಹಂಬಲ ಇರುತ್ತದೆ. ಅಂಥವರು ರಾಜ್ಯದ ಏಳಿಗೆಗೆ ಬಹಳ ಅಗತ್ಯ. ಆದರೆ, ಅಂತಹ ಪ್ರಜೆಗಳು ಪಕ್ಷರಾಜಕಾರಣಕ್ಕೆ ಇಳಿದಾಗ ರಾಜ್ಯಕ್ಕೆ ಆಗುವ ನಷ್ಟವನ್ನು ಸರಿದೂಗಿಸುವುದು ಕಷ್ಟ. ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಮತ್ತು ಹೃದ್ರೋಗ ತಜ್ಞ ಡಾ. ಸಿ.ಎನ್.ಮಂಜುನಾಥ್ ಅವರು ಲೋಕಸಭೆ ಚುನಾವಣೆಗೆ ಸ್ಪರ್ಧಿಸುವ ಸುದ್ದಿ ಖಚಿತವಾಗಿದೆ. ಸಾಮಾನ್ಯ ಪ್ರಜೆಗಳಲ್ಲದವರು ಚುನಾವಣಾ ರಂಗಕ್ಕೆ ಧುಮುಕಿರುವುದು ಇದು ಮೊದಲಲ್ಲ. ಆದರೆ, ಇಂಥವರನ್ನು ಮುಂದಿಟ್ಟುಕೊಂಡು ರಾಜಕೀಯ ಪಕ್ಷಗಳು ತಮ್ಮ ಬೇಳೆ ಬೇಯಿಸಿಕೊಳ್ಳಲು ಹೊರಡುವುದು ರಾಜ್ಯದ ಹಿತಕ್ಕೆ ಶ್ರೇಯಸ್ಕರವಲ್ಲ.

ಜನರಿಗೆ ಒಡೆಯರ್ ಮನೆತನದ ಮೇಲೆ ಅದರಲ್ಲೂ ನಾಲ್ವಡಿ ಕೃಷ್ಣರಾಜ ಒಡೆಯರ್, ಜಯಚಾಮರಾಜೇಂದ್ರ ಒಡೆಯರ್ ಅವರ ಮೇಲಿರುವ ಪೂಜ್ಯ ಭಾವವನ್ನು ಬಂಡವಾಳ ಮಾಡಿಕೊಂಡು ‘ನನಗೆ ಮತ ಹಾಕಿ ಗೆಲ್ಲಿಸಿ’ ಎಂದು ಯದುವೀರ್ ಅವರು ಕೇಳಿಕೊಳ್ಳುವುದು ಜನರ ವಿಶ್ವಾಸವನ್ನು ಅಧಿಕಾರ ರಾಜಕಾರಣಕ್ಕೆ ಬಳಸಿಕೊಳ್ಳುವುದಕ್ಕೆ ಸಮನಾದೀತು. ಇದಕ್ಕೂ ಅರ್ಹತೆಯ ಚೌಕಟ್ಟು ಮೀರಿದ ಕುಟುಂಬ ರಾಜಕಾರಣಕ್ಕೂ ಯಾವ ಅಂತರವೂ ಇಲ್ಲ (ಕುಟುಂಬಗಳ ಪಾರುಪತ್ಯವನ್ನು ವಿರೋಧಿಸುವವರಿಂದಲೇ ಮಣೆ ಬಂದಿರುವುದು ವಿಪರ್ಯಾಸ). ಅಂತೆಯೇ, ‘ನಾನು ಹತ್ತು ಸಾವಿರ ಜನರ ಎದೆಬಡಿತ ಉಳಿಸಿದ್ದೇನೆ. ನನಗೆ ಮತ ಕೊಡಿ’ ಎಂದು ಮಂಜುನಾಥ್ ಕೇಳಿದರೆ, ಅವರು ಮಾಡಿದ ಶಸ್ತ್ರಚಿಕಿತ್ಸೆಗಳೆಲ್ಲಕ್ಕೂ ಮತರೂಪದ ಪ್ರತಿಫಲಾಪೇಕ್ಷೆ ಇತ್ತೆಂಬ ಅನುಮಾನ ಮೂಡುವಂತೆ ಆಗುತ್ತದೆ. ಇದು ಬೇಕೇ? ಇನ್ನೂ ಕಾಲ ಮಿಂಚಿಲ್ಲ. ಇವರೆಲ್ಲ ಇನ್ನೊಮ್ಮೆ ಯೋಚಿಸುವಂತಾಗಲಿ ಮತ್ತು ಹಿಂದಡಿಯಿಡಲಿ. ಇಂತಹವರಲ್ಲಿ ತಾವು ಶಾಸಕಾಂಗದ ಭಾಗವಾಗಲೇಬೇಕು ಎಂಬ ವೈಚಾರಿಕ ಸ್ಪಷ್ಟತೆ ಇದ್ದಲ್ಲಿ, ಸರ್ಕಾರಗಳಿಗೆ ಅಗತ್ಯವಾಗಿರುವ ಅನೇಕ ಮೇಲುಸ್ತುವಾರಿ ಸಮಿತಿಗಳಲ್ಲಿ ಸೇವೆ ಸಲ್ಲಿಸಲಿ. ಅದನ್ನು ಜನ ಸ್ವಾಗತಿಸುತ್ತಾರೆ. ಪ್ರತಿ ಚುನಾವಣೆಯಲ್ಲೂ ಕಾರಣ ಕೊಡದೆ ಅಭ್ಯರ್ಥಿಗಳನ್ನು ಬದಲಾಯಿಸುವ ಕೆಟ್ಟ ಚಾಳಿಗೆ ಯಾವ ಪಕ್ಷವೂ ಹೊರತಾಗಿಲ್ಲ. ಹೊಸ ಮುಖಗಳನ್ನು ತೋರಿಸಿ ಹಳೆ ತುತ್ತೂರಿ ಊದಿಸುವ ಹೊಣೆಗೇಡಿತನವನ್ನು ಜನ ಗಮನಿಸಿ ತಿರಸ್ಕರಿಸಬೇಕಾಗಿದೆ.

ಶ್ರೀಕಂಠ, ಬೆಂಗಳೂರು

ಹೀಗಿದೆ ಚಾಲ್ತಿ ವ್ಯವಸ್ಥೆ...!

ಅಳೆದು ತೂಗಿ ಗೆಲ್ಲುವವರಿಗೆ
ಟಿಕೆಟ್ ಕೊಡುವರಂತೆ,
ಅಳೆದು ತೂಗುವುದೆಂದರೆ...?
ಹಣದ ಬಲದಲ್ಲಿ ಅಳೆಯುವುದು
ಜಾತಿ ಲೆಕ್ಕಾಚಾರದಲ್ಲಿ ತೂಗುವುದೇ
ಚಾಲ್ತಿಯಲ್ಲಿರುವ ವ್ಯವಸ್ಥೆಯಂತೆ!

ಎಚ್.ಕೆ.ಕೊಟ್ರಪ್ಪ, ಹರಿಹರ

ಪ್ರಭಾವಿ ಕುಟುಂಬಗಳಿಗೆ ಮಣೆ: ಎಷ್ಟು ಸರಿ?

ಲೋಕಸಭಾ ಚುನಾವಣೆಗೆ ರಾಜಕೀಯ ಪಕ್ಷಗಳು ತಮ್ಮ ಅಭ್ಯರ್ಥಿಗಳ ಪಟ್ಟಿ ಬಿಡುಗಡೆ ಮಾಡಲಾರಂಭಿಸಿವೆ. ದುರಂತವೆಂದರೆ, ಪ್ರಮುಖ ಪಕ್ಷಗಳ ಅಭ್ಯರ್ಥಿಗಳಾಗಿ ರಾಜಕೀಯವಾಗಿ ಪ್ರಭಾವಿಯಾಗಿರುವ ಕುಟುಂಬಗಳ ಸದಸ್ಯರ ಹೆಸರುಗಳೇ ಹೆಚ್ಚಾಗಿ ಚಾಲ್ತಿಯಲ್ಲಿವೆ. ಇದು ಕಾಂಗ್ರೆಸ್ ಮತ್ತು ಬಿಜೆಪಿ ಎರಡಕ್ಕೂ ಹೊರತಾಗಿಲ್ಲ. ಕುಟುಂಬ ರಾಜಕಾರಣವನ್ನು ಪೋಷಿಸುತ್ತಾ ಬಂದಿರುವ ಪಕ್ಷಗಳು ಪ್ರಜಾಪ್ರಭುತ್ವಕ್ಕೆ ಎರವಾಗುತ್ತಿವೆ. ಜನಸಾಮಾನ್ಯರು ಮತ್ತು ಕಾರ್ಯಕರ್ತರು ಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶವಿಲ್ಲದ ರೀತಿಯಲ್ಲಿ ಈ ಪಕ್ಷಗಳು ನಡೆದುಕೊಳ್ಳುತ್ತಿವೆ. ಹಣದ ಪ್ರಭಾವ ಮತ್ತು ಕುಟುಂಬ ರಾಜಕಾರಣವು ಇಂದು ರಾಜಕಾರಣವನ್ನು ನಿಯಂತ್ರಿಸುತ್ತಿವೆ. ಇದರಿಂದ, ಪ್ರಜ್ಞಾವಂತರು, ಬುದ್ಧಿಜೀವಿಗಳು ಹಾಗೂ ಸಾಮಾನ್ಯ ಜನರಿಗೆ ಹಣ, ಕುಟುಂಬದ ಹಿನ್ನೆಲೆ ಇಲ್ಲದಿದ್ದರೆ ಚುನಾವಣೆಯಲ್ಲಿ ಸ್ಪರ್ಧಿಸುವ ಅವಕಾಶವೇ ಇರುವುದಿಲ್ಲ. ಆಗ ಪ್ರಜಾಪ್ರಭುತ್ವಕ್ಕೆ ಅರ್ಥ ಇರದು.

ಬೀದರ್‌ನಿಂದ ಚಾಮರಾಜನಗರದವರೆಗೂ ಹಲವು ಕ್ಷೇತ್ರಗಳಿಗೆ ಎರಡೂ ಪಕ್ಷಗಳಲ್ಲಿ ರಾಜಕೀಯದಲ್ಲಿ ಹಿಡಿತ ಸಾಧಿಸಿರುವ ಕುಟುಂಬಗಳ ಸದಸ್ಯರೇ ಅಭ್ಯರ್ಥಿಗಳ ಪಟ್ಟಿಯಲ್ಲಿ ಸ್ಥಾನ ಪಡೆದಿರುವುದು ಆತಂಕದ ವಿಷಯ. ರಾಜಕಾರಣ ಎಂಬುದು ಹಣ ಉತ್ಪಾದಿಸುವ ಕಾರ್ಖಾನೆ ಎಂದು ತಿಳಿದಿರುವುದರಿಂದಲೇ ಕುಟುಂಬ ರಾಜಕಾರಣ ರಾರಾಜಿಸುತ್ತಿರುವುದು. ರಾಷ್ಟ್ರೀಯ ಪಕ್ಷಗಳಿಗೆ ಸ್ವಲ್ಪವಾದರೂ ಪ್ರಜ್ಞೆ ಇದ್ದರೆ ಅವು ಪ್ರಾಮಾಣಿಕ ಕಾರ್ಯಕರ್ತರನ್ನು ಗುರುತಿಸಿ ಚುನಾವಣೆಯಲ್ಲಿ ಸ್ಪರ್ಧಿಸಲು ಅನುವು ಮಾಡಿಕೊಡಲಿ.

ಎಂ.ಟಿ.ಸುಭಾಷ್ಚಂದ್ರ, ದಾವಣಗೆರೆ

ಅಭ್ಯರ್ಥಿ ಆಯ್ಕೆ ಮತ್ತು ಸಂವಿಧಾನ

ಮೈಸೂರು– ಕೊಡಗು ಲೋಕಸಭಾ ಕ್ಷೇತ್ರಕ್ಕೆ ಬಿಜೆಪಿಯಿಂದ ಯಾರು ಅಭ್ಯರ್ಥಿಯಾಗಲಿದ್ದಾರೆ ಎಂಬ ಕುತೂಹಲದ ಪ್ರಶ್ನೆಗೆ ಉತ್ತರ ಸಿಕ್ಕಿದೆ. ಮೈಸೂರಿನ ಯದುವಂಶದ ಕುಡಿ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರನ್ನು ಕಣಕ್ಕಿಳಿಸಲು ಪಕ್ಷ ಮುಂದಾಗಿದೆ. ರಾಜಮನೆತನದವರೂ ರಾಜಕಾರಣಕ್ಕಿಳಿದು ಉತ್ತಮ ಕೆಲಸ ಮಾಡುವುದಕ್ಕೆ ನಮ್ಮ ಸಂವಿಧಾನವು ಅವಕಾಶ ಮಾಡಿಕೊಡುತ್ತದೆ. ಒಂದು ವೇಳೆ ಗೆಲುವು ಇವರದಾದರೆ, ಸಂವಿಧಾನಬದ್ಧವಾಗಿ, ಸಂವಿಧಾನಕ್ಕೆ ಋಣಿಯಾಗಿ ಜನಸೇವೆ ಮಾಡುವಂತಾಗಲಿ.

ಪವನ್ ಜಯರಾಂ, ಚಾಮರಾಜನಗರ

ಚಿಕಿತ್ಸೆಗೆ ನೆರವಾಗಿ

ನನ್ನ ಮಗಳಾದ ಸೃಷ್ಟಿ ಎಸ್. ಗೌಡ ಎಂ.ಎಸ್ಸಿ. ವಿದ್ಯಾರ್ಥಿನಿಯಾಗಿದ್ದು, ಬೆಂಗಳೂರಿನ ಜ್ಞಾನಭಾರತಿ ಆವರಣದಲ್ಲಿ ಇತ್ತೀಚೆಗೆ ನಡೆದ ಅಪಘಾತದಲ್ಲಿ ಅವಳ ಎಡಗಾಲಿಗೆ ತೀವ್ರ ಹಾನಿಯಾಗಿದೆ. ಈಗಾಗಲೇ ಶಸ್ತ್ರಚಿಕಿತ್ಸೆಗೆ ₹ 4 ಲಕ್ಷ ಖರ್ಚಾಗಿದೆ. ಮುಂದಿನ ಹಂತದ ಚಿಕಿತ್ಸೆಗೆ ₹ 10 ಲಕ್ಷ ವೆಚ್ಚವಾಗುವುದೆಂದು ವೈದ್ಯರು ತಿಳಿಸಿದ್ದಾರೆ. ನಾನು ಗಾರ್ಮೆಂಟ್ಸ್ ಉದ್ಯೋಗಿಯಾಗಿದ್ದು, ನನ್ನ ಪತ್ನಿ ಗೃಹಿಣಿಯಾಗಿದ್ದಾಳೆ. ಚಿಕಿತ್ಸೆಗಾಗಿ ಇಷ್ಟೊಂದು ಹಣವನ್ನು ಭರಿಸಲು ನಮಗೆ ಸಾಧ್ಯ ಆಗುತ್ತಿಲ್ಲ. ದಾನಿಗಳು ದಯಮಾಡಿ ನೆರವಾಗಿ. ಕೆನರಾ ಬ್ಯಾಂಕ್, ಖಾತೆ ಸಂಖ್ಯೆ– 3194101009760, ನಾಗರಬಾವಿ ಶಾಖೆ, ಬೆಂಗಳೂರು, IFSC: CNRB0003194, ಗೂಗಲ್ ಪೇ ಮತ್ತು ಸಂಪರ್ಕ ಸಂಖ್ಯೆ 9535663040.

ಸತೀಶ್ ಜಿ. ಗೌಡ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.



ಒಂದು ದೇಶ ಒಂದು ಚುನಾವಣೆ
ಸಾಧಕ-ಬಾಧಕಗಳ ಸುತ್ತ

ಪ್ರಜಾವಾಣಿ ವಾರ್ತೆ

ಲೋಕಸಭೆಗೆ ಮತ್ತು ರಾಜ್ಯ ವಿಧಾನಸಭೆಗಳಿಗೆ ಏಕಕಾಲದಲ್ಲಿ ಚುನಾವಣೆ ನಡೆಯುವುದು ಭಾರತಕ್ಕೆ ಹೊಸತೇನಲ್ಲ. ಸ್ವತಂತ್ರ ಭಾರತದ ಮೊದಲ ಎರಡು ಸಾರ್ವತ್ರಿಕ ಚುನಾವಣೆಗಳ ಜತೆಯಲ್ಲೇ ರಾಜ್ಯ ವಿಧಾನಸಭೆಗಳಿಗೂ ಚುನಾವಣೆಗಳು ನಡೆದಿದ್ದವು. ಆನಂತರ ಅದು ಸಾಧ್ಯವಾಗಲಿಲ್ಲ. ಏಕೆಂದರೆ ಅಲ್ಲಿಯವರೆಗೆ ಯಾವ ಸರ್ಕಾರವೂ ಅವಧಿಗೆ ಮುನ್ನ ವಿಸರ್ಜನೆಯಾಗಿರಲಿಲ್ಲ ಅಥವಾ ಬಿದ್ದುಹೋಗಿರಲಿಲ್ಲ ಅಥವಾ ರಾಷ್ಟ್ರಪತಿ ಆಳ್ವಿಕೆಯೂ ಜಾರಿಯಾಗಿರಲಿಲ್ಲ.

ಸ್ವತಂತ್ರ ಭಾರತದ ಆರಂಭದ ದಶಕಗಳಲ್ಲಿ ರಾಷ್ಟ್ರ ಮತ್ತು ರಾಜ್ಯ ಮಟ್ಟದಲ್ಲಿ ಕಾಂಗ್ರೆಸ್ ಒಂದೇ ಪ್ರಧಾನ ಪಕ್ಷವಾಗಿತ್ತು. 70ರ ದಶಕದಲ್ಲಿ ಹಲವು ಪ್ರಾದೇಶಿಕ ಪಕ್ಷಗಳು ಮುನ್ನೆಲೆಗೆ ಬಂದಿದ್ದರಿಂದ, ರಾಜ್ಯ ವಿಧಾನಸಭೆಗಳಲ್ಲಿ ಹಲವು ಪಕ್ಷಗಳ ನಡುವೆ ಪೈಪೋಟಿ ಉಂಟಾಗಿತ್ತು. ಇದರಿಂದ ಅವಧಿಗೂ ಮುನ್ನವೇ ವಿಧಾನಸಭೆಗಳು ವಿಸರ್ಜನೆಯಾಗುವ ಹಲವು ಘಟನೆಗಳು ನಡೆದವು. ಅಂತಹ ರಾಜ್ಯಗಳಲ್ಲಿ ಮಧ್ಯಂತರ ಚುನಾವಣೆ ನಡೆದ ಕಾರಣ ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಿಗೆ ಏಕಕಾಲದಲ್ಲಿ ಚುನಾವಣೆ ನಡೆಯುವ ಪ್ರಕ್ರಿಯೆ ಹಳಿ ತಪ್ಪಿತು. ಈಗ ಏಕಕಾಲಕ್ಕೆ ಚುನಾವಣೆ ನಡೆಸುವ ಪ್ರಸ್ತಾವ ಮತ್ತೆ ಮುನ್ನೆಲೆಗೆ ಬಂದಿದೆ.

ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಿಗೆ ಮತ್ತೆ ಏಕಕಾಲದಲ್ಲಿ ಚುನಾವಣೆ ನಡೆಸುವ ಪ್ರಸ್ತಾವ ಬಂದಿದ್ದು 1983ರಲ್ಲಿ. ಕಾನೂನು ಆಯೋಗವು 1983ರಲ್ಲಿ ತನ್ನ ವಾರ್ಷಿಕ ವರದಿಯಲ್ಲಿ ಈ ಬಗ್ಗೆ ಉಲ್ಲೇಖಿಸಿತ್ತು. 'ಏಕಕಾಲದಲ್ಲಿ ಚುನಾವಣೆ ನಡೆಯುವುದರಿಂದ ಚುನಾವಣಾ ವೆಚ್ಚದಲ್ಲಿ ಭಾರಿ ಇಳಿಕೆಯಾಗಲಿದೆ. ಸರ್ಕಾರಿ ನೌಕರರನ್ನು ಚುನಾವಣಾ ಕರ್ತವ್ಯಕ್ಕೆ ನಿಯೋಜನೆ ಮಾಡುವುದು ಕಡಿಮೆಯಾಗುವ ಕಾರಣ, ಅವರ ಮುಖ್ಯ ಕರ್ತವ್ಯದಲ್ಲಿ ಉತ್ಪಾದಕತೆ ಹೆಚ್ಚಲಿದೆ. ರಾಜಕೀಯ ಪಕ್ಷಗಳೂ ಚುನಾವಣೆ ಬಿಟ್ಟು, ಆಡಳಿತದತ್ತ ಗಮನಕೊಡಲು ಸಾಧ್ಯವಾಗುತ್ತದೆ' ಎಂದು ವಿವರಿಸಿತ್ತು. ಏಕಕಾಲಕ್ಕೆ ಚುನಾವಣೆ ನಡೆಸುವ ಬಗ್ಗೆ ಆನಂತರ ಬಂದ ಎಲ್ಲಾ ವರದಿಗಳು ಮತ್ತು ಶಿಫಾರಸುಗಳು ಇದೇ ಮಾತನ್ನು ಹೇಳುತ್ತಾ ಬಂದಿವೆ. ಜತೆಗೆ ಕೆಲವು ವರದಿಗಳು ಇಂತಹ ಚುನಾವಣೆ ನಡೆಸುವುದರಲ್ಲಿ ಇರುವ ಅಥವಾ ಎದುರಾಗುವ ಸವಾಲುಗಳತ್ತಲೂ ಗಮನಹರಿಸಿವೆ.

1999ರಲ್ಲಿ ಕಾನೂನು ಆಯೋಗವು ತನ್ನ 177ನೇ ವರದಿಯಲ್ಲಿ ಮತ್ತೆ ಈ ವಿಷಯವನ್ನು ಪ್ರಸ್ತಾಪಿಸಿತ್ತು. ವಿಧಾನಸಭೆ ವಿಸರ್ಜನೆ ಮತ್ತು ರಾಷ್ಟ್ರಪತಿ ಆಳ್ವಿಕೆಯ ಕಾರಣದಿಂದ ಕೆಲವು ರಾಜ್ಯಗಳಲ್ಲಿ ಮಧ್ಯಂತರ ಚುನಾವಣೆ ನಡೆಯಬಹುದು. ಆದರೆ ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಿಗೆ ಏಕಕಾಲದಲ್ಲಿ ಚುನಾವಣೆ ನಡೆಸುವುದನ್ನು ತಡೆಯಲು ಇದೇ ನೆಪವಾಗಬಾರದು. ಈ ಚುನಾವಣೆಗಳನ್ನು ಏಕಕಾಲದಲ್ಲಿಯೇ ನಡೆಸಬೇಕು ಎಂದು ಕಾನೂನು ಆಯೋಗವು ಶಿಫಾರಸು ಮಾಡಿತು. 2015ರ ವರದಿಯಲ್ಲಿ ಇದೇ ವಿಚಾರಗಳನ್ನು ಆಯೋಗವು ಪ್ರಸ್ತಾವಿಸಿತ್ತಾದರೂ, ಏಕಕಾಲದಲ್ಲಿ ಚುನಾವಣೆ ನಡೆಸುವುದರಿಂದ ಆಗುವ ತೊಡಕುಗಳತ್ತಲೂ ಗಮನ ಹರಿಸಿತ್ತು.

2002ರಲ್ಲಿ, 2018ರಲ್ಲಿ ಕಾನೂನು ಆಯೋಗವು ತನ್ನ ವರದಿಗಳಲ್ಲಿ ಈ ವಿಷಯವನ್ನು ಮತ್ತೆ ಪ್ರಸ್ತಾಪಿಸಿತ್ತು. ಇದರ ಮಧ್ಯೆ 2015ರಲ್ಲಿ ಸಂಸದೀಯ ಸ್ಥಾಯಿ ಸಮಿತಿಯು 'ಏಕಕಾಲದಲ್ಲಿ ಚುನಾವಣೆಯ ಕಾರ್ಯಸಾಧ್ಯತೆಗಳು' ವರದಿಯನ್ನು ಸಿದ್ಧಪಡಿಸಿತ್ತು. ಚುನಾವಣಾ ವೆಚ್ಚ ಇಳಿಕೆ, ಮಾದರಿ ನೀತಿ ಸಂಹಿತೆಯನ್ನು ಪದೇ-ಪದೇ ಹೇರಬೇಕಾದ ಅವಶ್ಯಕತೆ ಇಲ್ಲದಿರುವುದರಿಂದ ಜನರಿಗೆ ಆಗುವ ಅನುಕೂಲ, ಸರ್ಕಾರಿ ಯಂತ್ರದ ಮೇಲಿನ ಹೊರೆ ಇಳಿಕೆ, ಪದೇ-ಪದೇ ಚುನಾವಣೆ ನಡೆಯುವುದರಿಂದ ಜನರಿಗೆ ಆಗುವ ತೊಂದರೆಗಳ ನಿವಾರಣೆ ಮೊದಲಾದ ಅನುಕೂಲಗಳನ್ನು ಪಟ್ಟಿ ಮಾಡಿತ್ತು. ಇಷ್ಟೆಲ್ಲಾ ಅನುಕೂಲಗಳಿರುವ ಕಾರಣ ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಿಗೆ ಏಕಕಾಲದಲ್ಲಿ ಚುನಾವಣೆ ನಡೆಸಬೇಕು ಎಂದು ಸಮಿತಿಯು ತನ್ನ ವರದಿಯಲ್ಲಿ ಶಿಫಾರಸು ಮಾಡಿತ್ತು. 2017ರಲ್ಲಿ ನೀತಿ ಆಯೋಗವೂ ಇಂತಹ ಅಧ್ಯಯನವನ್ನು ನಡೆಸಿ, ಏಕಕಾಲದಲ್ಲಿ ಚುನಾವಣೆ ನಡೆಸುವುದರ ಪರವಾಗಿಯೇ ವರದಿ ನೀಡಿತ್ತು.

> ಸ್ವತಂತ್ರ ಭಾರತದಲ್ಲಿ ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಿಗೆ ಏಕಕಾಲದಲ್ಲಿ ಚುನಾವಣೆ ನಡೆಯುತ್ತಿದ್ದ ಕಾರಣ ಆ ಪ್ರಕ್ರಿಯೆಯನ್ನು 'ಏಕಕಾಲದ ಚುನಾವಣೆ' ಎಂದೇ ಕರೆಯಲಾಗುತ್ತಿತ್ತು. ಸರ್ಕಾರಿ ದಾಖಲೆಗಳಲ್ಲೂ ಹಾಗೇ ಉಲ್ಲೇಖಿಸಲಾಗುತ್ತಿತ್ತು. ಅಟಲ್ ಬಿಹಾರಿ ವಾಜಪೇಯಿ ಸರ್ಕಾರದ ಅವಧಿಯಲ್ಲಿ ಸಲ್ಲಿಕೆಯಾದ ಕಾನೂನು ಆಯೋಗದ 1999ರ ವರದಿಯಲ್ಲಿ 'ಒಂದು ದೇಶ, ಒಂದು ಚುನಾವಣೆ' ಎಂದು ಬಳಸಲಾಗಿತ್ತು. ಆನಂತರ ಇದೇ ಪರಿಭಾಷೆಯನ್ನು ಪ್ರಮುಖವಾಗಿ ಬಳಸಲಾಗುತ್ತಿದೆ

ಈಗ ಮಾಜಿ ರಾಷ್ಟ್ರಪತಿ ರಾಮನಾಥ ಕೋವಿಂದ್ ನೇತೃತ್ವದ ಉನ್ನತಾಧಿಕಾರ ಸಮಿತಿಯು ಸರ್ಕಾರಕ್ಕೆ ತನ್ನ ವರದಿಯನ್ನು ಸಲ್ಲಿಸಿದೆ. ಏಕಕಾಲದಲ್ಲಿ ಚುನಾವಣೆಗಳನ್ನು ನಡೆಸಬೇಕು, ಅದರಿಂದ ದೇಶಕ್ಕೆ ಉಪಯೋಗವಿದೆ ಎಂದು ಶಿಫಾರಸು ಮಾಡಿದೆ. ಲೋಕಸಭೆ ಮತ್ತು ರಾಜ್ಯ ವಿಧನಸಭೆಗಳಿಗೆ ಏಕಕಾಲದಲ್ಲಿ ಚುನಾವಣೆ ನಡೆಸಬೇಕು ಎಂಬ ಪ್ರಸ್ತಾವದ ಬಗ್ಗೆ ಹಲವು ರಾಜ್ಯ ಸರ್ಕಾರಗಳು ಮತ್ತು ಪ್ರಾದೇಶಿಕ ಪಕ್ಷಗಳ ವಿರೋಧವಿದೆ. ಹಲವು ಪ್ರಾದೇಶಿಕ ಪಕ್ಷಗಳು ಈ ಬಗ್ಗೆ ಈಗಾಗಲೇ ತಮ್ಮ ವಿರೋಧವನ್ನು ದಾಖಲಿಸಿವೆ. ಏಕಕಾಲದಲ್ಲಿ ಚುನಾವಣೆ ನಡೆಸುವುದರಿಂದ ಕೇಂದ್ರದಲ್ಲಿ ಅಧಿಕಾರದಲ್ಲಿರುವ ಪಕ್ಷಕ್ಕೇ ಹೆಚ್ಚು ಅನುಕೂಲವಾಗುತ್ತದೆ. ಅಲ್ಲದೆ ಚುನಾಯಿತ ಸರ್ಕಾರದ ಅವಧಿಯನ್ನು ಮೊಟಕುಗೊಳಿಸುವುದು ಪ್ರಜಾಸತ್ತಾತ್ಮಕವಲ್ಲ. ಅಲ್ಲದೇ ಈ ವ್ಯವಸ್ಥೆಯು ರಾಷ್ಟ್ರಪತಿ ಆಳ್ವಿಕೆಯನ್ನು ಹೇರಲು ಪದೇ-ಪದೇ ಅವಕಾಶ ಮಾಡಿಕೊಡುತ್ತದೆ. ಇದು ಪ್ರಜಾಪ್ರಭುತ್ವಕ್ಕೆ ಅಪಾಯಕಾರಿ ಎಂದು ಡಿಎಂಕೆ, ಟಿಎಂಸಿಯಾದಿಯಾಗಿ ಹಲವು ಪ್ರಾದೇಶಿಕ ಪಕ್ಷಗಳು ಕಳವಳ ವ್ಯಕ್ತಪಡಿಸಿವೆ. ಹೀಗಾಗಿ ಈ ವರದಿಯು ಅನುಷ್ಠಾನಕ್ಕೆ ಬರುತ್ತದೆಯೇ ಅಥವಾ ಇಲ್ಲವೇ ಎಂಬುದನ್ನು ಕಾದು ನೋಡಬೇಕಿದೆ.

ಆಧಾರ: ಕೇಂದ್ರ ಕಾನೂನು ಆಯೋಗದ ವರದಿಗಳು, ಪಿಟಿಐ

ಪ್ರಬಲ ಸವಾಲುಗಳು

● **ಸಂವಿಧಾನ ತಿದ್ದುಪಡಿ:** ಲೋಕಸಭೆಯ ಅವಧಿಯನ್ನು ನಿಗದಿಪಡಿಸುವ ಸಂವಿಧಾನದ 83ನೇ ವಿಧಿ ಮತ್ತು ಲೋಕಸಭೆಯನ್ನು ವಿಸರ್ಜನೆ ಮಾಡಲು ಅವಕಾಶ ಮಾಡಿಕೊಡುವ 85ನೇ ವಿಧಿಗಳಿಗೆ ತಿದ್ದುಪಡಿ ಮಾಡಬೇಕಾಗುತ್ತದೆ. ಅದೇ ರೀತಿ ರಾಜ್ಯ ವಿಧಾನಸಭೆಗಳ ಅವಧಿಯನ್ನು ನಿಗದಿಪಡಿಸುವ ಮತ್ತು ಅವನ್ನು ವಿಸರ್ಜನೆ ಮಾಡಲು ಅವಕಾಶ ಮಾಡಿಕೊಡುವ ಸಂವಿಧಾನದ 172 ಮತ್ತು 174ನೇ ವಿಧಿಗಳಿಗೆ ತಿದ್ದುಪಡಿ ಮಾಡಬೇಕಾಗುತ್ತದೆ. ಜತೆಗೆ, ರಾಷ್ಟ್ರಪತಿ ಆಳ್ವಿಕೆ ಜಾರಿ ಮಾಡಲು ಅವಕಾಶ ಮಾಡಿಕೊಡುವ ಸಂವಿಧಾನದ 356ನೇ ವಿಧಿಗೂ ತಿದ್ದುಪಡಿ ತರಬೇಕಾಗುತ್ತದೆ

● **ಚುನಾವಣಾ ಕ್ಯಾಲೆಂಡರ್ ಬದಲಾವಣೆ:** ಈಗ ರಾಜ್ಯಗಳಲ್ಲಿ ಇರುವ ವಿಧಾನಸಭೆಗಳು/ಸರ್ಕಾರಗಳ ಅವಧಿ ಪರಸ್ಪರ ಭಿನ್ನವಾಗಿವೆ. ಒಂದು ರಾಜ್ಯದ ಸರ್ಕಾರದ ಅವಧಿ ಒಂದು ವರ್ಷವಷ್ಟೇ ಇದ್ದರೆ, ಬೇರೊಂದು ರಾಜ್ಯದ ಸರ್ಕಾರಕ್ಕೆ ಇನ್ನೂ ನಾಲ್ಕು ವರ್ಷಕ್ಕೂ ಹೆಚ್ಚು ಅಧಿಕಾರದ ಅವಧಿ ಇವೆ. ಆ ವಿಧಾನಸಭೆಗಳನ್ನು ವಿಸರ್ಜನೆ ಮಾಡಿ, ರಾಷ್ಟ್ರಪತಿ ಆಳ್ವಿಕೆ ಜಾರಿ ಮಾಡುವ ಅಥವಾ ವಿಧಾನಸಭೆಯ ಅವಧಿಯನ್ನೇ ವಿಸ್ತರಿಸುವಂತೆ ಒಮ್ಮತದ ವ್ಯವಸ್ಥೆಯನ್ನು ರೂಪಿಸಬೇಕಾಗುತ್ತದೆ. ಈ ಪ್ರಕ್ರಿಯೆಯಲ್ಲಿ ಯಾವುದೇ ರೀತಿಯ ಕಾನೂನು ತೊಡಕು ಮತ್ತು ಕಾನೂನು-ಸುವ್ಯವಸ್ಥೆಗೆ ಧಕ್ಕೆಯಾಗದಂತೆ ಎಚ್ಚರ ವಹಿಸಬೇಕಾದ ಅಗತ್ಯವಿದೆ. ಕೋವಿಂದ್ ಸಮಿತಿಯ ವರದಿಯಲ್ಲೂ ಈ ಅಂಶಗಳಿಗೆ ಒತ್ತು ನೀಡಲಾಗಿದೆ

● **ಚುನಾವಣಾ ಯಂತ್ರ ಬಲಪಡಿಸುವಿಕೆ:** ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಿಗೆ ಏಕಕಾಲದಲ್ಲಿ ಚುನಾವಣೆ ನಡೆಸಲು ದೇಶದಲ್ಲಿ ಈಗ ಇರುವುದಕ್ಕಿಂತ ಒಂದುಪಟ್ಟು ಹೆಚ್ಚು ಇವಿಎಂಗಳ (ಎಲೆಕ್ಟ್ರಾನಿಕ್ ಮತಯಂತ್ರ) ಅವಶ್ಯಕತೆ ಇದೆ. ಜತೆಗೆ ವಿವಿ-ಪ್ಯಾಟ್ ಯಂತ್ರಗಳು, ಅವುಗಳ ಸಂಗ್ರಹ ಮತ್ತು ನಿರ್ವಹಣೆಗೆ ಅಪಾರಮಟ್ಟದ ಮೂಲಸೌಕರ್ಯವನ್ನು ಅಭಿವೃದ್ಧಿಪಡಿಸಬೇಕಾಗುತ್ತದೆ. 2015ರಲ್ಲಿ ಕಾನೂನು ಆಯೋಗವು ನೀಡಿದ್ದ ವರದಿಯಲ್ಲಿ ಇವಿಎಂಗಳನ್ನು ಮಾತ್ರ ಹೊಂದಿಸಿಕೊಳ್ಳಲು ₹9,500 ಕೋಟಿಗೂ ಹೆಚ್ಚು ಮೊತ್ತ ಬೇಕಾಗುತ್ತದೆ ಎಂದು ಅಂದಾಜಿಸಲಾಗಿತ್ತು. ಈಗ ಆ ವೆಚ್ಚ ಇನ್ನಷ್ಟು ಹೆಚ್ಚಾಗಲಿದೆ. ಅಲ್ಲದೆ ಚುನಾವಣಾ ಸಿಬ್ಬಂದಿ, ಭದ್ರತಾ ಸಿಬ್ಬಂದಿಯು ಹೆಚ್ಚುವರಿ ದಿನಗಳವರೆಗೆ ಕಾರ್ಯನಿರ್ವಹಿಸಬೇಕಾಗುತ್ತದೆ. ಸಾಗಣೆ ವೆಚ್ಚ-ಊಟ, ವಸತಿ ವೆಚ್ಚವೂ ಗಣನೀಯ ಮಟ್ಟದಲ್ಲಿ ಏರಿಕೆಯಾಗಲಿದೆ ಎಂಬುದನ್ನು ವರದಿಗಳಲ್ಲಿ ಉಲ್ಲೇಖಿಸಲಾಗಿದೆ

ಅಲ್ಪಾವಧಿ ಚುನಾವಣೆ, ರಾಷ್ಟ್ರಪತಿ ಆಳ್ವಿಕೆ

ಕೋವಿಂದ್ ಸಮಿತಿಯು ಈಗ ಮಾಡಿರುವ ಶಿಫಾರಸುಗಳಲ್ಲಿ ಕೆಲವು ಸಮಸ್ಯೆಗಳಿವೆ ಎಂದು ಹಲವು ಮಾಧ್ಯಮಗಳು ವರದಿ ಮಾಡಿವೆ. ಅವುಗಳಲ್ಲಿ ಪ್ರಮುಖವಾದುದು ಅವಧಿಗೂ ಮುನ್ನ ಚುನಾವಣೆ. ಈಗ ಜಾರಿಯಲ್ಲಿರುವ ವ್ಯವಸ್ಥೆಯ ಪ್ರಕಾರ ರಾಜ್ಯವೊಂದರ ವಿಧಾನಸಭೆಯ ಅವಧಿ ಐದು ವರ್ಷ. 2024ರಲ್ಲಿ ಚುನಾವಣೆ ನಡೆದು ವಿಧಾನಸಭೆ ಅಸ್ತಿತ್ವಕ್ಕೆ ಬಂದಿದೆ ಎಂದಿಟ್ಟುಕೊಳ್ಳಿ. ಆ ವಿಧಾನಸಭೆಯ ಅವಧಿ 2029ರವರೆಗೂ ಇರುತ್ತದೆ. ಅಲ್ಪಮತದ ಕಾರಣದಿಂದಲೋ ಅಥವಾ ಬೇರೆ ಕಾರಣದಿಂದಲೋ 2028ರಲ್ಲೇ ವಿಧಾನಸಭೆ ವಿಸರ್ಜನೆಯಾಗಿಬಿಡುತ್ತದೆ. ಅದೇ ವರ್ಷ ಚುನಾವಣೆಯೂ ನಡೆಯುತ್ತದೆ. 2028ರಲ್ಲಿ ಅಸ್ತಿತ್ವಕ್ಕೆ ಬಂದ ವಿಧಾನಸಭೆಯ ಅವಧಿ 2033ರವರೆಗೆ ಇರುತ್ತದೆ. ಹೀಗೆ ಹೊಸದಾಗಿ ಚುನಾಯಿತವಾದ ಪ್ರತಿ ವಿಧಾನಸಭೆಯ ಅವಧಿಯೂ ಐದು ವರ್ಷಗಳಾಗಿರುತ್ತದೆ.

ಆದರೆ 'ಒಂದು ದೇಶ ಒಂದು ಚುನಾವಣೆ' ಪ್ರಸ್ತಾವದಲ್ಲಿ ಈ ಅಂಶ ಬದಲಾಗಿದೆ. 2024ರಲ್ಲಿ ಲೋಕಸಭೆ ಮತ್ತು ಎಲ್ಲಾ ರಾಜ್ಯಗಳ ವಿಧಾನಸಭೆಗಳಿಗೆ ಚುನಾವಣೆ ನಡೆದು ಹೊಸ ಸರ್ಕಾರಗಳು ಅಸ್ತಿತ್ವಕ್ಕೆ ಬಂದಿವೆ. ಲೋಕಸಭೆ ಮತ್ತು ಆ ಎಲ್ಲಾ ವಿಧಾನಸಭೆಗಳ ಅಧಿಕಾರದ ಅವಧಿ 2029ರವರೆಗೂ ಇರುತ್ತದೆ. ಆದರೆ ಯಾವುದೋ ಒಂದೆರಡು ರಾಜ್ಯಗಳಲ್ಲಿ ಅಲ್ಪಮತದ ಕಾರಣದಿಂದಲೋ ಅಥವಾ ಅನ್ಯ ಕಾರಣದಿಂದಲೋ ವಿಧಾನಸಭೆಗಳು 2028ರಲ್ಲಿ ವಿಸರ್ಜನೆಯಾಗುತ್ತವೆ. ಆ ವಿಧಾನಸಭೆಗಳ ಅವಧಿ ಆರು ತಿಂಗಳಿಗಿಂತ ಕಡಿಮೆ ಇದ್ದರೆ, ಅಲ್ಲಿ ರಾಷ್ಟ್ರಪತಿ ಆಳ್ವಿಕೆ ಹೇರಲಾಗುತ್ತದೆ. ಆರು ತಿಂಗಳಿಗಿಂತ ಹೆಚ್ಚಿನ ಅವಧಿ ಉಳಿದಿದ್ದರೆ, ಆ ಅಲ್ಪಾವಧಿಗೇ ಚುನಾವಣೆ ನಡೆಸಬೇಕಾಗುತ್ತದೆ. 2028ರಲ್ಲಿ ಚುನಾವಣೆ ನಡೆದು ಅಸ್ತಿತ್ವಕ್ಕೆ ಬರುವ ಹೊಸ ವಿಧಾನಸಭೆ ಮತ್ತು ಸರ್ಕಾರದ ಅವಧಿ 2029ರವರೆಗೆ ಮಾತ್ರ. 2029ರಲ್ಲಿ ಲೋಕಸಭೆ ಚುನಾವಣೆಯೊಂದಿಗೆ ಆ ರಾಜ್ಯಗಳು ಮತ್ತೆ ವಿಧಾನಸಭಾ ಚುನಾವಣೆಗಳನ್ನು ನಡೆಸಬೇಕಾಗುತ್ತದೆ.

ಸಿನಿ ಬಿಟ್ಸ್

ಝೈದ್‌ಗೆ ಅನಿಲ್ ಆ್ಯಕ್ಷನ್ ಕಟ್

ಜಯತೀರ್ಥ ನಿರ್ದೇಶನದ 'ಬನಾರಸ್' ಸಿನಿಮಾ ಮೂಲಕ ಚಂದನವನಕ್ಕೆ ಕಾಲಿಟ್ಟ ನಟ ಝೈದ್ ಖಾನ್ ಮತ್ತೊಂದು ಸಿನಿಮಾಗೆ ಗ್ರೀನ್ ಸಿಗ್ನಲ್ ನೀಡಿದ್ದಾರೆ.

ಇತ್ತೀಚೆಗಷ್ಟೇ ತೆರೆಕಂಡಿದ್ದ 'ಉಪಾಧ್ಯಕ್ಷ' ಸಿನಿಮಾದ ರುವಾರಿ ಅನಿಲ್ ಕುಮಾರ್ ಝೈದ್‌ಗೆ ಆ್ಯಕ್ಷನ್ ಕಟ್ ಹೇಳಲಿದ್ದಾರೆ. ಕಿಚ್ಚ ಸುದೀಪ್ ಅಭಿನಯದ 'ಕೆಂಪೇಗೌಡ' ಚಿತ್ರಕ್ಕೆ ಸಂಭಾಷಣೆ ಬರೆಯುವ ಮೂಲಕ ಕನ್ನಡ ಚಿತ್ರರಂಗ ಪ್ರವೇಶಿಸಿದ್ದ ಅನಿಲ್ ಕುಮಾರ್, ಸುಮಂತ್ ಹಾಗೂ ರಾಧಿಕಾ ಪಂಡಿತ್ ಅಭಿನಯದ 'ದಿಲ್‌ವಾಲ' ಚಿತ್ರದ ಮೂಲಕ ನಿರ್ದೇಶಕರಾದರು. ಶರಣ್ ನಟನೆಯ 'ರ‍್ಯಾಂಬೊ 2' ಚಿತ್ರದ ಬಳಿಕ 'ಉಪಾಧ್ಯಕ್ಷ'ನ ಕೈಹಿಡಿದಿದ್ದರು. ಸಿನಿಮಾ ಬಾಕ್ಸ್ ಆಫೀಸ್‌ನಲ್ಲಿ ಸದ್ದು ಮಾಡಿತು. ಇದರ ಬೆನ್ನಲ್ಲೇ ಹೊಸ ಪ್ರಾಜೆಕ್ಟ್ ಘೋಷಿಸಿದ್ದಾರೆ ಅನಿಲ್.



ಝೈದ್, ಅನಿಲ್

'ಬನಾರಸ್' ಚಿತ್ರದ ನಂತರ ಸಾಕಷ್ಟು ಕಥೆ ಕೇಳಿರುವ ಝೈದ್ ಖಾನ್ ಈ ಚಿತ್ರದ ಕಥೆಯನ್ನು ಒಪ್ಪಿಕೊಂಡಿದ್ದಾರೆ. ಕ್ಲಾಸ್ ಆ್ಯಂಡ್ ಮಾಸ್ ಕಥೆಯನ್ನು ಈ ಚಿತ್ರವು ಹೊಂದಿದ್ದು, ಹೆಸರಾಂತ ನಿರ್ಮಾಣ ಸಂಸ್ಥೆ ಈ ಚಿತ್ರವನ್ನು ನಿರ್ಮಾಣ ಮಾಡುತ್ತಿದೆ ಎಂದಿದೆ ತಂಡ. ತಾಂತ್ರಿಕವರ್ಗ ಹಾಗೂ ತಾರಾಬಳಗದ ಕುರಿತು ಹೆಚ್ಚಿನ ಮಾಹಿತಿಯನ್ನು ಸದ್ಯದಲ್ಲೇ ನೀಡುವುದಾಗಿ ಹೇಳಿದ್ದಾರೆ ಅನಿಲ್ ಕುಮಾರ್.

ಮಾ.22 ರಂದು 'ದಿಲ್ ಖುಷ್' ತೆರೆಗೆ



ರಂಜಿತ್, ಸ್ಪಂದನ ಸೋಮಣ್ಣ

ಹೊಸಬರಾದ ರಂಜಿತ್, ಸ್ಪಂದನ ಸೋಮಣ್ಣ ಜೋಡಿಯಾಗಿ ನಟಿಸಿರುವ 'ದಿಲ್ ಖುಷ್' ಚಿತ್ರ ಮಾರ್ಚ್ 22 ರಂದು ತೆರೆಗೆ ಬರಲಿದೆ. ಜಯಪ್ರಭ ಕಲರ್ ಫ್ರೇಮ್ಸ್ ಲಾಂಛನದಲ್ಲಿ ಜಯಲಕ್ಷ್ಮಿ ಪ್ರವೀಣ್ ಹಾಗೂ ಪ್ರಭ ಶೇಖರ್ ನಿರ್ಮಿಸಿರುವ ಚಿತ್ರಕ್ಕೆ ಪ್ರಮೋದ್ ಜಯ ಆ್ಯಕ್ಷನ್ ಕಟ್ ಹೇಳಿದ್ದಾರೆ.

'ಸಿಂಪಲ್ ಸುನಿ ಅವರ ಬಳಿ ಕೆಲಸ ಮಾಡಿದ್ದೆ. ಇದು ನನ್ನ ಮೊದಲ ಸಿನಿಮಾ. ಕಥೆ ಹಾಗೂ ಚಿತ್ರಕಥೆ ಬರೆದು ನಿರ್ದೇಶಿಸಿದ್ದೇನೆ. ರೊಮ್ಯಾಂಟಿಕ್ ಕಾಮಿಡಿ ಕಥಾಹಂದರ ಹೊಂದಿರುವ ಚಿತ್ರವಿದು' ಎಂದರು ಪ್ರಮೋದ್ ಜಯ.

ಐದು ಹಾಡುಗಳಿರುವ ಈ ಚಿತ್ರಕ್ಕೆ ಪ್ರಸಾದ್ ಕೆ ಶೆಟ್ಟಿ ಸಂಗೀತ ನಿರ್ದೇಶನವಿದೆ. ಪ್ರದ್ಯೋತನ್ ಹಿನ್ನೆಲೆ ಸಂಗೀತ ನೀಡಿದ್ದಾರೆ. ನಿವಾಸ್ ನಾರಾಯಣ್ ಛಾಯಾಚಿತ್ರಗ್ರಹಣ, ಜ್ಞಾನೇಶ್ ಬಿ ಮಠದ್ ಸಂಕಲನವಿದೆ.

ರಂಗಾಯಣ ರಘು, ಧರ್ಮಣ್ಣ ಕಡೂರು, ರವಿ ಭಟ್, ಅರುಣ ಬಾಲರಾಜ್, ರಘು ರಾಮನಕೊಪ್ಪ ಮುಂತಾದವರು ಈ ಚಿತ್ರದ ತಾರಾಬಳಗದಲ್ಲಿದ್ದಾರೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

ಕರ್ನಾಟಕದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇತ್ತೀಚೆಗೆ ಮಾಡಿದ ಭಾಷಣವೊಂದರ ವಿಡಿಯೊವೊಂದು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೆಯಾಗುತ್ತಿದೆ. 'ಮುಂದಿನ ಜನ್ಮ ಇದ್ದರೆ, ನಾನು ಮುಸಲ್ಮಾನನಾಗಿ ಜನಿಸಲು ಇಚ್ಛಿಸುತ್ತೇನೆ' ಎಂದು ಸಿದ್ದರಾಮಯ್ಯ ಅವರು ಹೇಳಿರುವುದು ವಿಡಿಯೊದಲ್ಲಿದೆ. ಇದಕ್ಕೆ ಪ್ರತಿಕ್ರಿಯಿಸಿರುವ ಸಾರ್ವಜನಿಕರು, 'ಮುಂದಿನ ಜನ್ಮ ಯಾಕೆ ಕಾಯ್ತಿಯಾ ಈಗ್ಲೇ ಮತಾಂತರ ಆಗೊ ಸಿದ್ದರಮುಲ್ಲಾಖನ್' ಎಂಬಂಥ ಪೋಸ್ಟ್‌ಗಳನ್ನು ಹಂಚಿಕೊಳ್ಳುತ್ತಿದ್ದಾರೆ. ಆದರೆ, ಇದು ತಿರುಚಿದ ವಿಡಿಯೊ.

ಜಾಲತಾಣಗಳಲ್ಲಿ ಹಂಚಿಕೆಯಾಗುತ್ತಿರುವ ವಿಡಿಯೊದಲ್ಲಿ ಕನ್ನಡ ಸುದ್ದಿ ವಾಹಿನಿಯ ಲೋಗೊ ಇದೆ. ಇದರ ಜಾಡು ಹಿಡಿದಾಗ, ಆ ವಾಹಿನಿಯ ಯೂಟ್ಯೂಬ್ ಚಾನೆಲ್‌ನಲ್ಲಿ ಸಿದ್ದರಾಮಯ್ಯ ಅವರ ಭಾಷಣದ ಪೂರ್ಣ ವಿಡಿಯೊ ದೊರೆಕಿತು. ಮಂಡ್ಯದಲ್ಲಿ ನಡೆದ ಗ್ಯಾರಂಟಿ ಸಮಾವೇಶದಲ್ಲಿ ಸಿದ್ದರಾಮಯ್ಯ ಅವರ ಭಾಷಣದ ವಿಡಿಯೊ ಇದಾಗಿದೆ. ಎಚ್.ಡಿ. ದೇವೇಗೌಡರ ಮಾತೊಂದನ್ನು ಉಲ್ಲೇಖಿಸಿ ಸಿದ್ದರಾಮಯ್ಯ ಅವರು ಮಾತನಾಡಿದ್ದಾರೆ. 'ಏನೇ ಆದರೂ ನಾನು ಬಿಜೆಪಿಗೆ ಎಂದಿಗೂ ಹೋಗುವುದಿಲ್ಲ. ಮುಂದಿನ ಜನ್ಮ ಅಂತಿದ್ದರೆ ನಾನು ಮುಸಲ್ಮಾನನಾಗಿ ಹುಟ್ಟಬೇಕೆಂದು ಬಯಸುತ್ತೇನೆ. ಯಾಕೆಂದರೆ, ಬಿಜೆಪಿಯು ಕೋಮುವಾದಿ ಪಕ್ಷವಾಗಿದೆ ಎಂದು ಇದೇ ದೇವೇಗೌಡ ಹೇಳಿದ್ದರು' ಎಂದು ಸಿದ್ದರಾಮಯ್ಯ ಅವರು ಭಾಷಣ ಮಾಡಿದ್ದರು. ದೇವೇಗೌಡರ ಕುರಿತು ಮಾತನಾಡಿದ್ದನ್ನು ಸಿದ್ದರಾಮಯ್ಯ ಅವರು ತಮ್ಮ ಕುರಿತೇ ಆಡುತ್ತಿದ್ದಾರೆ ಎನ್ನುವ ಅರ್ಥ ಬರುವಂತೆ ವಿಡಿಯೊವನ್ನು ತಿರುಚಲಾಗಿದೆ ಎಂದು 'ದಿ ಕ್ವಿಂಟ್' ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ನುಡಿ ಬೆಳಗು



ಪ್ರೊ.ಎಂ. ಕೃಷ್ಣೇಗೌಡ

ಇಂಥವರು ಈಗಲೂ ಇರಬಹುದಾ?

ಮೈಸೂರು ವಿಶ್ವವಿದ್ಯಾನಿಲಯದ ಮೊದಲನೆಯ ಕನ್ನಡ ಪ್ರೊಫೆಸರ್ ಶ್ರೀ ಟಿ.ಎಸ್. ವೆಂಕಣ್ಣಯ್ಯ. ಅಷ್ಟು ಹೇಳಿದರೆ ಸಾಲದು, ಅವರು ಕುವೆಂಪು ಅವರ ಗುರುಗಳು. 'ನಾನು ದೇವರನ್ನು ನೋಡಿಲ್ಲ, ನೋಡಿರುವುದು ವೆಂಕಣ್ಣಯ್ಯನವರನ್ನು ಮಾತ್ರ' ಅಂದಿದ್ದಾರೆ ಕುವೆಂಪು. ಅವರ ಶ್ರೀ ರಾಮಾಯಣ ದರ್ಶನಂ ಮಹಾಕಾವ್ಯವನ್ನು ಅರ್ಪಣೆ ಮಾಡಿರುವುದೂ ಗುರು ವೆಂಕಣ್ಣಯ್ಯನವರಿಗೇ. ಬೇರೆಯ ಸಂದರ್ಭದಲ್ಲಿ ಕುವೆಂಪು ಹೇಳಿರುವ ಒಂದು ಮಾತು ಬಹಳ ಮಹತ್ತ್ವದ್ದು. 'ಗುರು ವೆಂಕಣ್ಣಯ್ಯನವರು ರಾಮಾಯಣ ದರ್ಶನಂ ಮಹಾಕಾವ್ಯವನ್ನು ಓದುವಷ್ಟರಲ್ಲಿ ನಿಧನರಾದರು. ಅವರು ಓದಿದ್ದರೆ ಈ ಮಹಾಕಾವ್ಯ ಪ್ರಕಟವಾಗದಿದ್ದರೂ ನಾನು ಚಿಂತಿಸುತ್ತಿರಲಿಲ್ಲ. ಏಕೆಂದರೆ ನನಗೆ ವೆಂಕಣ್ಣಯ್ಯನವರು ಎಂದರೆ ಒಂದು ಕೋಟಿ ಕನ್ನಡ ಸಹೃದಯರಿಗೆ ಸಮ'.

ಇದೇ ವೆಂಕಣ್ಣಯ್ಯನವರನ್ನು ಕಲ್ಪವೃಕ್ಷಕ್ಕೆ ಹೋಲಿಸಿ ಪದ್ಯ ಬರೆದಿದ್ದಾರೆ ಕವಿ ಕೆ.ಎಸ್. ನರಸಿಂಹಸ್ವಾಮಿ. ಅವರ ಬಗ್ಗೆ ಎಷ್ಟು ಹೇಳುವುದು? ಅವರು ನಮ್ಮ ಮೈಸೂರಿನ ನೆಲದ ಮೇಲೆ ನಡೆದಾಡಿದ ಮಹಾನುಭಾವ, ಮಹಾತ್ಮ.

ವೆಂಕಣ್ಣಯ್ಯನವರು ತೀರಿಕೊಳ್ಳುವುದಕ್ಕೆ ನಾಲ್ಕಾರು ತಿಂಗಳ ಮೊದಲು- ಅವರ ಮನೆಯಲ್ಲಿ ಒಮ್ಮೆ ಭಾರಿ ಕಳ್ಳತನವಾಯಿತು. ಉಟ್ಟ ಬಟ್ಟೆಗಳನ್ನು ಬಿಟ್ಟು ಮತ್ತೇನೂ ಬಿಟ್ಟಿರಲಿಲ್ಲ ಕಳ್ಳರು. ಮಲಗಿದ್ದ ವೆಂಕಣ್ಣಯ್ಯನವರನ್ನು ಎಬ್ಬಿಸಿ ಯಾರೋ ವಿಷಯ ಹೇಳಿದರು. ಅವರು ಸ್ಥಿತಪ್ರಜ್ಞರು.

'ಪಾಪ, ಯಾರೋ ದೊಡ್ಡ ಪ್ರೊಫೆಸರ್ ಮನೆ ಅಂತ ಕಳ್ಳತನ ಮಾಡೋಕೆ ಬಂದಿದ್ದಾರೆ, ನಮ್ಮ ಮನೆ ಪೆಟ್ಟಿಗೆ ಬೀರುಗಳನ್ನೆಲ್ಲಾ ತೆಗೆದು ಹುಡುಕಿ ಇವನ್ಯಾವ ಸೀಮೆ ಪ್ರೊಫೆಸರು? ನಮಗಿಂತಾ ದರಿದ್ರದೋನು ಅಂತ ಬಯ್ಕೊಂಡು ಹೋಗಿರಬೇಕು' ಎಂದು ನಕ್ಕರು. 'ದೇವರ ಬೆಳ್ಳಿ ಪ್ರತಿಮೆಗಳನ್ನೂ ಕದ್ಕೊಂಡ್ ಹೋಗಿದ್ದಾರೆ' ಅಂತ ಯಾರೋ ಹೇಳಿದಾಗ, 'ದೇವರು ಬೆಳ್ಳಿ, ಬಂಗಾರದಲ್ಲಿ ಕಾಣಿಸಿಕೊಂಡರೆ ಅವನಿಗೆ ಇದೇ ಗತಿ' ಅಂದು ಮತ್ತೆ ನಕ್ಕರು. 'ನೀವು ಊಟ ಮಾಡುತ್ತಿದ್ದ ಬೆಳ್ಳಿ ತಟ್ಟೇನೂ ಕದ್ದಿದ್ದಾರೆ ಪಾಪಿಗಳು' ಅಂತ ಯಾರೋ ಅಂದರು. 'ನಾನು ಅಲ್ಯುಮಿನಿಯಂ ತಟ್ಟೆಯಲ್ಲಿಯೇ ಊಟ ಮಾಡ್ತೀನಿ ಅಂದಿದ್ದೆ. ಆದರೆ ಮನೆಯವರು ನನಗೆ ಅಂತ ಬೆಳ್ಳಿ ತಟ್ಟೆ ಇಟ್ಟಿದ್ದರು. ಈಗ ಒಳ್ಳೆಯದೇ ಆಯಿತು. ಅಲ್ಯುಮಿನಿಯಂ ತಟ್ಟೆಯಲ್ಲಿ ತಿಂದರೆ ಊಟದ ರುಚಿಯೇನೂ ವ್ಯತ್ಯಾಸವಾಗೋದಿಲ್ಲ' ಅಂದರು.

ಅದೇ ದಿನ ಅವರ ಮಗನ ಹುಟ್ಟಿದ ಹಬ್ಬ ಬೇರೆ. ವೆಂಕಣ್ಣಯ್ಯನವರು ಅವರ ಮನೆಯ ಕಳ್ಳತನದ ಬಗ್ಗೆ ತಲೆಯನ್ನೇ ಕೆಡಿಸಿಕೊಳ್ಳದೆ ಮನೆಗೆ ಬಂದವರಿಗೆಲ್ಲಾ ಹೋಳಿಗೆ ಪಾಯಸದ ಊಟ ಹಾಕಿಸಿದರು.

ಇದು ಅವರು ಬದುಕಿದ ಪರಿ. ಇಂಥ ಪುಣ್ಯಾತ್ಮರು ಈಗ ನಾವಿರುವ ಊರಿನಲ್ಲೇ ಇದ್ದರು. ಇಂಥವರು ಈಗಲೂ ಇರಬಹುದಾ?

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ — ಶುಕ್ರವಾರ ಮಾರ್ಚ್ 15, 2024

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಫಾಲ್ಗುಣ ಶುಕ್ಲ ಷಷ್ಠಿ ಗಂ. 22-10 **ನಕ್ಷತ್ರ:** ಕೃತ್ತಿಕಾ ಗಂ. 16-08 **ಯೋಗ:** ವಿಷ್ಕಂಭ ಗಂ. 19-45
ಕರಣ: ಕೌಲವ ಗಂ. 10-43, ಮೀನ ಮಾಸದ 01 ನೇ ದಿನ, **ಮಳೆನಕ್ಷತ್ರ:** ಪೂರ್ವಾಭಾದ್ರ 4
ರಾಹುಕಾಲ: ಬೆಳಿಗ್ಗೆ 10-30 – 12-00
ಸೂರ್ಯೋದಯ: 06-41 **ಸೂರ್ಯಾಸ್ತ:** 06-37
ಮುಸ್ಲಿಂ ದಿನಾಂಕ: 04 ರಂಜಾನ್
ಅದೃಷ್ಟ ಸಂಖ್ಯೆ: 3, 9

ಮೇಷ: ಖಾದಿ ಉದ್ಯಮದವರಿಗೆ ಸರ್ಕಾರದಿಂದ ಸಹಾಯ ದೊರೆಯುವ ಅವಕಾಶಗಳಿವೆ. ವ್ಯಕ್ತಿಯ ಮನಃ ಪರಿವರ್ತನೆ ಮಾಡುವ ವಿಚಾರದಲ್ಲಿ ಸಫಲರಾಗುತ್ತೀರಿ. ಹಣಕಾಸಿನ ಪರಿಸ್ಥಿತಿ ಉತ್ತಮ ಪಡಿಸಿಕೊಳ್ಳುವಿರಿ.

ವೃಷಭ: ಗಣ್ಯ ವ್ಯಕ್ತಿಗಳ ವೈಯಕ್ತಿಕ ಭೇಟಿಯಿಂದ ಸಹಚರರಲ್ಲಿ ಭಿನ್ನಾಭಿಪ್ರಾಯ. ಮೊಮ್ಮಕ್ಕಳ ಆಗಮನದಿಂದಾಗಿ ದೇಹಾಲಸ್ಯ ದೂರ. ನಿಮ್ಮ ವ್ಯವಹಾರ ಕ್ಷೇತ್ರಕ್ಕೆ ಸಂಬಂಧಿಸಿದ ರಕ್ಷಣಾ ದೇವತೆಯನ್ನು ಆರಾಧಿಸಿ.

ಮಿಥುನ: ಮನೆಯಲ್ಲಿ ವಿವಾಹ, ಗೃಹಪ್ರವೇಶದಂತಹ ಶುಭಕಾರ್ಯಗಳ ಪ್ರಸ್ತಾಪ ನೆರವೇರುವುದು. ಧಾರ್ಮಿಕವಾಗಿ ಹೆಚ್ಚಿನ ಏಕಾಗ್ರತೆ, ಧ್ಯಾನದಿಂದ ಮಾನಸಿಕವಾಗಿ ಸದೃಢರಾಗುವಿರಿ. ಅನಿರೀಕ್ಷಿತ ಧನಾಗಮನದಿಂದ ಸಂತಸ.

ಕರ್ಕಾಟಕ: ಅವಿವಾಹಿತರಿಗೆ ಮಾಂಗಲ್ಯ ಭಾಗ್ಯವಿದ್ದು ಮದುವೆಯ ಮಾತುಕತೆಗಳನ್ನು ನಡೆಸುವರು. ಕಾರ್ಯಕ್ಷೇತ್ರದಲ್ಲಿನ ನಷ್ಟ ಪ್ರಮಾಣ ಅಧಿಕವಾಗಿದ್ದರೂ, ಹೊಸ ಜವಾಬ್ದಾರಿಗಳು ನಿಮ್ಮನ್ನು ಅರಸಿ ಬರಲಿವೆ.

ಸಿಂಹ: ಈ ದಿನ ಎಲೆಕ್ಟ್ರಾನಿಕ್ ಮತ್ತು ಎಲೆಕ್ಟ್ರಿಕಲ್ ಕ್ಷೇತ್ರದಲ್ಲಿರುವವರಿಗೆ ನಿರೀಕ್ಷೆಗೂ ಮೀರಿದ ಸಂಪಾದನೆ ಉಂಟಾಗುವುದು. ಪ್ರೇಮಿಗಳಿಗೆ ಜೀವನವನ್ನು ನಿರ್ಣಯಿಸಲು ಉತ್ತಮ ಅವಕಾಶಗಳು ಈ ದಿನ ಬರಲಿವೆ.

ಕನ್ಯಾ: ಹಲವು ದಿನಗಳಿಂದ ಜೀವನದಲ್ಲಿ ಬೇಸರಗೊಂಡಿರುವ ನೀವು ಈ ದಿನದ ಅಂತ್ಯದಲ್ಲಿ ಮಾನಸಿಕವಾಗಿ ಸದೃಢರಾಗುವಿರಿ. ಉಳಿತಾಯದ ಹಣವನ್ನು ಮನೆ ನಿರ್ಮಾಣ ಕಾರ್ಯಗಳಿಗೆ ಬಳಸುವಿರಿ.

ತುಲಾ: ರಾಜಕೀಯ ವ್ಯವಹಾರಗಳ ಪ್ರಬಲಾಕಾಂಕ್ಷಿಯಾಗಿರುವ ನೀವು ಇನ್ನಷ್ಟು ಚುರುಕಾಗಬೇಕಾಗಿದೆ. ಈ ದಿನದ ಆಗು ಹೋಗುಗಳ ಬಗ್ಗೆ ತಲೆಕೆಡಿಸಿಕೊಳ್ಳುವ ಅವಶ್ಯಕತೆ ಇಲ್ಲ. ಅಗತ್ಯ ವಸ್ತುಗಳ ಖರೀದಿಗೆ ಹಣ ವಿನಿಯೋಗವಾಗುವುದು.

ವೃಶ್ಚಿಕ: ಮನಸ್ಸು ಸಿರಿತನದ ಜೀವನವನ್ನು ಇಷ್ಟ ಪಡಲಿದೆ. ಆದರೆ ಬುದ್ಧಿ ಸ್ಥಿಮಿತದಲ್ಲಿರಲಿ. ಹಾಸಿಗೆ ಇದ್ದಷ್ಟೇ ಕಾಲು ಚಾಚಿ. ನೂತನ ಕೆಲಸ ಕಾರ್ಯಗಳ ಆರಂಭಕ್ಕೆ ಮತ್ತು ಒಡಂಬಡಿಕೆಗಳಿಗೆ ಇಂದು ಸೂಕ್ತವಾದ ಕಾಲವಾಗಿರುತ್ತದೆ.

ಧನು: ಕಫ ವ್ಯಕ್ತಿಗಳಿಗೆ ಉಸಿರಾಟದ ಸಮಸ್ಯೆ ಕಾಣಿಸಿಕೊಳ್ಳುವ ಸಾಧ್ಯತೆ ಇದೆ. ಸಾಂಸಾರಿಕವಾಗಿ ಇದ್ದಂತಹ ಹಲವು ಸಮಸ್ಯೆಗಳಿಗೆ ಪರಿಹಾರ ದೊರೆತು, ಮನಸ್ಸಿನ ಶಾಂತಿಯನ್ನು ಪಡೆಯುವಿರಿ.

ಮಕರ: ಪ್ರೀತಿ ಪಾತ್ರರೊಂದಿಗೆ ಇಂದು ಭವಿಷ್ಯದ ಯೋಜನೆಗಳ ಹಾಗೂ ನಿಮ್ಮ ಜೀವನದ ಗುರಿ ತಲುಪುವ ಬಗ್ಗೆ ಗಂಭೀರ ಚರ್ಚೆ ನಡೆಸುವಿರಿ ಹಾಗೂ ಪರಸ್ಪರ ಮನಸ್ಸು ಬಿಚ್ಚಿ ಮಾತನಾಡುವಿರಿ. ಹಾಡುಗಾರರಿಗೆ ಒಳ್ಳೆಯ ಅವಕಾಶ ಇದೆ.

ಕುಂಭ: ವಿದೇಶ ವ್ಯಾಸಂಗದ ಅಭಿಲಾಷಿಗಳಿಗೆ ಶುಭ ಸುದ್ದಿ ಕೇಳುವ ದಿನ ಇದಾಗಿದೆ. ಕ್ರೀಡಾಪಟುಗಳಿಗೆ ಪುರಸ್ಕಾರ, ಗೌರವಾಭಿನಂದನೆಗಳು ಪ್ರಾಪ್ತಿಯಾಗಲಿವೆ. ಅಲಂಕಾರಿಕ ವಸ್ತುಗಳ ಮಾರಾಟದಿಂದ ಹೆಚ್ಚು ಆದಾಯ ಗಳಿಕೆ.

ಮೀನ: ಕೇಟರಿಂಗ್ ಸೇವೆ ಮಾಡುವವರಿಗೆ ಅಧಿಕ ಲಾಭದ ಜೊತೆ ಸಂಪನ್ಮೂಲ ವ್ಯಕ್ತಿಗಳ ಬಳಕೆಯಾಗುವುದು. ಮಗನಿಂದ ಮನಸ್ಸಿಗೆ ನೋವಾಗುವಂತಹ ಘಟನೆ ನಡೆಯಬಹುದು. ಶ್ರೀ ರಾಮನಾಮ ಜಪವನ್ನು ಮಾಡಿ.

ಪದಬಂಧ 5621

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
2.ಉತ್ತ ಮೇಲೆ ನೆಲವನ್ನು ಮಟ್ಟ ಮಾಡುವ ಸಾಧನ (3)
4.ಸಾಂದ್ರತೆಗೊಂದು ಪರ್ಯಾಯ ಪದ (3)
5.ಕತ್ತು ಕೊನೆಗಿಟ್ಟರೆ ಇದು ಅಡ್ಡಿ! (4)
6.ಆಹುತಿಯನ್ನು ಕೊಡುವ ಸ್ಥಳ (4)
8.ಹತ್ತಿರದಲ್ಲಿ ಪ್ರತ್ಯಕ್ಷನಾಗಿರುವ ಶಿವ! (2)
10.ಇಪ್ಪತ್ನಾಲ್ಕು ಗಂಟೆಗಳ ಅವಧಿ (2)
13.ನಿದರ್ಶನ ತೋರಿಸುತ್ತಿರುವ ತತ್ವಜ್ಞಾನಿ! (4)
14.ಸುಮಾರು ಮೂರು ಮೈಲುಗಳ ಅಳತೆ (4)
15.ಮಣಿ ಸರ ಧರಿಸಿರುವ ಚಲುವೆ (3)
16.ಒಪ್ಪದೊಡನೆ ಬರುವ ಅಚ್ಚುಕಟ್ಟು (3)

ಮೇಲಿಂದ ಕೆಳಕ್ಕೆ
1.ಹೊಟ್ಟೆಯನ್ನು ಹೊರೆದುಕೊಳ್ಳುವುದು (6)
2.ಲಲಾಟದ ಮೇಲೆ ಬರೆದಿರುವ ವಿಧಿಲಿಖಿತ! (5)
3.ಇದು ಅಸಲಿಯಂತೂ ಅಲ್ಲವೇ ಅಲ್ಲ! (3)
5.ವಠಾರಕ್ಕೆ ಬಂದಿರುವ ಛಲವಾದಿ! (4)
7.ಒಪ್ಪವಾಗಿ ಬಂದಿರುವ ಪರಿವಿಡಿ (6)
9.ದಾರಿಯಲ್ಲಿ ಪಡೆದುಕೊಂಡಿರುವ ಅಪ್ಪಣೆ ಚೀಟಿ (4)
11.ಹಳೆಯದನ್ನು ಪುನಃ ಹೊಸದು ಮಾಡುವಿಕೆ (5)
12.ಸರೀಕರೆದುರು ಧರಿಸಿರುವ ಕಂಠಾಭರಣ (3)

1	■	2			■	■	3	■
4			■	■	5			
	■	6				■		■
	■		■	■		■	■	7
	■	8	9	■	10	11	■	
	■	■		■	■		■	
■	12	■	13				■	
14				■	■	15		
■		■	■	16			■	

5620ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅಧೋಗತಿ 3.ಕಷಾಯ 5.ಗದ್ಗದ 7.ಒಸಡು 8.ಸಮೂಹಗಾನ 11.ಗಲಾಟೆ 12.ಬಕ್ಕರಿ 15.ಪರೋಕ್ಷ 16.ಆಜುಬಾಜು

ಮೇಲಿಂದ ಕೆಳಕ್ಕೆ:
1.ಅಭ್ಯಂಗ 2.ತಿಪ್ಪೆ 3.ಕರಡು 4.ಯಮಶಿಕ್ಷೆ 6.ದವಸ 7.ಒಣಹರಟೆ 9.ನವಾಬ 10.ಪರಿತಾಪ 11.ಗವಾಕ್ಷ 13.ರಿವಾಜು 14.ಮೇಳ

ಸುಡೊಕು 6006

		7	1		2		6	
				3				9
2		4				1		
	6	8		5			4	1
						7	9	
9	4			2				
3	7			8		9		5
		6					8	
	8		3		5	6		2

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ

6005 ಸುಡೊಕು

4	5	7	3	6	8	9	1	2
9	8	1	5	7	2	3	4	6
6	3	2	9	4	1	7	5	8
3	7	4	2	8	9	1	6	5
5	2	9	4	1	6	8	3	7
1	6	8	7	3	5	2	9	4
2	9	3	8	5	4	6	7	1
7	4	6	1	2	3	5	8	9
8	1	5	6	9	7	4	2	3

18ಕ್ಕೆ ಕಾಂಗ್ರೆಸ್ ಕೇಂದ್ರ ಚುನಾವಣಾ ಸಮಿತಿ ಸಭೆ • ಬಿಜೆಪಿ ಟಿಕೆಟ್ ಘೋಷಣೆ ಬಳಿಕ ಕೆಲವೆಡೆ ಕಾರ್ಯತಂತ್ರ ಬದಲು

ಹನುಮಂತಯ್ಯ, ಮನ್ಸೂರ್‌ಗೆ 'ಕೈ' ಟಿಕೆಟ್?

ಪ್ರಜಾವಾಣಿ ವಾರ್ತೆ

ನವದೆಹಲಿ: ಲೋಕಸಭಾ ಚುನಾವಣೆಯಲ್ಲಿ ಕೋಲಾರ ಕ್ಷೇತ್ರದಿಂದ ರಾಜ್ಯಸಭೆಯ ಮಾಜಿ ಸದಸ್ಯ ಎಲ್. ಹನುಮಂತಯ್ಯ, ರಾಯಚೂರಿನಿಂದ ನಿವೃತ್ತ ಐಎಎಸ್ ಅಧಿಕಾರಿ ಜಿ. ಕುಮಾರ ನಾಯಕ ಹಾಗೂ ಬೆಂಗಳೂರು ಕೇಂದ್ರ ಕ್ಷೇತ್ರದಿಂದ ಮನ್ಸೂರ್ ಅಲಿ ಖಾನ್ ಅವರನ್ನು ಕಾಂಗ್ರೆಸ್ ಪಕ್ಷವು ಕಣಕ್ಕಿಳಿಸುವ ಸಂಭವ ಇದೆ.

ಕಾಂಗ್ರೆಸ್‌ನ ಕೇಂದ್ರ ಚುನಾವಣಾ ಸಮಿತಿ ಸಭೆ ಇದೇ 18ಕ್ಕೆ ನಿಗದಿಯಾಗಿದೆ. ಕರ್ನಾಟಕ, ಉತ್ತರ ಪ್ರದೇಶ ಸೇರಿದಂತೆ ಹಲವು ರಾಜ್ಯಗಳಿಗೆ ಅಭ್ಯರ್ಥಿಗಳ ಹೆಸರನ್ನು ಅಂದು ಅಖೈರುಗೊಳಿಸಲಾಗುತ್ತದೆ. ಕರ್ನಾಟಕದಲ್ಲಿ ಏಳು ಕ್ಷೇತ್ರಗಳಿಗೆ ಅಭ್ಯರ್ಥಿಗಳ ಪಟ್ಟಿಯನ್ನು ಕಾಂಗ್ರೆಸ್ ಈಗಾಗಲೇ ಪ್ರಕಟಿಸಿದೆ. ಉಳಿದ ಕ್ಷೇತ್ರಗಳಿಗೆ ಸಂಭಾವನೀಯ ಅಭ್ಯರ್ಥಿಗಳ ಪಟ್ಟಿಯನ್ನು ರಾಜ್ಯ ಘಟಕವು ಹೈಕಮಾಂಡ್‌ಗೆ ಕಳುಹಿಸಿಕೊಟ್ಟಿದೆ. ಬಿಜೆಪಿಯು 21 ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಘೋಷಿಸಿರುವುದರಿಂದ ಕಾಂಗ್ರೆಸ್ ಪಕ್ಷವು ಕಾರ್ಯತಂತ್ರದಲ್ಲಿ ಬದಲಾವಣೆ ಮಾಡಲು ಮುಂದಾಗಿದೆ. ಕೆಲವು ಕ್ಷೇತ್ರಗಳಿಗೆ ಕೊನೆಯ ಕ್ಷಣದಲ್ಲಿ ಸಂಭಾವ್ಯ ಅಭ್ಯರ್ಥಿಗಳು ಬದಲಾಗುವ ಸಂಭವ ಇದೆ.

ಕೋಲಾರದಲ್ಲಿ ಆಹಾರ ಹಾಗೂ ನಾಗರಿಕ ಪೂರೈಕೆ ಸಚಿವ ಕೆ.ಎಚ್. ಮುನಿಯಪ್ಪ ಅವರನ್ನು ಹುರಿಯಾಳನ್ನಾಗಿ ಮಾಡಲು ಕಾಂಗ್ರೆಸ್ ಪಾಳಯ ಯೋಜಿಸಿತ್ತು. ಚುನಾವಣೆಯಲ್ಲಿ ಸ್ಪರ್ಧಿಸಲು ಮುನಿಯಪ್ಪ ಹಿಂದೇಟು ಹಾಕಿದ್ದರು. ಕುಟುಂಬದ ಸದಸ್ಯರಿಬ್ಬರಿಗೆ ಅವಕಾಶ ಕಲ್ಪಿಸುವಂತೆ ಮನವಿ ಮಾಡಿದ್ದರು. ಮುನಿಯಪ್ಪ ಅವರೇ ಸ್ಪರ್ಧಿಸಬೇಕು ಎಂದು ಕಾಂಗ್ರೆಸ್ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಒತ್ತಡ ಹೇರಿದ್ದರು. ಈ ನಡುವೆ, ಮುನಿಯಪ್ಪ ಸ್ಪರ್ಧೆಗೆ ಸಚಿವ ಎಂ.ಸಿ.ಸುಧಾಕರ್, ಶಾಸಕ ಕೊತ್ತೂರು ಮಂಜುನಾಥ್ ಹಾಗೂ ಮಾಜಿ ಸಚಿವ ಕೆ.ಆರ್.ರಮೇಶ್ ಕುಮಾರ್ ಬಣದಿಂದ ವಿರೋಧ ವ್ಯಕ್ತವಾಗಿತ್ತು. ಮುನಿಯಪ್ಪ ಅಥವಾ ಕುಟುಂಬ ಸದಸ್ಯರು ಸ್ಪರ್ಧಿಸಿದರೆ ಈ ಬಣದವರು ಮುಕ್ತ ಮನಸ್ಸಿನಿಂದ ಕೆಲಸ ಮಾಡಲಾರರು ಎಂಬ ಆತಂಕದಿಂದ ಪರ್ಯಾಯ ಅಭ್ಯರ್ಥಿಗಾಗಿ 'ಕೈ' ಪಾಳಯ ಶೋಧ ನಡೆಸಿತು. ಎಲ್. ಹನುಮಂತಯ್ಯ ಅವರನ್ನು ಹುರಿಯಾಳನ್ನಾಗಿ ಮಾಡಿದರೆ ಎರಡೂ ಬಣದವರ ಒಪ್ಪಿಗೆಯೂ ಸಿಗಬಹುದು ಎಂಬ ವಿಶ್ವಾಸದಿಂದ ಅವರ ಹೆಸರನ್ನು ಅಂತಿಮಗೊಳಿಸಲಾಗಿದೆ. ಈ ಸಂಬಂಧ ಹನುಮಂತಯ್ಯ ಅವರೊಂದಿಗೆ ಹಿರಿಯ ನಾಯಕರು ಚರ್ಚಿಸಿದ್ದಾರೆ. ಅವಕಾಶ ನೀಡಿದರೆ ಸ್ಪರ್ಧಿಸಲು ಸಿದ್ಧ ಎಂದು ಹನುಮಂತಯ್ಯ ತಿಳಿಸಿದ್ದಾರೆ ಎಂದು ಗೊತ್ತಾಗಿದೆ.

ಹನುಮಂತಯ್ಯ ಎಡಗೈ ಸಮುದಾಯಕ್ಕೆ ಸೇರಿದವರು. ಅವರ ರಾಜ್ಯಸಭಾ ಅವಧಿ ಏಪ್ರಿಲ್ 2ರವರೆಗೆ ಇದೆ. ರಾಜ್ಯಸಭಾ ಚುನಾವಣೆಯಲ್ಲಿ ಅವರಿಗೆ ಟಿಕೆಟ್ ಕೊಟ್ಟಿಲ್ಲ. ಎಡಗೈ ಸಮುದಾಯಕ್ಕೆ ಟಿಕೆಟ್ ನಿರಾಕರಿಸಿದ್ದಕ್ಕೆ ಮಾದಿಗ ಸಮುದಾಯದವರು ಆಕ್ರೋಶ ವ್ಯಕ್ತಪಡಿಸಿದ್ದರು. ಹೀಗಾಗಿ, ಸಮುದಾಯದ ಸಿಟ್ಟು ತಣಿಸಲು ಹನುಮಂತಯ್ಯ ಅವರಿಗೆ ಕೋಲಾರದಿಂದ ಅವಕಾಶ ನೀಡಲಾಗುತ್ತಿದೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

ಬೆಂಗಳೂರು ಕೇಂದ್ರ ಕ್ಷೇತ್ರದಿಂದ ಬಿಡಿಎ ಅಧ್ಯಕ್ಷ ಎನ್.ಎ.ಹ್ಯಾರಿಸ್ ಅವರನ್ನು ಅಭ್ಯರ್ಥಿಯನ್ನಾಗಿ ಮಾಡಲು ಕಾಂಗ್ರೆಸ್ ಉತ್ಸುಕವಾಗಿತ್ತು. ಆದರೆ, ಅವರು ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ನಿರಾಕರಿಸಿದ್ದರು. ತಮ್ಮ ಬದಲು ಪುತ್ರ ನಲಪಾಡ್ ಹ್ಯಾರಿಸ್‌ಗೆ ಅವಕಾಶ ನೀಡುವಂತೆ ವಿನಂತಿಸಿದ್ದರು. ಇದಕ್ಕೆ ರಾಜ್ಯ ನಾಯಕರಿಂದ ಸಹಮತ ವ್ಯಕ್ತವಾಗಿಲ್ಲ. ಹೀಗಾಗಿ, ಮನ್ಸೂರ್ ಅಲಿ ಖಾನ್ ಹೆಸರು ಮುಂಚೂಣಿಗೆ ಬಂದಿದೆ.

ರಾಯಚೂರು ಕ್ಷೇತ್ರದಿಂದ ಜಿ.ಕುಮಾರ್ ನಾಯಕ ಸ್ಪರ್ಧಿಸುವುದು ಬಹುತೇಕ ಖಚಿತವಾಗಿದೆ. ಬಿಜೆಪಿಯ ಹಾಲಿ ಸಂಸದ ರಾಜಾ ಅಮರೇಶ್ವರ ನಾಯಕ್ ಅವರಿಗೆ ಟಿಕೆಟ್ ಕೈ ತಪ್ಪುವ ಸಾಧ್ಯತೆ ಇದೆ. ಮಾಜಿ ಶಾಸಕ ರಾಜೂಗೌಡ ಅವರು ಟಿಕೆಟ್‌ಗೆ ಪ್ರಬಲ ಆಕಾಂಕ್ಷಿಯಾಗಿದ್ದರು. ಅವರು ಸುರಪುರ ವಿಧಾನಸಭಾ ಉಪಚುನಾವಣೆಗೆ ಪಕ್ಷದ ಅಭ್ಯರ್ಥಿಯಾಗುವುದು ಬಹುತೇಕ ಖಚಿತ. ಇದರಿಂದಾಗಿ, ಮಾಜಿ ಸಂಸದ ಬಿ.ವಿ.ನಾಯಕ್ ಅವರಿಗೆ ಬಿಜೆಪಿ ಮಣೆ ಹಾಕುವ ಸಂಭವ ಇದೆ. ಕುಮಾರ್ ನಾಯಕ್ ಅವರನ್ನು ಹುರಿಯಾಳುವನ್ನಾಗಿ ಮಾಡಿದರೆ ಪಕ್ಷಕ್ಕೆ ಹೆಚ್ಚಿನ ಅನುಕೂಲವಾಗಲಿದೆ ಎಂಬುದು ಕಾಂಗ್ರೆಸ್ ನಾಯಕರ ಲೆಕ್ಕಾಚಾರ.

ಕಾಂಗ್ರೆಸ್ ಸಂಭಾವನೀಯ ಅಭ್ಯರ್ಥಿಗಳು

ಬೆಂಗಳೂರು ದಕ್ಷಿಣ	ಸೌಮ್ಯರೆಡ್ಡಿ
ಬೆಂಗಳೂರು ಕೇಂದ್ರ	ಮನ್ಸೂರ್ ಅಲಿಖಾನ್
ಬೆಂಗಳೂರು ಉತ್ತರ	ಎಂ.ವಿ.ರಾಜೀವ್ ಗೌಡ
ಕೋಲಾರ	ಎಲ್.ಹನುಮಂತಯ್ಯ
ಚಿಕ್ಕಬಳ್ಳಾಪುರ	ರಕ್ಷಾ ರಾಮಯ್ಯ/ ಎಚ್.ಎನ್.ಶಿವಶಂಕರ ರೆಡ್ಡಿ
ಚಿತ್ರದುರ್ಗ	ಬಿ.ಎನ್.ಚಂದ್ರಪ್ಪ
ದಾವಣಗೆರೆ	ಪ್ರಭಾ ಮಲ್ಲಿಕಾರ್ಜುನ
ಹುಬ್ಬಳ್ಳಿ-ಧಾರವಾಡ	ಶಿವಲೀಲಾ ಕುಲಕರ್ಣಿ/ವಿನೋದ್ ಅಸೂಟಿ
ರಾಯಚೂರು	ಜಿ.ಕುಮಾರ ನಾಯಕ
ಕಲಬುರಗಿ	ರಾಧಾಕೃಷ್ಣ ದೊಡ್ಡಮನಿ
ಬಾಗಲಕೋಟೆ	ಸಂಯುಕ್ತಾ ಪಾಟೀಲ/ಆನಂದ್ ನ್ಯಾಮಗೌಡ
ಬಳ್ಳಾರಿ	ಬಿ.ನಾಗೇಂದ್ರ/ ಚೈತನ್ಯಾ ತುಕಾರಾಮ್ (ಸೌಪರ್ಣಿಕಾ)
ದಕ್ಷಿಣ ಕನ್ನಡ	ಪದ್ಮರಾಜ್ / ವಿನಯ್ ಕುಮಾರ್ ಸೊರಕೆ
ಉಡುಪಿ-ಚಿಕ್ಕಮಗಳೂರು	ಕೆ.ಜಯಪ್ರಕಾಶ್ ಹೆಗ್ಡೆ
ಕೊಪ್ಪಳ	ರಾಜಶೇಖರ ಹಿಟ್ನಾಳ್
ಉತ್ತರ ಕನ್ನಡ	ಅಂಜಲಿ ನಿಂಬಾಳ್ಕರ್

ಸಚಿವರ ಮಕ್ಕಳು ಕಣಕ್ಕೆ?

ಬೆಳಗಾವಿ ಲೋಕಸಭಾ ಕ್ಷೇತ್ರದಿಂದ ಸಚಿವ ಲಕ್ಷ್ಮಿ ಹೆಬ್ಬಾಳಕರ ಪುತ್ರ ಮೃಣಾಲ್ ಹೆಬ್ಬಾಳಕರ, ಚಿಕ್ಕೋಡಿಯಿಂದ ಸಚಿವ ಸತೀಶ ಜಾರಕಿಹೊಳಿ ಪುತ್ರಿ ಪ್ರಿಯಾಂಕಾ, ಬಾಗಲಕೋಟೆಯಿಂದ ಸಚಿವ ಶಿವಾನಂದ ಪಾಟೀಲ ಪುತ್ರಿ ಸಂಯುಕ್ತ ಪಾಟೀಲ ಹಾಗೂ ಬಳ್ಳಾರಿಯಿಂದ ಶಾಸಕ ಇ.ತುಕಾರಾಮ್ ಪುತ್ರಿ ಚೈತನ್ಯಾ ಅವರ ಹೆಸರು ಅಖೈರುಗೊಳ್ಳುವ ಸಾಧ್ಯತೆ ಇದೆ.

ಬಿಜೆಪಿಯ ರಮೇಶ್ ಕತ್ತಿ ಅವರು ಚಿಕ್ಕೋಡಿ ಕ್ಷೇತ್ರದಿಂದ ಕಣಕ್ಕೆ ಇಳಿಯಲು ಉತ್ಸುಕರಾಗಿದ್ದರು. ಚಿಕ್ಕೋಡಿಯಲ್ಲಿ ಹಾಲಿ ಸಂಸದ ಅಣ್ಣಾ ಸಾಹೇಬ ಜೊಲ್ಲೆ ಅವರಿಗೆ ಕಮಲ ಪಾಳಯ ಮಣೆ ಹಾಕಿದೆ. ಇದರಿಂದ ಕತ್ತಿ ಅಸಮಾಧಾನಗೊಂಡಿದ್ದಾರೆ. ಕತ್ತಿ ಅವರನ್ನು ಬೆಳಗಾವಿ ಕ್ಷೇತ್ರದ ಅಭ್ಯರ್ಥಿಯನ್ನಾಗಿ ಮಾಡಲು ಬಿಜೆಪಿ ನಾಯಕ ಬಿ.ಎಸ್. ಯಡಿಯೂರಪ್ಪ ಉತ್ಸುಕರಾಗಿದ್ದಾರೆ. ಈ ಸಂಬಂಧ ಭರವಸೆಯನ್ನೂ ನೀಡಿದ್ದಾರೆ. ಈ ನಡುವೆ, ಕತ್ತಿ ಅವರಿಗೆ ಕಾಂಗ್ರೆಸ್ ನಾಯಕರು ಗಾಳ ಹಾಕಿದ್ದಾರೆ. ಚಿಕ್ಕೋಡಿಯ ಅಭ್ಯರ್ಥಿಯನ್ನಾಗಿ ಮಾಡುವ ವಾಗ್ದಾನ ನೀಡಿದ್ದಾರೆ. ಬಿಜೆಪಿಯ ಎರಡನೇ ಪಟ್ಟಿ ಪ್ರಕಟವಾಗುವ ತನಕ ಕಾದು ನೋಡಲು ಕತ್ತಿ ನಿರ್ಧರಿಸಿದ್ದಾರೆ. ಅವರು ಕಾಂಗ್ರೆಸ್‌ಗೆ ಬಂದರೆ ಚಿಕ್ಕೋಡಿಯಿಂದ ಕಣಕ್ಕಿಳಿಸುವುದು ಸತೀಶ ಜಾರಕಿಹೊಳಿ ಅವರ ಆಲೋಚನೆ. ಇದಕ್ಕೆ ಲಕ್ಷ್ಮಿ ಹೆಬ್ಬಾಳಕರ ಅವರ ಸಹಮತವಿಲ್ಲ. ಚಿಕ್ಕೋಡಿಯಿಂದ ಪ್ರಿಯಾಂಕಾ ಅವರನ್ನು ಅಭ್ಯರ್ಥಿಯನ್ನಾಗಿ ಮಾಡಬೇಕು. ಆಗ ಮಾತ್ರ ಬೆಳಗಾವಿಯಿಂದ ಮೃಣಾಲ್ ಅವರನ್ನು ಕಣಕ್ಕಿಳಿಸಲು ಒಪ್ಪುವೆ ಎಂದು ಷರತ್ತು ಹಾಕಿದ್ದಾರೆ. ಇದರಿಂದಾಗಿ, ಎರಡೂ ಕ್ಷೇತ್ರಗಳ ಅಭ್ಯರ್ಥಿ ಆಯ್ಕೆ ಕಾಂಗ್ರೆಸ್‌ಗೆ ಕಗ್ಗಂಟಾಗಿದೆ.

ಬಳ್ಳಾರಿಯಿಂದ ಸಚಿವ ಬಿ.ನಾಗೇಂದ್ರ ಅವರನ್ನು ಕಣಕ್ಕಿಳಿಸಿದರೆ ಕ್ಷೇತ್ರವನ್ನು ಕೈವಶ ಮಾಡಿಕೊಳ್ಳಬಹುದು ಎಂಬುದು ಕಾಂಗ್ರೆಸ್ ನಾಯಕರ ಆಲೋಚನೆ. ಇದಕ್ಕೆ ನಾಗೇಂದ್ರ ಒಪ್ಪಿಲ್ಲ. ಈ ನಡುವೆ, ಸಂಡೂರಿನ ಶಾಸಕ ಇ.ತುಕಾರಾಮ್ ಅವರನ್ನು ಕರೆಸಿಕೊಂಡ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸುವಂತೆ ಸೂಚಿಸಿದ್ದಾರೆ. ತುಕಾರಾಮ್ ಅವರೂ ಹಿಂದೇಟು ಹಾಕಿದ್ದಾರೆ. ತಮ್ಮ ಬದಲು ಮಗಳಿಗೆ ಅವಕಾಶ ನೀಡುವಂತೆ ಕೋರಿದ್ದಾರೆ. ನಾಗೇಂದ್ರ ಅವರನ್ನು ಮನವೊಲಿಸುವ ಕೆಲಸದಲ್ಲಿ 'ಕೈ' ನಾಯಕರು ನಿರತರಾಗಿದ್ದಾರೆ. ನಾಗೇಂದ್ರ ಸ್ಪರ್ಧಿಸದಿದ್ದರೆ ಚೈತನ್ಯಾ ಅವರಿಗೆ ಅವಕಾಶ ಸಿಗಬಹುದು ಎಂದು ಮೂಲಗಳು ಹೇಳಿವೆ.

ಬಾಗಲಕೋಟೆಯಲ್ಲಿ ಪುತ್ರಿ ಸಂಯುಕ್ತ ಪಾಟೀಲ ಪರ ಶಿವಾನಂದ ಪಾಟೀಲ ಪ್ರಬಲ ಲಾಬಿ ನಡೆಸಿದ್ದಾರೆ. ಮಾಜಿ ಶಾಸಕ ಆನಂದ ನ್ಯಾಮೇಗೌಡ ಅಥವಾ ಅಜಯ್ ಕುಮಾರ್ ಸರ್‌ನಾಯಕ ಅವರಿಗೆ ಟಿಕೆಟ್ ನೀಡಬೇಕು ಎಂದು ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಪಟ್ಟು ಹಿಡಿದಿದ್ದಾರೆ. ಮಗಳನ್ನು ಗೆಲ್ಲಿಸಿಕೊಂಡು ಬರುವ ಹೊಣೆ ನನ್ನದು ಎಂದು ಶಿವಾನಂದ ಪಾಟೀಲ ಅವರು ರಾಜ್ಯ ನಾಯಕರಿಗೆ ವಾಗ್ದಾನ ಮಾಡಿದ್ದಾರೆ. ಹೀಗಾಗಿ, ಸಂಯುಕ್ತಾ ಅಭ್ಯರ್ಥಿಯಾಗುವ ಸಂಭವ ಇದೆ ಎಂದು ಮೂಲಗಳು ಹೇಳಿವೆ.

ಕಲಬುರಗಿ ಕ್ಷೇತ್ರದಲ್ಲಿ ಸ್ಪರ್ಧಿಸಲು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಉತ್ಸುಕರಾಗಿಲ್ಲ. ಕ್ಷೇತ್ರದ ಅಭ್ಯರ್ಥಿ ಬಗ್ಗೆ ಖರ್ಗೆ ಅವರೇ ತೀರ್ಮಾನ ತೆಗೆದುಕೊಳ್ಳಲಿದ್ದಾರೆ. ಅವರ ಅಳಿಯ ರಾಧಾಕೃಷ್ಣ ದೊಡ್ಡಮನಿ ಅವರ ಹೆಸರನ್ನೇ ಶಿಫಾರಸು ಮಾಡುವ ಸಾಧ್ಯತೆ ದಟ್ಟವಾಗಿದೆ.

ಸುದ್ದಿ 2 ನಿಮಿಷ

'ಚುನಾವಣೆ: ಬಿಜೆಪಿಯಿಂದ ರಾಮಮಂದಿರ ಪ್ರಸ್ತಾಪ ತಪ್ಪೇನಿಲ್ಲ'

ದಾವಣಗೆರೆ: 'ಬಿಜೆಪಿಯು ರಾಮಮಂದಿರ ವಿಚಾರವನ್ನು ಪ್ರಸ್ತಾಪಿಸಿ ಚುನಾವಣೆ ಪ್ರಚಾರಕ್ಕೆ ಬಳಸಿಕೊಂಡರೆ ತಪ್ಪೇನಿಲ್ಲ' ಎಂದು ಉಡುಪಿ ಪೇಜಾವರ ಅಧೋಕ್ಷಜ ಮಠದ ವಿಶ್ವಪ್ರಸನ್ನತೀರ್ಥ ಸ್ವಾಮೀಜಿ ಅಭಿಪ್ರಾಯಪಟ್ಟರು.

ನಗರದಲ್ಲಿ ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ರಾಮಮಂದಿರ ನಿರ್ಮಾಣದ ವಿಷಯದಲ್ಲಿ ಬಿಜೆಪಿಯವರು ಕೆಲಸ ಮಾಡಿದ್ದಾರೆ. ಹಾಗಾಗಿ ಚುನಾವಣೆಯಲ್ಲಿ ಅದನ್ನು ಹೇಳಿಕೊಳ್ಳುವುದರಲ್ಲಿ ಯಾವುದೇ ತಪ್ಪಿಲ್ಲ' ಎಂದರು.

'ದೇವಸ್ಥಾನಗಳ ಕಾಣಿಕೆ ಹುಂಡಿ ಹಣದ ಬಳಕೆ ವಿಷಯದಲ್ಲಿ ಸರ್ಕಾರ ಹಸ್ತಕ್ಷೇಪ ಮಾಡಬಾರದು' ಎಂದ ಅವರು, 'ದೇವಸ್ಥಾನಗಳಲ್ಲಿ ಪ್ರಸಾದ ತಯಾರಿಸಲು ಮಾರ್ಗಸೂಚಿ ಬಿಡುಗಡೆ ಮಾಡಬೇಕು. ಇದೇ ಮಾನದಂಡ ಹೋಟೆಲ್ ಇನ್ನಿತರ ಕಡೆ ಸಾರ್ವಜನಿಕವಾಗಿ ಆಹಾರ ವಿತರಣೆಯಾಗುವ ಸ್ಥಳಗಳಿಗೂ ಅನ್ವಯಿಸುತ್ತದೆ. ಅಲ್ಲೂ ಮಾರ್ಗಸೂಚಿ ಇರುವುದು ಉತ್ತಮ' ಎಂದು ಅಭಿಪ್ರಾಯಪಟ್ಟರು.

'ಅಯೋಧ್ಯೆಯಲ್ಲಿ ರಾಮ ಮಂದಿರ ನಿರ್ಮಾಣ ಮಾಡಿದ ಮಾದರಿಯಲ್ಲೇ ಕರ್ನಾಟಕದಲ್ಲಿರುವ ಆಂಜನೇಯನ ಜನ್ಮಸ್ಥಳದ ಅಭಿವೃದ್ಧಿಗೆ ಟ್ರಸ್ಟ್ ರಚಿಸಬೇಕು' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಕಾಂಗ್ರೆಸ್ ಅಭ್ಯರ್ಥಿ ಗೆಲ್ಲಿಸಿ, ಗ್ಯಾರಂಟಿ ಋಣ ತೀರಿಸಿ: ಡಿಕೆಶಿ

ರಾಯಚೂರು: 'ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳನ್ನು ಗೆಲ್ಲಿಸುವ ಮೂಲಕ ಐದು ಯೋಜನೆಗಳ ಫಲಾನುಭವಿಗಳು ಗ್ಯಾರಂಟಿ ಋಣ ತೀರಿಸಬೇಕು' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮನವಿ ಮಾಡಿದರು.

ನಗರದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಗ್ಯಾರಂಟಿ ಯೋಜನೆಗಳ ಫಲಾನುಭವಿಗಳ ಸಮಾವೇಶದಲ್ಲಿ ಮಾತನಾಡಿದ ಅವರು, 'ಕಮಲ ಕೆಸರಿನಲ್ಲೇ ಇರಬೇಕು. ತೆನೆ ಹೊಲದಲ್ಲೇ ಇರಬೇಕು. ಬಡವರಿಗೆ ದಾನ–ಧರ್ಮ ಮಾಡುವ ಕೈ ಅಧಿಕಾರದಲ್ಲಿ ಇರಬೇಕು. ಗ್ಯಾರಂಟಿ ಯೋಜನೆಗಳು 10 ವರ್ಷಗಳವರೆಗೂ ಮುಂದುವರಿಯಬೇಕು. ಈ ದಿಸೆಯಲ್ಲಿ ರಾಜ್ಯದ ಮತದಾರರು ಲೋಕಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳನ್ನು ಬೆಂಬಲಿಸಬೇಕು' ಎಂದು ಕೋರಿದರು.

'ಗ್ಯಾರಂಟಿ ಯೋಜನೆ ನೋಡಿ ಕಮಲ ಮುದುಡಿತು. ತೆನೆ ಹೊತ್ತ ಮಹಿಳೆ ಕಮಲವನ್ನು ಅಪ್ಪಿಕೊಂಡಿತು. ಬಿಜೆಪಿ–ದಳದ ಕತೆ ಮುಗಿದಿದೆ. ವಯಸ್ಸು ಮುಗಿಯುವ ಮೊದಲು ಜನ ಕಾಂಗ್ರೆಸ್ ಬೆಂಬಲಿಸಬೇಕು' ಎಂದರು.

ಮೃಣಾಲ್ ವಿರುದ್ಧ ಪಂಚಮಸಾಲಿ ಅಸ್ತ್ರ?

ಪ್ರಜಾವಾಣಿ ವಾರ್ತೆ

ಬೆಳಗಾವಿ: ಕಾಂಗ್ರೆಸ್‌ನಿಂದ ಬೆಳಗಾವಿ ಕ್ಷೇತ್ರಕ್ಕೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮಿ ಹೆಬ್ಬಾಳಕರ ಅವರ ಪುತ್ರ ಮೃಣಾಲ್‌ಗೆ ಟಿಕೆಟ್ ಖಾತ್ರಿಯಾಗಿದ್ದು, ಅಧಿಕೃತ ಘೋಷಣೆ ಬಾಕಿ ಇದೆ. ಮೃಣಾಲ್ ಹೆಸರು ಅಂತಿಮ ಆಗುತ್ತಿದ್ದಂತೆಯೇ ಬಿಜೆಪಿ ನಾಯಕರು 'ಜಾತಿ' ಲೆಕ್ಕಾಚಾರದಲ್ಲಿ ತೊಡಗಿದ್ದಾರೆ.

ಪಂಚಮಸಾಲಿ ಸಮುದಾಯಕ್ಕೆ ಸೇರಿದ ಮೃಣಾಲ್ ವಿರುದ್ಧ ಪಂಚಮಸಾಲಿ ಅಭ್ಯರ್ಥಿಯನ್ನೇ ನಿಲ್ಲಿಸಬೇಕು ಎಂಬುದು ಒಂದು ಗುಂಪಿನ ಬೇಡಿಕೆ. ಇದಕ್ಕೆ ಪೂರಕವಾಗಿ ಮಾಜಿ ಸಚಿವ ಮುರುಗೇಶ್ ನಿರಾಣಿ ಪ್ರಬಲ ಆಕಾಂಕ್ಷಿ ಆಗಿದ್ದಾರೆ.

ಬೆಳಗಾವಿ ಲೋಕಸಭಾ ಕ್ಷೇತ್ರ ವ್ಯಾಪ್ತಿಯ ಬೆಳಗಾವಿ, ಬೈಲಹೊಂಗಲ, ಗೋಕಾಕ, ಸವದತ್ತಿ, ರಾಮದುರ್ಗ, ಮೂಡಲಗಿ ತಾಲ್ಲೂಕುಗಳಲ್ಲಿ ಪಂಚಮಸಾಲಿ ಸಮುದಾಯದ ಸಂಖ್ಯೆ ದೊಡ್ಡದು ಎಂಬ ಲೆಕ್ಕಾಚಾರವೂ ಇದೆ.

ಸಂಸದ ಸಂಗಣ್ಣ ಕರಡಿಗೆ ಟಿಕೆಟ್ ತಪ್ಪಿದ್ದಕ್ಕೆ ಬೆಂಬಲಿಗರ ಮುಂದುವರಿದ ಆಕ್ರೋಶ

ಬಿಜೆಪಿ ಕಚೇರಿ ಗಾಜು ಒಡೆದು ದಾಂದಲೆ

ಪ್ರಜಾವಾಣಿ ವಾರ್ತೆ

ಕೊಪ್ಪಳ: ಹಾಲಿ ಸಂಸದ ಸಂಗಣ್ಣ ಕರಡಿ ಅವರಿಗೆ ಕೊಪ್ಪಳ ಲೋಕಸಭಾ ಕ್ಷೇತ್ರದಿಂದ ಬಿಜೆಪಿ ಟಿಕೆಟ್ ನಿರಾಕರಿಸಿದ್ದರಿಂದ ಅವರ ಬೆಂಬಲಿಗರ ಆಕ್ರೋಶ ಭುಗಿಲೆದ್ದಿದೆ. ಇಲ್ಲಿನ ಬಿಜೆಪಿ ಕಚೇರಿಯಲ್ಲಿ ಬೆಂಬಲಿಗರು ದಾಂದಲೆ ನಡೆಸಿದ್ದಾರೆ.

ಗುರುವಾರ ಬೆಳಿಗ್ಗೆ ಪಕ್ಷದ ಕಚೇರಿಗೆ ನುಗ್ಗಿದ ಬೆಂಬಲಿಗರು, ಡಾ.ಬಸವರಾಜ ಕ್ಯಾವಟರ್ ಅವರಿಗೆ ಟಿಕೆಟ್ ಘೋಷಿಸಿರುವುದಕ್ಕೆ ವಿರೋಧ ವ್ಯಕ್ತಪಡಿಸಿ ಕಿಟಕಿ ಹಾಗೂ ಮೇಜಿನ ಗಾಜು ಒಡೆದು ಆಕ್ರೋಶ ಹೊರಹಾಕಿದರು. ಪಕ್ಷದ ಜಿಲ್ಲಾ ಘಟಕದ ಅಧ್ಯಕ್ಷ ನವೀನ್ ಗುಳಗಣ್ಣನವರ್ ಅವರನ್ನು ಸುತ್ತುವರಿದು 'ರಾಜೀನಾಮೆ ನೀಡಿ ಸಂಸದರಿಗೆ ಆದ ಅನ್ಯಾಯ ಸರಿಪಡಿಸಬೇಕು' ಎಂದು ಆಗ್ರಹಿಸಿದರು.

ನವೀನ್, ಬಸವರಾಜ ಮತ್ತು ವಿಧಾನಸಭೆ ವಿರೋಧ ಪಕ್ಷದ ಮುಖ್ಯ ಸಚೇತಕ ದೊಡ್ಡನಗೌಡ ಪಾಟೀಲ ಅವರು ಪಕ್ಷದ ಕಚೇರಿಯಲ್ಲಿ ಮಾಧ್ಯಮ ಕೊಠಡಿಯ ಬಾಗಿಲು ಹಾಕಿ ಪತ್ರಿಕಾ ಹೇಳಿಕೆ ನೀಡುತ್ತಿದ್ದಾಗ, ಸಂಗಣ್ಣ ಬೆಂಬಲಿಗರು ಕೊಠಡಿಯ ಬಾಗಿಲು ಜೋರಾಗಿ ಬಡಿದು ಪಕ್ಷದ ವರಿಷ್ಠರ ವಿರುದ್ಧ ಹರಿಹಾಯ್ದರು.

ದಾಂದಲೆಗೆ ಬಿಜೆಪಿ ಕಚೇರಿಯ ಕಿಟಕಿ ಗಾಜು ಒಡೆದಿದೆ

ಮಾತಿಗಿಲ್ಲ ಅವಕಾಶ: ಇದಕ್ಕೂ ಮೊದಲು ಅಭ್ಯರ್ಥಿ ಬಸವರಾಜ ಮತ್ತು ದೊಡ್ಡನಗೌಡ ಪಾಟೀಲ ಅವರು ಪಕ್ಷದ ಕಚೇರಿ ಸಮೀಪದಲ್ಲಿಯೇ ಇರುವ ಸಂಸದರ ಮನೆಗೆ ಬಂದಾಗಲೂ ಅವರು ನಿಂದನೆ ಎದುರಿಸಬೇಕಾಯಿತು. ಈ ವೇಳೆ ಮನೆಯೊಳಗಿದ್ದ ಸಂಸದರನ್ನು ಭೇಟಿಯಾಗಲು ಪ್ರಯತ್ನಿಸಿದಾಗ ಬೆಂಬಲಿಗರು ಆರಂಭದಲ್ಲಿ ಅಡ್ಡಿಪಡಿಸಿದರು. ಅವರನ್ನು ತಳ್ಳಿಕೊಂಡೇ ಮನೆಯ ಒಳಗೆ ಹೋದರೂ ಮಾತನಾಡಲು ಬೆಂಬಲಿಗರು ಅವಕಾಶ ಕೊಡಲಿಲ್ಲ.

ಸಂಸದ ಸಂಗಣ್ಣ ಕರಡಿ ಅವರ ಭೇಟಿಗೆ ಬಂದ ಕೊಪ್ಪಳ ಕ್ಷೇತ್ರದ ಅಭ್ಯರ್ಥಿ ಬಸವರಾಜ ಕ್ಯಾವಟರ್ ಹಾಗೂ ಶಾಸಕ ದೊಡ್ಡನಗೌಡ ಪಾಟೀಲ ಅವರಿಗೆ ಅಡ್ಡಿಪಡಿಸಿದ ಕಾರ್ಯಕರ್ತರು

ಕಾಂಗ್ರೆಸ್ ನಾಯಕರಿಂದ ಕರೆ

'ಬಿಜೆಪಿಯ ಕೆಲ ಸಂಸದರು ನನ್ನ ಸಂಪರ್ಕದಲ್ಲಿದ್ದಾರೆ' ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿಕೆ ಬೆನ್ನಲ್ಲೇ ಟಿಕೆಟ್ ವಂಚಿತ ಸಂಗಣ್ಣ ಕರಡಿ ಅವರಿಗೆ ಕಾಂಗ್ರೆಸ್‌ನ ಕೆಲ ನಾಯಕರು ಫೋನ್ ಕರೆ ಮಾಡಿದ್ದು ಕುತೂಹಲ ಮೂಡಿಸಿದೆ.

ಈ ಕುರಿತು ಪ್ರತಿಕ್ರಿಯಿಸಿದ ಸಂಗಣ್ಣ, 'ಸೌಜನ್ಯಕ್ಕಾಗಿ ಕಾಂಗ್ರೆಸ್ ನಾಯಕರು ಫೋನ್ ಮಾಡಿದ್ದರು. ಸಿಂಧನೂರಿನಲ್ಲಿ ರೈಲ್ವೆ ಸಂಬಂಧಿತ ಕಾರ್ಯಕ್ರಮ ಶುಕ್ರವಾರ ನಿಗದಿಯಾಗಿದ್ದು, ಆ ಕಾರ್ಯಕ್ರಮ ಮುಗಿಯುವ ತನಕ ಯಾವ ವಿಷಯದ ಬಗ್ಗೆಯೂ ಮಾತನಾಡುವುದಿಲ್ಲ' ಎಂದರು.

ಚಾಮರಾಜನಗರ: ಶ್ರೀನಿವಾಸ ಪ್ರಸಾದ್ ಅಳಿಯ 'ಕೈ' ಅಭ್ಯರ್ಥಿ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಸೂರು–ಕೊಡಗು ಹಾಗೂ ಚಾಮರಾಜನಗರ ಲೋಕಸಭಾ ಕ್ಷೇತ್ರದ ಟಿಕೆಟ್ ಯಾರಿಗೆ ಕೊಡಬೇಕೆಂಬ ವಿಚಾರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಭಿಪ್ರಾಯಕ್ಕೆ ಮನ್ನಣೆ ನೀಡಲು ಕಾಂಗ್ರೆಸ್ ವರಿಷ್ಠರು ನಿರ್ಧರಿಸಿದ್ದಾರೆ ಎಂದು ಗೊತ್ತಾಗಿದೆ.

ಬಿಜೆಪಿ ಸಂಸದ ವಿ. ಶ್ರೀನಿವಾಸ ಪ್ರಸಾದ್ ಅವರ ಕಿರಿಯ ಅಳಿಯ ಡಾ. ಎನ್.ಎಸ್. ಮೋಹನ್ ಅವರಿಗೆ ಚಾಮರಾಜನಗರ ಕ್ಷೇತ್ರದ ಬಿಜೆಪಿ ಟಿಕೆಟ್ ಕೈತಪ್ಪಿದೆ. ಈ ಹಿನ್ನೆಲೆಯಲ್ಲಿ ಗುರುವಾರ ಬೆಳಿಗ್ಗೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರನ್ನು ಭೇಟಿ ಮಾಡಿ ಮೋಹನ್ ಅವರು ಚರ್ಚೆ ನಡೆಸಿರುವುದು ಕುತೂಹಲ ಮೂಡಿಸಿದೆ. ಟಿಕೆಟ್ ನೀಡುವುದಾದರೆ 'ಕೈ' ಹಿಡಿಯಲು ಮೋಹನ್ ಮುಂದಾಗಿದ್ದಾರೆ ಎಂದೂ ಹೇಳಲಾಗಿದೆ.

ಮೈಸೂರು–ಕೊಡಗು ಮತ್ತು ಚಾಮರಾಜನಗರ ಕ್ಷೇತ್ರದಲ್ಲಿ ಶ್ರೀನಿವಾಸ ಪ್ರಸಾದ್ ಅವರ 'ಪ್ರಭಾವ'ವನ್ನು ಗೆಲುವಿಗೆ ಬಳಸಿಕೊಳ್ಳಲು ಕಾಂಗ್ರೆಸ್‌ನಲ್ಲಿ ಚರ್ಚೆ ನಡೆದಿದೆ. ಚಾಮರಾಜನಗರದಿಂದ ಮೋಹನ್ ಅವರಿಗೆ ಟಿಕೆಟ್ ನೀಡಿದರೆ ಎರಡೂ ಕ್ಷೇತ್ರಗಳಲ್ಲಿ ಮತ ಸೆಳೆಯಲು ಅವಕಾಶ ಆಗಬಹುದು ಎನ್ನುವ ಲೆಕ್ಕಾಚಾರದಲ್ಲಿ ಕಾಂಗ್ರೆಸ್ ನಾಯಕರಿದ್ದಾರೆ.

ಸಿದ್ದೇಶ್ವರ ಪತ್ನಿಗೆ ಟಿಕೆಟ್: ಪಕ್ಷದಲ್ಲೇ ವಿರೋಧ

ಪ್ರಜಾವಾಣಿ ವಾರ್ತೆ

ದಾವಣಗೆರೆ: ಸಂಸದ ಜಿ.ಎಂ. ಸಿದ್ದೇಶ್ವರ ಅವರ ಪತ್ನಿ ಗಾಯತ್ರಿ ಅವರಿಗೆ ಲೋಕಸಭೆ ಚುನಾವಣೆಯ ದಾವಣಗೆರೆ ಕ್ಷೇತ್ರದ ಟಿಕೆಟ್ ನೀಡಿರುವುದಕ್ಕೆ ಪಕ್ಷದಲ್ಲಿ ತೀವ್ರ ವಿರೋಧ ವ್ಯಕ್ತವಾಗಿದೆ.

ಟಿಕೆಟ್‌ನ ಆಕಾಂಕ್ಷಿಯಾಗಿದ್ದ ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ನೇತೃತ್ವದಲ್ಲಿ, ಗುರುವಾರ ತಾಲ್ಲೂಕಿನ ಶಿರಮಗೊಂಡನಹಳ್ಳಿ ಗ್ರಾಮದಲ್ಲಿರುವ ಮಾಜಿ ಸಚಿವ ಎಸ್.ಎ. ರವೀಂದ್ರನಾಥ್ ಅವರ ನಿವಾಸದಲ್ಲಿ ಸಭೆ ನಡೆಸಿದ ಪಕ್ಷದದ ಮುಖಂಡರು ಹಾಗೂ ಕಾರ್ಯಕರ್ತರು ಅಭ್ಯರ್ಥಿಯನ್ನು ಬದಲಿಸುವಂತೆ ಆಗ್ರಹಿಸಿದರು.

'ಸಿದ್ದೇಶ್ವರ ಹಠಾವೋ, ದಾವಣಗೆರೆ ಬಚಾವೋ', 'ಸಿದ್ದೇಶ್ವರ ಗೋ ಬ್ಯಾಕ್' ಎಂದು ಕಾರ್ಯಕರ್ತರು ಘೋಷಣೆ ಕೂಗಿದರು. ಇದೇ ವೇಳೆ ಸಿದ್ದೇಶ್ವರ ಪತ್ನಿಗೆ ಟಿಕೆಟ್ ನೀಡಿದ್ದನ್ನು ವಿರೋಧಿಸಿ ಕಾರ್ಯಕರ್ತನೊಬ್ಬ ಮೈಮೇಲೆ ಡೀಸೆಲ್ ಸುರಿದುಕೊಂಡು ಆತ್ಮಹತ್ಯೆಗೆ ಯತ್ನಿಸಿದಾಗ ತಡೆದ ಇತರ ಕಾರ್ಯಕರ್ತರು, ತಲೆಯ ಮೇಲೆ ನೀರು ಸುರಿದು ಸಮಾಧಾನಪಡಿಸಿದರು.

'ಶಾಮನೂರು ಶಿವಶಂಕರಪ್ಪ ಅವರ ಕುಟುಂಬದವರನ್ನು ಎದುರಿಸಲು ನನ್ನನ್ನು ಬಿಟ್ಟರೆ ಬೇರೆ ಯಾರಿಗೆ ತಾಕತ್ತಿದೆ?' ಎಂದು ತಮ್ಮನ್ನು ತಾವೇ ಬಿಂಬಿಸಿಕೊಳ್ಳುತ್ತಿರುವ ಸಿದ್ದೇಶ್ವರ ಅವರು ಸದ್ದಾಂ ಹುಸೇನ್ ಥರ ವರ್ತಿಸುತ್ತಿದ್ದಾರೆ. ಅವರ ಕುಟುಂಬಕ್ಕೆ ಟಿಕೆಟ್ ರದ್ದುಪಡಿಸಬೇಕು ಎಂದು ಎಂ.ಪಿ. ರೇಣುಕಾಚಾರ್ಯ ಆಗ್ರಹಿಸಿದರು.

'ಅಭ್ಯರ್ಥಿಯಾಗಿ ಆಯ್ಕೆಯಾಗಿರುವ ಸಂಸದರ ಪತ್ನಿ ಮತ್ತು ಅವರ ಪುತ್ರ ಒಮ್ಮೆಯಾದರೂ ಬಿಜೆಪಿಯ ಬಾವುಟ ಹಿಡಿದು ಹೋರಾಟ ಮಾಡಿದ್ದಾರೆಯೇ' ಎಂದು ಪ್ರಶ್ನಿಸಿದ ಅವರು, ಒಬ್ಬ ಸಾಮಾನ್ಯ ಕಾರ್ಯಕರ್ತನಿಗೆ ಟಿಕೆಟ್ ನೀಡಿದರೂ ಒಟ್ಟಾಗಿ ನಿಂತು ಗೆಲ್ಲಿಸಿಕೊಂಡು ಬರುತ್ತೇವೆ. ಬಿಜೆಪಿಯಲ್ಲಿ ಕುಟುಂಬ ರಾಜಕಾರಣಕ್ಕೆ ಅವಕಾಶ ಇಲ್ಲ. ಪಕ್ಷ ನಡೆಸಿರುವ ಸಮೀಕ್ಷೆಯಲ್ಲೂ ಸಂಸದ ಸಿದ್ದೇಶ್ವರ ಕುಟುಂಬದ ವಿರುದ್ಧ ಅನಿಸಿಕೆ ವ್ಯಕ್ತವಾಗಿವೆ. ಹಾಗಾಗಿ ಸಿದ್ದೇಶ್ವರ ಅವರು ತಾವಾಗಿಯೇ ಕುಟುಂಬಕ್ಕೆ ನೀಡಿದ ಟಿಕೆಟ್ ನಿರಾಕರಿಸಬೇಕು' ಎಂದರು.

'ಅಭ್ಯರ್ಥಿ ಬದಲಿಸಲೇಬೇಕು. ಅಲ್ಲಿಯವರೆಗೂ ಹೋರಾಟ ಮುಂದುವರಿಸುತ್ತೇವೆ. ಮಾ.18ರಂದು ಶಿವಮೊಗ್ಗಕ್ಕೆ ಭೇಟಿ ನೀಡಲಿರುವ ಪ್ರಧಾನಿ ನರೇಂದ್ರ ಮೋದಿ ಅವರೆದುರು ಈ ಬಗ್ಗೆ ಮನವರಿಕೆ ಮಾಡಲಾಗುವುದು' ಎಂದು ಎಸ್.ಎ. ರವೀಂದ್ರನಾಥ್ ತಿಳಿಸಿದರು.

'ಎಂಎಲ್‌ಸಿ ಟಿಕೆಟ್; ಮೂಗಿಗೆ ತುಪ್ಪ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹಾವೇರಿ ಕ್ಷೇತ್ರ ಟಿಕೆಟ್ ನಿಮ್ಮ ಮಗನಿಗೇ ಕೊಡಿಸುವೆ, ನಾನೇ ಓಡಾಡಿ ಗೆಲ್ಲಿಸುವೇ ಎಂದಿದ್ದ ಬಿ.ಎಸ್. ಯಡಿಯೂರಪ್ಪ ಮೋಸ ಮಾಡಿದ್ದಾರೆ. ಈಗ ಪುತ್ರ ಕಾಂತೇಶ್‌ನನ್ನು ವಿಧಾನ ಪರಿಷತ್‌ಗೆ ಕಳುಹಿಸುತ್ತೇವೆ ಎಂದರೆ ಹೇಗೆ ನಂಬಬೇಕು' ಎಂದು ಮಾಜಿ ಸಚಿವ ಕೆ.ಎಸ್. ಈಶ್ವರಪ್ಪ ಪ್ರಶ್ನಿಸಿದರು.

'ಗುತ್ತಿಗೆದಾರರ ಆತ್ಮಹತ್ಯೆ ಪ್ರಕರಣದಲ್ಲಿ ದೋಷಮುಕ್ತವಾದ ಎರಡೇ ದಿನದಲ್ಲಿ ಸಂಪುಟಕ್ಕೆ ತೆಗೆದುಕೊಳ್ಳುವ ಭರವಸೆ ನೀಡಿ, ಅಂದು ಮೋಸ ಮಾಡಿದ್ದರು. ಸಂಗೊಳ್ಳಿ ರಾಯಣ್ಣ ಬ್ರಿಗೇಡ್ ಮಾಡಿದಾಗ ಅರ್ಧಕ್ಕೆ ತಡೆದರು. ಅಂದು ಅಮಿತ್ ಶಾ, ಯಡಿಯೂರಪ್ಪ ಅವರ ಮಾತು ಕೇಳದೇ ಇದ್ದಿದ್ದರೆ ಬ್ರಿಗೇಡ್ ಇಂದು ಹಿಂದುಳಿದವರ ಬೃಹತ್ ಸಂಘಟನೆಯಾಗುತ್ತಿತ್ತು. ಈಗ ವಿಧಾನ ಪರಿಷತ್ ಕಡೆ ತೋರಿಸಿ, ಮೂಗಿಗೆ ತುಪ್ಪ ಹಚ್ಚುತ್ತಿದ್ದಾರೆ' ಎಂದು ಸುದ್ದಿಗಾರರೊಂದಿಗೆ ಮಾತನಾಡಿ ಆಕ್ರೋಶ ವ್ಯಕ್ತಪಡಿಸಿದರು.

ಯಡಿಯೂರಪ್ಪ ಮೋಸ ಮಾಡುತ್ತಾರೆ ಎಂದು ಗೊತ್ತಿದ್ದರೆ ಅಮಿತ್ ಶಾ, ನಡ್ಡಾ, ಮೋದಿ ಅವರನ್ನೇ ಕೇಳುತ್ತಿದ್ದೆ
ಕೆ.ಎಸ್. ಈಶ್ವರಪ್ಪ, ಮಾಜಿ ಸಚಿವ

'ಚಿಕ್ಕಮಗಳೂರಿನಲ್ಲಿ 'ಗೋ ಬ್ಯಾಕ್ ಶೋಭಾ' ಚಳವಳಿಯೇ ನಡೆದಿತ್ತು. ಕಾರ್ಯಕರ್ತರೇ ತಿರಸ್ಕರಿಸಿದ್ದವರನ್ನು ಬೆಂಗಳೂರು ಉತ್ತರಕ್ಕೆ ತಂದು ನಿಲ್ಲಿಸಿದ್ದಾರೆ. ಅಲ್ಲಿ ಜನಪ್ರಿಯತೆಗಳಿಸಿದ್ದ ಸದಾನಂದ ಗೌಡರಿಗೆ ಮೋಸ ಮಾಡಿದ್ದಾರೆ. ಬರೀ ನಾಯಕರಿಗಷ್ಟೇ ಅಪ್ಪ– ಮಕ್ಕಳು (ವಿಜಯೇಂದ್ರ) ಮೋಸ ಮಾಡುತ್ತಿಲ್ಲ. ಇಡೀ ರಾಜ್ಯದ ಕಾರ್ಯಕರ್ತರಿಗೆ ಮೋಸ ಮಾಡಿದ್ದಾರೆ. ಅಂಥ ಕಾರ್ಯಕರ್ತರ ಧ್ವನಿಯಾಗಿ ಲೋಕಸಭಾ ಚುನಾವಣೆಗೆ ನಿಲ್ಲುತ್ತಿದ್ದೇನೆ. ಶಿವಮೊಗ್ಗದಲ್ಲಿ ಮಾರ್ಚ್ 15ರಂದು ನಡೆಯುವ ಸಭೆಯ ನಂತರ ಸ್ಪಷ್ಟ ನಿರ್ಧಾರ ತೆಗೆದುಕೊಳ್ಳುವೆ' ಎಂದರು.

'ಉಡುಪಿ–ಚಿಕ್ಕಮಗಳೂರು ಕ್ಷೇತ್ರದಿಂದಲೇ ಪಲಾಯನ ಮಾಡಿದ ಶೋಭಾ ಯಾರನ್ನು ಕೇಳಿ ಟಿಕೆಟ್ ಪಡೆದರು? ಅವರಿಗೆ ಟಿಕೆಟ್ ಕೊಡಿಸಲು ಹಠ ಹಿಡಿದಂತೆ ನನ್ನ ಮಗನಿಗೆ, ಸದಾನಂದ ಗೌಡ, ಸಿ.ಟಿ. ರವಿ, ಪ್ರತಾಪ್ ಸಿಂಹ ಮತ್ತಿತರರ ವಿಷಯದಲ್ಲಿ ಏಕೆ ಹಿಡಿಯಲಿಲ್ಲ' ಎಂದು ಪ್ರಶ್ನಿಸಿದರು.

'ಹಾವೇರಿ ಟಿಕೆಟ್ ತಪ್ಪಲು ಶಾಸಕ ಬಸವರಾಜ ಬೊಮ್ಮಾಯಿ ಕಾರಣರಲ್ಲ. ಅವರೇ ಕಾಂತೇಶ್ ಹೆಸರು ಸೂಚಿಸಿದ್ದರು. ಈಗಲೂ ಅವರು ಒತ್ತಾಯದಿಂದ ಕಣಕ್ಕೆ ಇಳಿದಿದ್ದಾರೆ' ಎಂದರು.

ಕರ್ನಾಟಕ ಗೃಹ ಮಂಡಳಿ
Karnataka Housing Board
Building Communities
3ನೇ ಮಹಡಿ, ಕಾವೇರಿ ಭವನ, ಕೆ. ಜಿ. ರಸ್ತೆ, ಬೆಂಗಳೂರು–560009

ಟೆಂಡರ್ ಪ್ರಕಟಣೆ (ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ಮುಖಾಂತರ)

ಕರ್ನಾಟಕ ಗೃಹ ಮಂಡಳಿಯಲ್ಲಿ ಪೂರ್ವಾರ್ಹತೆ ಪಡೆದಿರುವ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ಮೂಲಕ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಕರೆಯಲಾಗಿದೆ ವಿವರಗಳು ಕೆಳಕಂಡಂತಿವೆ.

ಬಿಡ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ವೇಳೆ : 28.03.2024 ಸಂಜೆ 4.00 ಗಂಟೆಗೆ

ಕ್ರಮ ಸಂ.	ಕಾಮಗಾರಿಯ ಸ್ಥಳ	Work Indent & IFT No.	ಟೆಂಡರಿಗಿಟ್ಟ ಮೊತ್ತ ರೂ. ಗಳಲ್ಲಿ
1	ರೂಸ–2ರಡಿಯಲ್ಲಿ ಹಾವೇರಿ ಜಿಲ್ಲೆ ಹಾನಗಲ್ ಮತ್ತು ರಾಣಿಬೆನ್ನೂರಿನಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ಹೆಚ್ಚುವರಿ ತರಗತಿ, ಗ್ರಂಥಾಲಯ, ಪ್ರಯೋಗಾಲಯ ಮತ್ತು ಇತರೆ ಅಭಿವೃದ್ಧಿ ಕಾಮಗಾರಿ	Tender Reference Number: KHB/ 2023-24/ BD/work_indent 211 & IFT No. 219/2023-24 Date: 13.03.2024	1,52,42,831.00
2	ಹಾವೇರಿ ಜಿಲ್ಲೆ ಶಿಗ್ಗಾವಿಯಲ್ಲಿ ಮೆಟ್ರಿಕ್ ನಂತರದ ಬಾಲಕಿಯರ ವಸತಿ ನಿಲಯದ 2ನೇ ಹಂತದ ಕಟ್ಟಡ ಕಾಮಗಾರಿ	Tender Reference Number: KHB/ 2023-24/ BD/work_indent 212 & IFT No. 218/2023-24 Date: 13.03.2024	1,08,05,613.00
3	ಕಲಬುರಗಿ ಜಿಲ್ಲೆ ಶಕ್ತಿನಗರದಲ್ಲಿ ಮೆಟ್ರಿಕ್ ನಂತರದ ಬಾಲಕರ ವಸತಿ ನಿಲಯದ 2ನೇ ಹಂತದ ಕಟ್ಟಡ ಕಾಮಗಾರಿ	Tender Reference Number: KHB/ 2023-24/BD/work_indent 213 & IFT No. 152/2023-24 Date: 13.03.2024	1,17,96,733.00
4	ದಾವಣಗೆರೆ ಜಿಲ್ಲೆ ದಾವಣಗೆರೆಯಲ್ಲಿ ಮೆಟ್ರಿಕ್ ನಂತರದ ಬಾಲಕಿಯರ ವಸತಿ ನಿಲಯದ 2ನೇ ಹಂತದ ಕಟ್ಟಡ ಕಾಮಗಾರಿ	Tender Reference Number: KHB/ 2023-24/BD/work_indent 214 & IFT No. 217/2023-24 Date: 13.03.2024	1,26,22,619.00
5	ಉಡುಪಿ ಜಿಲ್ಲೆ, ಕುಂದಾಪುರದಲ್ಲಿ ಮೆಟ್ರಿಕ್ ನಂತರದ ಬಾಲಕಿಯರ ವಸತಿ ನಿಲಯದ 2ನೇ ಹಂತದ ಕಟ್ಟಡ ಕಾಮಗಾರಿ	Tender Reference Number: KHB/ 2023-24/BD/work_indent 215 & IFT No. 220/2023-24 Date: 13.03.2024	1,30,87,726.00
6	ಉಡುಪಿ ಜಿಲ್ಲೆ, ಬಾರ್ಕೂರಿನಲ್ಲಿ ಮೆಟ್ರಿಕ್ ನಂತರದ ಬಾಲಕಿಯರ ವಸತಿ ನಿಲಯದ 2ನೇ ಹಂತದ ಕಟ್ಟಡ ಕಾಮಗಾರಿ	Tender Reference Number: KHB/ 2023-24/BD/work_indent 216 & IFT No. 221/2023-24 Date: 13.03.2024	1,30,70,753.00

ಕಾಮಗಾರಿಯ ಬಗ್ಗೆ ಹಾಗೂ ಇನ್ನಿತರೆ ವಿವರಗಳನ್ನು ಈ ಕೆಳಕಂಡ ವಿಳಾಸದಲ್ಲಿ ಕಛೇರಿಯ ವೇಳೆಯಲ್ಲಿ ಪಡೆಯಬಹುದಾಗಿದೆ.
ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಬೆಂಗಳೂರು, ದೂರವಾಣಿ: 080-22273511 / 080-22100077, website: https://kppp.karnataka.gov.in

ಸಹಿ/– ಕಾರ್ಯಪಾಲಕ ಅಭಿಯಂತರರು,
ಕರ್ನಾಟಕ ಗೃಹ ಮಂಡಳಿ, ಬೆಂಗಳೂರು

ವಾ.ಸಾ.ಸಂ.ಇ/ವಾಪ್ರ/4272/ಆಕಾರ್/2023–24

ಖೂಬಾ ಕಡೆ ಸುಳಿಯದ ನಾಯಕರು

ಬೀದರ್: ತೀವ್ರ ವಿರೋಧದ ನಡುವೆಯೂ ಟಿಕೆಟ್ ಪಡೆದು ಗುರುವಾರ ತವರಿಗೆ ಬಂದಿದ್ದ ಕೇಂದ್ರ ಸಚಿವ ಭಗವಂತ ಖೂಬಾ ಅವರಿಗೆ ಅವರ ಬೆಂಬಲಿಗರು ಸಂಭ್ರಮದಿಂದ ಸ್ವಾಗತಿಸಿದರು. ಆದರೆ, ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ, ಸ್ವಪಕ್ಷೀಯ ಶಾಸಕರು ಹಾಗೂ ಪ್ರಮುಖ ಮುಖಂಡರು ಅತ್ತ ಸುಳಿಯಲಿಲ್ಲ. ಟಿಕೆಟ್ ಗೊಂದಲ ಬಗೆಹರಿದಿದ್ದರೂ ಭಗವಂತ ಖೂಬಾ ವಿರುದ್ಧದ ಬಿಜೆಪಿಯೊಳಗಿನ ಮುನಿಸು ಇನ್ನೂ ತಣಿದಿಲ್ಲ.

ಭಗವಂತ ಖೂಬಾ

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅಭಿಮತ

ಅಭ್ಯರ್ಥಿಗಳ ಆಯ್ಕೆ ಹಿಂದೆ ವರಿಷ್ಠರ ತಂತ್ರಗಾರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕಸಭಾ ಚುನಾವಣೆಯಲ್ಲಿ ಎಲ್ಲ ಸ್ಥಾನಗಳನ್ನೂ ಗೆಲ್ಲುವ ಜತೆಗೆ, ವಿಧಾನಸಭೆಗೆ ಯಾವುದೇ ಸಮಯದಲ್ಲಿ ಚುನಾವಣೆ ನಡೆದರೂ ಸ್ಪಷ್ಟ ಬಹುಮತ ಪಡೆಯುವ ತಂತ್ರಗಾರಿಕೆ ಅಭ್ಯರ್ಥಿಗಳ ಆಯ್ಕೆಯ ಹಿಂದಿದೆ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಭ್ಯರ್ಥಿಗಳ ಆಯ್ಕೆಯ ಹಿಂದೆ ಪಕ್ಷದ ವರಿಷ್ಠರ ದೂರ ದೃಷ್ಟಿ ಇದೆ. ವೀಕ್ಷಕರು, ಮುಖಂಡರು, ಕಾರ್ಯಕರ್ತರ ಅಭಿಪ್ರಾಯ ಪಡೆದು ಪ್ರತಿ ಕ್ಷೇತ್ರದಿಂದ ತಲಾ ಮೂವರು ಅಭ್ಯರ್ಥಿಗಳ ಪಟ್ಟಿಯನ್ನು ರಾಜ್ಯ ಘಟಕ ಕಳುಹಿಸಿತ್ತು. ವರಿಷ್ಠರು ಕೆಲ ಲೋಕಸಭಾ ಸದಸ್ಯರಿಗೆ ಟಿಕೆಟ್ ನಿರಾಕರಿಸಿದ್ದಾರೆ. ಹೊಸ ಮುಖಗಳಿಗೆ ಅವಕಾಶ ನೀಡುವ ಜತೆಗೆ, ಹಿಂದುಳಿದ ವರ್ಗಗಳಿಗೂ ನ್ಯಾಯ ದೊರಕಿಸಿದ್ದಾರೆ ಎಂದರು.

'ರಾಜ್ಯದಲ್ಲಿ ಒಮ್ಮೆಯೂ ಬಿಜೆಪಿ ಸ್ಪಷ್ಟ ಬಹುಮತ ಪಡೆದು ಅಧಿಕಾರಕ್ಕೆ ಬಂದಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪದೇಪದೆ ಹೇಳುತ್ತಾರೆ. ಮುಂದೆ ನಡೆಯುವ ಚುನಾವಣೆಯಲ್ಲಿ ಸ್ಪಷ್ಟ ಬಹುಮತ ಪಡೆದು ಅಧಿಕಾರಕ್ಕೆ ಬರಬೇಕು ಎನ್ನುವುದು ಬಿಜೆಪಿ ಕಾರ್ಯಕರ್ತರ ಅಭಿಲಾಷೆ' ಎಂದು ಹೇಳಿದರು.

'ಅಭ್ಯರ್ಥಿಗಳ ಆಯ್ಕೆಯಲ್ಲಿ ಅತ್ಯಂತ ಖುಷಿ ನೀಡಿದ್ದು ಮೈಸೂರು ಹಾಗೂ ಬೆಂಗಳೂರು ಗ್ರಾಮಾಂತರ ಕ್ಷೇತ್ರಗಳ ಆಯ್ಕೆ. ರಾಜವಂಶದ ಯದುವೀರ ಅವರಿಗೆ ಹಾಗೂ ಹೃದಯ ತಜ್ಞ ಡಾ.ಮಂಜುನಾಥ್ ಅವರಿಗೆ ಟಿಕೆಟ್ ನೀಡಿದನ್ನು ಸ್ವಾಗತಿಸುತ್ತೇವೆ' ಎಂದರು.

ಮೂರ್‍ನಾಲ್ಕು ದಿನಗಳಲ್ಲಿ ಉತ್ತರ!

ಶೆಟ್ಟರ್‌ಗೆ ಯಾವ ಕ್ಷೇತ್ರ? ಕೆ.ಎಸ್. ಈಶ್ವರಪ್ಪ ಮುನಿಸಿಕೊಂಡಿದ್ದಾರಲ್ಲಾ?.. ಹೀಗೆ ಸುದ್ದಿಗಾರರು ಯಾವ ಪ್ರಶ್ನೆ ಕೇಳಿದರೂ, ವಿಜಯೇಂದ್ರ ನೀಡಿದ ಒಂದೇ ಸಾಲಿನ ಪ್ರತಿಕ್ರಿಯೆ, ಮೂರ್‍ನಾಲ್ಕು ದಿನಗಳಲ್ಲಿ ಉತ್ತರ ಸಿಗುತ್ತದೆ ಎನ್ನುವುದು.

'ಟಿಕೆಟ್ ಕೈತಪ್ಪಿದ ಅಭ್ಯರ್ಥಿಗಳು ಅವರ ಕ್ಷೇತ್ರಗಳಲ್ಲಿ ಉತ್ತಮ ಕೆಲಸ ಮಾಡಿದ್ದಾರೆ. ಜನರ ಪ್ರೀತಿ, ವಿಶ್ವಾಸವನ್ನೂ ಗಳಿಸಿದ್ದಾರೆ. ಆದರೆ, ಪಕ್ಷದ ಹಿತದೃಷ್ಟಿಯಿಂದ ವರಿಷ್ಠರು ಕೆಲ ತೀರ್ಮಾನಗಳನ್ನು ಕೈಗೊಂಡಿದ್ದಾರೆ. ಅಸಮಾಧಾನಿತರ ಜತೆ ಹಿರಿಯರು ಮಾತನಾಡುವರು. ಕ್ಷೇತ್ರ ಬದಲಾವಣೆಯಾಗಿರುವ ಶೋಭಾ ಕರಂದ್ಲಾಜೆ ಅವರನ್ನೂ ಗೆಲ್ಲಿಸಿಕೊಳ್ಳುತ್ತೇವೆ. ಲೋಕಸಭಾ ಚುನಾವಣಾ ಫಲಿತಾಂಶ ಎಲ್ಲದಕ್ಕೂ ಉತ್ತರ ನೀಡಲಿದೆ' ಎಂದರು.

'ಮೈಸೂರು ಅಭಿವೃದ್ಧಿಗಾಗಿ ಸ್ಪರ್ಧೆ'

ಬೆಂಗಳೂರು: 'ಅಭಿವೃದ್ಧಿ ಮತ್ತು ಸಾರ್ವಜನಿಕ ಸೇವೆಯ ದೃಷ್ಟಿಕೋನ ಇಟ್ಟುಕೊಂಡು ಲೋಕಸಭಾ ಕ್ಷೇತ್ರದ ಅಭ್ಯರ್ಥಿಯಾಗಲು ನಿರ್ಧರಿಸಿದೆ' ಎಂದು ಮೈಸೂರು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಹೇಳಿದರು.

ರಾಜ್ಯ ಬಿಜೆಪಿ ಕಾರ್ಯಾಲಯಕ್ಕೆ ಗುರುವಾರ ಭೇಟಿ ನೀಡಿದ ನಂತರ ಅವರು ಸುದ್ದಿಗಾರರ ಜತೆ ಮಾತನಾಡಿದರು.

ಅಧಿಕಾರ ಇದ್ದಾಗ ಹೆಚ್ಚಿನ ಅಭಿವೃದ್ಧಿ ಮಾಡಲು ಅವಕಾಶ ಸಿಗುತ್ತದೆ. ಈಗಿನ ಸಂಸದ ಪ್ರತಾಪಸಿಂಹ ಅವರು ಸಹ ಮೈಸೂರಿನ ಅಭಿವೃದ್ಧಿಗೆ ಶ್ರಮಿಸಿದ್ದಾರೆ. ತಮ್ಮ ಕಾರ್ಯಕ್ಕೆ ಅವರ ಸಹಕಾರವೂ ಸಿಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಪ್ರಶಸ್ತಿ... ನವದೆಹಲಿಯಲ್ಲಿ ಗುರುವಾರ ನಡೆದ ಸುದ್ದಿ ಪ್ರಕಾಶಕರ ಜಾಗತಿಕ ಒಕ್ಕೂಟದ (WAN-IFRA) ಡಿಜಿಟಲ್ ಮೀಡಿಯಾ ದಕ್ಷಿಣ ಏಷ್ಯಾ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಪ್ರಜಾವಾಣಿ ಅಂತರ್ಜಾಲ ತಾಣಕ್ಕೆ ಲಭಿಸಿದ ರಜತ ಟ್ರೋಫಿಯನ್ನು ವ್ಯಾನ್ ಇಫ್ರಾ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಮಗ್ದೂಮ್ ಮೊಹಮ್ಮದ್ ಹಾಗೂ ಮಲಯಾಳ ಮನರೋಮಾದ ಜಾರ್ಜ್ ಜೇಕಬ್ ಅವರಿಂದ ದಿ ಪ್ರಿಂಟರ್ಸ್ ಮೈಸೂರು ಪ್ರೈ. ಲಿ. ಮುಖ್ಯ ತಾಂತ್ರಿಕ ಅಧಿಕಾರಿ (ಸಿಟಿಒ) ಅನೂಪ್ ಮಂಡಲ್, ಪ್ರಜಾವಾಣಿ ಡಿಜಿಟಲ್ ಸಂಪಾದಕ ಅವಿನಾಶ್ ಬೈಪಾಡಿತ್ತಾಯ ಮತ್ತು ಸಂಸ್ಥೆಯ ಡಿಜಿಟಲ್ ಬಿಸಿನೆಸ್ ಮುಖ್ಯಸ್ಥ ಸುಹೇಬ್ ಹುಸೇನ್ ಸ್ವೀಕರಿಸಿದರು

ನ್ಯಾ.ಬಿ.ವೀರಪ್ಪ ಆಯೋಗದ ವರದಿಯ ಶಿಫಾರಸು; ಸಂಪುಟ ಸಭೆಯಲ್ಲಿ ತೀರ್ಮಾನ

ಪಿಎಸ್ಐ ಪರೀಕ್ಷಾ ಅಕ್ರಮ ಎಸ್ಐಟಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಿಎಸ್ಐ ನೇಮಕಾತಿ ಪರೀಕ್ಷಾ ಅಕ್ರಮಗಳಿಗೆ ಸಂಬಂಧಿಸಿದಂತೆ ನ್ಯಾ.ಬಿ.ವೀರಪ್ಪ ಆಯೋಗದ ವರದಿಯ ಶಿಫಾರಸಿನ ಅನ್ವಯ ಹೆಚ್ಚಿನ ತನಿಖೆ ನಡೆಸಲು ವಿಶೇಷ ತನಿಖಾ ತಂಡ (ಎಸ್ಐಟಿ) ರಚಿಸಲು ಸರ್ಕಾರ ತೀರ್ಮಾನಿಸಿದೆ.

ಗುರುವಾರ ನಡೆದ ಸಚಿವ ಸಂಪುಟ ಸಭೆಯ ಬಳಿಕ ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರು ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದರು.

'ಎಸ್ಐಟಿಗೆ ಹೆಚ್ಚಿನ ಅಧಿಕಾರ ಇರುತ್ತದೆ. ಇನ್ನು ಆಳವಾದ ತನಿಖೆ ನಡೆಸಲು ಸಾಧ್ಯವಾಗುತ್ತದೆ' ಎಂದು ಅವರು ಹೇಳಿದರು.

ಪಿಎಸ್ಐ ಪರೀಕ್ಷಾ ಅಕ್ರಮದಲ್ಲಿ ಮಧ್ಯವರ್ತಿಗಳು, ಸರ್ಕಾರದ ಅಧಿಕಾರಿಗಳೂ ಸೇರಿ 113 ಜನ ಇದ್ದಾರೆ ಎಂದು ಸಮಿತಿ ಗುರುತಿಸಿದೆ. ಕೆಲವರಿಗೆ ಸಮನ್ಸ್ ನೀಡಲಾಗಿದೆ. ಆದರೆ, ಅವರು ಬಂದು ಮಾಹಿತಿ ನೀಡಿಲ್ಲ. ಅವರನ್ನು ಕರೆಸಿ ವಿಚಾರಣೆ ಮಾಡಲು ಆಯೋಗಕ್ಕೂ ಅಧಿಕಾರ ಇಲ್ಲ. ಇಂತಹವರಿಂದ ಮಾಹಿತಿ ಪಡೆಯಲು ಎಸ್ಐಟಿಯೇ ಸೂಕ್ತ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಐಡಿ ಕೂಡ ತನಿಖೆ ನಡೆಸುತ್ತಿದೆ. ಅದನ್ನು ನಿಲ್ಲಿಸಲು ಆಗುವುದಿಲ್ಲ ಎಂದರು.

17 ಪ್ರಕರಣಗಳ ತನಿಖೆಯನ್ನು ಸಿಐಡಿ ನಡೆಸುತ್ತಿದೆ. ಖಾಸಗಿ ವ್ಯಕ್ತಿಗಳ ತನಿಖೆಗೆ ಎಸ್ಐಟಿ ಸೂಕ್ತ ಎಂದು ಸಮಿತಿ ಅಭಿಪ್ರಾಯಪಟ್ಟಿದೆ ಎಂದು ಅವರು ತಿಳಿಸಿದರು.

ಆಸ್ಪತ್ರೆಗಳ ಮೇಲ್ದರ್ಜೆಗೆ ₹132 ಕೋಟಿ:

- ರಾಜ್ಯದ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ₹38.84 ಕೋಟಿ ವೆಚ್ಚದಲ್ಲಿ ಆಧುನಿಕ ಉಪಕರಣಗಳನ್ನು ಒದಗಿಸಿ, ಮೇಲ್ದರ್ಜೆಗೇರಿಸಲು ಹಾಗೂ ಕಲ್ಯಾಣ ಕರ್ನಾಟಕ ವ್ಯಾಪ್ತಿಯಲ್ಲಿನ ಏಳು ಜಿಲ್ಲೆಗಳಲ್ಲಿ ಹೊಸದಾಗಿ 33 ಪ್ರಾಥಮಿಕ ಆರೋಗ್ಯ ಕೇಂದ್ರ ಕಟ್ಟಡಗಳ ನಿರ್ಮಾಣಕ್ಕಾಗಿ ₹132 ಕೋಟಿ ನೀಡಲು ಒಪ್ಪಿಗೆ
- ದಕ್ಷಿಣ ಕನ್ನಡ ಕಡಬದಲ್ಲಿರುವ ಪಶುಸಂಗೋಪನೆ ಕಾಲೇಜಿಗೆ ಗ್ರಂಥಾಲಯ, ಸಿಬ್ಬಂದಿ ವಸತಿ ನಿಲಯ ಮತ್ತು ವಿದ್ಯಾರ್ಥಿಗಳ ಹಾಸ್ಟೆಲ್‌ಗಾಗಿ ₹163 ಕೋಟಿ, ಅಥಣಿ ಕಾಲೇಜಿನಲ್ಲಿ ಬಾಕಿ ಉಳಿದಿರುವ ಹಾಸ್ಟೆಲ್ ಕೆಲಸಕ್ಕೆ ₹82.55 ಕೋಟಿಗೆ ಒಪ್ಪಿಗೆ
- ಮೈಸೂರಿನ ಮಹಾರಾಣಿ ಕಲಾ, ವಿಜ್ಞಾನ ಕಾಲೇಜು ಇದ್ದು, ಹೊಸ ಹಾಸ್ಟೆಲ್ ನಿರ್ಮಿಸಲು ₹170 ಕೋಟಿ ಪ್ರಸ್ತಾವನೆಗೆ ಒಪ್ಪಿಗೆ ನೀಡಲಾಗಿದೆ
- ಕೃಷಿ ನವೋದ್ಯಮ– ಬಯೋಟೆಕ್ ಕಂಪನಿಗೆ ಪ್ರೋತ್ಸಾಹಿಸಲು ಬೆಂಗಳೂರಿನಲ್ಲಿ ಅಗ್ರಿ ಇನೋವೇಷನ್ ಕೇಂದ್ರ ಸ್ಥಾಪಿಸಲಾಗುವುದು. ಇದಕ್ಕೆ ₹67.5 ಕೋಟಿ ನೀಡಲಾಗುವುದು
- ಕರ್ನಾಟಕ ರಾಜ್ಯ ಪರಿವರ್ತನಾ ಸಂಸ್ಥೆಯನ್ನು ರಾಜ್ಯ ನೀತಿ ಮತ್ತು ಯೋಜನಾ ಆಯೋಗ ಎಂದು ಮರು ನಾಮಕರಣ ಮಾಡಲು ಸಮ್ಮತಿ.

ಭುವನೇಶ್ವರಿ ಪ್ರತಿಮೆಗೆ ₹23 ಕೋಟಿ

ಕನ್ನಡ ಭಾಷೆ, ಸಂಸ್ಕೃತಿ, ಇತಿಹಾಸದ ಪ್ರತಿಬಿಂಬವಾಗಿರುವ ತಾಯಿ 'ಭುವನೇಶ್ವರಿ' ಪ್ರತಿಮೆಯನ್ನು ವಿಧಾನಸೌಧದ ಆವರಣದಲ್ಲಿ ಸ್ಥಾಪಿಸಲು ನಿರ್ಧರಿಸಲಾಗಿದೆ ಎಂದು ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

ಇದಕ್ಕಾಗಿ ₹23 ಕೋಟಿ ವೆಚ್ಚವಾಗಲಿದೆ. ತಕ್ಷಣವೇ ಕಾಮಗಾರಿ ಆರಂಭಿಸಲಾಗುವುದು. ರಾಜ್ಯಕ್ಕೆ ಕರ್ನಾಟಕ ಎಂದು ಹೆಸರಿಟ್ಟು 50 ವರ್ಷ ಪೂರೈಸುವ ಸಂದರ್ಭದ ನೆನಪಿನಲ್ಲಿ ಪ್ರತಿಮೆ ಸ್ಥಾಪನೆಗೆ ನಿರ್ಧರಿಸಲಾಗಿದೆ ಎಂದರು.

ಪ್ರತಿಮೆಯ ಎತ್ತರ ಮತ್ತು ಯಾವುದರಿಂದ ಮಾಡಬೇಕು ಎಂಬುದು ನಿರ್ಧಾರವಾಗಬೇಕಾಗಿದೆ ಎಂದು ಹೇಳಿದರು.

ನಕ್ಸಲ್ ಪುನರ್ವಸತಿ ಸಮಿತಿ ಪುನರ್‌ರಚನೆ

ಬೆಂಗಳೂರು: ನಕ್ಸಲರ ಶರಣಾಗತಿ ಮತ್ತು ಪುನರ್ವಸತಿ ಯೋಜನೆ ಅಡಿ ಶರಣಾದ ನಕ್ಸಲರನ್ನು ಸಮಾಜದ ಮುಖ್ಯವಾಹಿನಿಗೆ ತರಲು ರಾಜ್ಯಮಟ್ಟದ ಸಮಿತಿಯನ್ನು ಸರ್ಕಾರ ಪುನರ್‌ರಚಿಸಿದೆ.

ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಅಧ್ಯಕ್ಷತೆಯ ಸಮಿತಿಗೆ ಸಾಹಿತಿ ಬಂಜಗೆರೆ ಜಯಪ್ರಕಾಶ್, ಪತ್ರಕರ್ತ ಬಿ. ಪಾರ್ವತೀಶ, ಶಿವಮೊಗ್ಗದ ವಕೀಲ ಕೆ.ಪಿ. ಶ್ರೀಪಾಲ ಅವರನ್ನು ಸದಸ್ಯರಾಗಿ ನೇಮಿಸಲಾಗಿದೆ. ನಕ್ಸಲ್ ನಿಗ್ರಹ ದಳದ ಎಡಿಜಿಪಿ ಸಂಚಾಲಕರಾಗಿರುತ್ತಾರೆ.

ಒಳಾಡಳಿತ ಇಲಾಖೆ ಕಾರ್ಯದರ್ಶಿ, ಪೊಲೀಸ್ ಮಹಾ ನಿರ್ದೇಶಕ, ರಾಜ್ಯ ಗುಪ್ತವಾರ್ತೆ ನಿರ್ದೇಶಕ, ಉಪ ನಿರ್ದೇಶಕ, ಆಂತರಿಕ ಭದ್ರತಾ ವಿಭಾಗದ ಮುಖ್ಯಸ್ಥರು ಪದ ನಿಮಿತ್ತ ಸದಸ್ಯರಾಗಿರುತ್ತಾರೆ.

ರಾಜ್ಯ ಹೆದ್ದಾರಿ ಅಭಿವೃದ್ಧಿಗೆ ₹5,736 ಕೋಟಿ

ರಾಜ್ಯದ ಪ್ರಮುಖ ರಸ್ತೆ ಜಾಲದ ಭಾಗವಾಗಿರುವ ಸುಮಾರು 875 ಕಿ.ಮೀ ರಾಜ್ಯ ಹೆದ್ದಾರಿಯನ್ನು ₹5,736 ಕೋಟಿ ವೆಚ್ಚದಲ್ಲಿ ಅಭಿವೃದ್ಧಿಪಡಿಸಲು ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ.

ಸಂಪುಟ ಸಭೆ ಬಳಿಕ ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರು ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದರು. ಒಟ್ಟು ಯೋಜನಾ ವೆಚ್ಚದಲ್ಲಿ ₹3,115 ಕೋಟಿ ಬಾಹ್ಯ ಹಣಕಾಸಿನ ನೆರವಿನ ಮೂಲಕ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗುವುದು ಎಂದರು.

ಕೆಶಿಪ್‌–4 ರ ಅಡಿ ಅಭಿವೃದ್ಧಿಗೊಳಿಸುವ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರದ ಆರ್ಥಿಕ ವ್ಯವಹಾರಗಳ ಮಂತ್ರಾಲಯಕ್ಕೆ ಸಲ್ಲಿಸಲು ಒಪ್ಪಿಗೆ ನೀಡಲಾಗಿದೆ ಎಂದು ಹೇಳಿದರು.

ಕೇಂದ್ರ ರಸ್ತೆ ಮೂಲಸೌಕರ್ಯ ನಿಧಿಯ ಸೇತುಬಂಧನ್ ಯೋಜನೆಯಡಿ ರಾಜ್ಯದ ಆರು ಸ್ಥಳಗಳಲ್ಲಿ ರೈಲ್ವೆ ಮೇಲು ಸೇತುವೆ, ಕೆಳ ಸೇತುವೆಗಳನ್ನು ಒಟ್ಟು ₹276.93 ಕೋಟಿ ಮೊತ್ತದಲ್ಲಿ ನಿರ್ಮಾಣ ಮಾಡಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ ಎಂದರು

- ಹಾರಂಗಿ ಜಲಾಶಯ ಯೋಜನೆಯ ಹಾರಂಗಿ ಎಡದಂಡೆ ನಾಲೆಯ ಸರಪಳಿ 6.875 ಕಿ.ಮೀ.ನಿಂದ ಸರಪಳಿ 14.75 ಕಿ.ಮೀವರೆಗೆ ರೀಮಾಡಲಿಂಗ್ ಕಾಮಗಾರಿಯ ₹72.25 ಕೋಟಿ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ
- ರಾಮನಗರ ಜಿಲ್ಲೆ ಮಾಯಗಾನಹಳ್ಳಿಯಿಂದ ಸುಗ್ಗನಹಳ್ಳಿ ಮಾರ್ಗವಾಗಿ ಬೆಜ್ಜಗರಹಳ್ಳಿ ಕಟ್ಟೆ ಸಂಪರ್ಕಿಸುವ ಜಿಲ್ಲಾ ಮುಖ್ಯರಸ್ತೆಯ ಸರಪಳಿ 4.90 ಕಿ.ಮೀ.ನಲ್ಲಿ ಅರ್ಕಾವತಿ ನದಿಗೆ ಅಡ್ಡಲಾಗಿ ಸೇತುವೆ ನಿರ್ಮಿಸುವ ಕಾಮಗಾರಿಗೆ ₹10 ಕೋಟಿ
- ಮಂಡ್ಯ ಜಿಲ್ಲೆ ಪಾಂಡವಪುರ ತಾಲ್ಲೂಕು ಕೆರೆ ತೊಣ್ಣೂರು ಕೋಡಿಹಳ್ಳವನ್ನು ಲಕ್ಷ್ಮೀಸಾಗರ ಗ್ರಾಮದಿಂದ ಹಿರೋಡೆಕೆರೆವರೆಗಿನ ಅಭಿವೃದ್ಧಿ ಕಾಮಗಾರಿಗೆ ₹34.25 ಕೋಟಿ ಅಂದಾಜು ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ.
- ರಾಮನಗರ ಜಿಲ್ಲೆ ಮಾಗಡಿ ತಾಲ್ಲೂಕಿನ ಮಂಚನಬೆಲೆ ಜಲಾಶಯದ ಕೆಳಭಾಗದಲ್ಲಿ ಅರ್ಕಾವತಿ ನದಿಗೆ ಅಡ್ಡಲಾಗಿ ಸೇತುವೆ ನಿರ್ಮಿಸಲುವ ಕಾಮಗಾರಿ ₹13.60 ಕೋಟಿ ಮೊತ್ತದ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ

ಕಲ್ಯಾಣದಲ್ಲಿ 48 ಗಂಟೆ ಬಿಸಿಗಾಳಿ ಅಲೆ?

ಪ್ರಜಾವಾಣಿ ವಾರ್ತೆ

ಕಲಬುರಗಿ: ತಾಪಮಾನ ಏರಿಕೆಯಾಗಿದ್ದರಿಂದ ಕಲ್ಯಾಣ ಕರ್ನಾಟಕ ಭಾಗದ ಕಲಬುರಗಿ, ಯಾದಗಿರಿ, ರಾಯಚೂರು ಹಾಗೂ ಮಧ್ಯ ಕರ್ನಾಟಕದ ಹಾವೇರಿ ಜಿಲ್ಲೆಗಳಲ್ಲಿ ಮುಂದಿನ 48 ಗಂಟೆ ಬಿಸಿಗಾಳಿ ಬೀಸುವ ಸಾಧ್ಯತೆ ಇದೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಮುನ್ಸೂಚನೆ ನೀಡಿದೆ.

ಬೇಸಿಗೆಯ ಆರಂಭದಲ್ಲೇ ಬಿಸಿಲ ಧಗೆ ಹೆಚ್ಚುತ್ತಿದ್ದು, ವಾತಾವರಣದಲ್ಲಿ ಆಗಿರುವ ಬದಲಾವಣೆಯಿಂದ ರಾಜ್ಯದ ಉತ್ತರ ಒಳನಾಡಿನ ಜಿಲ್ಲೆಗಳ ಕೆಲವು ಭಾಗಗಳಲ್ಲಿ ಅತ್ಯಧಿಕ ತಾಪಮಾನ, ಬಿಸಿಗಾಳಿ ಪರಿಸ್ಥಿತಿ ಕಂಡುಬರುವ ಸಾಧ್ಯತೆಗಳಿವೆ. 40ರಿಂದ 44 ಡಿಗ್ರಿ ಸೆಲ್ಸಿಯಸ್ ಆಸುಪಾಸಿನಲ್ಲಿ ಉಷ್ಣಾಂಶ ದಾಖಲಾಗಬಹುದು ಎಂದು ಎಚ್ಚರಿಸಿದೆ.

ಬೀದರ್, ವಿಜಯಪುರ, ಬಾಗಲಕೋಟೆ, ಕೊಪ್ಪಳ, ಬಳ್ಳಾರಿ ಹಾಗೂ ವಿಜಯನಗರ ಜಿಲ್ಲೆಗಳಲ್ಲಿ 38ರಿಂದ 40 ಡಿಗ್ರಿ ಸೆಲ್ಸಿಯಸ್ ನಡುವೆ ಉಷ್ಣಾಂಶ ಕಂಡುಬರುವ ಸಾಧ್ಯತೆ ಇದೆ.

ಸೂರ್ಯನ ಶಾಖ ಹೆಚ್ಚಾಗುವ ಹಿನ್ನೆಲೆಯಲ್ಲಿ ಬಿಸಿಲಿನಲ್ಲಿ ಓಡಾಡಿದರೆ ಹೀಟ್ ವೇವ್ ಸ್ಟ್ರೋಕ್ ಆಗುವ ಸಾಧ್ಯತೆ ಇರುತ್ತದೆ. ಹೀಗಾಗಿ, ಜನರು ಬೆಳಿಗ್ಗೆ 11ರಿಂದ ಸಂಜೆ 4ರವರೆಗೆ ಹೊರಗೆ ಓಡಾಡುವುದನ್ನು ಕಡಿಮೆ ಮಾಡಬೇಕು. ಬಿಸಿಲಿನಲ್ಲಿ ಶ್ರಮದಾಯಕ ಚಟುವಟಿಕೆಗಳನ್ನು ತಪ್ಪಿಸಬೇಕು. ಹೆಚ್ಚು ನೀರು ಕುಡಿದು, ಸೂರ್ಯನ ನೇರ ಬೆಳಕಿನಿಂದ ದೂರ ಇರಬೇಕು ಎಂದು ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರ ಎಚ್ಚರಿಸಿದೆ.

ರೈಲ್ವೆ ಬ್ಯಾರಿಕೇಡ್‌ನೊಳಗೆ ನುಸುಳಿದ ಕಾಡಾನೆ

ಪ್ರಜಾವಾಣಿ ವಾರ್ತೆ

ಮಡಿಕೇರಿ: ಸೋಮವಾರಪೇಟೆ ತಾಲ್ಲೂಕಿನ ಐಗೂರು ಸಮೀಪ ಗುರುವಾರ ರೈಲ್ವೆ ಬ್ಯಾರಿಕೇಡ್ ಅನ್ನು ಕಾಡಾನೆಯೊಂದು ಸಲೀಸಾಗಿ ದಾಟಿದೆ.

ತೋಟಗಳ ಕಡೆಯಿಂದ ಬಂದ ಆನೆ ರೈಲ್ವೆ ಬ್ಯಾರಿಕೇಡ್‌ನೊಳಗೆ ನುಸುಳಿ ವಾಪಸ್ ಕಾಡಿಗೆ ತೆರಳಿದೆ.

'ಈ ಭಾಗದಲ್ಲಿ ಇದೇ ಮೊದಲ ಬಾರಿಗೆ ಕಾಡಾನೆ ರೈಲ್ವೆ ಬ್ಯಾರಿಕೇಡ್ ದಾಟಿದೆ. ಇದು ಮಧ್ಯಮ ಗಾತ್ರದ್ದಾದ್ದರಿಂದ ಸುಲಭವಾಗಿ ಬ್ಯಾರಿಕೇಡ್‌ನೊಳಗೆ ನುಸುಳಿದೆ' ಎಂದು ಸೋಮವಾರಪೇಟೆ ವಲಯ ಅರಣ್ಯಾಧಿಕಾರಿ ಚೇತನ್ ತಿಳಿಸಿದರು.

ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲ್ಲೂಕಿನ ಐಗೂರು ಸಮೀಪ ಗುರುವಾರ ಕಾಡಾನೆಯೊಂದು ರೈಲ್ವೆ ಬ್ಯಾರಿಕೇಡ್ ದಾಟಿದ ದೃಶ್ಯ

ಬಡ್ಡಿ ಮನ್ನಾ: 31ರವರೆಗೆ ಅವಧಿ ವಿಸ್ತರಣೆ

ಬೆಂಗಳೂರು: ಸಹಕಾರ ಬ್ಯಾಂಕುಗಳಿಂದ ಸಾಲ ಪಡೆದು 2023ರ ಡಿ. 31ರವರೆಗೆ ಸುಸ್ತಿಯಾಗಿರುವ ಮಧ್ಯಮಾವಧಿ, ದೀರ್ಘಾವಧಿ ಕೃಷಿ ಮತ್ತು ಕೃಷಿ ಆಧಾರಿತ ಸಾಲಗಳ ಕಂತುಗಳ ಅಸಲು ಪಾವತಿಸಿದರೆ, ಆ ಮೊತ್ತಕ್ಕೆ ಬಾಕಿ ಇರುವ ಬಡ್ಡಿ ಮನ್ನಾ ಮಾಡುವ ಅವಧಿಯನ್ನು ಮಾರ್ಚ್ 31ರವರೆಗೆ ವಿಸ್ತರಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಸುಸ್ತಿ ಸಾಲವನ್ನು ಫೆ. 29ರ ಒಳಗೆ ಮರುಪಾವತಿಸಿದರೆ ಬಡ್ಡಿ ಮನ್ನಾ ಮಾಡಲಾಗುವುದು ಎಂದು ಈ ಹಿಂದೆ ತಿಳಿಸಲಾಗಿತ್ತು.

ಪ್ರಾಥಮಿಕ ಪತ್ತಿನ ಕೃಷಿ ಸಹಕಾರ ಸಂಘಗಳು, ಲ್ಯಾಂಪ್ಸ್ ಸಹಕಾರ ಸಂಘಗಳು, ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು, ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕುಗಳಿಂದ ಪಡೆದ ಸಾಲಕ್ಕೆ ಮಾತ್ರ ಈ ಆದೇಶ ಅನ್ವಯ ಆಗಲಿದೆ.

'ಜಿಂದಾಬಾದ್' ಆರೋಪಿಗಳಿಗೆ ಜಾಮೀನು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿಧಾನಸೌಧದಲ್ಲಿ ಪಾಕಿಸ್ತಾನ್ ಜಿಂದಾಬಾದ್ ಘೋಷಣೆ ಕೂಗಿದ್ದಾರೆ' ಎಂದು ಆರೋಪಿಸಲಾದ ಪ್ರಕರಣದಲ್ಲಿ ಬಂಧಿತ ಮೂವರಿಗೆ ನಗರದ ಹೆಚ್ಚುವರಿ ಮುಖ್ಯ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ ಕೋರ್ಟ್ (ಎಸಿಎಂಎಂ) ಷರತ್ತುಬದ್ಧ ಜಾಮೀನು ಮಂಜೂರು ಮಾಡಿದೆ.

ಈ ಕುರಿತಂತೆ ಬಂಧಿತರಾದ ದೆಹಲಿಯ ಕಿಶನ್ ಗಂಜ್‌ನ ಮೊಹಮ್ಮದ್ ಇಲ್ತಾಜ್, ಹಾವೇರಿ ಜಿಲ್ಲೆ ಬ್ಯಾಡಗಿಯ ಮೊಹಮ್ಮದ್ ಶಫಿ ನಾಶಿಪುಡಿ, ಬೆಂಗಳೂರಿನ ಜಯಮಹಲ್ ನಿವಾಸಿ ಡಿ.ಎಸ್. ಮುನಾವರ್ ಅಹ್ಮದ್ ಸಲ್ಲಿಸಿದ್ದ ಜಾಮೀನು ಅರ್ಜಿಯನ್ನು 39ನೇ ಎಸಿಎಂಎಂ ನ್ಯಾಯಾಲಯದ ನ್ಯಾಯಾಧೀಶ ವಿ.ವಿಜೇತ್ ಪುರಸ್ಕರಿಸಿದ್ದಾರೆ.

'ಆರೋಪಿಗಳು ₹1 ಲಕ್ಷ ಮೊತ್ತದ ಮುಚ್ಚಳಿಕೆ ನೀಡಬೇಕು, ಇಬ್ಬರು ವ್ಯಕ್ತಿಗಳು ಜಾಮೀನು ಒದಗಿಸಬೇಕು, ಆರೋಪಿಗಳು ಭಾರತ ಬಿಟ್ಟು ಹೋಗಬಾರದು, ವಿಚಾರಣಾ ನ್ಯಾಯಾಲಯದ ಮುದ್ದತುಗಳಿಗೆ ಹಾಜರಾಗಬೇಕು ಮತ್ತು ಇಂತಹ ಅಪರಾಧ ಕೃತ್ಯಗಳಲ್ಲಿ ಭಾಗಿಯಾಗಕೂಡದು' ಎಂಬ ಷರತ್ತುಗಳನ್ನು ವಿಧಿಸಲಾಗಿದೆ.

ವಿಚಾರಣೆ ವೇಳೆ ಆರೋಪಿಗಳ ಪರ ವಾದ ಮಂಡಿಸಿದ ವಕೀಲರು, 'ಪೊಲೀಸರು ಪ್ರಕರಣ ದಾಖಲಿಸುವ ಮುನ್ನ ಪೂರ್ವಾನುಮತಿ ಪಡೆದಿಲ್ಲ. ಆರೋಪಿಗಳಿಗೆ ಸಿಆರ್‌ಪಿಸಿ ಕಲಂ 41ರ ಅನ್ವಯ ನೋಟಿಸ್ ನೀಡಿಲ್ಲ. ಅಂತೆಯೇ, ಆರೋಪಿಸಲಾದ ಘೋಷಣೆಯ ಮಾದರಿಯನ್ನು ಧ್ವನಿ ಪರೀಕ್ಷೆಗಾಗಿ ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ. ಹಾಗಾಗಿ, ಇದು ಮೇಲ್ನೋಟಕ್ಕೆ ಸಾಕ್ಷ್ಯವೇ ಇಲ್ಲದ ಪ್ರಕರಣ ಎಂಬುದು ಸಾಬೀತಾಗುತ್ತದೆ' ಎಂಬ ಅಂಶಗಳನ್ನು ಪರಿಗಣಿಸಿ ನ್ಯಾಯಾಧೀಶರು ಜಾಮೀನು ಮಂಜೂರು ಮಾಡಿದ್ದಾರೆ.

ಪ್ರಕರಣವೇನು?: 'ಕಳೆದ ತಿಂಗಳ 27ರಂದು ವಿಧಾನಸೌಧದಲ್ಲಿ ರಾಜ್ಯಸಭೆ ಚುನಾವಣೆಗೆ ಮತದಾನ ನಡೆದಿತ್ತು. ಫಲಿತಾಂಶ ಪ್ರಕಟವಾದ ಬಳಿಕ, ವಿಜೇತ ಅಭ್ಯರ್ಥಿ ಸೈಯದ್ ನಾಸಿರ್ ಹುಸೇನ್ ಪರ ಸಂಭ್ರಮಾಚರಿಸುವ ವೇಳೆ ಆರೋಪಿಗಳು ಪಾಕಿಸ್ತಾನ್ ಜಿಂದಾಬಾದ್ ಎಂಬ ಘೋಷಣೆ ಕೂಗಿದ್ದಾರೆ' ಎಂದು ವಿಧಾನಸೌಧ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಸುಳ್ಳು ಸುದ್ದಿ ಪತ್ತೆಗೆ ಎಂಡಿಸಿಸಿ

ಬೆಂಗಳೂರು: ಸುಳ್ಳು ಸುದ್ದಿ ಹರಡುವುದು, ಫೋಟೊ, ವಿಡಿಯೊ ತಿರುಚಿ ಬಿತ್ತರಿಸುವುದು ಸೇರಿದಂತೆ ವಿವಿಧ ರೀತಿಯ ಆನ್‌ಲೈನ್ ಪ್ರಕರಣಗಳ ಮೇಲೆ ನಿಗಾ ವಹಿಸಲು ಬಹು ಇಲಾಖೆಗಳ ಸಮನ್ವಯ ಸಮಿತಿ (ಎಂಡಿಸಿಸಿ) ರಚಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಸಿಐಡಿ ಸೈಬರ್ ವಿಭಾಗದ (ಸಿ ಆ್ಯಂಡ್ ಎನ್) ಎಡಿಜಿಪಿ, ಗೃಹ ಇಲಾಖೆ, ಐಟಿಬಿಟಿ ಇಲಾಖೆಯ ಪ್ರಧಾನ ಕಾರ್ಯದರ್ಶಿ, ಕಾನೂನು ಇಲಾಖೆಯ ಕಾರ್ಯದರ್ಶಿ, ಮಾಹಿತಿ ಇಲಾಖೆಯ ಕಾರ್ಯದರ್ಶಿ, ಸರ್ಕಾರದ ನಾಮನಿರ್ದೇಶನ ಮಾಡಿದ ಕಾನೂನು ಸಲಹೆಗಾರ, ಐಟಿಬಿಟಿ ಇಲಾಖೆ ಒದಗಿಸುವ ಸೇವಾದಾರರು, ಸರ್ಕಾರ ನಾಮನಿರ್ದೇಶನ ಮಾಡುವ ತಲಾ ಒಬ್ಬರು ಸಾರ್ವಜನಿಕ ಮತ್ತು ತಾಂತ್ರಿಕ ವಲಯದವರು ಈ ಸಮಿತಿಯ ಸದಸ್ಯರಾಗಿರುತ್ತಾರೆ.

ಸಾಮಾಜಿಕ ಜಾಲತಾಣಗಳ ಮೂಲಕ ಸುಳ್ಳು ಸುದ್ದಿ ಹರಡುವ ಕಾನೂನುಬಾಹಿರ ಚಟುವಟಿಕೆಯಲ್ಲಿ ಭಾಗಿಯಾದವರನ್ನು ಪತ್ತೆ ಮಾಡಿ, ಅವರ ಮೇಲೆ ತೆಗೆದುಕೊಳ್ಳ ಬಹುದಾದ ಕಾನೂನು ಕ್ರಮಗಳ ಕುರಿತು ವಿವಿಧ ಜಾರಿ ಮತ್ತು ನಿಯಂತ್ರಣ ಏಜೆನ್ಸಿಗಳಿಗೆ ಈ ಸಮಿತಿಯು ಸಲಹೆ ನೀಡಲಿದೆ. ಸಿಐಡಿಯಲ್ಲಿ ಸೈಬರ್ ಅಪರಾಧ ವಿಭಾಗ ಮತ್ತು ಪೊಲೀಸ್ ಠಾಣೆಗಳಲ್ಲಿ ದಾಖಲಾದ ಪ್ರಕರಣಗಳಲ್ಲಿ ಈ ಸಮಿತಿಯು ಮಧ್ಯಪ್ರವೇಶಿಸುವಂತಿಲ್ಲ ಎಂದೂ ಅದೇಶದಲ್ಲಿ ಸ್ಪಷ್ಟಪಡಿಸಲಾಗಿದೆ.

ಸಿಐಡಿ ಸೈಬರ್ ವಿಭಾಗದ (ಸಿ ಆ್ಯಂಡ್ ಎನ್) ಎಡಿಜಿಪಿ ಈ ಸಮಿತಿಗೆ ನೋಡಲ್ ಅಧಿಕಾರಿ. ಸಮಿತಿ ಶಿಫಾರಸು ಮಾಡಿದ ಪ್ರಕರಣಗಳ ತನಿಖೆ ನಡೆಸುವಂತೆ ನೋಡಲ್ ಅಧಿಕಾರಿಯು ಸೈಬರ್ ಪೊಲೀಸ್ ಠಾಣೆಗಳಿಗೆ ಸೂಚಿಸಿ, ಮೇಲುಸ್ತುವಾರಿ ವಹಿಸಲಿದ್ದಾರೆ. ತುರ್ತು ಸಂದರ್ಭಗಳಲ್ಲಿ ಕ್ರಮ ತೆಗೆದುಕೊಳ್ಳುವ ಅಧಿಕಾರವನ್ನೂ ನೋಡಲ್ ಅಧಿಕಾರಿಗೆ ನೀಡಲಾಗಿದೆ. ಐಟಿಬಿಟಿ ಇಲಾಖೆಯು ಅಗತ್ಯವಾದ ತಾಂತ್ರಿಕ ನೆರವು ನೀಡಲಿದೆ ಎಂದೂ ಆದೇಶದಲ್ಲಿ ವಿವರಿಸಲಾಗಿದೆ.

ಮೂವರು ಮಾಜಿ ಶಾಸಕರು ಬಿಜೆಪಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಜಿ ಸಚಿವ ಕಲಬುರಗಿಯ ಬಾಬುರಾವ್ ಚವ್ಹಾಣ್, ಬೈಲಹೊಂಗಲದ ಮಾಜಿ ಶಾಸಕ ವಿಶ್ವನಾಥ ಪಾಟೀಲ, ಜಗಳೂರಿನ ಮಾಜಿ ಶಾಸಕ ಎಚ್.ಪಿ. ರಾಜೇಶ್ ಹಾಗೂ ಶಿಗ್ಗಾಂವಿಯ ಮುಖಂಡ ಶಶಿಧರ್ ಯಲಿಗಾರ್ ಅವರು ಗುರುವಾರ ಬಿಜೆಪಿ ಸೇರಿದರು.

ಬಿಜೆಪಿ ಕಚೇರಿಯಲ್ಲಿ ಅವರಿಗೆ ಪಕ್ಷದ ಬಾವುಟ ನೀಡಿ ಬರಮಾಡಿಕೊಂಡ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಮಾತನಾಡಿ, 'ನರೇಂದ್ರ ಮೋದಿ ಮೂರನೇ ಬಾರಿಗೆ ಪ್ರಧಾನಮಂತ್ರಿ ಆಗಬೇಕೆಂಬ ಇಚ್ಛೆ ರಾಜ್ಯದ ಜನರಲ್ಲಿದೆ. ಅದಕ್ಕೆ ಪೂರಕವಾದ ವಾತಾವರಣ ಸೃಷ್ಟಿಯಾಗಿದೆ. ಮುಂದಿನ ದಿನಗಳಲ್ಲಿ ಇನ್ನಷ್ಟು ಮುಖಂಡರು ಪಕ್ಷ ಸೇರಲಿದ್ದಾರೆ. ಪಕ್ಷದ ಸಿದ್ಧಾಂತ ಒಪ್ಪಿಕೊಂಡು ಬರುವವರನ್ನು ಸ್ವಾಗತಿಸುತ್ತೇವೆ' ಎಂದರು.

ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ, ಶಾಸಕರಾದ ಬಸವರಾಜ ಬೊಮ್ಮಾಯಿ, ಶರಣು ಸಲಗರ, ಮಾಜಿ ಸಚಿವ ಸಿ.ಟಿ. ರವಿ, ಸಂಸದ ಎಸ್. ಮುನಿಸ್ವಾಮಿ ಇದ್ದರು.

ಬಿಜೆಪಿ ಕಚೇರಿಗೆ ಬಾರದ ಮಂಜುನಾಥ್

ಬೆಂಗಳೂರು ಗ್ರಾಮಾಂತರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಡಾ.ಸಿ.ಎನ್. ಮಂಜುನಾಥ್ ಅವರು ಗುರುವಾರ ಬಿಜೆಪಿ ಕಚೇರಿಯಲ್ಲಿ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಪಕ್ಷ ಸೇರುತ್ತಾರೆ ಎಂದು ಪ್ರಕಟಣೆ ನೀಡಲಾಗಿತ್ತು. ಆದರೆ, ಪಕ್ಷ ಸೇರ್ಪಡೆ ಕಾರ್ಯಕ್ರಮದಲ್ಲಿ ಮಂಜುನಾಥ್ ಭಾಗಿಯಾಗಲಿಲ್ಲ. ಚುನಾವಣಾ ಪ್ರಚಾರಕ್ಕಾಗಿ ಲೋಕಸಭಾ ಕ್ಷೇತ್ರಕ್ಕೆ ತೆರಳಿದ್ದರು.

ಈ ಕುರಿತು ಪ್ರತಿಕ್ರಿಯಿಸಿದ ಬಿ.ವೈ.ವಿಜಯೇಂದ್ರ, ಅವರು ಈಗಾಗಲೇ ಪಕ್ಷ ಸೇರಿದ್ದಾರೆ. ನಂತರವೇ ಅವರಿಗೆ ಟಿಕೆಟ್ ಘೋಷಣೆ ಮಾಡಲಾಗಿದೆ ಎಂದರು.

ಬೆಳಗಾವಿಗೆ ಶೆಟ್ಟರ್ ಅಭ್ಯರ್ಥಿ

ಬೆಳಗಾವಿ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಲು ಮಾಜಿ ಮುಖ್ಯಮಂತ್ರಿ ಜಗದೀಶ ಶೆಟ್ಟರ್ ಅಣಿಯಾಗಿದ್ದಾರೆ.

ಧಾರವಾಡ, ಹಾವೇರಿ ಕ್ಷೇತ್ರದಲ್ಲಿ ಸ್ಪರ್ಧಿಸಲು ಅವಕಾಶ ಕೊಡುವಂತೆ ಕೇಳಿದ್ದ ಶೆಟ್ಟರ್, ಟಿಕೆಟ್ ಘೋಷಣೆಯಾದ ಬಳಿಕ ತುಸು ಅಸಮಾಧಾನಗೊಂಡಿದ್ದರು. ಬೆಳಗಾವಿಯಲ್ಲಿ ಸ್ಪರ್ಧೆ ಮಾಡುವಂತೆ ಬಿಜೆಪಿ ವರಿಷ್ಠರು ಮತ್ತೆ ಸೂಚನೆ ನೀಡಿದ್ದರಿಂದ ಶೆಟ್ಟರ್ ಒಪ್ಪಿಕೊಂಡಿದ್ದಾರೆ.

ಪಕ್ಷದ ಕೇಂದ್ರ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಅವರನ್ನು ಗುರುವಾರ ಸಂಜೆ ಬೆಂಗಳೂರಿನಲ್ಲಿ ಭೇಟಿಯಾದ ಶೆಟ್ಟರ್, ಸ್ಪರ್ಧೆ ಕುರಿತು ಚರ್ಚೆ ನಡೆಸಿದರು.

'ಮೊದಲು ಒಲ್ಲೆ ಎಂದಿದ್ದೆ. ವರಿಷ್ಠರ ಸೂಚನೆ ಮತ್ತು ಯಡಿಯೂರಪ್ಪನವರ ಜತೆ ಸಮಾಲೋಚಿಸಿದ ಬಳಿಕ ಸ್ಪರ್ಧೆಗೆ ಒಪ್ಪಿಕೊಂಡಿದ್ದೇನೆ. ನಾನೇ ಅಭ್ಯರ್ಥಿ ಆಗುವೆ' ಎಂದು ಶೆಟ್ಟರ್, 'ಪ್ರಜಾವಾಣಿ'ಗೆ ತಿಳಿಸಿದರು.

ಅಮಿತ್ ಶಾ ಅವರಿಗೆ ಹೂಗುಚ್ಛ ನೀಡಿದ ಗಾಲಿ ಜನಾರ್ದನ ರೆಡ್ಡಿ

ಅಮಿತ್ ಶಾ–ರೆಡ್ಡಿ ಭೇಟಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಕಲ್ಯಾಣ ರಾಜ್ಯ ಪ್ರಗತಿ ಪಕ್ಷದ ಅಧ್ಯಕ್ಷರೂ ಆಗಿರುವ ಗಂಗಾವತಿ ಶಾಸಕ ಗಾಲಿ ಜನಾರ್ದನ ರೆಡ್ಡಿ ಅವರು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಗುರುವಾರ ಭೇಟಿ ಮಾಡಿ ಸಮಾಲೋಚಿಸಿದರು.

ಶಾ ಆಹ್ವಾನದ ಮೇರೆಗೆ ಭೇಟಿ ಮಾಡಿ ಸಮಾಲೋಚಿಸಿದ್ದೇನೆ ಎಂದು ಜನಾರ್ದನ ರೆಡ್ಡಿ ಸಾಮಾಜಿಕ ಜಾಲತಾಣ 'ಎಕ್ಸ್'ನಲ್ಲಿ ಬರೆದುಕೊಂಡಿದ್ದಾರೆ.

ಇತ್ತೀಚೆಗೆ ನಡೆದ ರಾಜ್ಯಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಪರ ಗಾಲಿ ಮತ ಚಲಾಯಿಸಿದ್ದರು.

'ಲೋಕಸಭಾ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿಗಳಿಗೆ ಬೆಂಬಲ ನೀಡುವಂತೆ ಶಾ ಅವರು ಗಾಲಿ ಅವರಿಗೆ ಮನವಿ ಮಾಡಿದ್ದಾರೆ. ಇದಕ್ಕೆ ರೆಡ್ಡಿ ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ' ಎಂದು ಮೂಲಗಳು ಹೇಳಿವೆ.

ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್.ಡಿ.ಕುಮಾರಸ್ವಾಮಿ ಹೇಳಿಕೆ

'ಸೇವೆ–ಸುಲಿಗೆ ನಡುವಿನ ಹೋರಾಟ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ಚುನಾವಣೆಯು ನಿಸ್ವಾರ್ಥ–ಸ್ವಾರ್ಥ, ಸೇವೆ–ಸುಲಿಗೆ ಹಾಗೂ ಒಳಿತು–ಕೆಡುಕುಗಳ ನಡುವಿನ ಹೋರಾಟ ಎಂದು ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್.ಡಿ.ಕುಮಾರಸ್ವಾಮಿ ಹೇಳಿದರು.

ಜೆಡಿಎಸ್ ಕಚೇರಿಯಲ್ಲಿ ಗುರುವಾರ ಹಮ್ಮಿಕೊಂಡಿದ್ದ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಬೆಂಗಳೂರು ಗ್ರಾಮಾಂತರ ಕ್ಷೇತ್ರದ ಬಿಜೆಪಿ–ಜೆಡಿಎಸ್ ಅಭ್ಯರ್ಥಿ ಡಾ.ಸಿ.ಎನ್. ಮಂಜುನಾಥ್ ಅವರ ಬಗ್ಗೆ ಸಂಸದ ಡಿ.ಕೆ. ಸುರೇಶ್ ಕೀಳಾಗಿ ಟೀಕೆ ಮಾಡಿದ್ದಾರೆ. ಮಂಜುನಾಥ್ ಅವರ ಸಾಧನೆಯನ್ನು ದೇಶ ಕೊಂಡಾಡುತ್ತಿದೆ. ಅವರ ಸಾಧನೆಗೆ ಸಮವಲ್ಲದ ಸಂಸದರು ನಾಲಿಗೆ ಹರಿಬಿಟ್ಟಿದ್ದಾರೆ. ಮಾತನಾಡುವ ಮೊದಲು ಅರಿತು ಮಾತನಾಡಬೇಕು ಎಂದರು.

'ಬಿಜೆಪಿಯಿಂದ ಸ್ಪರ್ಧಿಸುವಂತೆ ಅವರ ಮನವೊಲಿಸಿದ್ದು ನಾನೇ. ಅಂತಹ ಸಾಧಕರು, ಸಜ್ಜನರು ರಾಜಕಾರಣಕ್ಕೆ ಬೇಕಿದೆ. ಅವರನ್ನು ಭಾರಿ ಬಹುಮತದಿಂದ ಕ್ಷೇತ್ರದ ಜನರು ಗೆಲ್ಲಿಸಬೇಕು' ಎಂದು ಮನವಿ ಮಾಡಿದರು.

ಮಹಿಳಾ ಸಬಲೀಕರಣಕ್ಕೆ ದೇವೇಗೌಡರ ಕೊಡುಗೆ ಸ್ಮರಣೀಯ. ಮಹಿಳಾ ಮೀಸಲು ಜಾರಿಯಾದರೆ ವಿಧಾನಸಭೆಗೆ 80-90 ಮಹಿಳೆಯರು ಶಾಸಕರಾಗಿ ಆಯ್ಕೆಯಾಗುತ್ತಾರೆ. ಸಾಮಾನ್ಯ ಮಹಿಳೆಯರೂ ಶಾಸಕರಾಗಬಹುದು ಎನ್ನುವುದಕ್ಕೆ ಶಾರದಾ ಪೂರ್ಯಾನಾಯ್ಕ್, ಕರೆಮ್ಮ ನಾಯಕ್ ಉದಾಹರಣೆ. ಅವರ ಸಾಧನೆ ಪಕ್ಷದ ಇತರೆ ಮಹಿಳಾ ಮುಖಂಡರಿಗೆ ಸ್ಫೂರ್ತಿ ಎಂದು ಬಣ್ಣಿಸಿದರು.

ಪಕ್ಷದ ಪ್ರಮುಖರ ಸಮಿತಿ ಅಧ್ಯಕ್ಷ ಜಿ.ಟಿ.ದೇವೇಗೌಡ, ರಾಜ್ಯ ಮಹಿಳಾ ಘಟಕದ ಅಧ್ಯಕ್ಷೆ ರಶ್ಮಿ ರಾಮೇಗೌಡ, ಮಾಜಿ ಅಧ್ಯಕ್ಷೆ ಲೀಲಾದೇವಿ ಆರ್. ಪ್ರಸಾದ್, ಮಾಜಿ ಸಚಿವರಾದ ಬಂಡೆಪ್ಪ ಕಾಶೆಂಪೂರ, ವೆಂಕಟರಾವ್ ನಾಡಗೌಡ, ವಿಧಾನ ಪರಿಷತ್ ಸದಸ್ಯರಾದ ಟಿ.ಎ. ಶರವಣ, ಕೆ.ಎ.ತಿಪ್ಪೇಸ್ವಾಮಿ, ಮಾಜಿ ಶಾಸಕ ದೊಡ್ಡನಗೌಡ ಪಾಟೀಲ ಉಪಸ್ಥಿತರಿದ್ದರು.

ಬೆಂಗಳೂರಿನಲ್ಲಿ ಗುರುವಾರ ಜೆಡಿಎಸ್ ಕಚೇರಿಯಲ್ಲಿ ಹಮ್ಮಿಕೊಂಡಿದ್ದ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಪಕ್ಷದ ಕಾರ್ಯಕರ್ತೆಯರು

ಮಂಜುನಾಥ್–ಅಮಿತ್ ಶಾ ಶೀಘ್ರ ಭೇಟಿ

ಡಾ.ಸಿ.ಎನ್. ಮಂಜುನಾಥ್ ಅವರು ಬಿಜೆಪಿಯಿಂದ ಸ್ಪರ್ಧಿಸಲು ಮಿತ್ರ ಪಕ್ಷ ಕೋರಿತ್ತು. ಅದಕ್ಕೆ ಕುಮಾರಸ್ವಾಮಿ ಸಮ್ಮತಿಸಿದ್ದರು. ಮಂಜುನಾಥ್ ಈಗಾಗಲೇ ಬಿ.ಎಸ್.ಯಡಿಯೂರಪ್ಪ ಅವರನ್ನು ಭೇಟಿಯಾಗಿ ಆಶೀರ್ವಾದ ಪಡೆದಿದ್ದಾರೆ. ದೆಹಲಿಗೆ ತೆರಳಿ ಅಮಿತ್ ಶಾ ಅವರನ್ನು ಭೇಟಿಯಾಗಲಿದ್ದಾರೆ ಎಂದು ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ.ದೇವೇಗೌಡ ಹೇಳಿದರು.

ಮಂಜುನಾಥ್ ಆರೋಗ್ಯ ಕ್ಷೇತ್ರದಲ್ಲಿ ಅತ್ಯುತ್ತಮ ಸೇವೆ ಮಾಡಿದ್ದಾರೆ. ಲಕ್ಷಾಂತರ ಜನರ ಜೀವ ಉಳಿಸಿದ ವ್ಯಕ್ತಿ ದೇಶದಲ್ಲೇ ಅಪರೂಪ. ಅಂಥವರು ಲೋಕಸಭೆಗೆ ಆಯ್ಕೆಯಾಗಬೇಕು ಎಂದರು.

ಜೆಡಿಎಸ್‌ನ ಮೂರು ಕ್ಷೇತ್ರಗಳ ಜತೆಗೆ, ಬಿಜೆಪಿಯ 25 ಕ್ಷೇತ್ರಗಳಲ್ಲೂ ಗೆಲುವಿಗೆ ಕಾರ್ಯಕರ್ತರು ಶ್ರಮಿಸಬೇಕು. ಮೈಸೂರಿನಲ್ಲಿ ಯದುವೀರ್, ತುಮಕೂರಲ್ಲಿ ವಿ.ಸೋಮಣ್ಣ ಅವರನ್ನು ಗೆಲ್ಲಿಸಬೇಕು ಎಂದು ಕೋರಿದರು.

ಜಿಲ್ಲೆಗಳ ಮಧ್ಯೆ ಜಲ ವ್ಯಾಜ್ಯ: ಟೀಕೆ

ರಾಜ್ಯ ಸರ್ಕಾರ ತಮಿಳುನಾಡಿಗೆ ಕದ್ದುಮುಚ್ಚಿ ನೀರು ಹರಿಸುತ್ತಿದ್ದು, ರಾಜ್ಯದ ಜಿಲ್ಲೆಗಳ ನಡುವೆಯೂ ಜಲ ವ್ಯಾಜ್ಯ ತಂದಿಟ್ಟಿದೆ ಎಂದು ಎಚ್.ಡಿ. ಕುಮಾರಸ್ವಾಮಿ ಆರೋಪಿಸಿದರು.

ಈ ಕುರಿತು ಎಕ್ಸ್‌ನಲ್ಲಿ ಹೇಳಿಕೆ ನೀಡಿರುವ ಅವರು, ಹಾಸನ ಹಾಗೂ ತುಮಕೂರು ಜಿಲ್ಲೆಗಳ ನಡುವೆ ಹೇಮಾವತಿ ನೀರಿನ ಜಗಳ ತಂದಿಟ್ಟಿದೆ. ಹಾಸನ ಜಿಲ್ಲೆಯ ಜನರು ಎಂದೂ ತುಮಕೂರಿಗೆ ನೀರು ಕೊಡುವುದಕ್ಕೆ ವಿರೋಧ ವ್ಯಕ್ತಪಡಿಸಿಲ್ಲ. ಅಧಿಕಾರಿಗಳನ್ನು ದುರ್ಬಳಕೆ ಮಾಡಿಕೊಂಡು ಎರಡೂ ಜಿಲ್ಲೆಯ ಜನರ ನಡುವೆ ಬೆಂಕಿ ಹಚ್ಚುತ್ತಿದ್ದಾರೆ. ನಾಲೆ ಉದ್ದಕ್ಕೂ ಪೊಲೀಸ್ ಪಹರೆ ಹಾಕಿದ್ದಾರೆ ಎಂದು ದೂರಿದ್ದಾರೆ.

'ಗೌಡರ ಜನಪ್ರಿಯತೆ ಕುಸಿದಿದೆ ಎಂದು ಅಳಿಯನಿಗೆ ಗೊತ್ತಾಗಿದೆ'

ಬಿಜೆಪಿಯಿಂದ ಡಾ. ಸಿ.ಎನ್.ಮಂಜುನಾಥ್ ಸ್ಪರ್ಧೆಗೆ ಗ್ರಾಮಾಂತರ ಸಂಸದ ಡಿ.ಕೆ. ಸುರೇಶ್ ಲೇವಡಿ

ಪ್ರಜಾವಾಣಿ ವಾರ್ತೆ

ಚನ್ನಪಟ್ಟಣ: 'ದಕ್ಷಿಣ ರಾಜ್ಯಗಳ ಪಾಲು ಕೇಳಿದ ನನ್ನನ್ನು ಗುಂಡಿಕ್ಕಿ ಕೊಲ್ಲಬೇಕು ಎಂದವರು ತಮ್ಮ ಪುತ್ರನಿಗೆ ಟಿಕೆಟ್ ಸಿಗದೆ ಹತಾಶರಾಗಿ ಬಂಡಾಯದ ಮಾತನ್ನಾಡುತ್ತಿದ್ದಾರೆ. ಸಂವಿಧಾನ ಬದಲಾವಣೆ ಮಾಡಲು ಹೋದವರ ಕತೆ ಏನಾಗುತ್ತದೊ ಗೊತ್ತಿಲ್ಲ' ಎಂದು ಸಂಸದ ಡಿ.ಕೆ. ಸುರೇಶ್ ಲೇವಡಿ ಮಾಡಿದ್ದಾರೆ.

ಬುಧವಾರ ಬಿಡುಗಡೆಯಾದ ಬಿಜೆಪಿ ಎರಡನೇ ಪಟ್ಟಿ ಕುರಿತು ಪ್ರತಿಕ್ರಿಯಿಸಿದ ಅವರು, ಮೈಸೂರು ಹಾಲಿ ಸಂಸದ ಪ್ರತಾಪ ಸಿಂಹ, ದಕ್ಷಿಣ ಕನ್ನಡದ ಹಾಲಿ ಸಂಸದ ನಳಿನ್ ಕುಮಾರ್ ಕಟೀಲ್ ಅವರಿಗೆ ಬಿಜೆಪಿ ನಾಯಕರು ಕೈಕೊಟ್ಟಿದ್ದಾರೆ ಎಂದರು.

ತಾಲ್ಲೂಕಿನ ತಿಟ್ಟಮಾರನಹಳ್ಳಿಯಲ್ಲಿ ಗುರುವಾರ ನಡೆದ ಕಾಂಗ್ರೆಸ್ ಕಾರ್ಯಕರ್ತರ ಸಭೆಗೂ ಮುನ್ನ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ದೇವೇಗೌಡರ ಕುಟುಂಬದ ವಿರುದ್ಧ ಸ್ಪರ್ಧಿಸುವುದು ನನಗೆ ಹಾಗೂ ನನ್ನ ಅಣ್ಣ ಡಿ.ಕೆ. ಶಿವಕುಮಾರ್ ಅವರಿಗೆ ಹೊಸತಲ್ಲ' ಎಂದು ಹೇಳಿದರು.

'ಜೆಡಿಎಸ್ ಬಗ್ಗೆ ಸ್ವತಃ ಎಚ್.ಡಿ. ದೇವೇಗೌಡರ ಅಳಿಯ ಡಾ. ಮಂಜುನಾಥ್ ಅವರಿಗೆ ವಿಶ್ವಾಸ ಇಲ್ಲ. ಹಾಗಾಗಿಯೇ, ಅವರು ಬೆಂಗಳೂರು ಗ್ರಾಮಾಂತರ ಕ್ಷೇತ್ರದಲ್ಲಿ ಬಿಜೆಪಿಯಿಂದ ಕಣಕ್ಕಿಳಿದಿದ್ದಾರೆ' ಎಂದರು.

'ಜೆಡಿಎಸ್ ಮತ್ತು ಗೌಡರ ಜನಪ್ರಿಯತೆ ಕುಸಿದಿದೆ ಎಂದು ಗೊತ್ತಾಗಿ ಬಿಜೆಪಿ ಆಯ್ಕೆ ಮಾಡಿಕೊಂಡ ಡಾ.ಮಂಜುನಾಥ್ ಅವರ ನಿರ್ಧಾರವನ್ನು ನಾನು ಸ್ವಾಗತಿಸುತ್ತೇನೆ' ಎಂದು ಸುರೇಶ್ ವ್ಯಂಗ್ಯವಾಡಿದರು.

'ಹಾಗಾಗಿ ಜೆಡಿಎಸ್ ಕಾರ್ಯಕರ್ತರು ಇನ್ನಾದರೂ ಯೋಚಿಸಬೇಕು. ಕಾಂಗ್ರೆಸ್‌ಗೆ ಬಂದರೆ ನಿಮ್ಮ ಪರವಾಗಿ ನಾನಿರುವೆ. ಎಲ್ಲರೂ ಒಟ್ಟಿಗೆ ಕೆಲಸ ಮಾಡೋಣ' ಎಂದು ಆಹ್ವಾನ ನೀಡಿದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

PUBLIC NOTICE

This is to inform the general public that the undersigned have filed a suit before the Civil Court in **OS No.3004/2022** pending on the file of the **XXXI Addl. City Civil and Sessions Judge, Bangalore (CCH-14)** in which an **interim order of temporary injunction dated 07.03.2023** has been **passed** restraining **Mr. M.B. Nachappa,** son of late M.J. Basappa, from alienating or creating charge over the properties described in the Schedule hereunder.
Despite the above order, **Mr. M.B. Nachappa** has violated the interim order of temporary injunction against which an contempt application has been filed, which is currently pending consideration before the Hon'ble Court. Therefore the general public are hereby informed not to deal or carry out any transactions with the aforesaid **Mr. M.B. Nachappa,** son of late M.J. Basappa, in respect of the property described in the Schedules hereunder.
In case any one deals with the above said **Mr.M.B. Nachappa,** they would doing so at their own risk and cost, without affecting or prejudicing the right, title and interest of both the undersigned in respect of the Schedule Properties.

SCHEDULE 'A' PROPERTY
All that piece and parcel of residential property bearing **Site No.224, situated in Domlur II Stage,** measuring East to West : 12.19 meters and North to South : $\frac{18.60 + 18.50}{2}$ meters and bounded on East by: Property No.223 West by: Property No.225 North by: Road South by: Property No.233 In all measuring 226.12 sq.meters together with constructed house thereon.

SCHEDULE 'B' PROPERTY
All that piece and parcel of agricultural land in Sy.No.123/2, Konanjageri village, Napoklu Hobli, Madikeri Taluk, **Parane Post, Kodagu,** measuring in all 10 acres 20 guntas and bounded on the East by : Balamuri Village West by : Road North by : Balamuri Village South by: Sy.No.123/1 belonging to Ponachanna family

1. Mrs. Pushpa Basappa, Wife of Late M.J. Basappa, Aged about 65 years, Residing at No.224, 1st Main Road, Domlur 2nd Stage, Off 100 feet Road, Bangalore-560 071

2. Mrs. Swetha Appayya, Daughter of Late M.J.Basappa, Wife of Mr. K.A.Appayya, Aged about 42 years, 435, 9th Main, 2nd Cross, HAL 2nd Stage, Bangalore-560 008

Dated: 15-03-2024

ROUNAQH

PUBLIC NOTICE
To Place your Classified Ads Contact
9731810277

KARNATAKA REDDYJANA SANGHA
No.1, Mahayogi Vemana Road, 3rd Block, Koramangala, Bangalore-34.

TENDER NOTICE
Quotations are invited from reputed Suppliers / Contractors & Architects for following works.
1. To submit landscape designs and quotations for Vemana Hospital Building at Marasuru.
2. Regarding printing of practical record books and note books for RJS - PU College, Koramangala.
3. Supply and Installation of CCTV Camares to KRJS Institutions. Approx. – 34 lakhs.
4. Providing Uniforms to KRJS Class 4 employees.
Submit your sealed quotations with in 7 days from the date of this advertisement to
General Secretary, KRJS.
More details: www.reddyjanasangha.org or Contact: 8618096726 9945450345
President General Secretary

PUBLIC NOTICE
I, **Mrs LEENA ABI JOSEPH W/o. Abi Joseph** residing at No. 3354, 12th A Main, HAL 2nd Stage, Indiaranagar, Bengaluru was wrongly typed or Entered Mrs. LINA A.J instead of Mrs. LEENA ABI JOSEPH in registered absolute sale deed dated 15/06/2004, Document NO.7124/2004-05 in Book-1 CD No. KRID57 at the office of the sub registrar Krishnarajapuram, Bangalore said error was rectified through the registered deed of Declaration dated 13.03.2024 document No. 24707/2023-24, Book-1, registered in the office of the Sub registrar Banasawadi, Bangalore, vide affidavit dated 14/03/2024 sworn before notary Leela, Bangalore

JOB OPPORTUNITIES

Security & Detectives

WANTED FIELD OFFICER and OPERATION MANAGER for security company for White Field, Electronic City area. salary depends on experience- 9980911233,9980311233

WE ARE HIRING SECURITY OFFICERS & SECURITY SUPERVISORS (G4S)

Skill Set
- Bachelor or Equivalent with Good Communication Skills (English), SSLC/10th for Security Supervisors.
- Minimum 4 Years of Physical Security Experience in Corporate Industry.
- Age Below 45 Years.
- Forensic Science/NCC Fresher's can Apply.
- Diversity Hiring, Male & Female both.

Send your resume to : sridhara.muniraju@in.g4s.com

Walk-in Address
No.71, 1st Floor, Karthik Nagar, Outer Ring Road, Marathalli, Bangalore - 560037
Contact : 8073875708

Key Responsibilities
- Physical Security of Premises
- Fire Fighting & Life Safety of Staff
- Executive Protection
- Protection of Property
- Security Alerts and Updates of the Region
- Manning of Entry/Exit Points
- Investigations & Visitor Control
- Security Records Maintenance
- Vehicle checking & Material Movement Control
- Patrolling
- Gate Operation & Key Control
- Access Control and Fire Control Panel Monitoring
- Vendor Work Force Control & Incident Handling
- Event Management & Emergency Response

Engg/ Production Technical

URGENTLY REQUIRED
- Machine Operators
- Computer Operators
- Delivery Boys: 2 Whler with Valid DL Must

Qual: 12th Pass (ITI Preferred)
Work Location: Rajajinagar & Singasandra Bengaluru
WALK-IN INTERVIEW
15th, 16th, 17th, 18th Mar
10:00 AM - 5:00 PM
Venue: TTMC Building, 1st Flr, Blk-A Shanthi Nagar, Double Road Bengaluru-27
Contact: 77389 57777

Accounts & Finance

WANTED EXPERIENCED staff for CA firm in HRBR Layout. Fluency in English a must. Attractive Salary. Mail your CV to jobs@dbubnaassociates.com

Part-Time Jobs

PART TIME Job SMS Typing work Laptop Sellphone Simcard Company Provide (Fee 1099): 7505708776/ 9389525534

Wanted

WANTED MALE/ Female Office Adminstrative Assistant Below 40 Years Known Kannada English Hindi in and Around Rajajinagar Contact: 9108458798/ 080-23384085

DH Classifieds More value, more impact — ಪ್ರಜಾವಾಣಿ
REAL ESTATE
BOOK YOUR REAL ESTATE ADS IN DH ALL KARNATAKA + PRAJAVANI BENGALURU CITY ON SATURDAY + SUNDAY
@ 2481/-* FOR 15 WORDS
*Conditions apply
www.dhclassifieds.com BOOK NOW
Book your ad with us now! For more details contact:
+91 9845114560 | +91 9901641752 | 080-45557163/164

Teachers/ Professors

WANTED M.A, M.Sc, M.Com to Teach PCMB, PCMC, HEBA. Contact personally with resume, original documents between 2P.M to 4P.M. Manjula Nadgir Memorial PU College, Madavara Next to International Exhibition Center, Bangalore. Ph: 9731721446

ST.TERESA'S ENGLISH HIGHER PRIMARY SCHOOL Chamarajpet, Bengaluru-18. TEACHERS: MATHS, SCIENCE, and COMPUTER. Qualification BA B.Sc B.Ed D.Ed with Experience BA with English Major Fluency in Language stteresaenghig@gmail.com 9611647903 080-26707884

BUILDERS ESSENTIAL

Water Proofing

LEAKAGE...
LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

REAL ESTATE SELLING

General

South

30X45 SOUTH/WEST facing corner site on MM Road for sale at Byatarayanapura, Mysore Road. Contact: 9845900432

Sites

Vishweshwariah Layout

AVAILABLE 20X30 Vishveshwariah Layout 6th Block BDA Site For Sale Rate. 47 Lakhs Contact: 9844603127

BUSINESS

Business Offers

Finance

NRI'S INVESTMENT And Finance Available On Low Interest Against Properties,Land& Building,Sites,Flats, Converted& Agriculture Lands Call:7204995189

PERSONAL

Change of Name

I,MOHAN RAJAGOPALAN Resi/at A 2123,Shobha Forest View,OAK Block,BSK 6th-Stage, Uttarahalli, Bengaluru-62 have changed my Name to MOHAN RAJAGOPAL vide Affidavit dtd:11.03.2024 Sworn Before Notary Deepa.M, Bengaluru

CHANGE OF NAME
I, **Dr. T. R. JAGADEESH,** Residing at # 90, T-2 Muneswara Apartment, 2nd Circular Road, Nandini Doller's Scheme Layout, Bengaluru-96, declare that in some documents my name is mentioned as **Dr. T.R. JAGADEESH, THIRUMALAI RAMASWAMY JAGADEESH & RAMASWAMY IYENGAR JAGADEESH** All the names are one and the same In all my official record I shall retain my name as **Dr. T. R. JAGADEESH** vide affidavit dated 13-03-2024, before Notary K.P.Sumangala, Bengaluru.

I, SWETHA UMASHANKAR D/o C.Umashankar and w/o.C.R.Chandrashekar R/a#607, Chandru Nilaya, Kanakapura Main`Road KanakaNagar, Near Shanimahathma Temple, Yelachenahalli, JPNagar, Bangalore- 560078 have changed my Name`From SWETHA M to SWETHA UMASHANKAR Vide_affidavit dated:13.3.2024 before_Notary KV.Mani, Bengaluru

CHANGE OF NAME
I, **SOLOMON RAVIKUMAR** Residing at Nikoo Homes 1, Bhartiya City, Apartment No. 80509, Thanisandra Main Road, Bangalore - 560064, have change my name to **SOLOMON RAVIKUMAR SAMUEL** vide affidavit dated 14/03/2024 before Notary Y.R. Chandrasekar, Bangalore. Henceforth I shall be called as **SOLOMON RAVIKUMAR SAMUEL** Only.

CHANGE OF NAME
I, **FAHAD AHAMED SHAKEEL AHAMED,** Residing at #110, 21st Cross, 16th Main, BTM Layout, 2nd Stage, Bangalore-560076 have change my name to **FAHAD AHAMED S.A.** vide affidavit date 14/03/2024 before Notary K. Ramegowda, Bangalore. Henceforth I shall be called as **FAHAD AHAMED S.A.** Only.

CONNECT ಕ್ಲಾಸಿಫೈಡ್ಸ್

AWAKE — Empowerment through Entrepreneurship — 40 Years in Service — sidbi
ಪ್ರಸ್ತುತಪಡಿಸುತ್ತಿದೆ
ಸ್ವಾವಲಂಬನ್ ಮೇಳ–2024
ಪ್ರದರ್ಶನ ಮತ್ತು ಮಾರಾಟ
ಮಹಿಳೆಯರಿಂದ ತಯಾರಿಸಲ್ಪಟ್ಟ ವಿಶೇಷ ಉತ್ಪನ್ನಗಳು.
31 ಜಿಲ್ಲೆಗಳ ಪ್ರದರ್ಶಕರು ಭಾಗವಹಿಸಲಿದ್ದಾರೆ.
ಸ್ಥಳ: ಚಿತ್ರಕಲಾ ಪರಿಷತ್
ದಿನಾಂಕ: 15, 16 ಮತ್ತು 17ನೇ ಮಾರ್ಚ್ 2024,
ಸಮಯ: ಬೆಳಿಗ್ಗೆ 11:00 ರಿಂದ ರಾತ್ರಿ 9:00 ಗಂಟೆಯವರೆಗೆ
ವಿಶೇಷ ಆಕರ್ಷಣೆಗಳು:
- ಮಹಿಳಾ ಉದ್ಯಮಿಗಳಿಗೆ ತಾಂತ್ರಿಕ ಅವಧಿಗಳು
- ಪ್ರತಿಭಾವಂತ ಮಹಿಳೆಯರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು

ಉದ್ಘಾಟನೆ: ಶ್ರೀ ಎಸ್. ರಾಮನ್, ಸಿಎಂಡಿ, SIDBI
ಮುಖ್ಯ ಅತಿಥಿಗಳು: ಶ್ರೀಮತಿ ಲಕ್ಷ್ಮೀ ಆರ್. ಹೆಬ್ಬಾಳ್ಕರ್, ಮಾನ್ಯ ಸಚಿವರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಕರ್ನಾಟಕ ಸರ್ಕಾರ

SEEMA DEVI, Wife/o, 6498420M, SEP/ASH, KRISHAN KUMAR, Kayasa, Kaysa, Behrod, Alwar, Rajasthan changed name SEEMA DEVI to SEEMA, 14/03/2024 Notary K.V. Mani, Bangalore

I, J.P. Hubert Goveas have lost originalshare certificates of Hazel Philomena Goves, Folio No. JSW1145810, whilerenovating the house. Finders please contact:- 9886622000.

I, DRAKSHAYANI CHIKONAHALLI GANGANNA W/o.Basappa Girimalla Naggol R/o#124, 2nd_cross,KNS Aradhya Layout, Kommagatta, Sulikere, Bengaluru- 560060 have changed my`Name to DAKSHAYINI BASAPPA NAGGOL vide`affidavit dated:14.3.2024 before_Notary L.Puttaraju, Bengaluru

Lost

I, J.P. Hubert Goveas have lost my original share certificates, Folio No. BFL0008944, JSW1145809, while renovating the house. Finders please contact:- 9886622000.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

ಶಿಶುಗಳಿಗೆ ಆರ್ಥಿಕ ನೆರವು ನೀಡಿರಿ
ಕಳೆದ ಐದು ತಿಂಗಳ ಹಿಂದೆ ಜನಿಸಿರುವ ನಮ್ಮ ಅವಳಿ ಹೆಣ್ಣು ಶಿಶುಗಳು ಇವರೆಗೆ ಆಸ್ಪತ್ರೆಯಿಂದ ಬಿಡುಗಡೆ ಆಗಿರುವುದಿಲ್ಲ. ಈ ಕಂದಮ್ಮಗಳು ಚೇತರಿಸಿಕೊಂಡು ಆಸ್ಪತ್ರೆಯಿಂದ ಮನೆಗೆ ಬರಲು ನಿಮ್ಮ ನೆರವು ಕೋರದೆ ಅನ್ಯ ಮಾರ್ಗವಿಲ್ಲದಂತಾಗಿದೆ. ಈ ಅವಳಿ ಶಿಶುಗಳು ಹುಟ್ಟುವಾಗಲೇ, ಕಾಂಗೆನಿಟಲ್ ಸೆಂಟ್ರಲ್ ಹೈಪೊವೆಂಟಿಲೇಶನ್ ಸಿಂಡ್ರೋಮ್ (ಸಿಸಿಎಚ್‌ಎಸ್) ಎಂಬ ಅಪರೂಪದ ನರದೌರ್ಬಲ್ಯ ಸಮಸ್ಯೆಗೆ ಈಡಾಗಿವೆ. ಎಂದರೆ, ಮಲಗಿರುವ ಸಂದರ್ಭದಲ್ಲಿ ಶಿಶುಗಳು ಉಸಿರಾಡುವುದನ್ನ ಮರೆಯುತ್ತವೆ. ಈ ಅವಳಿಗಳಿಗೆ ಈಗಾಗಲೇ ಟ್ರಾಕಿಯೊಸ್ಟಮಿ ಎಂಬ ಚಿಕಿತ್ಸೆ ನೀಡಲಾಗಿದ್ದು, ಭವಿಷ್ಯದಲ್ಲಿನ ಉತ್ತಮ ಬದುಕಿಗಾಗಿ ಇವುಗಳಿಗೆ ಇನ್ನೂ ಹೆಚ್ಚಿನ ವೈದ್ಯಕೀಯ ಚಿಕಿತ್ಸೆ ಬೇಕಾಗಿರುತ್ತದೆ ಮತ್ತು ಅದಕ್ಕೆ ಅಪಾರ ವೆಚ್ಚವಾಗಲಿದೆ. ಆದ್ದರಿಂದ, ಆರ್ಥಿಕ ನೆರವು ನೀಡಬಯಸುವವರು ದಯವಿಟ್ಟು ಶಿಶುಗಳ ತಂದೆ ಅಮಿತ್ ನಂದಿಹಾಳ ಇವರನ್ನು 9036224651 ಸಂಖ್ಯೆಯಲ್ಲಿ ಸಂಪರ್ಕಿಸಬಹುದು.
Bank Account: ICICI Bank 055201535825
IFSC: ICIC0000552

AKSHAYA
Modern 2 BHK Luxury Flats **FOR SALE**
BBMP Approved
SCHOOLS: Orchid International School, National Public School
HOSPITALS: Rajarajeshwari Hospital, Fortis Hospital
INSTITUTIONS: RV College of Engineering, Rajarajeshwari Medical College, Don Bosco Institute of Technology, Christ University
1Km to ORR 300 Mtrs to Satellite Bus Terminal
LOCATION: Site No.56 & 57, Anjaneya Enclave Welfare Association 1st Cross, MM Road, behind Byatarayanapura Police Station, Bangalore-26.
LANDMARK - Deepanjali Metro Station, Gali Anjaneya Temple.
MAIL US: akshayaproject9@gmail.com
Contact: 99162 18894 / 96639 58493

SILK WEAVES EXPO 2024
BY NATIONAL WEAVERS ASSOCIATION
PRESENTS
EXHIBITION CUM SALE
1ST TIME IN BENGALURU
14TH - 24TH MAR
11:00 AM - 9:00 PM
WHITE PETALS CONVENTION CENTER
BASAVESHWARA HBCS LAYOUT, VIJAYANAGAR, BENGALURU - 560040

SINCE 2011
Silks • Lenins • Cottons
Wedding Exclusive
Festival Special
Natural Fibre • Handlooms
Kurtis & Crafts
PARKING & ENTRY FREE
M: 95419-75990 www.silkweavesexpo.com silkweavesexpo



ವಿಶ್ವವಿಖ್ಯಾತ ಕೇರಳ ಜ್ಯೋತಿಷ್ಯರು
ಶ್ರೀ ಗುರೂಜಿ ಜಿ.ಕೆ.ಡಿ. ದಿವ್ಯದಾಸನ್
ಎನ್‌ಟಿಪಿಸಿ 75.4 ಗಿಗಾವಾಟ್ ಸ್ಥಾಪಿತ ಸಾಮರ್ಥ್ಯವನ್ನು ಹೊಂದಿದೆ. ಆದರೆ, 5 ಗಿಗಾವಾಟ್ ಸಾಮರ್ಥ್ಯದ ನವೀಕರಿಸಬಹುದಾದದ ವಿದ್ಯುತ್ ಉತ್ಪಾದನೆ ಸೇರಿ, 18 ಗಿಗಾವಾಟ್ ಸಾಮರ್ಥ್ಯದಷ್ಟು ಸ್ಥಾವರಗಳ ನಿರ್ಮಾಣ ಕಾರ್ಯ ಪ್ರಗತಿಯಲ್ಲಿ ಇದೆ. 2032ರ ವೇಳೆಗೆ 60 ಗಿಗಾವಾಟ್ ಸಾಮರ್ಥ್ಯದ ನವೀಕರಿಸಬಹುದಾದದ ವಿದ್ಯುತ್ ಉತ್ಪಾದನೆಯ ಗುರಿ ಹೊಂದಲಾಗಿದೆ ಎಂದು ಕಂಪನಿ ತಿಳಿಸಿದೆ.

ಸುಧಾ, ಮಯೂರ ಓದಿ

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com

or

Scan QR code to access booking form

ಮಾರುಕಟ್ಟೆ ಧಾರಣೆ

ಅಡಿಕೆ (ಬಂಟ್ವಾಳ)

ಕೋಕ	18000-28500
ಹೊಸತು	28500-34500
ಹಳತು	34500-43000

ಚಿತ್ರದುರ್ಗ

ಅಪಿ	47019-47429
ಬೆಟ್ಟೆ	33610-34079
ಕೆಂಪುಗೋಟು	27609-28069
ರಾಶಿ	46539-46989

ಕುಮಟ

ಚಿಪ್ಪು	20869-28688
ಕೋಕ	12369-26109
ಹಳೆಚಾಲಿ	33869-36859
ಹೊಸಚಾಲಿ	30188-34100

ಸಾಗರ

ಬಿಳಿಗೋಟು	21009-26313
ಚಾಲಿ	28899-33859
ಕೋಕ	18255-27699
ಕೆಂಪುಗೋಟು	20669-35699
ರಾಶಿ	30099-48739
ಸಿಪ್ಪೆಗೋಟು	9999-17759

ಶಿವಮೊಗ್ಗ

ಬೆಟ್ಟೆ	35899-55069
ಗೊರಬಲು	15289-35279
ರಾಶಿ	28069-48859
ಸರಕು	50810-83796

ಸಿದ್ದಾಪುರ

ಬಿಳಿಗೋಟು	24500-28500
ಚಾಲಿ	35199-36099
ಕೋಕ	24099-28100
ಹೊಸಚಾಲಿ	30800-34800
ಕೆಂಪುಗೋಟು	29800-33899
ರಾಶಿ	42099-47800
ತಟ್ಟಿಬೆಟ್ಟೆ	35700-43099

ಶಿರಸಿ

ಬೆಟ್ಟೆ	33421-44618
ಬಿಳಿಗೋಟು	22199-31399
ಚಾಲಿ	31599-35599
ಕೆಂಪುಗೋಟು	26600-33600
ರಾಶಿ	42298-46899

ಯಲ್ಲಾಪುರ

ಅಪಿ	54169-57779
ಬಿಳಿಗೋಟು	21612-32330
ಚಾಲಿ	32601-38209
ಕೋಕ	12699-24899
ಕೆಂಪುಗೋಟು	23089-35399
ರಾಶಿ	43070-53629
ತಟ್ಟಿಬೆಟ್ಟೆ	36399-42850

ಮುದ್ರೆಮನೆ ಕಾಫಿ

(50 ಕೆಜಿಗೆ)

ಎಪಿ	₹13750
ಎಸಿ	₹7950
ಆರ್‌ಪಿ	₹13900
ಆರ್‌ಸಿ	₹8100

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಅರಸೀಕೆರೆ	₹8500-11000
ತಿಪಟೂರು	₹7600-9500
ತುರುವೇಕೆರೆ	₹8700-8700

7ನೇ ವರ್ಷದ ಪುಣ್ಯಸ್ಮರಣೆ

ವಿ.ಜಿ. ನೀಲಾಂಬಿಕೆ

ಜನನ: 29–12–1942

ಮರಣ: 15–03–2017

ನಿಮ್ಮ ಚಿರಸ್ಮರಣೆಯೊಂದಿಗೆ ಕುಟುಂಬ ಸದಸ್ಯರು

ಮಲ್ಲೇಶ್ವರಂ, ಬೆಂಗಳೂರು–3

ಅಹಿತಕರ ಘಟನೆ ತಡೆಗಟ್ಟಲು ಬ್ಯಾಡಗಿ ವರ್ತಕರ ಸಂಘದ ಹೊಸ ನಿಯಮ

ರೈತರು ಸಹಿ ಹಾಕಿದರಷ್ಟೇ ವ್ಯವಹಾರ!

● ಸಿದ್ದು ಆರ್.ಜಿ.ಹಳ್ಳಿ

ಹಾವೇರಿ: 'ನಾನು ಟೆಂಡರ್ ದರಕ್ಕೆ ಅನುಗುಣವಾಗಿ ನಿಮ್ಮ ಅಂಗಡಿಯಲ್ಲಿ ಮೆಣಸಿನಕಾಯಿ ಮಾರುವೆ. ನನಗೆ ಟೆಂಡರ್ ಧಾರಣೆ ಒಪ್ಪಿಗೆ ಆಗದಿದ್ದರೆ, ಮರುದಿನದ ಟೆಂಡರ್‌ಗೆ ಇಟ್ಟು ಮಾರುವೆ. ತಂಟೆ, ತಕರಾರು ಮಾಡಲ್ಲ...' ಎಂದು ರೈತರು ಕಾಗದದ ಮೇಲೆ ಸಹಿ ಹಾಕಿದರಷ್ಟೇ ಬ್ಯಾಡಗಿ ಎಪಿಎಂಸಿ ಆವರಣದಲ್ಲಿ ಇನ್ನು ಮುಂದೆ ವ್ಯವಹಾರ ನಡೆಸಬಹುದಾಗಿದೆ.

ದರ ಕುಸಿದಿದೆ ಎಂದು ಆರೋಪಿಸಿ ಮೆಣಸಿನಕಾಯಿ ಬೆಳೆಗಾರರು ಈಚೆಗೆ ಗಲಭೆ ನಡೆಸಿ, ಎಪಿಎಂಸಿ ವಾಹನಗಳಿಗೆ ಬೆಂಕಿ ಹಚ್ಚಿದ ಘಟನೆಯ ಬೆನ್ನಲ್ಲೇ ಬ್ಯಾಡಗಿ ವರ್ತಕರ ಸಂಘ ಇಂಥ ಹೊಸ ನಿಯಮ ರೂಪಿಸಿದೆ.

'ಟೆಂಡರ್‌ಗೆ ಇಟ್ಟ ಮಾಲ್‌ನ್ನು ತೂಕಕ್ಕೆ ಕೊಡುವ ಅಥವಾ ತಿರಸ್ಕರಿಸುವ ಅಧಿಕಾರ ರೈತರಿಗೆ ಇದೆ. ತಿರಸ್ಕೃತ ಲಾಟುಗಳ ವಿವರ 'ರೆಫ್ಯೂಸ್ ಫಾರ್ಮ್'ನಲ್ಲಿ ಎಲ್ಲ ದಲ್ಲಾಳಿಗಳು (ದಲಾಲರು) ಕಡ್ಡಾಯವಾಗಿ ಎಪಿಎಂಸಿಗೆ ವರದಿ ಮಾಡಬೇಕು' ಎಂದು ವರ್ತಕರ ಸಂಘ ತಿಳಿಸಿದೆ.

'ದಲ್ಲಾಳಿಗಳು ತಮ್ಮ ಅಂಗಡಿಯ ಹಮಾಲರಿಂದ ಮೆಣಸಿನಕಾಯಿ ಚೀಲ ಕಟ್ಟಿಸಬೇಕು. ರೈತರು ಖುಷಿಯಿಂದ ಸ್ವಯಂಪ್ರೇರಿತರಾಗಿ ಕೊಟ್ಟರೆ ಮಾತ್ರ ಪಡಿಗಾಯಿ ಪಡೆಯಬೇಕು' ಎಂಬ ನಿಯಮವನ್ನೂ ಜಾರಿಗೊಳಿಸಿದೆ.

ಒಣಪಡಿ ಮೆಣಸಿನಕಾಯಿ ತನ್ನಿ: 'ಹೆಚ್ಚು ನೀರು ಸಿಂಪಡಿಸಿ ತಂದ ಮೆಣಸಿನಕಾಯಿ ಚೀಲಗಳನ್ನು ದಲಾಲರು ಟೆಂಡರ್‌ಗೆ ಇಡದೇ, ಅವುಗಳನ್ನು ಸುರಿದು ತುಂಬಿಕೊಡುವಂತೆ ರೈತರಿಗೆ ತಿಳಿಸಬೇಕು. ಒದ್ದೆ ಮೆಣಸಿನಕಾಯಿಯನ್ನು ದಾಸ್ತಾನು ಮಾಡಿದರೆ ಫಂಗಸ್ ಸೃಷ್ಟಿಯಾಗಿ ಹಾಳಾಗುತ್ತದೆ. ಮಾರುಕಟ್ಟೆಗೆ ಸಾಧ್ಯವಾದಷ್ಟೂ ಒಣಪಡಿ ಮೆಣಸಿನಕಾಯಿ ತರಲು ರೈತರಿಗೆ ತಿಳಿವಳಿಕೆ ನೀಡಬೇಕು' ಎಂದು ವರ್ತಕರ ಸಂಘ ಸೂಚಿಸಿದೆ.

ಸಚಿವರ ಸೂಚನೆಗೆ ವರ್ತಕರ ಸಮ್ಮತಿ: ವಾರದಲ್ಲಿ ಒಂದು ದಿನ (ಪ್ರತಿ ಸೋಮವಾರ) ಮೆಣಸಿನಕಾಯಿ ವಹಿವಾಟು ನಡೆಸುವುದರಿಂದ ಆವಕ ಹೆಚ್ಚಾಗಿ, ಸಮಸ್ಯೆಗೆ ಕಾರಣವಾಗುತ್ತದೆ. ಹೀಗಾಗಿ ವಾರದಲ್ಲಿ ಎರಡು ದಿನ (ಸೋಮವಾರ ಮತ್ತು ಗುರುವಾರ) ವಹಿವಾಟು ನಡೆಸಲು ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲರು ಸೂಚಿಸಿದ್ದಾರೆ. ಇದಕ್ಕೆ ವರ್ತಕರ ಸಂಘ ಸಮ್ಮತಿ ನೀಡಿದೆ.

ಬ್ಯಾಡಗಿ ಮೆಣಸಿನಕಾಯಿ ಮಾರುಕಟ್ಟೆಯ ದೃಶ್ಯ

ಶೈತ್ಯಾಗಾರಗಳು ಭರ್ತಿ

ಬ್ಯಾಡಗಿ ಪಟ್ಟಣ ಮತ್ತು ಸುತ್ತಮುತ್ತ ಇರುವ 32 ಖಾಸಗಿ ಶೈತ್ಯಾಗಾರಗಳು (ಕೋಲ್ಡ್ ಸ್ಟೋರೇಜ್) ಮೆಣಸಿನಕಾಯಿ ದಾಸ್ತಾನಿನಿಂದ ಬಹುತೇಕ ಭರ್ತಿಯಾಗಿವೆ. ಹೊಸದಾಗಿ ಬಂದ ಆವಕವನ್ನು ಇಡಲು ಜಾಗ ಇಲ್ಲದಂತಾಗಿದೆ. ಇದು ವರ್ತಕರು ಮತ್ತು ರೈತರ ಆತಂಕಕ್ಕೆ ಕಾರಣವಾಗಿದೆ.

'ಹಿಂದಿನ ವರ್ಷದ 9 ಲಕ್ಷ ಮೆಣಸಿನಕಾಯಿ ಚೀಲಗಳು ಇನ್ನೂ ಶೈತ್ಯಾಗಾರಗಳಲ್ಲೇ ಇವೆ. ಉತ್ತಮ ದರ ಸಿಗದ ಕಾರಣದಿಂದ ಹೆಚ್ಚಿನ ರೈತರು ಮೆಣಸಿನಕಾಯಿ ಚೀಲಗಳನ್ನು ಶೈತ್ಯಾಗಾರಗಳಲ್ಲಿ ಇಟ್ಟಿದ್ದಾರೆ. ಸರ್ಕಾರಕ್ಕೆ ಪ್ರತಿ ವರ್ಷ ಬ್ಯಾಡಗಿ ಎಪಿಎಂಸಿಯಿಂದ ₹15 ಕೋಟಿ ಸೆಸ್ ಕಟ್ಟುತ್ತೇವೆ. ಈ ಹಣದಲ್ಲಿ ಸರ್ಕಾರ ಶೈತ್ಯಾಗಾರ ಕಟ್ಟುವ ಬದಲು ಬೇರೆ ಉದ್ದೇಶಕ್ಕೆ ಹಣ ಬಳಕೆ ಮಾಡುತ್ತಿದೆ' ಎಂದು ವರ್ತಕರ ಸಂಘದ ಗೌರವ ಕಾರ್ಯದರ್ಶಿ ವಿ.ಎಸ್.ಮೋರಿಗೇರಿ ದೂರಿದರು.

ಬ್ಯಾಡಗಿ ಮೆಣಸಿನಕಾಯಿ ಮಾರುಕಟ್ಟೆಯಲ್ಲಿ ಅಹಿತಕರ ಘಟನೆ ಮರುಕಳಿಸದಂತೆ ನೋಡಿಕೊಳ್ಳಲು ರೈತರಿಂದ ಸಹಿ ಪಡೆಯುವ ಹೊಸ ನಿಯಮ ಜಾರಿಗೆ ತಂದಿದ್ದೇವೆ

ಸುರೇಶಗೌಡ್ರ ಪಾಟೀಲ, ಅಧ್ಯಕ್ಷ, ಬ್ಯಾಡಗಿ ವರ್ತಕರ ಸಂಘ

ಬ್ಯಾಡಗಿ ತಾಲ್ಲೂಕಿನ ಚಿಕ್ಕಬಾಸೂರು ಉಪ ಮಾರುಕಟ್ಟೆಗೆ ₹10 ಕೋಟಿ ವೆಚ್ಚದ 'ಸರ್ಕಾರಿ ಶೈತ್ಯಾಗಾರ' ಮಂಜೂರಾಗಿದೆ. ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿದೆ

ಎಚ್.ವೈ.ಸತೀಶ್, ಕಾರ್ಯದರ್ಶಿ, ಬ್ಯಾಡಗಿ ಎಪಿಎಂಸಿ

ಪೆಟ್ರೋಲ್, ಡೀಸೆಲ್ ದರ ₹2ರಷ್ಟು ಇಳಿಕೆ

ನವದೆಹಲಿ(ಪಿಟಿಐ): ಲೋಕಸಭಾ ಚುನಾವಣೆಗಳು ಸಮೀಪಿಸುತ್ತಿರುವಂತೆಯೇ, ಕೇಂದ್ರ ಸರ್ಕಾರ ಪೆಟ್ರೋಲ್ ಮತ್ತು ಡೀಸೆಲ್ ದರಗಳಲ್ಲಿ ₹ 2 ಇಳಿಕೆ ಮಾಡಿದೆ.

ಈ ಕುರಿತು, ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವ ಹರ್ದೀಪ್ ಸಿಂಗ್ ಪುರಿ ಅವರು ಗುರುವಾರ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ. ಈ ಪರಿಷ್ಕೃತ ದರಗಳ ಶುಕ್ರವಾರ ಬೆಳಿಗ್ಗೆ 6 ಗಂಟೆಯಿಂದ ಅನ್ವಯವಾಗಲಿವೆ.

'ದರಗಳಲ್ಲಿ ಇಳಿಕೆ ನಂತರ, ದೆಹಲಿಯಲ್ಲಿ ಪೆಟ್ರೋಲ್ ದರ ಲೀಟರ್‌ಗೆ ₹94.72 ಹಾಗೂ ಡೀಸೆಲ್ ದರ ಲೀಟರ್‌ಗೆ ₹87.62 ಆಗಲಿದೆ' ಎಂದು ಪೆಟ್ರೋಲಿಯಂ ಸಚಿವಾಲಯ ತಿಳಿಸಿದೆ. ಮುಂಬೈನಲ್ಲಿ ವ್ಯಾಟ್ ಹಾಗೂ ಇತರ ತೆರಿಗೆಗಳನ್ನು ವಿಧಿಸಲಾಗುತ್ತಿದೆ. ಹೀಗಾಗಿ, ಪೆಟ್ರೋಲ್ ದರ ಲೀಟರ್‌ಗೆ ₹106.31 ಇರುವುದು ₹104.21 ಆಗಲಿದ್ದರೆ, ಡೀಸೆಲ್ ದರ ಲೀಟರ್‌ಗೆ ₹94.27 ಇದ್ದದ್ದು ₹92.15 ಆಗಲಿದೆ ಎಂದು ಸಚಿವಾಲಯ ತಿಳಿಸಿದೆ.

ಪೇಟಿಎಂ ಪೇಮೆಂಟ್ಸ್ ಬ್ಯಾಂಕ್: ಸಿಬ್ಬಂದಿ ಕಡಿತಕ್ಕೆ ಚಿಂತನೆ

ಮುಂಬೈ (ರಾಯಿಟರ್ಸ್,ಪಿಟಿಐ): ಒಂದೆಡೆ, ಹಲವು ಅಕ್ರಮಗಳನ್ನು ನಡೆಸಿದ್ದಕ್ಕಾಗಿ, ಆರ್‌ಬಿಐನ ನಿಯಮಗಳನ್ನು ಉಲ್ಲಂಘಿಸಿದ್ದಕ್ಕಾಗಿ ಪೇಟಿಎಂ ಪೇಮೆಂಟ್ಸ್ ಬ್ಯಾಂಕ್‌ಯ ಮೇಲೆ ನಿರ್ಬಂಧ ಹೇರಲಾಗಿದೆ. ಇನ್ನೊಂದೆಡೆ, ಪೇಟಿಎಂ ಪೇಮೆಂಟ್ಸ್ ಬ್ಯಾಂಕ್ ತನ್ನ ಕಾರ್ಯನಿರ್ವಾಹಣಾ ಸಿಬ್ಬಂದಿಯ ಉದ್ಯೋಗ ಕಡಿತಕ್ಕೆ ಚಿಂತನೆ ನಡೆಸಿದೆ ಎಂದು ಮೂಲಗಳು ಹೇಳಿವೆ. ಆದರೆ, ಈ ಮಾಹಿತಿಯನ್ನು ಬ್ಯಾಂಕ್ ನಿರಾಕರಿಸಿದೆ.

ಪೇಟಿಎಂ ಪೇಮೆಂಟ್ಸ್ ಬ್ಯಾಂಕ್‌ನಲ್ಲಿ ಕೆಲಸ ಮಾಡುತ್ತಿರುವ ಶೇ 20ರಷ್ಟು ಕಾರ್ಯನಿರ್ವಹಣಾ ಸಿಬ್ಬಂದಿಯನ್ನು ಮನೆಗೆ ಕಳುಹಿಸುವ ಪ್ರಕ್ರಿಯೆ ನಡೆಯುತ್ತಿದೆ. ಡಿಸೆಂಬರ್ 2023ರ ಮಾಹಿತಿ ಪ್ರಕಾರ, ಈ ಘಟಕದಲ್ಲಿ 2,775 ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದಾರೆ.

'ಬ್ಯಾಂಕ್‌ನ ಸಿಬ್ಬಂದಿಯ ಮೌಲ್ಯಮಾಪನ (ಅಪ್ರೈಸಲ್) ಪ್ರಕ್ರಿಯೆ ನಡೆಯುತ್ತಿದೆ. ಇದೇ ವೇಳೆಯಲ್ಲಿಯೇ ಆರ್‌ಬಿಐ ತನ್ನ ಆದೇಶವನ್ನೂ ನೀಡಿದೆ. ಅಪ್ರೈಸಲ್‌ನಲ್ಲಿ ಕಡಿಮೆ ಅಂಕಗಳಿದ ಸಿಬ್ಬಂದಿಯನ್ನು ಕೆಲಸದಿಂದ ತೆಗೆಯ ಲಾಗುತ್ತಿದೆ' ಎಂದು ಉದ್ಯೋಗಿಯೊಬ್ಬರು ಹೇಳಿದರು.

'ಉದ್ಯೋಗಿಗಳು ನಿರಾಶೆಗೊಂಡಿದ್ದಾರೆ. ಯಾರನ್ನೂ ಕೆಲಸದಿಂದ ತೆಗೆಯುವುದಿಲ್ಲ ಎಂದು ಸಿಇಒ ವಿಯಜ್ ಶೇಖರ್ ಶರ್ಮಾ ಅವರು ಫೆಬ್ರುವರಿಯಲ್ಲಿ ಭರವಸೆ ನೀಡಿದ್ದರು. ಆದರೆ, ಅವರ ತಮ್ಮ ಮಾತನ್ನು ಉಳಿಸಿಕೊಳ್ಳುತ್ತಿಲ್ಲ' ಎಂದು ಮತ್ತೊಬ್ಬ ಉದ್ಯೋಗಿ ಮಾಹಿತಿ ನೀಡಿದರು.

'ಅಪ್ರೈಸಲ್‌ಗೂ ಉದ್ಯೋಗ ಕಡಿತಕ್ಕೂ ಅಂತರವಿದೆ': 'ಇಲ್ಲಿ ಯಾವುದೇ ಉದ್ಯೋಗ ಕಡಿತ ಪ್ರಕ್ರಿಯೆ ನಡೆಯುತ್ತಿಲ್ಲ. ಕಂಪೆನಿಯಲ್ಲಿ ವಾರ್ಷಿಕವಾಗಿ ನಡೆಯುವ ಅಪ್ರೈಸಲ್ ಪ್ರಕ್ರಿಯೆ ನಡೆಯುತ್ತಿದೆಯಷ್ಟೆ. ಅಪ್ರೈಸಲ್‌ಗೂ ಉದ್ಯೋಗ ಕಡಿತ ಮಾಡುವುದಕ್ಕೂ ಬಹಳ ವ್ಯತ್ಯಾಸವಿದೆ' ಎಂದು ಪೇಟಿಎಂ ಪೇಮೆಂಟ್ಸ್ ಬ್ಯಾಂಕ್‌ನ ವಕ್ತಾರರೊಬ್ಬರು ತಿಳಿಸಿದರು.

Paytm Payments Bank Ltd. [PPBL]

ಪೇಟಿಎಂ ಯುಪಿಐ ಬಳಕೆಗೆ ತೊಂದರೆ ಇಲ್ಲ

ಇನ್ನು ಮುಂದೆ ಪೇಟಿಎಂ ಯುಪಿಐ ಸೇವೆಯನ್ನು ಒದಗಿಸಬಹುದು ಎಂದು ರಾಷ್ಟ್ರೀಯ ಪೇಮೆಂಟ್ಸ್ ಕಾರ್ಪೋರೇಷನ್ ಆಫ್ ಇಂಡಿಯಾವು (ಎನ್‌ಪಿಸಿಐ) ಪೇಟಿಎಂನ ಮಾತೃ ಸಂಸ್ಥೆ ಒನ್97 ಕಮ್ಯುನಿಕೇಷನ್ಸ್‌ಗೆ ಗುರುವಾರ ಅನುಮತಿ ನೀಡಿದೆ.

ಇದರಿಂದ ಪೇಟಿಎಂ ಆ್ಯಪ್ ಬಳಕೆದಾರರು ಇನ್ನು ಮುಂದೆಯೂ ಯುಪಿಐ ವಹಿವಾಟಿನ ರೂಪದಲ್ಲಿ ಆ್ಯಪ್ ಅನ್ನು ಬಳಸಬಹುದಾಗಿದೆ. 'ಯುಪಿಐ ಸೇವೆ ಒದಗಿಸಲು ಆ್ಯಕ್ಸಿಸ್ ಬ್ಯಾಂಕ್, ಎಚ್‌ಡಿಎಫ್‌ಸಿ ಬ್ಯಾಂಕ್, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಹಾಗೂ ಯೆಸ್ ಬ್ಯಾಂಕ್‌ಗಳು ನೆರವಾಗುತ್ತವೆ' ಎಂದು ಎನ್‌ಪಿಸಿಐ ಹೇಳಿದೆ.

ಸಗಟು ಹಣದುಬ್ಬರ ಇಳಿಕೆ

ನವದೆಹಲಿ (ಪಿಟಿಐ): ಆಹಾರ ಪದಾರ್ಥಗಳ ದರ ಏರಿಕೆಯ ನಡುವೆಯೂ ಫೆಬ್ರುವರಿಯಲ್ಲಿ ಸಗಟು ಬೆಲೆ ಸೂಚ್ಯಂಕ (ಡಬ್ಲ್ಯುಪಿಐ) ಆಧಾರಿತ ಹಣದುಬ್ಬರವು ಶೇ 0.20ರಷ್ಟಕ್ಕೆ ಇಳಿಕೆಯಾಗಿದೆ.

ಜನವರಿಯಲ್ಲಿ ಶೇ 0.27ರಷ್ಟಿದ್ದ ಹಣದುಬ್ಬರವು, ಫೆಬ್ರುವರಿಯಲ್ಲಿ ಶೇ 0.20ರಷ್ಟು ಆಗಿದೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ ತಿಳಿಸಿದೆ.

ಆದರೆ ಜನವರಿಗೆ ಹೋಲಿಸಿದರೆ ಫೆಬ್ರುವರಿಯಲ್ಲಿ ಆಹಾರದ ಹಣದುಬ್ಬರವು ಶೇ6.85ರಿಂದ ಶೇ 6.95ಕ್ಕೆ, ತರಕಾರಿಗಳ ದರವು ಶೇ 19.71ರಿಂದ ಶೇ 19.78ಕ್ಕೆ ಮತ್ತು ಬೇಳೆಕಾಳುಗಳ ದರವು ಶೇ 16.06ರಿಂದ ಶೇ 18.48ಕ್ಕೆ ಏರಿಕೆಯಾಗಿದೆ. ತಯಾರಿಕಾ ಉತ್ಪನ್ನಗಳ ಬೆಲೆಯು ಶೇ 1.13ರಿಂದ ಶೇ 1.27ಕ್ಕೆ ಇಳಿಕೆಯಾಗಿದೆ.

2023ರ ಫೆಬ್ರುವರಿಯಲ್ಲಿ ಸಗಟು ಹಣದುಬ್ಬರವು ಶೇ 3.85ರಷ್ಟಿತ್ತು. ಬಳಿಕ ಏಪ್ರಿಲ್‌ನಿಂದ ಅಕ್ಟೋಬರ್ ವರೆಗೆ ಋಣಾತ್ಮಕ ವಲಯದಲ್ಲಿದ್ದ ಹಣದುಬ್ಬರವು ನವೆಂಬರ್‌ನಲ್ಲಿ ಶೇ 0.26ಕ್ಕೆ ಏರಿಕೆ ಆಗಿತ್ತು.

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ

ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳನ್ನು ಮತ್ತು ಪಠ್ಯ ಆಯ್ಕೆಗಳನ್ನು ಪೂರೈಸುವ ಒಂದು ವೆಬ್‌ಸೈಟ್ ಕೂಡ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.

ಬುಕ್ ಮಾಡಿ

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ

Vishal: +91 9845114560 | Jerry: +91 9731810277 |

Tanveer: +91 9886213331 | Ravichandra: +91 9901641752 |

Anitha: +91 9900428036

'ಸಲಿಂಗ ವಿವಾಹ ನಿರಾಕರಣೆ ಅಸಾಂವಿಧಾನಿಕ'

ಟೋಕಿಯೊ (ಎಪಿ): ಸಲಿಂಗ ವಿವಾಹ ನಿರಾಕರಿಸುವುದು ಅಸಾಂವಿಧಾನಿಕ ಎಂದು ಜಪಾನ್ ಹೈಕೋರ್ಟ್ ಗುರುವಾರ ಅಭಿಪ್ರಾಯಪಟ್ಟಿದೆ.

ಸಲಿಂಗ ವಿವಾಹಕ್ಕೆ ಅವಕಾಶ ನೀಡಲು ಇರುವ ಕಾನೂನು ತೊಡಕುಗಳನ್ನು ನಿವಾರಿಸಲು ಸರ್ಕಾರ ತುರ್ತು ಕ್ರಮ ತೆಗೆದುಕೊಳ್ಳಬೇಕು ಎಂದು ಅದು ಹೇಳಿದೆ.

ಪ್ರಸ್ತುತ ವಿವಾಹ ಕಾನೂನನ್ನು ರದ್ದುಗೊಳಿಸುವ ಅಧಿಕಾರ ನ್ಯಾಯಾಲಯಕ್ಕೆ ಇಲ್ಲ. ಕಾನೂನನ್ನು ಪರಿಷ್ಕರಿಸದ ಹೊರತು ಲಿಂಗತ್ವ ಅಲ್ಪಸಂಖ್ಯಾತರು (ಎಲ್‌ಜಿಬಿಟಿಕ್ಯು +) ದಂಪತಿಗಳು ಅಥವಾ ಇತರ ರೀತಿಯ ವಿವಾಹಗಳಿಗೆ ಅನುಮತಿಸುವ ಹೊಸ ಕಾನೂನನ್ನು ಜಾರಿಗೊಳಿಸದ ಹೊರತು ಸರ್ಕಾರಿ ಕಚೇರಿಗಳು ಸಲಿಂಗ ದಂಪತಿಗಳಿಗೆ ವಿವಾಹ ಮಾನ್ಯತೆ ನಿರಾಕರಿಸುವುದನ್ನು ಮುಂದುವರಿಸಬಹುದಾಗಿದೆ ಎಂದು ಹೇಳಿದೆ.

ಸಲಿಂಗಿ ಜೋಡಿಗಳಿಗೆ ಮದುವೆಯಾಗಲು ಮತ್ತು ಸಾಮಾನ್ಯ ದಂಪತಿಗಳಿಗಿರುವ ಪ್ರಯೋಜನಗಳನ್ನು ಪಡೆಯಲು ಅನುಮತಿ ನಿರಾಕರಿಸುವುದು, ಕುಟುಂಬವನ್ನು ಹೊಂದುವ ಸಲಿಂಗಿ ದಂಪತಿಗಳ ಮೂಲಭೂತ ಹಕ್ಕನ್ನು ಉಲ್ಲಂಘಿಸಿದಂತಾಗುತ್ತದೆ ಎಂದು ಸಪ್ಪೋರೊ ಹೈಕೋರ್ಟ್ ನೀಡಿರುವ ತೀರ್ಪಿನಲ್ಲಿ ಹೇಳಿದೆ.

ಹೈಕೋರ್ಟ್ ಗುರುವಾರ ನೀಡಿದ ಈ ತೀರ್ಪಿಗೂ ಮೊದಲು ಕೆಳ ನ್ಯಾಯಾಲಯವು ಹಿಂದೆ ಇದೇ ರೀತಿಯ ತೀರ್ಪು ನೀಡಿದೆ. ಈ ರೀತಿಯ ತೀರ್ಪು ನೀಡಿದ ಆರನೇ ಜಿಲ್ಲಾ ನ್ಯಾಯಾಲಯ ಇದಾಗಿದೆ. ಆದರೆ, ಟೋಕಿಯೊ ಜಿಲ್ಲಾ ನ್ಯಾಯಾಲಯದ ತೀರ್ಪು, ಜಪಾನ್‌ನ ಎಲ್‌ಜಿಬಿಟಿಕ್ಯು+ ಸಮುದಾಯವು ಸಮಾನ ವಿವಾಹ ಹಕ್ಕುಗಳಿಗೆ ನಡೆಸುತ್ತಿರುವ ಹೋರಾಟಕ್ಕೆ ಸಿಕ್ಕಿರುವ ಭಾಗಶಃ ವಿಜಯವೆನಿಸಿದೆ.

ವಿಮಾನ ಸಿಬ್ಬಂದಿಗೆ ರಂಜಾನ್ ಉಪವಾಸ ನಿರ್ಬಂಧಿಸಿದ ಪಿಐಎ

ಕರಾಚಿ (ಪಿಟಿಐ): ರಂಜಾನ್ ತಿಂಗಳಲ್ಲಿ ಪೈಲಟ್‌ಗಳು ಮತ್ತು ವಿಮಾನ ಪರಿಚಾರಕರು ಕೆಲಸದ ವೇಳೆ ಉಪವಾಸ ಕೈಗೊಳ್ಳುವುದಕ್ಕೆ ಪಾಕಿಸ್ತಾನ್ ಇಂಟರ್‌ನ್ಯಾಷನಲ್ ಏರ್‌ಲೈನ್ಸ್ (ಪಿಐಎ) ಸಂಸ್ಥೆಯು ನಿರ್ಬಂಧ ಹೇರಿದೆ.

ಉಪವಾಸ ಕೈಗೊಳ್ಳುವುದರಿಂದ ನಿರ್ಜಲೀಕರಣ ಸಮಸ್ಯೆ, ಸೋಮಾರಿತನ ಮತ್ತು ನಿದ್ದೆ ಕಾಡುತ್ತದೆ ಎಂಬ ವೈದ್ಯಕೀಯ ಶಿಫಾರಸನ್ನು ಪರಿಗಣಿಸಿ ಸಂಸ್ಥೆಯು ಈ ತೀರ್ಮಾನ ಕೈಗೊಂಡಿರುವುದಾಗಿ ಅಧಿಕಾರಿಗಳು ತಿಳಿಸಿದ್ದಾರೆ.

ಕಾರ್ಪೋರೇಟ್ ಸುರಕ್ಷತೆ ನಿರ್ವಹಣೆ ಮತ್ತು ವೈಮಾನಿಕ ಸಿಬ್ಬಂದಿಯ ವೈದ್ಯಕೀಯ ಕೇಂದ್ರವು ಪಿಐಎಗೆ ಈ ಶಿಫಾರಸು ಮಾಡಿತ್ತು.

ಪೈಲಟ್ ಅಥವಾ ವಿಮಾನದ ಸಿಬ್ಬಂದಿ ಉಪವಾಸದಲ್ಲಿದ್ದರೆ ಅವರಿಗೆ ಕೆಲಸ ಮಾಡಲು ಅನುಮತಿ ನೀಡುವುದಿಲ್ಲ ಎಂದೂ ಪಿಐಎ ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ.

2020 ಮೇ ತಿಂಗಳಲ್ಲಿ ಕರಾಚಿ ವಿಮಾನ ನಿಲ್ದಾಣದ ಬಳಿ ಪಿಐಎ ಸಂಸ್ಥೆಯ ವಿಮಾನವು ಅಪಘಾತಕ್ಕೀಡಾದ ಪ್ರಕರಣದ ತನಿಖೆ ನಡೆಸಿದ್ದ ತನಿಖಾ ತಂಡವು, ಈ ಅಪಘಾತವು ಮಾನವ ದೋಷದಿಂದ ಸಂಭವಿಸಿದೆ ಎಂದು ಈಚೆಗೆ ಹೇಳಿತ್ತು. ಈ ಅಪಘಾತದಲ್ಲಿ 99 ಮಂದಿ ಪ್ರಯಾಣಿಕರು ಮೃತಪಟ್ಟಿದ್ದರು.

ಕಂದಾಯ ಇಲಾಖೆ

ಅಪರ ಜಿಲ್ಲಾಧಿಕಾರಿಗಳು, ಧಾರವಾಡ ಜಿಲ್ಲೆ, ಧಾರವಾಡ – 580001.

ದೂರವಾಣಿ: 0836–2233840, 2233880, (ಫ್ಯಾಕ್ಸ್) 0836–2747102

ಸಂಖ್ಯೆ: ಸಿಎಎಲ್/ಸಿಆರ್/ಇ–ಟೆಂಡರ್/174/2023–24 ದಿನಾಂಕ: 14–03–2024

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

2023 – 24 ಮತ್ತು 2024 – 25 ನೇ ಸಾಲಿಗೆ ಬರಪೀಡಿತ ಧಾರವಾಡ ಜಿಲ್ಲೆಯ 7 ತಾಲ್ಲೂಕುಗಳ ಗ್ರಾಮಗಳಲ್ಲಿ ಅವಶ್ಯಕ ಸಂದರ್ಭಗಳಲ್ಲಿ ಟ್ಯಾಂಕರ್ ಮುಖಾಂತರ ನೀರು ಸರಬರಾಜು ಮಾಡಲು ಷರತ್ತುಗಳೊಂದಿಗೆ ಇ–ಪ್ರೊಕ್ಯೂರ್‌ಮೆಂಟ್ (ವೆಬ್‌ಸೈಟ್‌ನ ವಿಳಾಸ: **https://kppp.karnataka.gov.in**) ಮೂಲಕ ಅಲ್ಪಾವಧಿ ಟೆಂಡರ್ ಕರೆಯಲಾಗಿದೆ. ಮಾನ್ಯ ಜಿಲ್ಲಾಧಿಕಾರಿಗಳು, ಧಾರವಾಡ ಇವರು ಇ–ಟೆಂಡರ್‌ನ ಅಂಗೀಕಾರ ಪ್ರಾಧಿಕಾರಿಯಾಗಿರುತ್ತಾರೆ.

ಕ್ರ. ಸಂ.	ಕಾಮಗಾರಿ ವಿವರ	ಟೆಂಡರ್ ಮೊತ್ತ (ರೂ. ಲಕ್ಷಗಳಲ್ಲಿ)
1	"Tanker Supply" to supply potable drinking water to the drought affected Dharwad/Alnavar Taluk in Dharwad district	95.00
2	"Tanker Supply" to supply potable drinking water to the drought affected Hubballi Taluk in Dharwad district	75.00
3	"Tanker Supply" to supply potable drinking water to the drought affected Kalaghatagi Taluk in Dharwad district	57.00
4	"Tanker Supply" to supply potable drinking water to the drought affected Kundagol Taluka in Dharwad district	82.00
5	"Tanker Supply" to supply potable drinking water to the drought affected Navalgund/Annigeri Taluka in Dharwad district	23.00

1) ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಸಲ್ಲಿಸುವ ಕೊನೆಯ ದಿನಾಂಕ: 22–03–2024 ರವರೆಗೆ. 2) ಟೆಂಡರ್‌ಗಳನ್ನು ತೆರೆಯುವ ದಿನಾಂಕ: 23–03–2024 ರಂದು 3) EMD as in e-Portal. ಉಳಿದ ವಿವರಗಳನ್ನು **www.kppp.karnataka.gov.in** ವೆಬ್‌ಸೈಟ್‌ನಲ್ಲಿ ಪಡೆಯಬಹುದು ಹಾಗೂ ಈ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದು.

ಸಹಿ/– ಅಪರ ಜಿಲ್ಲಾಧಿಕಾರಿಗಳು
ಧಾರವಾಡ ಜಿಲ್ಲೆ, ಧಾರವಾಡ.

ವಾಸಾಸಂಇ/ಧಾರವಾಡ/940/ಅಡ್ವರ್ಟೋ/2023–24

ಚಿನ್ನದ ದರ ₹250, ಬೆಳ್ಳಿ ₹1,700 ಏರಿಕೆ



ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಗುರುವಾರ ಚಿನ್ನ ಮತ್ತು ಬೆಳ್ಳಿ ದರ ಏರಿಕೆ ಆಗಿದೆ. ಚಿನ್ನದ ದರ 10 ಗ್ರಾಂ. ಗೆ ₹250 ಏರಿಕೆಯಾಗಿ, ₹66,200ರಂತೆ ಮಾರಾಟವಾಯಿತು.

ಬೆಳ್ಳಿ ಧಾರಣೆ ಕೆ.ಜಿಗೆ ₹1,700 ಹೆಚ್ಚಳವಾಗಿ, ₹77,000 ಮುಟ್ಟಿದೆ. ಜಾಗತಿಕ ಮಾರುಕಟ್ಟೆಯಲ್ಲಿ ಚಿನ್ನದ ದರ ಏರಿಕೆ ಆಗಿದ್ದು, ದೇಶೀಯ ಮಾರುಕಟ್ಟೆಯ ಮೇಲೂ ಪರಿಣಾಮ ಬೀರಿತು ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್‌ನ ಹಿರಿಯ ವಿಶ್ಲೇಷಕ ಸೌಮಿಲ್ ಗಾಂಧಿ ಹೇಳಿದ್ದಾರೆ.

ಜಾಗತಿಕ ಮಾರುಕಟ್ಟೆಯಲ್ಲಿ ಚಿನ್ನ ಮತ್ತು ಬೆಳ್ಳಿ ಒಂದು ಔನ್ಸ್‌ಗೆ (28.34 ಗ್ರಾಂ) ಕ್ರಮವಾಗಿ 2,169 ಡಾಲರ್ ಮತ್ತು 24.92 ಡಾಲರ್‌ನಂತೆ ಮಾರಾಟವಾಗಿದೆ.

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:

080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟ 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

ಕಂಪನಿಗಳಿಗೆ ಬೇಕಾಗಿದ್ದಾರೆ ಟಯೋಟಾ, ಟಾಟಾಮೋಟಾರ್ಸ್, ಬ್ರಿಟಾನಿಯಾ,TVS, ಕಂಪನಿಗಳಿಗೆ ಎಸ್.ಎಸ್.ಎಲ್.ಸಿ, ಪಿಯುಸಿ,ಡಿಗ್ರಿ, ITIನವರುಗಳು 18,000- 76,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 7259552930

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆ ಕೆಲಸಕ್ಕೆ, ಅಡುಗೆಗೆ, ಮಹಿಳೆಯರು ಬೇಕಾಗಿದ್ದಾರೆ. ಊಟ ವಸತಿವಿದೆ 13,000 - 17,000. 8951315839, 9141634619

Part-Time Jobs

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ ತಿಂಗಳಿಗೆ 15,000- 20,000ವರೆಗೆ ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 6366430366, 9663542555

Wanted

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತಊಟ ವಸತಿ ಸಂಬಳ 15,000/- ರಿಂದ 20,000/- ESI, PF ಸೌಲಭ್ಯವಿರುತ್ತದೆ. ಬೆಂಗಳೂರು-56. ಸಂಪರ್ಕಿಸಿ: 9606385001, 9606523337

ಬೇಕಾಗಿದ್ದಾರೆ: ಮಂಗಳೂರಿನ ಪ್ರಖ್ಯಾತ ಸಂಸ್ಥೆಗೆ ಅನುಭವಸ್ಥ ಇಲೆಕ್ಟ್ರಿಶಿಯನ್ ಹಾಗೂ ಪ್ಲಂಬರ್ ಮತ್ತು ಇಲೆಕ್ಟ್ರಿಕಲ್ ಸುಪರ್ ವೈಸರ್ ಬೇಕಾಗಿದ್ದಾರೆ. ಸಂಪರ್ಕಿಸಿರಿ: 7483465940

Multiple Vacancy

REQUIRED, EXPERIENCED Telecaller, & Loan Recovery Supervisor For BankLoan collection. Salary 30,000+ Incentive. 9620206756.

ಪ್ರವಾಸ

Travel

19.03.2024 11.04.2024 ಕಾಶಿ ಅಯೋಧ್ಯಾ ನೇಪಾಳ ಪೋಕ್ರ,ಮುಕ್ತಿನಾಥ. 11.04.2024 28.06.2024 ಕಾಶ್ಮೀರ್,ಗುಲ್ಮಾರ್ಗ್ ವೈಷ್ಣೋದೇವಿ ವಾಘಬಾರ್ಡರ್ ಅಮರನಾಥ್. 28.04.2024 ಸೋಮನಾಥ್ ದ್ವಾರಕ ನಿಷ್ಕಳಂಕ ಮಹಾದೇವ ಓಂಕಾರೇಶ್ವರ. ಮಹಾಕಾಳೇಶ್ವರ. 11.05.2024 24.05.2024 08.06.2024 ಚಾರ್‌ಧಾಮ್ ಸಮೇತ ಪ್ರವಾಸ. ಸಂಪರ್ಕಿಸಿ. ಏಷ್ಯನ್ ಟ್ರಾವಲ್‌ಏಜೆನ್ಸಿ ಕೆಳಮಹಡಿ ಬೆಂಗಳೂರು-4. 26574131 7204173686 9686708171

6 ದಿನಗಳ ಬಾಲಿ. 7 ದಿನಗಳ ಸಿಂಗಪೂರ್ ಮತ್ತು ಮಲೇಷಿಯಾ. 18 ದಿನಗಳ ಗ್ರ್ಯಾಂಡ್ ಯು.ಕೆ ಮತ್ತು ಯುರೋಪ್. 10 ದಿನಗಳ ವಿಯೆಟ್ನಾಂ ಕಾಂಬೋಡಿಯ. 10 ದಿನಗಳ ಸೌತ್‌ಆಫ್ರಿಕಾ. ಆರ್ಕಿಡ್ ಟ್ರಾವೆಲ್ ಅಂಡ್ ಟೂರ್ಸ್. ಬಸವನಗುಡಿ,ಬೆಂಗಳೂರು.04. 9880079588 9900080793

16.3.2024 ರಿಂದ 5ದಿನಗಳು, ಕಾಶಿ, ಅಯೋಧ್ಯ, ಗಯಾ,ಅಲಹಾಬಾದ್. 23.3.2024 ರಿಂದ 8 ದಿನಗಳು ಉಜ್ಜಯಿನಿ, ಓಂಕಾರೇಶ್ವರ, ಭೀಮಾಶಂಕರ, ಶಿರಡಿ,ತುಳಜಾಪುರ, ಎಲ್ಲೋರ,ಪಂಡರಾಪುರ. 28.3.2024 ರಿಂದ 4ದಿನಗಳು ರಾಮೇಶ್ವರ, ಕನ್ಯಾಕುಮಾರಿ, ಮಧುರೈ. 21.4.2024 ರಿಂದ 10ದಿನಗಳು ವೈಷ್ಣೋದೇವಿ, ದೆಹಲಿ, ಕುಲುಮನಾಲಿ, ವಾಘಾವಾರ್ಡರ್ 7.5.2024 ರಿಂದ 7ದಿನಗಳು ಸಿಂಗಾಪುರ, ಮಲೇಷಿಯಾ. 12.6.2024 ರಿಂದ 13ದಿನಗಳು ಕೇದಾರನಾಥ, ಬದರೀನಾಥ,ಯಮನೋತ್ರಿ, ಗಂಗೋತ್ರಿ. ಶ್ರೀ ಗುರುರಾಜ ಟ್ರಾವೆಲ್ಸ್. ಕೋಲಾರ: 9900124333, 9611082432, 8123099913

17.05.2024 19.06.2024 ಸಿಂಗಾಪುರ್ ಮಲೇಶಿಯಾ, ಥೈಲ್ಯಾಂಡ್ 7/11 ದಿನಗಳು. 16.04.2024 05.05.2024 ಭೂತಾನ್ 8 ದಿನಗಳು. 15.04.2024 21.05.2024 ನೇಪಾಳ 9 ದಿನಗಳು. 16.04.2024 17.05.2024 ಕಾಶ್ಮೀರ್ ವೈಷ್ಣೋದೇವಿ 6/8 ದಿನಗಳು. 28.04.2024 26.05.2024 ಅಸ್ಸಾಂ ಮೇಘಾಲಯ ಅರುಣಾಚಲ 9 ದಿನಗಳು. 21.04.2024 21.05.2024 ಗ್ಯಾಂಗ್‌ಟಾಕ್ ಡಾರ್ಜಿಲಿಂಗ್ 7 ದಿನಗಳು. 16.04.2024 14.05.2024 ಶಿಮ್ಲಾ ಕುಲುಮನಾಲಿ 8 ದಿನಗಳು. 18.04.2024 ಕಾಶಿ,ಗಯಾ,ಅಯೋಧ್ಯಾ 7 ದಿನಗಳು. ಸಂಪರ್ಕಿಸಿ: ಜೈನ್ ಟ್ರಾವೆಲ್ಸ್, ಮಲ್ಲೇಶ್ವರಂ ಬೆಂಗಳೂರು.03. 9448402248 7022547922

ವ್ಯಾಪಾರ

Business Offers

Distributors

WANTED DEALERS, DISTRIBUTORS: Renowned furniture manufacturer is looking for Dealers/Distributors across Karnataka; Call: 9019585095

ಭವಿಷ್ಯ

Astrology

★ಓಂದುರ್ಗಾ ಅಂಜನಂ★ ಜ್ಯೋತಿಷ್ಯ ವಾಸ್ತುವಿದ್ಯಾಪೀಠ ಮಹಾಮಾಂತ್ರಿಕ ಜ್ಯೋತಿಷ್ಯ ವಿದ್ವಾನ್. ಶ್ರೀಗುರುದೇವಾನಂದನ್ ರವರಿಂದ 100008 ಅತೀಂದ್ರಿಯ 888 ಧಾರಣ,ಮಾರಣ, ಸಂಮೋಹನ,ಸ್ತಂಭನ,ಮನಇಚ್ಛಾ ವಶೀಕರಣ,ಉಚ್ಚಾಟನಗಳಿಂದ ನಿಮ್ಮ ಯಾವುದೇ ಧೀರ್ಘಕಾಲದ ಪರಿಹಾರವಾಗದ ಸರ್ವಸಮಸ್ಯೆಗಳಿಗೆ 3ದಿನಗಳಲ್ಲಿ ಪರಿಹಾರಕ್ಕೆ ಇಂದೇ ಸಂಪರ್ಕಿಸಿ:9845005009

ಪ್ರಜಾವಾಣಿ ಕ್ಲಾಸಿಫೈಡ್ಸ್ ಶಿಕ್ಷಣ

ಪ್ರತಿಯೊಬ್ಬರಿಗೂ ಉಪಯುಕ್ತ

ಶಿಕ್ಷಣಕ್ಕೆ ಸಂಬಂಧಿತ ಎಲ್ಲಾ ಜಾಹೀರಾತುಗಳ ಪ್ರಕಟಣೆಗಾಗಿ

www.dhclassifieds.com

ಬುಕ್ ಮಾಡಿ

*Conditions apply

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:

+91 9731810277 | +91 9886213331
+91 9845114560 | +91 9900428036

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಮುಂಬೈಗೆ ರಣಜಿ ಟ್ರೋಫಿ

42ನೇ ಬಾರಿ ತಂಡದ ಸಾಧನೆ: ಫೈನಲ್ ಪಂದ್ಯದಲ್ಲಿ ವಿದರ್ಭ ಎದುರು ಗೆಲುವು

ಮುಂಬೈ (ಪಿಟಿಐ): ಮುಂಬೈ ಕ್ರಿಕೆಟ್ ತಂಡವು 42ನೇ ಬಾರಿ ರಣಜಿ ಟ್ರೋಫಿ ಜಯಿಸಿ, ತನ್ನ ದಾಖಲೆಯ ಕಿರೀಟಕ್ಕೆ ಮತ್ತೊಂದು ಚಿನ್ನದ ಗರಿ ಸೇರಿಸಿಕೊಂಡಿತು.

ವಾಂಖೆಡೆ ಕ್ರೀಡಾಂಗಣ ದಲ್ಲಿ ಗುರುವಾರ ಮುಕ್ತಾಯವಾದ ಫೈನಲ್‌ನಲ್ಲಿ ಮುಂಬೈ ತಂಡವು 169 ರನ್‌ಗಳಿಂದ ವಿದರ್ಭ ಎದುರು ಜಯಿಸಿತು. ರಣಜಿ ಟ್ರೋಫಿಯ 90 ವರ್ಷ ಗಳ ಇತಿಹಾಸದಲ್ಲಿ ಮುಂಬೈ ತಂಡವು 48ನೇ ಸಲ ಫೈನಲ್ ಪ್ರವೇಶಿಸಿತ್ತು.

538 ರನ್‌ಗಳ ಗೆಲುವಿನ ಗುರಿ ಬೆನ್ನಟ್ಟಿದ್ದ ವಿದರ್ಭ ತಂಡದ ನಾಯಕ ಅಕ್ಷಯ್ ವಾಡಕರ್ (102; 199ಎ, 4X9, 6X1) ಶತಕ ಗಳಿಸಿದರು. ಅವರು ಹಾಗೂ ಹರ್ಷ ದುಬೆ (65; 128ಎ, 4X5, 6X2) ಸೇರಿ 6ನೇ ವಿಕೆಟ್ ಜೊತೆಯಾಟದಲ್ಲಿ 138 ರನ್ ಸೇರಿಸಿದರು. ಈ ಜೋಡಿಯು 194 ನಿಮಿಷಗಳವರೆಗೆ ಕ್ರೀಸ್‌ನಲ್ಲಿತ್ತು. 255 ಎಸೆತಗಳನ್ನು ಎದುರಿಸಿತು.

ಪಂದ್ಯದ ನಾಲ್ಕನೇ ದಿನವಾದ ಬುಧವಾರ ವಿದರ್ಭ ತಂಡವು ಐದು ವಿಕೆಟ್‌ಗಳಿಗೆ 248 ರನ್ ಗಳಿಸಿತ್ತು. ಕೊನೆಯ ದಿನದಾಟದಲ್ಲಿ ಗೆಲುವಿಗಾಗಿ 290 ರನ್ ಗಳಿಸಬೇಕಿತ್ತು. ಆದರೆ ಈ ಮೊತ್ತಕ್ಕೆ 78 ರನ್‌ಗಳು ಸೇರುವಷ್ಟರಲ್ಲಿ ಇನ್ನುಳಿದ ಐದು ವಿಕೆಟ್‌ಗಳೂ ಪತನವಾದವು.

ವಿದರ್ಭ ತಂಡದ ಅಕ್ಷಯ್ ಒಬ್ಬರೇ ಏಕಾಂಗಿ ಹೋರಾಟ ನಡೆಸಿದರು. ಋತುವಿನಲ್ಲಿ ಒಟ್ಟು 600 ರನ್ ಗಳಿಸಿದ ಸಾಧನೆ ಮಾಡಿದರು. ಆದರೆ ಅವರನ್ನು ಎಲ್‌ಬಿಡಬ್ಲ್ಯು ಬಲೆಗೆ ಕೆಡವಿದ ತನುಷ್ ಕೋಟ್ಯಾನ್ ವಿದರ್ಭಕ್ಕೆ ಸೋಲಿನ ಹಾದಿ ತೋರಿಸಿದರು. ಇದಾಗಿ ನಾಲ್ಕು ಓವರ್‌ಗಳಾಗುವಷ್ಟರಲ್ಲಿ ಉಳಿದ ಬ್ಯಾಟರ್‌ಗಳೂ ಡಗ್‌ಔಟ್ ಸೇರಿದರು.

ಅಜಿಂಕ್ಯ ರಹಾನೆ ನಾಯಕತ್ವದ ಮುಂಬೈ ತಂಡದ ಸಂಭ್ರಮ ಮುಗಿಲುಮುಟ್ಟಿತು. ಎರಡು ವರ್ಷಗಳ ಹಿಂದೆಯೂ ಮುಂಬೈ ತಂಡವು ಫೈನಲ್ ಪ್ರವೇಶಿಸಿತ್ತು. ಆದರೆ ಮಧ್ಯಪ್ರದೇಶ ವಿರುದ್ಧ ಸೋತಿತ್ತು.

ಮುಂಬೈ ತಂಡಕ್ಕೆ ₹ 5 ಕೋಟಿ ಹೆಚ್ಚುವರಿ ಬಹುಮಾನ: ರಣಜಿ ಟ್ರೋಫಿ ಜಯಿಸಿದ ಅಜಿಂಕ್ಯ ರಹಾನೆ ಬಳಗಕ್ಕೆ ಈಗಾಗಲೇ ನಿಗದಿಯಾಗಿರುವ ಪ್ರಶಸ್ತಿ ಮೊತ್ತವಲ್ಲದೇ ₹ 5 ಕೋಟಿ ಹಣವನ್ನು ಹೆಚ್ಚುವರಿಯಾಗಿ ನೀಡಲಾಗುವುದು ಎಂದು ಮುಂಬೈ ಕ್ರಿಕೆಟ್ ಸಂಸ್ಥೆ (ಎಂ.ಸಿ.ಎ) ತಿಳಿಸಿದೆ.

'ವಿಜೇತ ತಂಡಕ್ಕೆ ಐದು ಕೋಟಿ ಮೊತ್ತ ನೀಡಲು ಎಂ.ಸಿ.ಎ ಅಧ್ಯಕ್ಷ ಅಮೋಲ್ ಕಾಳೆ ಮತ್ತು ಅಪೆಕ್ಸ್ ಕೌನ್ಸಿಲ್ ಜಂಟಿಯಾಗಿ ನಿರ್ಧರಿಸಿವೆ' ಎಂದು ಎಂ.ಸಿ.ಎ ಕಾರ್ಯದರ್ಶಿ ಅಜಿಂಕ್ಯ ನಾಯಕ್ ತಿಳಿಸಿದ್ದಾರೆ.

ಎಂಟು ವರ್ಷಗಳ ನಂತರ ಮುಂಬೈ ರಣಜಿ ಟ್ರೋಫಿ ಜಯಿಸಿದೆ.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಮುಂಬೈ: 224. ವಿದರ್ಭ: 105. ಎರಡನೇ ಇನಿಂಗ್ಸ್: ಮುಂಬೈ: 418. ವಿದರ್ಭ: 134.3 ಓವರ್‌ಗಳಲ್ಲಿ 368 (ಅಕ್ಷಯ್ ವಾಡಕರ್ 102, ಹರ್ಷ ದುಬೆ 65, ತುಷಾರ್ ದೇಶಪಾಂಡೆ 53ಕ್ಕೆ2, ತನುಷ್ ಕೋಟ್ಯಾನ್ 95ಕ್ಕೆ4, ಮುಷೀರ್ ಖಾನ್ 48ಕ್ಕೆ2) ಪಂದ್ಯಶ್ರೇಷ್ಠ: ಮುಷೀರ್ ಖಾನ್. ಸರಣಿ ಶ್ರೇಷ್ಠ: ತನುಷ್ ಕೋಟ್ಯಾನ್.

ಮುಂಬೈ ತಂಡದ ಧವಳ್ ಕುಲಕರ್ಣಿಅವರನ್ನು ಹೆಗಲ ಮೇಲೆ ಹೊತ್ತು ಸಹ ಆಟಗಾರರು ಸಂಭ್ರಮಿಸಿದರು . ಪಿಟಿಐ ಚಿತ್ರ

ವಿದಾಯ ಹೇಳಿದ ಧವಳ್ ಕುಲಕರ್ಣಿ

ಮುಂಬೈ (ಪಿಟಿಐ): ಮಧ್ಯಮವೇಗಿ ಧವಳ್ ಕುಲಕರ್ಣಿ ಅವರು ಪ್ರಥಮ ದರ್ಜೆ ಕ್ರಿಕೆಟ್‌ಗೆ ವಿದಾಯ ಹೇಳಿದರು. ಇಲ್ಲಿ ನಡೆದ ರಣಜಿ ಟ್ರೋಫಿ ಫೈನಲ್, ಅವರ ವೃತ್ತಿಜೀವನದ ಕೊನೆಯ ಪಂದ್ಯವಾಯಿತು. ಟ್ರೋಫಿ ಹಿಡಿದಿದ್ದ ಅವರನ್ನು ಹೆಗಲ ಮೇಲೆ ಹೊತ್ತುಕೊಂಡ ಸಹ ಆಟಗಾರರು ಸಂಭ್ರಮಿಸಿ ಬೀಳ್ಕೊಟ್ಟರು. ಪಂದ್ಯದ ಸಂದರ್ಭದಲ್ಲಿ ಅವರ ಪತ್ನಿ ಮತ್ತು ಮಗಳು ಕೂಡ ಇದ್ದರು. ಅವರು ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ 95 ಪಂದ್ಯಗಳನ್ನು ಆಡಿ 281 ವಿಕೆಟ್ ಗಳಿಸಿದ್ದಾರೆ. ಭಾರತ ತಂಡವನ್ನು ಅವರು 12 ಏಕದಿನ ಮತ್ತು ಎರಡು ಟಿ20 ಪಂದ್ಯಗಳಲ್ಲಿ ಪ್ರತಿನಿಧಿಸಿದ್ದಾರೆ. ಆರು ಬಾರಿ ಮುಂಬೈ ತಂಡವು ಫೈನಲ್ ತಲುಪಿದಾಗಲೂ ಧವಳ್ ತಂಡದಲ್ಲಿದ್ದರು. ತಮ್ಮ ಬೌಲಿಂಗ್ ಮೂಲಕ ತಂಡವು ಫೈನಲ್ ತಲುಪಲು ಕಾಣಿಕೆ ನೀಡಿದ್ದರು. ಅದರಲ್ಲಿ ಒಟ್ಟು ಐದು ಸಲ ಮುಂಬೈ ಟ್ರೋಫಿ ಜಯಿಸಿತ್ತು.

ಫೀಲ್ಡಿಂಗ್‌ಗೆ ಬರದ ಅಯ್ಯರ್ : ಪಂದ್ಯದ ಕೊನೆಯ ದಿನದಾಟವಾದ ಗುರುವಾರ ಮುಂಬೈ ತಂಡದ ಆಟಗಾರ ಶ್ರೇಯಸ್ ಅಯ್ಯರ್ ಅವರು ಫೀಲ್ಡಿಂಗ್ ಮಾಡಲಿಲ್ಲ. ಅವರು ಬೆನ್ನುನೋವಿನಿಂದಾಗಿ ವಿಶ್ರಾಂತಿ ಪಡೆದರು.

ಐದು ಸ್ಪರ್ಧೆಗಳಲ್ಲಿ ಫವಾದ್ ಭಾಗಿ

ನವದೆಹಲಿ(ಪಿಟಿಐ): ಭಾರತದ ಅಗ್ರಗಣ್ಯ ಈಕ್ವೆಸ್ಟ್ರಿಯನ್ ಕ್ರೀಡಾಪಟು ಫವಾದ್ ಮಿರ್ಜಾ ಅವರು ಪ್ಯಾರಿಸ್ ಒಲಿಂಪಿಕ್ ಕೂಟದ ಪೂರ್ವಸಿದ್ಧತೆಗಾಗಿ ಐದು ಪ್ರಮುಖ ಸ್ಪರ್ಧೆಗಳಲ್ಲಿ ಭಾಗವಹಿಸುವರು.

ಫವಾದ್

ಬೆಂಗಳೂರಿನ 32 ವರ್ಷದ ಮಿರ್ಜಾ ಅವರು ಸ್ಪರ್ಧೆಗಳಲ್ಲಿ ಭಾಗವಹಿಸಲು ಕೇಂದ್ರ ಕ್ರೀಡಾ ಸಚಿವಾಲಯದಿಂದ ಅನುಮತಿ ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ. ಅವರು ಮೊದಲು ಒಲಿಂಪಿಕ್ ಗ್ರುಪ್ ರ‍್ಯಾಂಕಿಂಗ್ ಮತ್ತು ಎರಡನೇ ಯದ್ದು ಒಲಿಂಪಿಕ್ ವಿಶ್ವ ರ‍್ಯಾಂಕಿಂಗ್‌ನಲ್ಲಿ ಭಾಗವಹಿಸಲು ಧನಸಹಾಯ ಪಡೆಯಲಿದ್ದಾರೆ. ಫವಾದ್ ಅವರ ವಿಮಾನ ಪ್ರಯಾಣ, ವಸತಿ, ಸ್ಪರ್ಧೆಗಳಿಗೆ ಪ್ರವೇಶ ಶುಲ್ಕ ಹಾಗೂ ಕುದುರೆಯ ನಿರ್ವಹಣೆ ವೆಚ್ಚಗಳನ್ನು ಸರ್ಕಾರ ಭರಿಸಲಿದೆ.

'ರೈಡಿಂಗ್ ಬ್ರೀಚಸ್, ಬೂಟ್ಸ್, ಕೈಗವಸು, ಟೇಲ್‌ಕೋಟ್ಸ್, ಜಾಕೆಟ್ ಮತ್ತು ಕುದುರೆಗೆ ಬೇಕಾದ ಸಲಕರಣೆ ವೆಚ್ಚಗಳನ್ನೂ ಭರಿಸಲಾಗುತ್ತದೆ' ಎಂದು ಪ್ರಕಟಣೆಯಲ್ಲಿ ಉಲ್ಲೇಖಿಸಲಾಗಿದೆ.

ಕರ್ನಾಟಕದಲ್ಲಿ ಅಡುಗೆ ಮನೆಯ ನಿಜವಾದ ಚಾಂಪಿಯನ್

Gold Winner® QUALITY 80 CHECKS · WORLD-CLASS TECHNOLOGY · US FDA REGISTERED

ಕರ್ನಾಟಕದ ಅಡುಗೆ ಮನೆಗಳ ಮಹಾರಾಜನಾಗಿರುವ ಗೋಲ್ಡ್ ವಿನ್ನರ್ ತನ್ನ ಅದ್ವಿತೀಯ ಗುಣಮಟ್ಟ ಮತ್ತು ಅಡುಗೆಯ ರುಚಿ ಹೆಚ್ಚಿಸುವ ಗುಣದಿಂದಾಗಿ ಕನ್ನಡಿಗರಿಗೆ ಅಚ್ಚುಮೆಚ್ಚಾಗಿದೆ. ಯುಎಸ್‌ಎಫ್‌ಡಿಎ-ನಲ್ಲಿ ನೋಂದಾಯಿತವಾಗಿರುವ ಈ ಬ್ರಾಂಡ್ 80 ರೀತಿಯ ಪರೀಕ್ಷೆಗಳಿಗೆ ಒಳಾಗಾಗುವ ಮೂಲಕ ಗುಣಮಟ್ಟ ಮತ್ತು ಪರಿಶುದ್ಧತೆಯಲ್ಲಿ ಉತ್ಕೃಷ್ಟ ಸ್ಥಾನ ಗಳಿಸಿದೆ.

ಹಲವು ದಶಕಗಳಿಂದ ಕೋಟ್ಯಂತರ ತಾಯಂದಿರ ನಂಬಿಕೆ ಗಳಿಸಿರುವ ಗೋಲ್ಡ್ ವಿನ್ನರ್ ಬೇರೆ ಬ್ರಾಂಡ್‌ಗಳ ನಡುವೆ ತನ್ನ ಹಿರಿಮೆಯನ್ನು ಹೆಚ್ಚಿಸಿಕೊಂಡಿದೆ. ವಿಟಮಿನ್ ಎ ಮತ್ತು ಡಿ ಮುಂತಾದ ಅವಶ್ಯಕ ಪೋಷಕಾಂಶಗಳನ್ನು ಗೋಲ್ಡ್‌ವಿನ್ನರ್ ಹೊಂದಿದ್ದು, ನಿಮ್ಮ ಪ್ರತಿ ಆಹಾರವು ಕೇವಲ ರುಚಿಕರವಷ್ಟೇ ಅಲ್ಲದೇ, ಪೌಷ್ಟಿಕಯುಕ್ತವೂ ಆಗಿರಬೇಕು ಎಂದು ಬಯಸುತ್ತದೆ.

ಗೋಲ್ಡ್‌ವಿನ್ನರ್ ತನ್ನ ಬೊಜ್ಜು ರಹಿತ ಮತ್ತು ಕಡಿಮೆ ಹೀರುವಿಕೆ ಗುಣದಿಂದಾಗಿ ಆರೋಗ್ಯದ ಬಗ್ಗೆ ಕಾಳಜಿ ಇರುವ, ಆದರೆ ರುಚಿಯಾದ ಖಾದ್ಯವನ್ನು ಬಿಡಲು ಒಲ್ಲದವರ ಪ್ರಥಮ ಆದ್ಯತೆಯಾಗಿದೆ. ಇದರಲ್ಲಿನ ಶುದ್ಧವಾದ ಮತ್ತು ಜಿಗುಟುರಹಿತವಾದ ಗುಣವು ಅಡುಗೆ ತಯಾರಿಕೆಯ ಅನುಭವವನ್ನು ಬದಲಾಯಿಸುತ್ತದೆ.

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

ಗೋಲ್ಡ್‌ವಿನ್ನರ್‌ನಲ್ಲಿ ಮಾಡಿದ ಎಲ್ಲ ಅಡುಗೆಯು ನಿಮ್ಮ ಕುಟುಂಬದವರಿಗೆ ಪೌಷ್ಟಿಕತೆ ಮತ್ತು ಉತ್ತಮ ರುಚಿಯ ಭರವಸೆಯನ್ನು ನೀಡುತ್ತದೆ. ₹2 ರಿಂದ ₹3 ಕಡಿಮೆ ಇರುವ ಇತರ ಅಡುಗೆ ಎಣ್ಣೆಗಳನ್ನು ಉಪಯೋಗಿಸುವ ಮೂಲಕ ನಿಮ್ಮ ಆರೋಗ್ಯ ಮತ್ತು ಖುಷಿಯೊಂದಿಗೆ ರಾಜಿ ಮಾಡಿಕೊಳ್ಳಬೇಡಿ. 80 ರೀತಿಯ ಗುಣಮಟ್ಟ ಪರೀಕ್ಷೆಯ ಮೂಲಕ ತನ್ನ ಗುಣಮಟ್ಟದ ಪರಂಪರೆಯನ್ನು ಉಳಿಸಿಕೊಂಡು ಬಂದಿರುವ ಗೋಲ್ಡ್ ವಿನ್ನರ್ ಮಾತ್ರ ಎಲ್ಲ ಬಗೆಯ ಆಹಾರ-ಖಾದ್ಯಗಳಿಂದಲೂ ನಿಮಗೆ ಸಂತೃಪ್ತಿ ಉಂಟಾಗುತ್ತದೆ ಎನ್ನುವುದನ್ನು ಖಚಿತಪಡಿಸುತ್ತದೆ ಮತ್ತು ಈ ಮೂಲಕ ಕರ್ನಾಟಕದ ಏಕೈಕ ಆಯ್ಕೆಯಾಗಿ ಬೆಳೆದು ನಿಂತಿದೆ.

ಡೆಲ್ಲಿ ಕ್ಯಾಪಿಟಲ್ಸ್ ನೆಟ್ಸ್‌ನಲ್ಲಿ ರಿಷಭ್ ಅಭ್ಯಾಸ

ವಿಶಾಖಪಟ್ಟಣ (ಪಿಟಿಐ): ಸುಮಾರು 14 ತಿಂಗಳುಗಳಿಂದ ಕ್ರಿಕೆಟ್ ನಿಂದ ದೂರವಿದ್ದ ರಿಷಭ್ ಪಂತ್ ಅವರು ಮತ್ತೆ ಬ್ಯಾಟ್ ಹಿಡಿದಿದ್ದಾರೆ.

ಈ ಬಾರಿಯ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಟೂರ್ನಿಯ ಮೂಲಕ ಮತ್ತೆ ಕಣಕ್ಕೆ ಮರಳಲಿದ್ದಾರೆ. ಡೆಲ್ಲಿ ಕ್ಯಾಪಿಟಲ್ ತಂಡವನ್ನು ಮುನ್ನಡೆಸಲು ಸಿದ್ಧವಾಗಿರುವ ಅವರು ನೆಟ್ಸ್ ಅಭ್ಯಾಸ ಆರಂಭಿಸಿದ್ದಾರೆ.

'ರಿಷಭ್ ನೆಟ್ಸ್‌ನಲ್ಲಿ ಬ್ಯಾಟಿಂಗ್ ಮಾಡುತ್ತಿದ್ದ ರೀತಿಯು ಮೊದಲಿನಂತೆಯೇ ಇತ್ತು. ಅವರು ಸುದೀರ್ಘ ಅವದಿಯಿಂದ ಕ್ರಿಕೆಟ್‌ನಿಂದ ದೂರವಿದ್ದು ಬಂದಿದ್ದಾರೆ ಎಂಬ ಭಾವನೆಯೇ ನಮಗೆ ಬರಲಿಲ್ಲ. ವೈಯಕ್ತಿಕವಾಗಿ ನನಗೆ ಹಾಗೂ ನಮ್ಮ ಕೋಚಿಂಗ್ ಪಡೆಗೆ ರಿಷಭ್ ಅವರ ಆಟದಲ್ಲಿ ಯಾವುದೇ ವ್ಯತ್ಯಾಸ ಕಾಣಲಿಲ್ಲ' ಎಂದು ಕೋಚ್ ಪ್ರವೀಣ್ ಆಮ್ರೆ ಹೇಳಿದ್ದಾರೆ.

'ಅತ್ಯಂತ ಕಠಿಣ ಪರಿಸ್ಥಿತಿಯನ್ನು ಎದುರಿಸಿದ ರಿಷಭ್ ಅಪಾರ ಶ್ರಮವಹಿಸಿ ಮತ್ತೆ ಸಿದ್ಧರಾಗಿದ್ದಾರೆ. ಅವರ ಪ್ರಯತ್ನಗಳನ್ನು ಮೆಚ್ಚಲೇಬೇಕು. ಒಂದು ವರ್ಷದುದ್ದಕ್ಕೂ ಗಾಯದ ಚೇತರಿಕೆ ಮತ್ತು ಫಿಟ್‌ನೆಸ್ ಮರಳಿ ಗಳಿಸುವ ಪ್ರಯತ್ನ ಸಣ್ಣದಲ್ಲ' ಎಂದು ಆಮ್ರೆ ಹೇಳಿದರು.

ವಿಶಾಖಪಟ್ಟಣದಲ್ಲಿ ಗುರುವಾರ ಅಭ್ಯಾಸ ನಡೆಸಿದ ಡೆಲ್ಲಿ ಕ್ಯಾಪಿಟಲ್ಸ್ ತಂಡದ ರಿಷಭ್ ಪಂತ್ –ಪಿಟಿಐ ಚಿತ್ರ

ಡೆಲ್ಲಿ ತಂಡವು ತನ್ನ ಮೊದಲೆರಡೂ ಪಂದ್ಯಗಳನ್ನು ವಿಶಾಖಪಟ್ಟಣದಲ್ಲಿ ಆಡಲಿದೆ. ದೆಹಲಿಯ ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ಮಹಿಳಾ ಪ್ರೀಮಿಯರ್ ಲೀಗ್ ಟೂರ್ನಿಯ ಪಂದ್ಯಗಳು ನಡೆಯುತ್ತಿವೆ.

'ವಿಶಾಖಪಟ್ಟಣದ ಮೈದಾನದಲ್ಲಿ ಯಾವಾಗಲೂ ದೊಡ್ಡ ಸ್ಕೋರ್‌ಗಳು ದಾಖಲಾಗಿವೆ. ನಮಗೂ ಅಂತಹ ಪಿಚ್‌ಗಳೇ ಬೇಕು' ಎಂದೂ ಹೇಳಿದರು.

ಐಪಿಎಲ್: ಹಿಂದೆ ಸರಿದ ಬ್ರೂಕ್

ಲಂಡನ್ (ಎಎಫ್‌ಪಿ): ಇಂಗ್ಲೆಂಡ್‌ನ ಬ್ಯಾಟರ್ ಹ್ಯಾರಿ ಬ್ರೂಕ್ ಅವರು ತಮ್ಮ ಅಜ್ಜಿಯ ಸಾವಿನ ಕಾರಣದಿಂದ ಇಂಡಿಯನ್ ಪ್ರೀಮಿಯರ್ ಲೀಗ್‌ನಿಂದ ಹಿಂದೆ ಸರಿದಿದ್ದಾರೆ. ಬ್ರೂಕ್ ಅವರನ್ನು ಡೆಲ್ಲಿ ಕ್ಯಾಪಿಟಲ್ಸ್ ಸುಮಾರು ₹4 ಕೋಟಿ ಕೊಟ್ಟು ತನ್ನ ತೆಕ್ಕೆಗೆ ತೆಗೆದುಕೊಂಡಿತ್ತು. 'ಮುಂಬರುವ ಐಪಿಎಲ್‌ನಲ್ಲಿ ನಾನು ಆಡುವುದಿಲ್ಲ ಎಂಬ ಕಠಿಣ ನಿರ್ಧಾರ ಕೈಗೊಂಡಿರುವುದನ್ನು ಖಚಿತಪಡಿಸಿರುವೆ' ಎಂದು ಬ್ರೂಕ್ ಇನ್‌ಸ್ಟಾಗ್ರಾಮ್‌ನಲ್ಲಿ ಬರೆದಿದ್ದಾರೆ.

ಬ್ರೂಕ್ ಅವರು ವೈಯಕ್ತಿಕ ಕಾರಣ ನೀಡಿ ಭಾರತ ಪ್ರವಾಸ ಕೈಗೊಂಡಿದ್ದ ಇಂಗ್ಲೆಂಡ್ ತಂಡದಿಂದ ಹಿಂದೆಸರಿದಿದ್ದರು. ಅಜ್ಜಿಯ ಚಿಂತಾಜನಕ ಸ್ಥಿತಿಯ ಕಾರಣ ತಂಡದ ಜೊತೆ ಹೋಗಿರಲಿಲ್ಲ ಎಂದು ಈಗ ಬಹಿರಂಗಪಡಿಸಿದ್ದಾರೆ.

ರಾಯಲ್ ಚಾಲೆಂಜರ್ಸ್ ಸಿದ್ಧತೆ ಶುರು

ಬೆಂಗಳೂರು: ಅಪಾರ ಸಂಖ್ಯೆಯ ಅಭಿಮಾನಿಗಳನ್ನು ಹೊಂದಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಗುರುವಾರದಿಂದ ಅಭ್ಯಾಸ ಆರಂಭಿಸಿತು.

ಆದರೆ ತಾರೆ ವಿರಾಟ್ ಕೊಹ್ಲಿ ಅವರು ಇನ್ನೂ ಉದ್ಯಾನನಗರಿಗೆ ಬಂದಿಳಿದಿಲ್ಲ. ಇದೇ 22ರಿಂದ ನಡೆಯಲಿರುವ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ ಉದ್ಘಾಟನೆ ಪಂದ್ಯದಲ್ಲಿ ಆರ್‌ಸಿಬಿ ತಂಡವು ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧ ಆಡಲಿದೆ. ತಂಡದ ಮುಖ್ಯ ಕೋಚ್ ಆ್ಯಂಡಿ ಫ್ಲವರ್ ಮತ್ತು ಕ್ರಿಕೆಟ್ ನಿರ್ದೇಶಕ ಮೊ ಬೊಬಾಟ್ ಅವರ ಮಾರ್ಗದರ್ಶನದಲ್ಲಿ ಚಿನ್ನಸ್ವಾಮಿ ಕ್ರೀಡಾಂಗಣದ ಬಿ ಗ್ರೌಂಡ್‌ನಲ್ಲಿ ಆಟಗಾರರು ಅಭ್ಯಾಸ ನಡೆಸಿದರು.ಈ ಸಂದರ್ಭದಲ್ಲಿ ನಾಯಕ ಫಫ್ ಡುಪ್ಲೆಸಿ, ವೇಗದ ಬೌಲರ್ ಅಲ್ಜರಿ ಜೋಸೆಫ್ ಮತ್ತು ಆಟಗಾರರು ಇದ್ದರು.

ಕಳೆದ ಹರಾಜು ಪ್ರಕ್ರಿಯೆಯಲ್ಲಿ ವೆಸ್ಟ್ ಇಂಡೀಸ್ ತಂಡದ ಜೋಸೆಫ್ ಅವರನ್ನು ಆರ್‌ಸಿಬಿ ತಂಡವು ₹ 11.50 ಕೋಟಿಗೆ ಖರೀದಿಸಿತ್ತು. ಕನ್ನಡಿಗ ವೈಶಾಖ ವಿಜಯಕುಮಾರ್, ಮನೋಜ್ ಬಾಂಢಗೆ ಅವರೂ ಅಭ್ಯಾಸ ಮಾಡಿದರು.

ಕ್ರಿಕೆಟ್: ನಿಶ್ಚಲ್ ಶತಕ

ಬೆಂಗಳೂರು: ಬ್ಯಾಟರ್ ಡಿ. ನಿಶ್ಚಲ್ (107, 156ಎಸೆತ, 4X19) ಅವರು ಚೆಂದದ ಶತಕ ಗಳಿಸಿದರು. ಆದರೂ ಸಸ್ಸೆಕ್ಸ್ ಕ್ಲಬ್ ವಿರುದ್ಧ ಕೆಎಸ್‌ಸಿಎ ಇಲೆವನ್ ದೊಡ್ಡ ಮೊತ್ತ ಗಳಿಸುವಲ್ಲಿ ವಿಫಲವಾಯಿತು.

ಆಲೂರಿನ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ಕೌಂಟಿ ಕ್ರಿಕೆಟ್ ಕ್ಲಬ್ ಸಸ್ಸೆಕ್ಸ್ ಎದುರು ಗುರುವಾರ ಆರಂಭದ ಪಂದ್ಯದಲ್ಲಿ ಕರ್ನಾಟಕ ತಂಡವು 49.1 ಓವರ್‌ಗಳಲ್ಲಿ 201 ರನ್‌ಗಳನ್ನು ಗಳಿಸಿತು.

ಪ್ರವಾಸಿ ತಂಡದ ವೇಗಿ ಡ್ಯಾನಿ ಲ್ಯಾಂಬ್ (25ಕ್ಕೆ4) ಅವರು ಪರಿಣಾಮಕಾರಿ ದಾಳಿ ನಡೆಸಿದರು

ಇದಕ್ಕೆ ಪ್ರತಿಕ್ರಿಯೆಯಾಗಿ ಇನಿಂಗ್ಸ್ ಆರಂಭಿಸಿರುವ ಪ್ರವಾಸಿ ಬಳಗವು ದಿನದಾಟದ ಮುಕ್ತಾಯಕ್ಕೆ 2 ವಿಕೆಟ್‌ಗಳ ನಷ್ಟಕ್ಕೆ 185 ರನ್ ಗಳಿಸಿದೆ.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಕೆಎಸ್‌ಸಿಎ ಇಲೆವನ್: 49.1 ಓವರ್‌ಗಳಲ್ಲಿ 201 (ಡಿ. ನಿಶ್ಚಲ್ 107, ಡ್ಯಾನಿ ಲ್ಯಾಂಬ್ 25ಕ್ಕೆ4, ಹೆನ್ರಿ ಕ್ರೊಕಾಂಬ್ 23ಕ್ಕೆ2, ಜ್ಯಾಕ್ ಕಾರ್ಸನ್ 49ಕ್ಕೆ2, ಆರ್ಕಿ ಲೆನ್ಹಾಮ್ 37ಕ್ಕೆ2) ಸಸ್ಸೆಕ್ಸ್ : 2 ವಿಕೆಟ್‌ಗಳಿಗೆ 185 (ಟಾಮ್ ಕ್ಲಾರ್ಕ್ 41, ಟಾಮ್ ಅಲ್ಸೂಪ್ ಬ್ಯಾಟಿಂಗ್ 51, ಜೇಮ್ಸ್ ಕೋಲ್ಸ್ ಬ್ಯಾಟಿಂಗ್ 66)

ಡಬ್ಲ್ಯುಪಿಎಲ್: ಇಂದು ಪ್ಲೇಆಫ್

ನವದೆಹಲಿ: ಹಾಲಿ ಚಾಂಪಿಯನ್ ಮುಂಬೈ ಇಂಡಿಯನ್ಸ್ ತಂಡ, ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆಯಲಿರುವ ಮಹಿಳಾ ಪ್ರೀಮಿಯರ್ ಲೀಗ್‌ನ ಪ್ಲೇ ಆಫ್ ಪಂದ್ಯದಲ್ಲಿ ರಾಯಲ್ ಚಾಲೆಂಜರ್ಸ್ ತಂಡವನ್ನು ಎದುರಿಸಲಿದೆ. ಆರ್‌ಸಿಬಿಗೆ ಇದು ಮೊದಲ ಪ್ಲೇ ಆಫ್ ಪಂದ್ಯವಾಗಿದ್ದು ತೀವ್ರ ಪೈಪೋಟಿ ನಿರೀಕ್ಷಿಸಲಾಗಿದೆ. ಐದು ತಂಡಗಳ ಲೀಗ್‌ನಲ್ಲಿ ಹರ್ಮನ್‌ಪ್ರೀತ್ ಕೌರ್ ನೇತೃತ್ವದ ಮುಂಬೈ ಎರಡನೇ ಮತ್ತು ಸ್ಮೃತಿ ಮಂದಾನ ನೇತೃತ್ವದ ಆರ್‌ಸಿಬಿ ಮೂರನೇ ಸ್ಥಾನ ಪಡೆದು ಪ್ಲೇ ಆಫ್‌ಗೆ ಅರ್ಹತೆ ಪಡೆದಿದ್ದವು. ಈ ಪಂದ್ಯದ ವಿಜೇತ ತಂಡವು, ಲೀಗ್‌ನಲ್ಲಿ ಮೊದಲ ಸ್ಥಾನ ಪಡೆದ ಡೆಲ್ಲಿ ಕ್ಯಾಪಿಟಲ್ಸ್ ತಂಡವನ್ನು ಭಾನುವಾರ ನಡೆಯುವ ಫೈನಲ್‌ನಲ್ಲಿ ಎದುರಿಸಲಿದೆ.

ಗಾಯಗೊಂಡು ಒಂದು ಪಂದ್ಯ ಕಳೆದುಕೊಂಡಿದ್ದ ಯಷ್ಟಿಕಾ ಭಾಟಿಯಾ ಮುಂಬೈ ಇಂಡಿಯನ್ಸ್ ತಂಡಕ್ಕೆ ಮರಳಲಿದ್ದಾರೆ. ಈ ಹಿಂದಿನ ಪಂದ್ಯಗಳಲ್ಲಿ ಗಮನಾರ್ಹ ಪ್ರದರ್ಶನ ನೀಡಿರುವ ಸ್ಮೃತಿ ಮಂದಾನ, ರಿಚಾ ಘೋಷ್ ಮತ್ತು ಎಲ್ಲಿಸ್ ಪೆರಿ ಅವರಿಂದ ಆರ್‌ಸಿಬಿ ಆತ್ಮವಿಶ್ವಾಸದಲ್ಲಿದೆ.

ಸಿಎಎ ಕುರಿತು ದೆಹಲಿ ಸಿ.ಎಂ ಹೇಳಿಕೆ ಖಂಡಿಸಿದ ಹಿಂದೂ, ಸಿಖ್ ನಿರಾಶ್ರಿತರು

ಅರವಿಂದ ಕೇಜ್ರಿವಾಲ್ ಮನೆ ಬಳಿ ಪ್ರತಿಭಟನೆ

ನವದೆಹಲಿ (ಪಿಟಿಐ): ಪೌರತ್ವ ತಿದ್ದುಪಡಿ ಕಾಯ್ದೆ (ಸಿಎಎ) ಮತ್ತು ನಿರಾಶ್ರಿತರ ವಿರುದ್ಧ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ನೀಡಿರುವ ಹೇಳಿಕೆಗಳನ್ನು ಹಿಂಪಡೆದು, ಕ್ಷಮೆಯಾಚಿಸಬೇಕು ಎಂದು ಆಗ್ರಹಿಸಿ ಅವರ ಸಿವಿಲ್ ಲೈನ್ಸ್ ನಿವಾಸದ ಬಳಿ ಹಿಂದೂ ಮತ್ತು ಸಿಖ್ ನಿರಾಶ್ರಿತರು ಪ್ರತಿಭಟನೆ ನಡೆಸಿದರು.

ದೆಹಲಿಯ ವಿವಿಧೆಡೆ ನೆಲೆಸಿರುವ ಹಿಂದೂ, ಸಿಖ್ ನಿರಾಶ್ರಿತರು ಚಂದಗೀರಾಮ್ ಅಖಾಡ ಬಳಿ ಜಮಾಯಿಸಿ, ಕೇಜ್ರಿವಾಲ್ ಅವರ ಬಂಗಲೆಯತ್ತ ಪ್ರತಿಭಟನಾ ಮೆರವಣಿಗೆ ನಡೆಸಲು ಮುಂದಾದರು. ಆಗ ಪೊಲೀಸರು ಅವರನ್ನು ತಡೆದರು.

'ಪ್ರಧಾನಿ ನರೇಂದ್ರ ಮೋದಿ ಅವರು ನಮಗೆ ಪೌರತ್ವ ನೀಡುತ್ತಿದ್ದರೆ, ಕೇಜ್ರಿವಾಲ್ ಅವರು ನಮಗೆ ಉದ್ಯೋಗ, ಮನೆ ಯಾರು ಕೊಡುತ್ತಾರೆ ಎಂದು ಕೇಳುತ್ತಿದ್ದಾರೆ. ಅವರಿಗೆ ನಮ್ಮ ನೋವು ಅರ್ಥವಾಗುತ್ತಿಲ್ಲ' ಎಂದು ಪ್ರತಿಭಟನಕಾರ ಪಂಜುರಾಮ್ ಅವರು ಹೇಳಿದರು.

ದೆಹಲಿಯ ರೋಹಿಣಿ, ಆದರ್ಶನಗರ, ಸಿಗ್ನೇಚರ್ ಬ್ರಿಡ್ಜ್ ಬಳಿ ಹಾಗೂ ಮಜ್ನು ಕಾ ತಿಲ್ಲಾದಲ್ಲಿ ನೆಲೆಸಿರುವ ಹಿಂದೂ, ಸಿಖ್ ನಿರಾಶ್ರಿತರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಕೇಜ್ರಿವಾಲ್ ತಿರುಗೇಟು: 'ಪಾಕಿಸ್ತಾನಿಗಳಿಗೆ ಪೂರ್ಣ ಪೊಲೀಸ್ ರಕ್ಷಣೆ ಮತ್ತು ಗೌರವದೊಂದಿಗೆ ನನ್ನ ಮನೆಯ ಹೊರಗೆ ಪ್ರತಿಭಟಿಸಲು ಅವಕಾಶ ನೀಡಲಾಗಿದೆ. ಆದರೆ ದೇಶದ ರೈತರಿಗೆ ದೆಹಲಿಗೆ ಬರಲು ಯಾಕೆ ಅನುಮತಿ ನೀಡುತ್ತಿಲ್ಲ? ಭಾರತೀಯ ರೈತರ ಮೇಲೆ ಅಶ್ರುವಾಯು ಶೆಲ್‌ಗಳು, ಲಾಠಿ ಮತ್ತು ಗುಂಡುಗಳು ಹಾರುತ್ತವೆ. ಆದರೆ ಪಾಕಿಸ್ತಾನಿಗಳಿಗೆ ಹೇಗೆ ಭಾರಿ ಗೌರವ?' ಎಂದು ಕೇಜ್ರಿವಾಲ್ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ದೆಹಲಿಯಲ್ಲಿನ ಹಿಂದೂ ಮತ್ತು ಸಿಖ್ ನಿರಾಶ್ರಿತರು ಗುರುವಾರ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರ ಸಿವಿಲ್ ಲೈನ್ಸ್ ನಿವಾಸದ ಬಳಿ ಪ್ರತಿಭಟನೆ ನಡೆಸಿದರು –ಪಿಟಿಐ ಚಿತ್ರ

'ಅಪಾರ ಸಂಖ್ಯೆಯ ಜನ ಬರುತ್ತಾರೆ'

ಸಿಎಎ ಅನುಷ್ಠಾನದ ಮೂಲಕ ಬಿಜೆಪಿಯು ಪಕ್ಕದ ಮುಸ್ಲಿಂ ದೇಶಗಳ ಅಲ್ಪಸಂಖ್ಯಾತರಿಗೆ ಭಾರತದ ಬಾಗಿಲು ತೆರೆದಿದೆ. ಇದರಿಂದ ಊಹಿಸಲು ಆಗದಷ್ಟು ಸಂಖ್ಯೆಯ ಜನರು ಭಾರತಕ್ಕೆ ಬರುತ್ತಾರೆ ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಗುರುವಾರ ಸುದ್ದಿಗಾರರಿಗೆ ತಿಳಿಸಿದರು.

'ಅಮಿತ್ ಶಾ ಅವರು ನನ್ನನ್ನು ಭ್ರಷ್ಟ ಎನ್ನುತ್ತಾರೆ. ಆದರೆ ನಾನು ಮುಖ್ಯ ಅಲ್ಲ, ದೇಶ ಮುಖ್ಯ. ಸಿಎಎ ಕುರಿತು ನಾನು ಎತ್ತಿರುವ ಪ್ರಶ್ನೆಗಳಿಗೆ ಗೃಹ ಸಚಿವರು ಉತ್ತರಿಸಿಲ್ಲ. ಬದಲಿಗೆ ನನ್ನನ್ನು ನಿಂದಿಸಿದ್ದಾರೆ' ಎಂದು ಅವರು ಹೇಳಿದರು.

'2014ರ ನಂತರ ಆ ದೇಶಗಳ ಜನರು ಭಾರತ ಪ್ರವೇಶಿಸುವುದನ್ನು ನಿಲ್ಲಿಸಿದ್ದಾರೆಯೇ? ಈ ಹಿಂದೆ ನುಸುಳುಕೋರರಾಗಿ ಬಂದು ಸಿಕ್ಕಿಬಿದ್ದರೆ ಶಿಕ್ಷೆಗೆ ಗುರಿಯಾಗುತ್ತೇವೆ ಎಂದು ಅವರು ಹೆದರುತ್ತಿದ್ದರು. ಆದರೆ ಸಿಎಎ ಅವರ ಆ ಭಯವನ್ನು ಹೋಗಲಾಡಿಸುತ್ತದೆ' ಎಂದ ಅವರು, 'ನುಸುಳುಕೋರರು ಇನ್ನೂ ದೇಶವನ್ನು ಪ್ರವೇಶಿಸುತ್ತಿದ್ದಾರೆ' ಎಂದು ದೂರಿದರು.

'ನಿಮ್ಮ (ಬಿಜೆಪಿ) ಆಡಳಿತದಲ್ಲಿಯೇ ರೋಹಿಂಗ್ಯಾ ಸಮುದಾಯದವರು ಭಾರತಕ್ಕೆ ಬಂದರಲ್ಲ' ಎಂದ ಅವರು, 'ಪಾಕ್ ನುಸುಳುಕೋರರಿಗೆ ಉದ್ಯೋಗ ಮತ್ತು ಪಡಿತರ ಚೀಟಿಗಳನ್ನು ನೀಡುತ್ತೀರಾ' ಎಂದು ಪ್ರಶ್ನಿಸಿದರು. 'ಇತರ ದೇಶಗಳ ಅಲ್ಪಸಂಖ್ಯಾತರಿಗಾಗಿ ನಮ್ಮ ದೇಶದ ಜನರ ತೆರಿಗೆದಾರರ ಹಣವನ್ನು ಖರ್ಚು ಮಾಡುವುದನ್ನು ಒಪ್ಪಲಾಗದು' ಎಂದು ಅವರು ಹೇಳಿದರು.

'ಬಿಜೆಪಿಯು ಅಫ್ಗಾನಿಸ್ತಾನ, ಪಾಕಿಸ್ತಾನ, ಬಾಂಗ್ಲಾದೇಶದ ಅಲ್ಪಸಂಖ್ಯಾತರಿಗೆ ಸಿಎಎ ಅಡಿ ಪೌರತ್ವ ನೀಡುವ ಮೂಲಕ ತನ್ನ ಮತ ಬ್ಯಾಂಕ್ ಸೃಷ್ಟಿಸಲು ಮುಂದಾಗಿದೆ. ಹೀಗೆ ಪೌರತ್ವ ಪಡೆಯುವವರಿಗೆ ಉದ್ಯೋಗ, ಮನೆಗಳನ್ನೂ ನೀಡಲಾಗುತ್ತದೆ. ಇದು ಸ್ಥಳೀಯರ ಮೇಲೆ ಪರಿಣಾಮ ಬೀರುತ್ತದೆ' ಎಂದು ಕೇಜ್ರಿವಾಲ್ ಬುಧವಾರ ಸುದ್ದಿಗೋಷ್ಠಿಯಲ್ಲಿ ಆರೋಪಿಸಿದ್ದರು.

ಒಂದೂ ಅರ್ಜಿ ಸಲ್ಲಿಕೆಯಾಗಿಲ್ಲ (ಗುವಾಹಟಿ ವರದಿ): ಸಿಎಎ ಅಡಿ ಪೌರತ್ವಕ್ಕೆ ಅರ್ಜಿ ಸಲ್ಲಿಸುವ ಪೋರ್ಟಲ್‌ನಲ್ಲಿ ಇಲ್ಲಿಯವರೆಗೆ ರಾಜ್ಯದಿಂದ ಒಂದೂ ಅರ್ಜಿಯೂ ಸಲ್ಲಿಕೆಯಾಗಿಲ್ಲ ಎಂದು ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ತಿಳಿಸಿದ್ದಾರೆ. ರಾಜ್ಯದಲ್ಲಿ ಎನ್‌ಆರ್‌ಸಿಯಲ್ಲಿ ಬಹುತೇಕರು ನೋಂದಾಯಿಸಿರುವ ಕಾರಣ, ಸಿಎಎ ಅಡಿ ಪೌರತ್ವ ಪಡೆಯುವವರ ಸಂಖ್ಯೆ ಅತಿ ಕಡಿಮೆ ಆಗಿರುತ್ತದೆ ಎಂದು ಅವರು ಹೇಳಿದ್ದಾರೆ.

'ಕಾಂಗ್ರೆಸ್ ಪ್ರತಿಕ್ರಿಯೆ ನಿರಾಶೆ ಮೂಡಿಸಿದೆ'

ಪ್ರಜಾವಾಣಿ ವಾರ್ತೆ

ತಿರುವನಂತಪುರ: ಪೌರತ್ವ ತಿದ್ದುಪಡಿ ಕಾಯ್ದೆ (ಸಿಎಎ) ಕುರಿತು ಕಾಂಗ್ರೆಸ್‌ನ ರಾಷ್ಟ್ರೀಯ ನಾಯಕತ್ವದ ಪ್ರತಿಕ್ರಿಯೆ ಬಹಳ ನಿರಾಶಾದಾಯಕವಾಗಿದೆ ಎಂದು ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಗುರುವಾರ ಟೀಕಿಸಿದ್ದಾರೆ.

ಪಿಣರಾಯಿ ವಿಜಯನ್

ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಸಿಎಎ ಕುರಿತು ತಮಗೆ ಗೊತ್ತಿಲ್ಲ ಎಂಬಂತೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ವರ್ತಿಸುತ್ತಿದ್ದರೆ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ನೆಪಮಾತ್ರಕ್ಕೆ ಎಂಬಂತೆ ಸಾಮಾಜಿಕ ಮಾಧ್ಯಮಗಳಲ್ಲಿ ಪ್ರತಿಕ್ರಿಯೆ ನೀಡಿದ್ದಾರೆ' ಎಂದರು.

'ಚುನಾವಣೆ ಲಾಭದ ಉದ್ದೇಶದಿಂದ, ಸಿಎಎ ವಿಚಾರವಾಗಿ ಸಿಪಿಎಂ ಪಕ್ಷ ಮುಸ್ಲಿಂ ಓಲೈಕೆಯಲ್ಲಿ ತೊಡಗಿದೆ' ಎಂಬ ಬಿಜೆಪಿಯ ಆರೋಪಕ್ಕೆ ತಿರುಗೇಟು ನೀಡಿದ ಅವರು, 'ತನ್ನ ಚುನಾವಣಾ ಲಾಭಕ್ಕಾಗಿಯೇ ಬಿಜೆಪಿಯು ಕೋಮುಗಳ ವಿಭಜನೆಗೆ ಯತ್ನಿಸುತ್ತಿದೆ' ಎಂದರು.

'ಏಕಕಾಲಕ್ಕೆ ಚುನಾವಣೆ'

ಒಂದನೇ ಪುಟದಿಂದ

2023ರ ಸೆಪ್ಟೆಂಬರ್ 2ರಿಂದ 191 ದಿನಗಳ ಸಂಶೋಧನೆ, ಅಭಿಪ್ರಾಯ ಸಂಗ್ರಹ, ಸಮಾಲೋಚನೆಯ ಬಳಿಕ ಸಮಿತಿಯು 18,626 ಪುಟಗಳ ವರದಿ ಸಿದ್ಧಪಡಿಸಿದೆ. ಆದರೆ, ಇದರಲ್ಲಿ 321 ಪುಟಗಳ ಮಾಹಿತಿಯನ್ನು ಮಾತ್ರ ಬಹಿರಂಗಪಡಿಸಿದೆ.

2029ರಲ್ಲಿ ಏಕಕಾಲದಲ್ಲಿ ಚುನಾವಣೆ ನಡೆಸುವ ಸಂಬಂಧ ಕಾನೂನು ಆಯೋಗವು ಶೀಘ್ರದಲ್ಲೇ ಪ್ರತ್ಯೇಕ ಶಿಫಾರಸು ಮಾಡುವ ಸಾಧ್ಯತೆಯಿದೆ. ಆದರೆ ಕೋವಿಂದ್ ನೇತೃತ್ವದ ಸಮಿತಿಯು ಹೊಸ ವ್ಯವಸ್ಥೆ ಯಾವಾಗಿನಿಂದ ಜಾರಿಯಾಗಬೇಕು ಎಂಬುದನ್ನು ಸ್ಪಷ್ಟಪಡಿಸಿಲ್ಲ.

'ಏಕಕಾಲದಲ್ಲಿ ಚುನಾವಣೆ ನಡೆಸುವುದರಿಂದ ಸಮಾಜದಲ್ಲಿ ಒಗ್ಗಟ್ಟು ಮೂಡಲು ಕಾರಣವಾಗುತ್ತದೆಯಲ್ಲದೆ, ದೇಶದ ಅಭಿವೃದ್ಧಿಯ ವೇಗ ಹೆಚ್ಚಲಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯ ತಳಹದಿಯನ್ನು ಇನ್ನಷ್ಟು ಭದ್ರಪಡಿಸಲಿದೆ. ಇದು 'ಇಂಡಿಯಾ, ಅಂದರೆ ಭಾರತ'ದ ಆಶಯವನ್ನು ಸಾಕಾರಗೊಳಿಸುತ್ತದೆ' ಎಂದು ವರದಿಯಲ್ಲಿ ಹೇಳಲಾಗಿದೆ.

'ಈಗ ಪ್ರತಿವರ್ಷ ಹಲವಾರು ಚುನಾವಣೆಗಳು ನಡೆಯುತ್ತಿವೆ. ಇದರಿಂದಾಗಿ ಸರ್ಕಾರ, ಚುನಾವಣಾ ಸಿಬ್ಬಂದಿ, ನ್ಯಾಯಾಲಯಗಳು, ರಾಜಕೀಯ ಪಕ್ಷಗಳು, ಚುನಾವಣೆಯಲ್ಲಿ ಸ್ಪರ್ಧಿಸುವ ಅಭ್ಯರ್ಥಿಗಳು ಮತ್ತು ಸಾಮಾನ್ಯ ಜನರ ಮೇಲೆ ಹೆಚ್ಚಿನ ಹೊರೆ ಬೀಳುತ್ತದೆ' ಎಂದು ಅಭಿಪ್ರಾಯಪಟ್ಟಿದೆ.

'ಸಮಿತಿಯು ಸಂವಿಧಾನದ ಮೂಲ ಆಶಯಗಳಿಗೆ ಧಕ್ಕೆಯಾಗದ ರೀತಿಯಲ್ಲಿ ಶಿಫಾರಸುಗಳನ್ನು ರೂಪಿಸಿದೆ. ಹೊಸ ವ್ಯವಸ್ಥೆಯ ಜಾರಿಗೆ ಸಂವಿಧಾನಕ್ಕೆ ಕನಿಷ್ಠ ತಿದ್ದುಪಡಿಗಳಷ್ಟೇ ಸಾಕು' ಎಂದು ಅಧಿಕೃತ ಪ್ರಕಟಣೆಯಲ್ಲಿ ಹೇಳಿದೆ.

ವಿವಿಧ ದೇಶಗಳ ಚುನಾವಣಾ ಪ್ರಕ್ರಿಯೆ ಅಧ್ಯಯನ: ಕೋವಿಂದ್ ನೇತೃತ್ವದ ಸಮಿತಿಯು ಏಕಕಾಲದಲ್ಲಿ ಚುನಾವಣೆ ನಡೆಸುವ ವ್ಯವಸ್ಥೆ ಜಾರಿಯಲ್ಲಿರುವ ಏಳು ದೇಶಗಳ ಚುನಾವಣಾ ಪ್ರಕ್ರಿಯೆಯ ಅಧ್ಯಯನ ನಡೆಸಿದೆ. ದಕ್ಷಿಣ ಆಫ್ರಿಕಾ, ಸ್ವೀಡನ್, ಬೆಲ್ಜಿಯಂ, ಜರ್ಮನಿ, ಜಪಾನ್, ಫಿಲಿಪ್ಪೀನ್ಸ್ ಮತ್ತು ಬೆಲ್ಜಿಯಂನಲ್ಲಿ ಈ ವ್ಯವಸ್ಥೆ ಜಾರಿಯಲ್ಲಿದೆ. ಇಂಡೊನೇಷ್ಯಾದಲ್ಲಿ ಇದೇ ವರ್ಷದ ಫೆಬ್ರುವರಿಯಲ್ಲಿ ಏಕಕಾಲದಲ್ಲಿ ಚುನಾವಣೆ ನಡೆದಿತ್ತು.

ಕೋವಿಂದ್ ಅವರು ರಾಷ್ಟ್ರಪತಿಗೆ ವರದಿ ಸಲ್ಲಿಸುವ ಸಮಯದಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ, ಹಣಕಾಸು ಆಯೋಗದ ಮಾಜಿ ಅಧ್ಯಕ್ಷ ಎನ್.ಕೆ.ಸಿಂಗ್, ಲೋಕಸಭೆಯ ಮಾಜಿ ಪ್ರಧಾನ ಕಾರ್ಯದರ್ಶಿ ಸುಭಾಷ್ ಕಶ್ಯಪ್, ರಾಜ್ಯಸಭೆಯ ವಿರೋಧ ಪಕ್ಷದ ಮಾಜಿ ನಾಯಕ ಗುಲಾಂ ನಬಿ ಆಜಾದ್ ಮತ್ತು ಕಾನೂನು ಸಚಿವ ಅರ್ಜುನ್ ರಾಮ್ ಮೇಘವಾಲ್ ಅವರು ಜತೆಗಿದ್ದರು.

ನಿವೃತ್ತ ಮುಖ್ಯ ನ್ಯಾಯಮೂರ್ತಿಗಳ ವಿರೋಧ

'ಒಂದು ದೇಶ, ಒಂದು ಚುನಾವಣೆ' ಪರಿಕಲ್ಪನೆಗೆ ವಿರೋಧ ವ್ಯಕ್ತಪಡಿಸಿದವರಲ್ಲಿ ಹೈಕೋರ್ಟ್‌ನ ಮೂವರು ನಿವೃತ್ತ ಮುಖ್ಯ ನ್ಯಾಯಮೂರ್ತಿಗಳು ಸೇರಿದ್ದಾರೆ. ಸಮಿತಿಯು ಹೈಕೋರ್ಟ್‌ನ ಒಟ್ಟು 12 ಮಂದಿ ನಿವೃತ್ತ ಮುಖ್ಯ ನ್ಯಾಯಮೂರ್ತಿಗಳ ಅಭಿಪ್ರಾಯ ಕೇಳಿತ್ತು. ಅದರಲ್ಲಿ ಒಂಬತ್ತು ಮಂದಿ ಬೆಂಬಲ ಸೂಚಿಸಿದ್ದಾರೆ.

ದೆಹಲಿ ಹೈಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿ ಅಜಿತ್ ಪ್ರಕಾಶ್ ಶಾ, ಕಲ್ಕತ್ತಾ ಹೈಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿ ಗಿರೀಶ್ ಚಂದ್ರ ಗುಪ್ತಾ ಮತ್ತು ಮದ್ರಾಸ್ ಹೈಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿ ಸಂಜೀವ್ ಬ್ಯಾನರ್ಜಿ ಅವರು ವಿರೋಧ ವ್ಯಕ್ತಪಡಿಸಿದವರು.

ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿಗಳಾದ ದೀಪಕ್ ಮಿಶ್ರಾ, ರಂಜನ್ ಗೊಗೊಯ್, ಶರದ್ ಅರವಿಂದ್ ಬೊಬ್ಡೆ ಮತ್ತು ಯು.ಯು. ಲಲಿತ್ ಅವರು ಏಕಕಾಲದಲ್ಲಿ ಚುನಾವಣೆ ನಡೆಸುವುದನ್ನು ಬೆಂಬಲಿಸಿದ್ದಾರೆ.

ರಾಮನಾಥ ಕೋವಿಂದ್ ನೇತೃತ್ವದ ಸಮಿತಿಯು ತನ್ನ ವರದಿಯನ್ನು ಸಲ್ಲಿಸಿರುವುದು ದೇಶದ ಪ್ರಜಾಪ್ರಭುತ್ವ ವ್ಯವಸ್ಥೆಗೆ ಐತಿಹಾಸಿಕ ಕ್ಷಣ

ಅಮಿತ್ ಶಾ
ಗೃಹ ಸಚಿವ

'ಒಂದು ದೇಶ, ಒಂದು ಚುನಾವಣೆ'ಯು ಭಾರತದ ಒಕ್ಕೂಟ ವ್ಯವಸ್ಥೆಗೆ ಮರಣಶಾಸನವಾಗಿದೆ. ಭಾರತವನ್ನು 'ಒಂದು ಪಕ್ಷ'ದ ದೇಶವನ್ನಾಗಿಸಲಿದೆ

ಅಸಾದುದ್ದೀನ್ ಒವೈಸಿ
ಎಐಎಂಐಎಂ ಮುಖ್ಯಸ್ಥ

ಬಿಜೆಪಿಯ ನಿಜವಾದ ಗುರಿ 'ಒನ್ ನೇಷನ್, ನೋ ಎಲೆಕ್ಷನ್'. ಆ ಮೂಲಕ ಅಂಬೇಡ್ಕರ್ ಅವರ ಸಂವಿಧಾನವನ್ನು ನಾಶಪಡಿಸಲು ಹೊರಟಿದ

ಜೈರಾಂ ರಮೇಶ್
ಎಐಸಿಸಿ ಪ್ರಧಾನ ಕಾರ್ಯದರ್ಶಿ

ರಾಜಕೀಯ ಲಾಭಕ್ಕೆ ಶರದ್ ಪವಾರ್ ಹೆಸರು, ಭಾವಚಿತ್ರ ಬಳಕೆ ಆರೋಪ

ಅಜಿತ್ ನೇತೃತ್ವದ ಎನ್‌ಸಿಪಿಗೆ 'ಸುಪ್ರೀಂ' ನೋಟಿಸ್

ನವದೆಹಲಿ (ಪಿಟಿಐ): ರಾಜಕೀಯ ಲಾಭಕ್ಕಾಗಿ ಶರದ್ ಪವಾರ್ ಅವರ ಹೆಸರು, ಭಾವಚಿತ್ರ ಬಳಸಲಾಗುತ್ತಿದೆ ಎಂಬ ಆಕ್ಷೇಪ ಕುರಿತು ಪ್ರತಿಕ್ರಿಯಿಸುವಂತೆ ಸುಪ್ರೀಂ ಕೋರ್ಟ್ ಗುರುವಾರ ಅಜಿತ್ ಪವಾರ್ ಬಣಕ್ಕೆ ಸೂಚಿಸಿದೆ.

ಶರದ್ ಪವಾರ್ ಬಣವು ಈ ಸಂಬಂಧ ಅರ್ಜಿ ಸಲ್ಲಿಸಿತ್ತು. ಉಪ ಮುಖ್ಯಮಂತ್ರಿ ಅಜಿತ್ ಪವಾರ್ ನೇತೃತ್ವದ ಬಣಕ್ಕೆ ನೋಟಿಸ್ ನೀಡಿದ ನ್ಯಾಯಪೀಠ, ಪ್ರಕರಣದ ವಿಚಾರಣೆಯನ್ನು ಮಾರ್ಚ್ 19ಕ್ಕೆ ಮುಂದೂಡಿತು.

ಶರದ್ ಪವಾರ್ ಅವರ ಹೆಸರು ಮತ್ತು ಭಾವಚಿತ್ರ ಬಳಸುವುದಿಲ್ಲ ಎಂಬ ಕುರಿತು ಸ್ಪಷ್ಟ ಪ್ರತಿಕ್ರಿಯೆ ಬೇಕು ಎಂದು ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಮತ್ತು ಕೆ.ವಿ.ವಿಶ್ವನಾಥನ್ ಅವರಿದ್ದ ನ್ಯಾಯಪೀಠವು ತಿಳಿಸಿತು.

ಈ ಹಿಂದೆ, ಶರದ್ ಪವಾರ್ ಬಣಕ್ಕೆ 'ರಾಷ್ಟ್ರೀಯವಾದಿ ಕಾಂಗ್ರೆಸ್ ಪಕ್ಷ – ಶರದ್‌ಚಂದ್ರ ಪವಾರ್' ಎಂದು ಹೆಸರು ನೀಡಿ ಚುನಾವಣಾ ಆಯೋಗವು ಫೆ.7ರಂದು ನೀಡಿದ್ದ ಆದೇಶ ಮುಂದಿನ ಆದೇಶದವಗೂ ಚಾಲ್ತಿಯಲ್ಲಿರಲಿದೆ ಎಂದು ತಿಳಿಸಿತು.

ಅಲ್ಲದೆ, ಅಜಿತ್ ಪವಾರ್ ನೇತೃತ್ವದ ಬಣವೇ ನಿಜವಾದ ಎನ್‌ಸಿಪಿ ಎಂದು ಆಯೋಗವು ನೀಡಿದ್ದ ಆದೇಶವನ್ನು ಪ್ರಶ್ನಿಸಿ ಶರದ್ ಪವಾರ್ ಬಣವು ಸಲ್ಲಿಸಿದ್ದ ಅರ್ಜಿ ಕುರಿತು ಪ್ರತಿಕ್ರಿಯೆಯನ್ನು ದಾಖಲಿಸುವಂತೆಯೂ ಸೂಚಿಸಿತು.

ಯಶವಂತರಾವ್ ಹೆಸರುಬಳಸುತ್ತಿದ್ದೇವೆ –ಡಿಸಿಎಂ

ಪುಣೆ (ಪಿಟಿಐ): ಭಾವಚಿತ್ರ ಬಳಕೆ ಕುರಿತು ಶರದ್ ಪವಾರ್ ಬಣದ ಆಕ್ಷೇಪದ ಬಳಿಕ ತಮ್ಮ ನೇತೃತ್ವದ ಎನ್‌ಸಿಪಿಯು ರಾಜ್ಯದ ಪ್ರಥಮ ಮುಖ್ಯಮಂತ್ರಿ ಯಶವಂತರಾವ್ ಚವಾಣ್ ಅವರ ಹೆಸರು, ಭಾವಚಿತ್ರ ಬಳಸುತ್ತಿದೆ ಎಂದು ಉಪ ಮುಖ್ಯಮಂತ್ರಿ ಅಜಿತ್ ಪವಾರ್ ಅವರು ತಿಳಿಸಿದ್ದಾರೆ.

'ಪಕ್ಷ ಇಬ್ಭಾಗವಾದ ಆರಂಭದಲ್ಲಿ ಶರದ್ ಪವಾರ್‌ರ ಹೆಸರು, ಚಿತ್ರ ಬಳಸಲಾಗುತ್ತಿತ್ತು. ಇದಕ್ಕೆ ಆಕ್ಷೇಪ ವ್ಯಕ್ತವಾದ ಬಳಿಕ ನಿಲ್ಲಿಸಿದ್ದು, ಯಶವಂತರಾವ್ ಚವಾಣ್ ಅವರ ಹೆಸರು, ಭಾವಚಿತ್ರ ಬಳಸುತ್ತಿದ್ದೇವೆ. ಇದನ್ನೇ ಮುಂದಿಟ್ಟು ಜನರ ಎದುರು ಹೋಗುತ್ತಿದ್ದೇವೆ' ಎಂದು ಸುದ್ದಿಗಾರರ ಜೊತೆಗೆ ಮಾತನಾಡಿದ ಅವರು ತಿಳಿಸಿದರು.

ಸಂಕ್ಷಿಪ್ತ ಸುದ್ದಿ

ಜೆಇಐ ಕಾನೂನುಬಾಹಿರ ಸಂಘಟನೆ: ನಿರ್ಧರಿಸಲು ನ್ಯಾಯಮಂಡಳಿ ರಚನೆ

ಶ್ರೀನಗರ: ಜಮ್ಮು ಮತ್ತು ಕಾಶ್ಮೀರದಲ್ಲಿ ಸಕ್ರಿಯವಾಗಿದ್ದ ಜಮಾತ್-ಎ-ಇಸ್ಲಾಮಿ (ಜೆಇಐ) ಅನ್ನು ಕಾನೂನುಬಾಹಿರ ಸಂಘಟನೆ ಎಂದು ಘೋಷಿಸಲಾಗಿದ್ದು, ಇದಕ್ಕೆ ಪೂರಕವಾದ ಸಾಕ್ಷ್ಯಗಳಿವೆಯೇ ಎಂಬುದನ್ನು ನಿರ್ಧರಿಸಲು ಸರ್ಕಾರವು ಕಾನೂನುಬಾಹಿರ ಚಟುವಟಿಕೆ (ನಿಯಂತ್ರಣ) ನ್ಯಾಯಮಂಡಳಿಯನ್ನು ರಚಿಸಿ, ಬುಧವಾರ ಅಧಿಸೂಚನೆ ಹೊರಡಿಸಿದೆ.

ದೆಹಲಿ ಹೈಕೋರ್ಟ್ ನ್ಯಾಯಮೂರ್ತಿ ನವೀನ್ ಚಾವ್ಲಾ ನೇತೃತ್ವದಲ್ಲಿ ನ್ಯಾಯಮಂಡಳಿಯನ್ನು ರಚಿಸಲಾಗಿದೆ ಎಂದು ಕೇಂದ್ರ ಗೃಹ ಸಚಿವಾಲಯ ಅಧಿಸೂಚನೆಯಲ್ಲಿ ತಿಳಿಸಿದೆ.

ಜೆಇಐ ಸಂಘಟನೆಗೆ ಭಯೋತ್ಪಾದಕ ಸಂಘಟನೆಗಳ ಜೊತೆಗೆ ಸಂಪರ್ಕವಿದ್ದು, ಕಾನೂನುಬಾಹಿರ ಚಟುವಟಿಕೆಗಳಲ್ಲಿ ತೊಡಗಿದೆ ಎಂಬ ಹಿನ್ನೆಲೆಯಲ್ಲಿ ಐದು ವರ್ಷ ಅವಧಿಗೆ ನಿಷೇಧಿಸಿ ಕೇಂದ್ರ ಸರ್ಕಾರವು ಫೆಬ್ರುವರಿ 27ರಂದು ಅಧಿಸೂಚನೆ ಹೊರಡಿಸಿತ್ತು. ಅದರ ವಿರುದ್ಧ ಒಟ್ಟು 47 ಪ್ರಕರಣಗಳಿವೆ ಎಂದು ಉಲ್ಲೇಖಿಸಿತ್ತು.

ಶಾಜಹಾನ್ ಆಪ್ತ ಉದ್ಯಮಿಗಳ ಮನೆಗಳಲ್ಲಿ ಶೋಧ

ಕೋಲ್ಕತ್ತ (ಪಿಟಿಐ): ಟಿಎಂಸಿಯಿಂದ ಅಮಾನತುಗೊಂಡಿರುವ ಮುಖಂಡ ಶಾಜಹಾನ್ ಶೇಖ್ ಅವರ ಇಬ್ಬರು ಆಪ್ತ ಉದ್ಯಮಿಗಳ ಸಂದೇಶ್‌ಖಾಲಿಯಲ್ಲಿರುವ ಮನೆಗಳಲ್ಲಿ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಗುರುವಾರ ಶೋಧ ನಡೆಸಿದರು.

ಪಡಿತರ ಹಗರಣಕ್ಕೆ ಸಂಬಂಧಿಸಿ ಈ ಶೋಧ ಕಾರ್ಯ ನಡೆದಿದೆ ಎಂದು ಅಧಿಕಾರಿಗಳು ತಿಳಿಸಿದರು. ಉದ್ಯಮಿಯೊಬ್ಬರಿಗೆ ಸೇರಿದ ಮಾರುಕಟ್ಟೆಯಲ್ಲೂ ಶೋಧ ನಡೆದಿದೆ.

ಪಡಿತರ ವಿತರಣೆಗೆ ಮೀಸಲಿರಿಸಿದ್ದ ಹಣವನ್ನು ಮೀನು ವ್ಯಾಪಾರಕ್ಕೆ ಬಳಸಲು ಈ ಉದ್ಯಮಿಗಳು ಶೇಖ್ ಅವರಿಗೆ ಸಹಾಯ ಮಾಡಿದ್ದರು ಎಂದು ಅಧಿಕಾರಿಗಳು ಹೇಳಿದರು.

ಈ ಪ್ರಕರಣಕ್ಕೆ ಸಂಬಂಧಿಸಿ ಶೋಧ ಕಾರ್ಯಕ್ಕೆ ತೆರಳಿದ್ದ ಇ.ಡಿ ಅಧಿಕಾರಿಗಳ ಮೇಲೆ ಜನವರಿ 5ರಂದು ನಡೆದಿದ್ದ ದಾಳಿ ಪ್ರಕರಣದ ತನಿಖೆಯನ್ನು ಸಿಬಿಐ ನಡೆಸುತ್ತಿದೆ. ಶೇಖ್ ಅವರು ಸದ್ಯ ಸಿಬಿಐ ವಶದಲ್ಲಿದ್ದಾರೆ.

ಭಾರತದ ಲಕ್ಷ್ಯ ಸೇನ್

ಆಲ್ ಇಂಗ್ಲೆಂಡ್ ಬ್ಯಾಡ್ಮಿಂಟನ್: ಕ್ವಾರ್ಟರ್‌ಗೆ ಲಕ್ಷ್ಯ ಸೇನ್

ಬರ್ಮಿಂಗ್‌ಹ್ಯಾಮ್ (ಪಿಟಿಐ): ಕಾಮನ್‌ವೆಲ್ತ್ ಗೇಮ್ಸ್ ಚಾಂಪಿಯನ್ ಲಕ್ಷ್ಯ ಸೇನ್ ಅವರು ಆಲ್ ಇಂಗ್ಲೆಂಡ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನ ಪುರುಷರ ಸಿಂಗಲ್ಸ್‌ನಲ್ಲಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು. ಆದರೆ, ಮಹಿಳೆಯರ ಸಿಂಗಲ್ಸ್‌ನಲ್ಲಿ ಪಿ.ವಿ.ಸಿಂಧು ನಿರಾಸೆ ಅನುಭವಿಸಿದರು.

ಗುರುವಾರ ನಡೆದ 16ರ ಘಟ್ಟದ ಪಂದ್ಯದಲ್ಲಿ ಭಾರತದ 22 ವರ್ಷದ ಸೇನ್ ಅವರು 24–22, 11–21, 21–14 ರಿಂದ ನಾಲ್ಕನೇ ಶ್ರೇಯಾಂಕದ ಆಂಡರ್ಸ್ ಆಂಟೊನ್‌ಸೆನ್ ಅವರಿಗೆ ಆಘಾತ ನೀಡಿದರು.

ತೀವ್ರ ಪೈಪೋಟಿಯಲ್ಲಿ ಮೊದಲ ಗೇಮ್ ಗೆದ್ದ ಸೇನ್ ಅವರಿಗೆ ಎರಡನೇ ಗೇಮ್‌ನಲ್ಲಿ 26 ವರ್ಷದ ಡೆನ್ಮಾರ್ಕ್ ಆಟಗಾರ ತಿರುಗೇಟು ನೀಡಿ ಸಮಬಲ ಸಾಧಿಸಿದರು. ಆದರೆ, ನಿರ್ಣಾಯಕ ಗೇಮ್‌ನಲ್ಲಿ ಆರಂಭಿಕ ಹಿನ್ನಡೆಯಿಂದ ಚೇತರಿಸಿಕೊಂಡ ಸೇನ್ ಮೇಲುಗೈ ಸಾಧಿಸಿ ಎಂಟರ ಘಟ್ಟ ಪ್ರವೇಶಿಸಿದರು.

ವಿಶ್ವ ಕ್ರಮಾಂಕದಲ್ಲಿ 18ನೇ ಸ್ಥಾನದಲ್ಲಿರುವ ಸೇನ್ ಹೊರತುಪಡಿಸಿ ಉಳಿದ ಭಾರತದ ಆಟಗಾರರಾದ ಎಚ್.ಎಸ್. ಪ್ರಣಯ್, ಕಿದಂಬಿ ಶ್ರೀಕಾಂತ್, ಪ್ರಿಯಾಂಶು ರಾಜಾವತ್ ಮೊದಲ ಸುತ್ತಿನಲ್ಲೇ ನಿರ್ಗಮಿಸಿದ್ದಾರೆ.

ಎರಡು ಸಲದ ಒಲಿಂಪಿಕ್ ಪದಕ ವಿಜೇತೆ ಸಿಂಧು ಎರಡನೇ ಸುತ್ತಿನಲ್ಲಿ ಅಗ್ರ ಶ್ರೇಯಾಂಕದ ಆ್ಯನ್ ಸೆ ಯಂಗ್ ವಿರುದ್ಧ ನೇರ ಗೇಮ್‌ಗಳ ಸೋಲನುಭವಿಸಿದ್ದಾರೆ.

ಸಿಂಧು ಅವರು ವಿಶ್ವದ ನಂ.1 ಕೊರಿಯಾದ ಆಟಗಾರ್ತಿಯ ವಿರುದ್ಧ ಕಠಿಣ ಹೋರಾಟ ನಡೆಸಿದರೂ ತಮ್ಮ ತಪ್ಪುಗಳನ್ನು ತಡೆಯಲು ವಿಫಲರಾದರು. 42 ನಿಮಿಷಗಳ ಹಣಾಹಣಿಯಲ್ಲಿ 19–21, 11–21 ಅಂತರದಿಂದ ಸೋತರು. ಕಳೆದ ವರ್ಷ ವಿಶ್ವ ಚಾಂಪಿಯನ್‌ಷಿಪ್ ಗೆದ್ದ ಕೊರಿಯಾದ ಮೊದಲ ಮಹಿಳಾ ಸಿಂಗಲ್ಸ್ ಆಟಗಾರ್ತಿ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದ ಆ್ಯನ್ ಸೆ ಯಂಗ್ ವಿರುದ್ಧ ಸಿಂಧುಗೆ ಸತತ ಏಳನೇ ಸೋಲು ಇದಾಗಿದೆ.

ಸಂಕ್ಷಿಪ್ತ ಸುದ್ದಿ

ಬಾಕ್ಸಿಂಗ್ ತಂಡದ ಉನ್ನತಾಧಿಕಾರಿ ರಾಜೀನಾಮೆ

ನವದೆಹಲಿ (ಪಿಟಿಐ): ಪ್ರಥಮ ವಿಶ್ವ ಒಲಿಂಪಿಕ್ಸ್ ಅರ್ಹತಾ ಟೂರ್ನಿಯಲ್ಲಿ ಭಾರತದ ಬಾಕ್ಸರ್‌ಗಳ ನಿರಾಶಾದಾಯಕ ಪ್ರದರ್ಶನದ ಬೆನ್ನಲ್ಲೇ ಹೈ ಪರ್ಫಾಮೆನ್ಸ್ ಡೈರೆಕ್ಟರ್ (ಎಚ್‌ಪಿಡಿ) ಬರ್ನಾಡ್ ಡನ್ ಅವರು ಹುದ್ದೆ ತ್ಯಜಿಸಿದ್ದಾರೆ. ತಂಡದ ವಿದೇಶಿ ತರಬೇತುದಾರ ದಿಮಿತ್ರಿ ಮಿಟ್ರುಕ್ ಅವರನ್ನೂ ಶೀಘ್ರವೇ ಕೈಬಿಡುವ ಸಾಧ್ಯತೆಯಿದೆ.

ಐರ್ಲೆಂಡ್‌ನ ವೃತ್ತಿಪರ ಬಾಕ್ಸರ್ ಆಗಿರುವ ಡನ್ ಅವರನ್ನು 2022ರ ಅಕ್ಟೋಬರ್‌ನಲ್ಲಿ ಎಚ್‌ಪಿಡಿ ಆಗಿ ನೇಮಕ ಮಾಡಲಾಗಿತ್ತು. ಅವರು ಇಟಲಿಯಿಂದಲೇ ರಾಜೀನಾಮೆ ಕಳುಹಿಸಿದ್ದಾರೆ. ಇಟಲಿಯ ಬುಸ್ಟೊ ಅರ್ಜಿಸಿಯೊದಲ್ಲಿ ಪ್ರಥಮ ವಿಶ್ವ ಒಲಿಂಪಿಕ್ಸ್ ಕ್ವಾಲಿಫೈಯರ್ಸ್ ನಡೆಯುತ್ತಿದ್ದು ಅವರು ಭಾರತ ತಂಡದ ಜೊತೆಗಿದ್ದಾರೆ.

ಎರಡು ಅರ್ಹತಾ ಟೂರ್ನಿಗಳ–ಏಷ್ಯನ್ ಗೇಮ್ಸ್ ಮತ್ತು ಪ್ರಥಮ ವಿಶ್ವ ಒಲಿಂಪಿಕ್ಸ್ ಅರ್ಹತಾ ಟೂರ್ನಿ–ನಂತರ ಇದುವರೆಗೂ ಭಾರತದ ಪುರುಷರ ತಂಡದಿಂದ ಒಬ್ಬನೇ ಒಬ್ಬ ಬಾಕ್ಸರ್ ಪ್ಯಾರಿಸ್ ಒಲಿಂಪಿಕ್ಸ್‌ಗೆ ಅರ್ಹತೆ ಪಡೆದಿಲ್ಲ.

‘ಶುಕ್ರವಾರ ಕಾರ್ಯಕಾರಿ ಸಮಿತಿ ಸಭೆ ಕರೆದಿದ್ದೇವೆ. ಅಲ್ಲಿ ಪರಿಸ್ಥಿತಿ ವಿಮರ್ಶಿಸುತ್ತೇವೆ. ದಿಮಿತ್ರಿ ಭವಿಷ್ಯದ ಬಗ್ಗೆಯೂ ಈ ಸಭೆಯಲ್ಲಿ ನಿರ್ಧಾರ ಕೈಗೊಳ್ಳಲಾಗುವುದು’ ಎಂದು ಫೆಡರೇಷನ್‌ನ ಮಹಾ ಕಾರ್ಯದರ್ಶಿ ಹೇಮಂತ ಕಲಿಟಾ ಸುದ್ದಿಸಂಸ್ಥೆಗೆ ತಿಳಿಸಿದರು.

ಅಂಧರ ಕ್ರಿಕೆಟ್: ಭಾರತಕ್ಕೆ ಜಯ

ನವದೆಹಲಿ (ಪಿಟಿಐ): ಮಾಗುಂಟಾ ಸಾಯಿ ಮತ್ತು ದೇವರಾಜ್ ಬೆಹರಾ ಅವರ ಅರ್ಧಶತಕಗಳ ನೆರವಿನಿಂದ ಭಾರತ ಪುರುಷ ಅಂಧರ ಕ್ರಿಕೆಟ್ ತಂಡವು ಸಮರ್ಥ್ ಚಾಂಪಿಯನ್‌ಷಿಪ್‌ನ ನಾಲ್ಕನೇ ಟಿ20 ಪಂದ್ಯದಲ್ಲಿ ಶ್ರೀಲಂಕಾವನ್ನು ಎಂಟು ವಿಕೆಟ್‌ಗಳಿಂದ ಮಣಿಸಿತು. ಐದು ಪಂದ್ಯಗಳ ದ್ವಿಪಕ್ಷೀಯ ಸರಣಿಯಲ್ಲಿ ಆತಿಥೇಯ ತಂಡವು 4–0ಯಿಂದ ಮುನ್ನಡೆ ಪಡೆದಿದೆ.

ಇಲ್ಲಿನ ಕರ್ನೈಲ್ ಸಿಂಗ್ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಶ್ರೀಲಂಕಾ 20 ಓವರ್‌ಗಳಲ್ಲಿ ಏಳು ವಿಕೆಟ್‌ಗೆ 142 ರನ್ ಕಲೆ ಹಾಕಿತು.

ಗುರಿ ಬೆನ್ನಟ್ಟಿದ ಭಾರತವು 13.2 ಓವರ್‌ಗಳಲ್ಲಿ ಎರಡು ವಿಕೆಟ್‌ಗೆ 143 ರನ್ ಗಳಿಸಿ ಜಯ ಸಾಧಿಸಿತು.

ಗೋವಾ ಎಫ್‌ಸಿಗೆ ಮಣಿದ ಬಿಎಫ್‌ಸಿ

ಗೋವಾ: ಸಾಂಘಿಕ ಆಟ ಪ್ರದರ್ಶಿಸಿದ ಆತಿಥೇಯ ಗೋವಾ ಎಫ್‌ಸಿ ತಂಡವು ಗುರುವಾರ ಇಂಡಿಯನ್ ಸೂಪರ್ ಲೀಗ್‌ನ ಪಂದ್ಯದಲ್ಲಿ 2–1 ರಿಂದ ಬೆಂಗಳೂರು ಎಫ್‌ಸಿ ತಂಡವನ್ನು ಮಣಿಸಿತು.

ಪಾಯಿಂಟ್ ಪಟ್ಟಿಯಲ್ಲಿ ಬಿಎಫ್‌ಸಿ ಎಂಟನೇ ಸ್ಥಾನಕ್ಕೆ ಕುಸಿದಿದೆ. ಗೋವಾ ತಂಡವು ಮೂರನೇ ಸ್ಥಾನಕ್ಕೆ ಏರಿದೆ.

ಮುಂದಿನ ಪಂದ್ಯದಲ್ಲಿ ಬಿಎಫ್‌ಸಿ ತಂಡವು ಮಾರ್ಚ್ 30ರಂದು ಒಡಿಶಾ ಎಫ್‌ಸಿ ವಿರುದ್ಧ ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ಸೆಣಸಲಿದೆ.

ನೆಟ್‌ಬಾಲ್: ಮಂಗಳೂರು ವಿ.ವಿಗೆ ಜಯ

ಬೆಂಗಳೂರು: ಮಂಗಳೂರು ವಿ.ವಿ, ಬೆಂಗಳೂರು ವಿ.ವಿ, ಬೆಳಗಾವಿ ವಿಟಿಯು ಮತ್ತು ಪುಣೆಯ ಸಾವಿತ್ರಿಭಾಯಿ ಫುಲೆ ವಿ.ವಿ ತಂಡಗಳು ತುಮಕೂರಿನ ಅಗಳಕೋಟೆಯ ಸಾಹೇ ವಿಶ್ವವಿದ್ಯಾಲಯದ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಅಖಿಲ ಭಾರತ ಪುರುಷರ ನೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಸೂಪರ್ ಲೀಗ್ ಹಂತಕ್ಕೆ ಪ್ರವೇಶ ಪಡೆದಿವೆ.

ಗುರುವಾರ ನಡೆದ ಕ್ವಾರ್ಟರ್ ಫೈನಲ್ ಪಂದ್ಯಗಳಲ್ಲಿ ಎಂಟು ತಂಡಗಳು ಸೆಣಸಾಡಿ, ನಾಲ್ಕು ತಂಡಗಳು ಸೋತು ಟೂರ್ನಿಯಿಂದ ಹೊರಬಿದ್ದವು.

ಮಂಗಳೂರು ವಿ.ವಿ ತಂಡವು 39–35ರಿಂದ ಮೈಸೂರು ವಿ.ವಿ ತಂಡವನ್ನು ಮಣಿಸಿತು. ಆರಂಭದಲ್ಲಿ ಮೈಸೂರು ತಂಡವು ಮುನ್ನಡೆ ಸಾಧಿಸಿದರೂ ನಂತರದಲ್ಲಿ ಮುಗ್ಗರಿಸಿತು. ಮತ್ತೊಂದು ಪಂದ್ಯದಲ್ಲಿ ಬೆಳಗಾವಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ (ವಿಟಿಯು) ತಂಡವು 35–31ರಿಂದ ಕ್ಯಾಲಿಕಟ್ ವಿಶ್ವವಿದ್ಯಾಲಯ ತಂಡವನ್ನು ಸೋಲಿಸಿತು.

ಇತರ ಪಂದ್ಯಗಳಲ್ಲಿ ಬೆಂಗಳೂರು ವಿ.ವಿ ತಂಡವು 37–32 ಕರ್ನಾಟಕದ ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯ ತಂಡದ ವಿರುದ್ಧ ಗೆಲುವು ಸಾಧಿಸಿದರೆ, ಪುಣೆ ಸಾವಿತ್ರಿಭಾಯಿ ಫುಲೆ ವಿ.ವಿ ತಂಡವು 32–24 ರಿಂದ ಬೆಂಗಳೂರು ನಗರ ವಿ.ವಿ ತಂಡವನ್ನು ಸೋಲಿಸಿತು.